೧೩. ಭೂನ್ಯಾಯ ಮಂಡಲಿ ಸಭೆಗಳನ್ನು ಅಧಿವೇಶನದ ವೇಳೆ ನಡೆಸದಿರುವುದು.

ಶ್ರೀ ಬಿ. ಹೆಚ್. ಯಂಕಾನಾಯಕ (ಹರಪನಹಳ್ಳಿ).--ಭೂನ್ಯಾಯ ಮಂಡಲಿಯ ಸಭೆ ನಡೆಸುವ ಬಗ್ಗೆ ಇದೇ ಸದನದಲ್ಲಿ ಚರ್ಚೆ ನಡೆದಿದ್ದು ಶಾಸನ ಸಭೆಗಳು ನಡೆಯುವ ಸಂದರ್ಭದಲ್ಲಿ. ಭೂನ್ಯಾಯ ಮಂಡಲಿಯ ಸಭೆಗಳನ್ನು ನಡೆಸಬಾರದೆಂದು ಸೂಚಿಸಲಾಗಿದ್ದು ಸರಕಾರದವರೂ ಒಪ್ಪಿಗೆ ನೀಡಿದ್ದರು. ಆದರೆ ಹರಪನಹಳ್ಳಿ ಭೂನ್ಯಾಯ ಮಂಡಲಿಯವರು ಜಿಲ್ಲಾಪರಿಷತ್ ಚುನಾವಣಾ ದಿನವೇ ಎಂದರೆ ಫೆಬ್ರವರಿ ೨೩ ಮತ್ತು ೨೪ ರಂದು ಹಾಗೂ ಮಾರ್ಚಿ ೨ ಮತ್ತು ೩ನೇ ತಾರೀಖು ಸಭೆಗಳನ್ನು ನಡೆಸಿದ್ದಾರೆ. ಮತ್ತೆ ಇದೇ ತಿಂಗಳು ೧೨ನೇ ತಾರೀಖು ಸಭೆ ನಡೆಸುವ ಬಗ್ಗೆ ಪತ್ರ ಬರೆದಿದ್ದಾರೆ. ಹೀಗಾಗಿ ಸದನದಲ್ಲಿ ಹಾಜರಿರಬೇಕೇ ಇಲ್ಲವೇ ಭೂನ್ಯಾಯ ಮಂಡಲಿಯ ಸಭೆಯಲ್ಲಿ ಹಾಜರಿರಬೇಕೇ ಎಂಬ ಸಮಸ್ಯೆ ಉದ್ಭವಿಸುತ್ತದೆ. ಭೂನ್ಯಾಯ ಮಂಡಲಿ ಸಭೆಗೆ ಹೋಗದಿದ್ದರೆ ಅವರ ಇಷ್ಟಬಂದಂತೆ ತೀರ್ಮಾನ ತೆಗೆದುಕೊಳ್ಳುತ್ತಾರೆ. ಇದರಿಂದ ನಮ್ಮ ಪಕ್ಷದ ಸದಸ್ಯರಿಗೆ ಈ ರೀತಿ ತೊಂದರೆಯಾಗುತ್ತಾ ಇರುವುದರಿಂದ ಸದರಿ ಭೂನ್ಯಾಯ ಮಂಡಲಿಯ ಸಭೆಗಳನ್ನು ಶಾಸನಸಭೆ ಅಧಿವೇಶನಗಳು ನಡೆಯುವಾಗ ನಡೆಸದಂತೆ ರಾಜ್ಯದ ಎಲ್ಲಾ ಭೂನ್ಯಾಯ ಮಂಡಲಿಗಳಿಗೂ ಕೂಡಲೇ ಸೂಕ್ತ ಆದೇಶ ನೀಡಬೇಕೆಂದು ಸರಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.--ಮಾನ್ಯ ಅಧ್ಯಕ್ಷರೆ, ಕರ್ನಾಟಕ ಭೂ ಸುಧಾರಣಾ ಕಾನೂನು ೧೯೬೧ರ ಕಲಂ ೪೮ರ ಮೇರೆಗೆ ಭೂನ್ಯಾಯ ಮಂಡಳಿಗಳು ರಚನೆಯಾಗಿದ್ದು ಗೇಣಿದಾರರಿಗೆ ಹಾಗೂ ಇತರರಿಗೆ ತೀವ್ರವಾದ ನ್ಯಾಯ ಒದಗಿಸುವುದು ಭೂ ನ್ಯಾಯ ಮಂಡಳಿಗಳ ಕರ್ತವ್ಯ. ಈ ಭೂ ನ್ಯಾಯ ಮಂಡಲಿಗಳಿಗೆ ಉಪ ವಿಭಾಗಾಧಿಕಾರಿ ಅಥವಾ ತತ್ಸಮಾನವಾದ ಹುದ್ದೆಗಳ ಅಧಿಕಾರಿಗಳು ಅಧ್ಯಕ್ಷರಾಗಿರುತ್ತಾರೆ. ಮತ್ತು ನಾಲ್ಕು ಸರ್ಕಾರೇತರ ಸದಸ್ಯರುಗಳು ನಾಮಕರಣಗೊಂಡಿರುತ್ತಾರೆ. ಈ ನಾಲ್ಕು ಜನರು ಸಮಾಜದ ವಿವಿಧ ವರ್ಗಗಳಿಂದ ಬಂದಿರುವವರಾಗಿರುತ್ತಾರೆ. ಈ ಭೂ ನ್ಯಾಯ ಮಂಡಲಿಗಳು ತೀವ್ರವಾಗಿ ಕೆಲಸ ಮಾಡಿದರೆ ಸಾಮಾಜಿಕ ನ್ಯಾಯ ತೀವ್ರಗತಿಯಲ್ಲಿ ಸಿಗುತ್ತದೆ. ಕೋರಂ ಇದ್ದಾಗ್ಯೂ ಕೆಲಸ ಮಾಡದಿದ್ದರೆ ಸರ್ಕಾರಕ್ಕೆ ವೆಚ್ಚ ಉಂಟಾಗುವುದಲ್ಲದೆ ಸಾಮಾಜಿಕ ನ್ಯಾಯಕ್ಕೂ ಧಕ್ಕೆ ಆಗುತ್ತದೆ. ಕಾರಣ, ಪ್ರತಿ ಚುನಾವಣೆ ಬಂದಾಗ ವಿಧಾನ ಮಂಡಲದ ಅಧಿವೇಶನ ನಡೆದಾಗ ಭೂ ನ್ಯಾಯ ಮಂಡಲಿಗಳು ಕಾರ್ಯನಿರ್ವಹಿಸದೆ ಇದ್ದರೆ ಪ್ರಗತಿ ಕುಂಟಿತಗೊಳ್ಳುತ್ತದೆಯಲ್ಲದೆ ಕೋರಂ ಇದ್ದಾಗ್ಯೂ ಭೂ ನ್ಯಾಯ ಮಂಡಲಗಳ ಸಭೆ ನಡೆಸಬಾರದೆಂದು ಸೂಚನೆ ನೀಡುವುದು ಕಾನೂನಿನ ಪ್ರಕಾರ ಸಮಂಜಸವಾಗುವುದಿಲ್ಲ. ಆದರೂ ಆದಷ್ಟು ಸದಸ್ಯರುಗಳಿಗೆ ಅನುಕೂಲವಾಗತಕ್ಕಂಥ ದಿನಾಂಕಗಳನ್ನು ಗೊತ್ತು ಮಾಡುವಂತೆ ತಿಳಿಸುತ್ತೇನೆ.

ವಿತ್ತೀಯ ಕಾರ್ಯ ಕಲಾಪಗಳು

೧೯೮೭-೮೮ನೇ ಸಾಲಿನ ಬೇಡಿಕೆಗಳ ಮೇಲಿನ ಚರ್ಚೆ ಮತ್ತು ಮಂಜೂರಾತಿ.

ಅ. ಕ್ರ. ೩೪-ಸಣ್ಣ ನೀರಾವರಿ
೩೫-ನೀರಾವರಿ, ಒಳಚರಂಡಿ ಇತ್ಯಾದಿ
೪೪-ಲೋಕೋಪಯೋಗಿ ಇಲಾಖೆ
೪೫-ಕಟ್ಟಡಗಳು
೪೬-ರಸ್ತೆಗಳು ಮತ್ತು ಸೇತುವೆಗಳು
೪೭-ಬಂದರು.

ಅಧ್ಯಕ್ಷರು.—ಬೇಡಿಕೆಗಳ ಮೇಲಿನ ಚರ್ಚೆ ಮುಂದುವರಿಯುವುದು. ಇವತ್ತು ೪ ಗಂಟೆಗೆ ಉತ್ತರ ಪ್ರಾರಂಭವಾಗುವುದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠ್ಕಲ್).--ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ಮಂಡಿಸಿದಂಥ ಬೇಡಿಕೆಗಳನ್ನು ವಿರೋಧಿಸುತ್ತಾ, ಅವರು ಹಾಕಿಕೊಂಡಿರುವಂಥ ಕೆಲವು ಕಾರ್ಯಕ್ರಮಗಳ ಬಗ್ಗೆ ಪ್ರಸ್ತಾಪ ಮಾಡುತ್ತೇನೆ. ಇದು ವಿಶೇಷವಾದ ಹಾಗೂ

ಮಹತ್ವವಾದ ಇಲಾಖೆ. ನೇರವಾಗಿ ಹಳ್ಳಿಯ ರೈತರಿಗೆ ಮತ್ತು ಸಾರ್ವಜನಿಕರಿಗೆ ಸಂಬಂಧಪಟ್ಟ ಇಲಾಖೆ.

(ಶ್ರೀ ವೈ.ಕೆ. ರಾಮಯ್ಯನವರು ಅಧ್ಯಕ್ಷರ ಪೀಠವನ್ನು ಅಲಂಕರಿಸಿದರು)

ರಸ್ತೆಗಳಾಗಲೀ, ಕಾಲುವೆಗಳಾಗಲೀ, ನೀರಾವರಿ ಯೋಜನೆಗಳಾಗಲೀ, ಸಣ್ಣ ನೀರಾವರಿ ಯೋಜನೆಗಳಾಗಲೀ, ರೈತರಿಗೆ ಮತ್ತು ಸಾರ್ವಜನಿಕರಿಗೆ ಅನುಕೂಲ ಮಾಡಿಕೊಡತಕ್ಕಂಥ ಒಂದು ಇಲಾಖೆಯನ್ನು ಮಾನ್ಯ ದೇವೇಗೌಡರು ವಹಿಸಿಕೊಂಡಿದ್ದಾರೆ. ನಿನ್ನೆ ಮಾನ್ಯ ಸದಸ್ಯರಾದ ವೀರಪ್ಪ ಮೊಯ್ಲಿಯವರು ಮಾತನಾಡುತ್ತಾ, ಅನೇಕ ಅಂಕಿಸಂಖ್ಯೆಗಳನ್ನು ಕೊಟ್ಟು ಪ್ಲಾನ್ ಮತ್ತು ನಾನ್ ಪ್ಲಾನ್‌ನಲ್ಲಿ ಎಷ್ಟು ಹಣ ಖರ್ಚು ಮಾಡಿದ್ದಾರೆ, ತೆಲುಗಂ ಗಂಗಾಯೋಜನೆ ವಿಚಾರದಲ್ಲಿ ಸರ್ಕಾರದ ನಿಲುವು ಏನು ಎಂಬುದರ ಬಗ್ಗೆ ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಹೆಚ್ಚಿನ ವಿಚಾರಗಳನ್ನು ಪ್ರಸ್ತಾಪ ಮಾಡದೆ, ಮುಖ್ಯವಾಗಿ, ಸರ್ಕಾರದ ಕೆಲವು ಕಾರ್ಯಕ್ರಮಗಳು ಏನಿವೆ, ಹಳ್ಳಿಯ ರಸ್ತೆಗಳಿಗೆ ಸಂಬಂಧಪಟ್ಟಂತೆ ಮಿನಿಮಮ್ ನೀಡ್ ಪ್ರೋಗ್ರಾಂ ಮತ್ತಿತರ ಕಾರ್ಯಕ್ರಮಗಳನ್ನು ಕುರಿತು ಮಾತನಾಡುತ್ತೇನೆ. ಮಿನಿಮಮ್ ನೀಡ್ ಪ್ರೋಗಾಂ ಇವತ್ತು ಬಂದದ್ದಲ್ಲ ಒಂದು ಸಾವಿರ ಜನ ಸಂಖ್ಯೆಗೆ ಮೇಲ್ಪಟ್ಟು ಇರತಕ್ಕ ಹಳ್ಳಿಗಳಲ್ಲಿ ಮಿನಿಮಮ್ ನೀಡ್ ಪ್ರೋಗ್ರಾಂನಲ್ಲಿ ರಸ್ತೆ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಇದೆ. ನಾನು ನೋಡಿದ ಪ್ರಕಾರ ಈ ಯೋಜನೆಯಲ್ಲಿ ಸ್ವಲ್ಪಮಟ್ಟಿಗೆ ಪ್ರಗತಿ ಯಾಗಿದೆಯೇ ಎಂದು ಪ್ರಶ್ನೆ ಹಾಕಿಕೊಂಡರೆ, ಉತ್ತರ ಸೊನ್ನೆಯಾಗುತ್ತದೆ. ಇವತ್ತು ರಾಷ್ಟ್ರದ ಹೆದ್ದಾರಿಗಳ ಬಗ್ಗೆ, ರಾಜ್ಯದ ಹೆದ್ದಾರಿಗಳ ಬಗೆ ಜನ ಕೇಳುವುದಿಲ್ಲ. ಅವುಗಳನ್ನು ರಾಷ್ಟ್ರದ ದೃಷ್ಟಿ ಯಿಂದ, ರಾಜ್ಯದ ದೃಷ್ಟಿಯಿಂದ ಎಲ್ಲೆಲ್ಲಿ ಬೇಕೋ ಅಲ್ಲಲ್ಲಿ ಮಾಡುತ್ತಾರೆ. ಆದರೆ, ರೈತರಿಗೆ ಅನುಕೂಲದ ದೃಷ್ಟಿಯಿಂದ, ಹಳ್ಳಿಯಲ್ಲಿರತಕ್ಕ ಬಡವರಿಗೆ ಅನುಕೂಲವಾಗತಕ್ಕ ದೃಷ್ಟಿಯಿಂದ ಮಿನಿಮಮ್ ನೀಡ್ ಪ್ರೋಗ್ರಾಂ ಹಾಕಬೇಕಾಗಿದೆ. ಈ ಮಿನಿಮಮ್ ನೀಡ್, ಪ್ರೋಗ್ರಾಮ್ಸ್‌ನಲ್ಲಿ ಪ್ರಗತಿ ಏನಾಗಿದೆ ಎಂದು ನೋಡಿದರೆ ಅದು ಸ್ವಲ್ಪ ಕುಂಠಿತವಾಗಿದೆ, ಅದಕ್ಕೆ ಕಾರಣ ಏನು ಎಂದು ನನಗೆ ಗೊತ್ತಾಗಲಿಲ್ಲ. ಅದಕ್ಕಾಗಿ ಅವರು ಏನು ಒಂದು ಹಣ, ಟಾರ್ಗೆಟ್ ಇಟ್ಟಿದ್ದರು, ಆ ಒಂದು ಟಾರ್ಗೆಟ್ ಕೂಡ ಮುಟ್ಟಿಲ್ಲ. ಆ ಒಂದು ಗುರಿಯನ್ನು ಸಾಧಿಸಬೇಕು ಎನ್ನತಕ್ಕ ಅವರ ಒಂದು ಧೋರಣೆ ಏನು ಇತ್ತು, ಆ ಧೋರಣೆಯನ್ನು ಅವರು ಸಾಧಿಸಿಲ್ಲ ಅಂದರೆ ಇದಕ್ಕೆ ಕಾರಣ ಏನು ಎಂದು ನನಗೆ ಗೊತ್ತಾಗಲಿಲ್ಲ. ಅವರು ಯಾವಾಗಲೂ ಬಡವರ ಬಗ್ಗೆ ಹಳ್ಳಿಯ ಜನರ ಬಗ್ಗೆ ಮಾತನಾಡುತ್ತಾರೆ. ಅವರ ಬಗ್ಗೆ ಅನುಕಂಪ ಇಟ್ಟುಕೊಂಡಿದ್ದಾರೆಂದು ನನ್ನ ಭಾವನೆ ಇದೆ. ಆದರೆ ಮಿನಿಮಮ್ ನೀಡ್ ಪ್ರೋಗ್ರಾಂ ನೋಡಿದಾಗ ಎಷ್ಟರಮಟ್ಟಿಗೆ ಹಣ ಇಟ್ಟು ಅವರು ಕೆಲಸವನ್ನು ಮಾಡಬೇಕಾಗಿತ್ತೋ ಅಷ್ಟರಮಟ್ಟಿಗೆ ಮಾಡಿಲ್ಲ ಎಂದು ನಾನು ವಿಷಾದದಿಂದ ಹೇಳಬೇಕಾಗಿದೆ ಈಗ ಇರತಕ್ಕ ನಮ್ಮ ರೋಡಿನ ಕಾರ್ಯಕ್ರಮಕ್ಕಾಗಿ ೩೨.೨೨ ಕೋಟಿ ರೂಪಾಯಿ ಹೋದಸಾರಿ ಇದ್ದರೆ ಅದರಲ್ಲಿ ೮೦ ಪರ್ಸೆಂಟ್ ಈ ಒಂದು ಕನ್‌ಸ್ಟ್ರಕ್ಷನ್ ಪರ್‌ಪಸ್‌ಗೆ ಇದ್ದರೆ ೨೦ ಪರ್ಸೆಂಟ್ ಮೈನ್‌ಟೆನೆನ್ಸ್‌ಗೆ ಹೋಗುತ್ತದೆ. ಹೀಗಾಗಿ ಹೊಸ ಕಾರ್ಯಕ್ರಮಗಳನ್ನ ತೆಗೆದುಕೊಳ್ಳುವಾಗ ಯಾವ ಯಾವ ಭಾಗಕ್ಕೆ ಆದ್ಯತೆ ಕೊಡಬೇಕೆಂದು ಅವರು ಗಮನದಲ್ಲಿಟ್ಟು ಕೊಳ್ಳಬೇಕಾಗಿತ್ತು. ಆದರೆ ನಾನು ಅನೇಕ ಬಡ್ಜೆಟ್ ಡಾಕ್ಯುಮೆಂಟ್ಸ್ ನೋಡಿದೆ, ಅದರಲ್ಲಿ ಯಾವರೀತಿ ಮಾಡಿದ್ದಾರೆ ಅಂದರೆ, ಹಿಂದುಳಿದ ಭಾಗ ನಮ್ಮ ಹೈದಾರಾಬಾದ್ ಕರ್ನಾಟಕ ಇದೆ. ಆ ಭಾಗದಲ್ಲಿ ಯಾವರೀತಿ ರಸ್ತೆ ಕೊಟ್ಟಿದ್ದಾರ ಈ ಮಿನಿಮಮ್ ನೀಡ್ಸ್ ಪ್ರೋಗ್ರಾಂನಲ್ಲಿಯಾಗಲಿ ಅಥವಾ ಹಳ್ಳಿ ಹೆದ್ದಾರಿ ಯೋಜನೆಯಲ್ಲಿ ಆಗಲಿ ಆರ್‌ಎಲ್‌ಇಜಿಪಿ, ಸೇತುಬಂಧನ, ಸಿ.ಡಿ. ವರ್ಕ್ಸ್‌ನಲ್ಲಿ ಆಗಲಿ ಎಂದು ನೋಡಿದರೆ ಅಂತಹದ್ದು ಏನೂ ಇಲ್ಲ. ಇನ್ನು ೧೯೭೮ರಲ್ಲಿ ಮಾನ್ಯ ಬಂಗಾರಪ್ಪನವರು ಲೋಕೋಪಯೋಗಿ ಇಲಾಖಾ ಮಂತ್ರಿಗಳಾಗಿದ್ದಾಗ ಒಂದು ಮಾಸ್ಟರ್‌ಪ್ಲಾನ್ ಮಾಡಿದ್ದರು. ಅದರಲ್ಲಿ ಕೆಲವು ಕಡೆ ಎಷ್ಟು ಹಳ್ಳಿಗಳನ್ನು ತೆಗೆದುಕೊಂಡಿದ್ದಾರೆ ಎಂದು ನೋಡಿದರೆ ಎಲ್ಲಿ ಆದ್ಯತೆ ಕೊಡಬೇಕಾಗಿತ್ತೋ, ಆ ಆದ್ಯತೆಯನ್ನು ಎಲ್ಲಾ ಯೋಜನೆಗಳಲ್ಲೂ ಕೊಟ್ಟಿಲ್ಲ ಎಂದು ಸ್ಪಷ್ಟವಾಗಿ ಹೇಳುತ್ತೇನೆ. ನಾನು ಇದನ್ನು ನೋಡಿದ್ದೇನೆ, ಕನಿಷ್ಟಪಕ್ಷ ನನ್ನ ಮತ ದಾರರ ಕ್ಷೇತ್ರಕ್ಕೆ ಏನಾದರೂ ಈ ಸೇತುಬಂಧನ ಯೋಜನೆಯಲ್ಲಿ, ಸಿ.ಡಿ. ವರ್ಕ್ಸ್‌ನಲ್ಲಿ, ಈ ಹಳ್ಳಿ ಹೆದ್ದಾರಿ ಯೋಜನೆಯಲ್ಲಿ ಕೊಟ್ಟಿದ್ದಾರೆಯೋ ಎಂದು ನೋಡಿದೆ, ಅವರು ಕೊಟ್ಟಂಥ ಕಾರ್ಯಕ್ರಮ ಎಲ್ಲಿ ಅಂದರೆ ಬಹುಶಃ ಅವರ ಪಕ್ಷದ ಶಾಸಕರು ಎಲ್ಲಿ ಇದ್ದಾರೆ, ಅಲ್ಲಿ ಕೊಟ್ಟಿದ್ದಾರೆ. ಇದನ್ನು ನಾನು ನೇರ

ಆಗಿ ಆಪಾದನೆ ಮಾಡುತ್ತಿದ್ದೇನೆ. ಈ ಪುಸ್ತಕದಲ್ಲಿ ಅಚ್ಚು ಹಾಕಿ ಪ್ರಿಂಟ್ ಮಾಡಿಸಿದ್ದಾರೆ. ಕನಿಷ್ಟಪಕ್ಷ ವಾಲ್ಕು ಕೆಲಸಗಳನ್ನು ಅಲ್ಲಿ ಕೊಟ್ಟಿದ್ದರೆ ಎರಡು ಕೆಲಸಗಳನ್ನಾದರೂ ಬೇರೆ ಕಡೆಯಲ್ಲಿ ಕೊಡಬಹುದಿತ್ತು. ನವರು ಈ ರೀತಿ ತಾರತಮ್ಯ ಮಾಡುತ್ತಾರೆ ಎನ್ನತಕ್ಕ ಭಾವನೆಯನ್ನು ನಾನು ಇಟ್ಟುಕೊಂಡಿರಲಿಲ್ಲ. ಆದರೆ ಈ ಡಾಕ್ಯುಮೆಂಟ್ಸ್ ನೋಡಿದ ಮೇಲೆ ಅನಿವಾರ್ಯವಾಗಿ ಹೇಳಬೇಕಾಗುತ್ತದೆ, ಮಾನ್ಯ ದೇವೇಗೌಡರು ಪಾರ್ಶಿಯಾಲಿಟಿ ಮಾಡಿದ್ದಾರೆಂದು ನನ್ನ ಬಾಯಿಂದ ಬರುತ್ತಿದೆ, ಇದನ್ನು ಅವರು ಮಾಡಬಾರದಾಗಿತ್ತು. ಇವೊತ್ತು ನಾವು ಎಲ್ಲರಿಗೂ ಅನುಕೂಲವಾಗಲಿ ಎನ್ನುವ ದೃಷ್ಟಿಯಿಂದ ಯೋಜನೆಗಳನ್ನು ಹಾಕುತ್ತೇವೆಯೇ ಹೊರತು ಕೇವಲ ಪಕ್ಷದ ದೃಷ್ಟಿಯಿಂದ ಮಾಡುವುದಿಲ್ಲ. ಯಾರೋ ಒಬ್ಬರು ಶಾಸಕರು ತಮಗೆ ಬೇಕಾದವರು ಹೇಳಿದರು ಎಂದು ಅವರ ಕ್ಷೇತ್ರದಲ್ಲಿ ತೆಗೆದುಕೊಳ್ಳುವುದಾದರೆ ನಾಳೆ ದೊಡ್ಡ ಅನಾಹುತವಾಗುತ್ತದೆ. ಮೂರುಸಾರಿ ಈ ಸದನದಲ್ಲಿ ಕೆಲವು ಮಾತುಗಳನ್ನು ಪ್ರಸ್ತಾಪ ಮಾಡಿದ್ದೇನೆ. ನನ್ನ ಮತದಾರರ ಕ್ಷೇತ್ರಕ್ಕೆ ಮಾನ್ಯ ದೇವೇಗೌಡರು ಮತ್ತು ಮಾನ್ಯ ರಾಮಕೃಷ್ಣ ಹೆಗಡೆಯವರು ಬಂದಿದ್ದರು. ಇವರು ಅಲ್ಲಿಗೆ ಬಂದಿದ್ದಾಗ ನಾನು ಒಂದು ಮನವಿಯನ್ನು ಕೊಟ್ಟಿದ್ದೆ. ಸೌದಾಗರ್ ಟ್ಯಾಂಕ್ ಉದ್ಘಾಟನಾ ಸಮಾರಂಭದಲ್ಲಿ ಮುಂದಿನ ವರ್ಷ ಬಡ್ಜೆಟ್ಟಿನಲ್ಲಿ ಸೇರಿಸತಕ್ಕ ಪ್ರಯತ್ನ ಮಾಡುತ್ತೇವೆಂದು ಹೇಳಿದರು. ಬಾಚವಾರ್ ಹಳ್ಳಿಗೆ ಹೋಗತಕ್ಕ ರಸ್ತೆ, ನಮ್ಮ ಸೌಧಾಗರ್ ಟ್ಯಾಂಕಿನಲ್ಲಿ ಸಬ್‌ಮರ್ಜ್ ಆಗುತ್ತಿತ್ತು, ಅಲ್ಲಿ ಬ್ರಿಡ್ಜ ಕಟ್ಟಿಸಿ ಕೊಡಿ ಹಳ್ಳಿಯ ಜನರಿಗೆ ಅನುಕೂಲವಾಗುತ್ತದೆಂದು ನಾನು ಮತ್ತು ಇಂಡಿಪೆಂಡೆಂಟ್ ಸದಸ್ಯರಾದ ದೇಶ್‌ಮುಖ್ ಅವರು ಇಬ್ಬರೂ ಹೇಳಿದ್ದೆವು. ಈ ಸದನದಲ್ಲಿ, ಎರಡುಸಾರಿ ವಾಗ್ದಾನ ಮಾಡಿದ್ದರು. ನಾನು ಈ ಸಾರಿ ಬಡ್ಜೆಟ್ಟನಲ್ಲಿ ಬರುತ್ತದೆಂದು ನೋಡಿದರೆ ಅದು ಬರಲಿಲ್ಲ.

೧-೩೦ ಪಿ.ಎಂ.

ಕಳೆದವರ್ಷ ನೋಡಿದೆ ಅದರಲ್ಲೂ ಇಲ್ಲ ಎರಡು ವರ್ಷಗಳ ಹಿಂದೆ ಟೋಕನ್ ಗ್ರ್ಯಾಂಟ್ ಎಂದು ಕೊಡುತ್ತಿದ್ದರು. ಅದೂ ಕೂಡ ಕೇವಲ ೧೦೦೦ ರೂಪಾಯಿ ಕೊಡುತ್ತಿದ್ದರು. ಹಾಗೆ ಕೊಟ್ಟು ಎಲ್ಲರಿಗೂ ನಾಮ ಹಾಕುತ್ತಿದ್ದರು. ನಿಮ್ಮ ಕ್ಷೇತ್ರಕ್ಕೆ ಕೊಟ್ಟಿದ್ದೇನೆ ನಿನ್ನ ಕ್ಷೇತ್ರಕ್ಕೆ ಕೊಟ್ಟಿದ್ದೇನೆ. ಎಂದು ಎಲ್ಲರಿಗೂ ಹೇಳುತ್ತಿದ್ದರು, ಆದರೆ ಎಲ್ಲೂ ಕೆಲಸವೇ ಆಗುತ್ತಿರಲಿಲ್ಲ. ಒಂದು ಸಾವಿರ ರೂಪಾಯಿಗಿಂತ ಹೆಚ್ಚಿಗೆ ಇರುತ್ತಿರಲಿಲ್ಲ...

ಶ್ರೀ ಹೆಚ್.ಡಿ. ದೇವೇಗೌಡ.—ನಿಮಗೆ ಅದೂ ಕೂಡ ಇಲ್ಲ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ನಾನು ಮಂತ್ರಿಗಳನ್ನು ಕೇಳಿದಾಗ ನಿಮಗೆ ಮುಂದಿನ ಸಾರಿ ಜಾಸ್ತಿ ಮಾಡುತ್ತೇವೆಂದು ಹೇಳಿದರು. ಮುಂದಿನಸಾರಿ ಅಂದರೆ ಈಸಾರಿ ನೋಡಿದರೆ ಅದರ ಹೆಸರೂ ಕೂಡ ಅಲ್ಲ. ಸ್ವಾಮಿ, ಈ ಮೂರು ಪ್ರಾಜೆಕ್ಟುಗಳನ್ನೂ ಈ ಸದನದಲ್ಲಿ ತಾವೇ ಒಪ್ಪಿಕೊಂಡಿದ್ದರೂ, ಶಾಸಕರಾದ ನಾವು ನಿಮಗೆ ನೆನಪು ಮಾಡಿಕೊಡುತ್ತಿದ್ದರೂ ಈಕೆಲಸ ಆಗಲಿಲ್ಲ ಎಂದರೆ ನಾವು ನಿಮ್ಮನ್ನು ಏತಕ್ಕೆ ಕೇಳಬೇಕು ?

ಶ್ರೀ ಎಸ್. ಬಂಗಾರಪ್ಪ.—ಈಗ ಒಪ್ಪಿಕೊಂಡರೆ ಅಡಿಷನಲ್ ಆಗಿ ಮಾಡಿಸಿಕೊಡುತ್ತಾರೇನೊ ನೋಡಿ,

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಈ ಕೆಲಸ ನಮ್ಮ ಜನರಿಗೆ ಅವಶ್ಯಕವಾಗಿ ಆಗಲೇ ಬೇಕೆಂದು ನಾವು ಪದೇ ಪದೇ ಹೇಳಿದರೂ ಕೂಡ ಅದಕ್ಕೆ ನೀವು ಗಮನವನ್ನೇ ಕೊಡುತ್ತಿಲ್ಲ. ಈರೀತಿ ಗಮನ ಕೊಡದೇ ಇರುವುದಕ್ಕೆ ಕಾರಣ ಏನಿರಬಹುದು ? ಬಹುಶಃ ನಾನು ಕಾಂಗ್ರೆಸ್ ಪಕ್ಷದವನು ಎಂದು ಏನಾದರೂ ಇಂಥ ತಾರತಮ್ಯವನ್ನು ಮಾಡುತ್ತಿದ್ದೀರಾ ಹೇಗೆ ಅಥವಾ ಇದೇರೀತಿ ಅವರು ಕೇಳುತ್ತಲೇ ಇರಲಿ, ಆಮೇಲೆ ಯಾವಾಗಲಾದರೂ ಕೊಡೋಣ ಎನ್ನತಕ್ಕ ಭಾವನೆಯನ್ನು ಏನಾದರೂ ಇಟ್ಟುಕೊಂಡಿದ್ದೀರಾ ? ಅಥವಾ ಕಾಡಾ ಛೇರ್ಮನ್ ಆದಂಥ ಸದಾಶಿವರೆಡ್ಡಿಯವರು ಏನಾದರೂ ನಿಮಗೆ ಹೇಳಿದರೆ ? ಅಥವಾ ವಿಶ್ವನಾಥ ರೆಡ್ಡಿಯವರು ಏನಾದರೂ ಇದನ್ನು ಮಾಡಬೇಡಿ ಎಂದು ಹೇಳಿದರೇ ? ನನ್ನ ಕ್ಷೇತ್ರದಲ್ಲಿ ಚಾಮನಹಳ್ಳಿ ಎಂದು ಒಂದು ಹಳ್ಳಿ ಇದೆ. ಅಲ್ಲಿ ೭೫ ಪರ್ಸೆಂಟ್ ನಿಮ್ಮ ಪಕ್ಷಕ್ಕೆ ಮತವನ್ನು ಕೊಡತಕ್ಕ ಜನ ಇದ್ದಾರೆ. ಅಂಥ ಭಾಗಕ್ಕೂ ಏತಕ್ಕೆ ನಿಮಗೆ ಇಷ್ಟೊಂದು ನಿರ್ಲಕ್ಷ್ಯ ಮನೋಭಾವನೆ. ಆ ಭಾಗ ಅತ್ಯಂತ ಹಿಂದುಳಿದ ಪ್ರದೇಶ ಎಂದು ತಾವೇ ಹೇಳುತ್ತೀರಿ.

ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಉತ್ತರ ಕೊಡುವಾಗ ಉದ್ದನೆಯ ಭಾಷಣವನ್ನು ಮಾಡಿಕೊಂಡು ಸುಮಾರು ಎರಡೂವರೆ ತಾಸಿನಕಾಲ ಹತ್ತಾರು ಪುಸ್ತಕಗಳನ್ನು ರೆಫರ್ ಮಾಡಿ, ಹಿಂದೆ ನೀವು ಮಂತ್ರಿಗಳಾಗಿದ್ದಾಗ ಈರೀತಿ ಭಾಷಣ ಮಾಡಿದ್ದೀರಿ, ಇಂಥ ಕೆಲಸಮಾಡಿದ್ದೀರಿ, ಇಂಥ ಕೆಲಸ ಮಾಡಿಲ್ಲ. ಅದು ಹಾಗೆ, ಇದು ಹೀಗೆ ಅಂಥ ನಾವೆಲ್ಲರೂ ಸುಸ್ವಾಗತಕ್ಕ ರೀತಿಯಲ್ಲಿ ಭಾಷಣ ಮಾಡುತ್ತಾರೆ. ಆದರೆ ಚುರುಕಾಗಿ ಅವರು ಕೆಲಸ ಮಾಡುವುದಿಲ್ಲ...

ಶ್ರೀ ಎಸ್. ಬಂಗಾರಪ್ಪ.— ಅವರ ಉತ್ತರವನ್ನು ಕೇಳಿ ಕೇಳಿ ನಮ್ಮ ಬಾಯಲ್ಲಿ ನೀರು ಜಿನುಗುತ್ತದೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ಮಾನ್ಯ ಅಧ್ಯಕ್ಷರೆ, ನಾನು ಮಾನ್ಯ ದೇವೇಗೌಡರಿಗೆ ಕೇಳುತ್ತೇನೆ. ನೀವು ಈ ಖಾತೆಯನ್ನು ವಹಿಸಿಕೊಂಡಮೇಲೆ ಆ ಭಾಗದ ಜನರಿಗೆ ಎಷ್ಟರಮಟ್ಟಿನ ಕೆಲಸವನ್ನು ಮಾಡಿಕೊಟ್ಟಿದ್ದೀರಿ ? ಎಷ್ಟರಮಟ್ಟಿನ ಸಮಾಧಾನವನ್ನುಂಟುಮಾಡಿದ್ದೀರಿ ? ಅದು ರಸ್ತೆ ಕಾಮಗಾರಿ ಇರಬಹುದು, ಸೇತು ಬಂಧನ ಕಾರ್ಯ ಇರಬಹುದು, ನೀವು ಎಷ್ಟರಮಟ್ಟಿಗೆ ಕೆಲಸವನ್ನು ತೆಗೆದುಕೊಂಡಿದ್ದೀರಿ ಎಂದು ನೋಡಿದರೆ ಅದರ ಹೆಸರೇ ಇಲ್ಲ. ಹಿಂದೆ ಮೈನರ್ ಇರಿಗೇಷನ್ ವರ್ಕ್ಸ್‌ನಲ್ಲೂ ಕೂಡ ಆಗಬೇಕಾಗಿದ್ದ ರಸ್ತೆ ಕಾಮಗಾರಿಗಳನ್ನಾಗಲಿ, ಸೇತುವೆ ಕಾಮಗಾರಿಗಳನ್ನಾಗಲಿ ಎಲ್ಲವನ್ನೂ ಇವತ್ತು ಜಿಲ್ಲಾ ಪರಿಷತ್ತುಗಳಿಗೆ ಒಟ್ಟಾಗಿ ಟ್ರ್ಯಾನ್ಸ್‌ಫರ್ ಮಾಡಿದ್ದೀರಿ. ನಾನು ತಮಗೆ ಹೇಳುತ್ತೇನೆ, ಹೊಸದಾಗಿ ಅವರು ಯಾವ ಕೆಲಸಕಾರ್ಯಗಳನ್ನೂ ತೆಗೆದುಕೊಳ್ಳುವುದಕ್ಕೆ ಆಗುವುದಿಲ್ಲ. ಏಕೆ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಜಿಲ್ಲಾ ಪರಿಷತ್ತುಗಳು ಕೆಲಸ ಪ್ರಾರಂಭ ಮಾಡುವುದೇ ೧-೪-೮೭ರಿಂದ ಅವು ಛಾರ್ಜನ್ನು ತೆಗೆದುಕೊಂಡು ಆಮೇಲೆ ಸ್ಪೆಷಲ್ ಮೈನರ್ ಇರಿಗೇಷನ್‌ನ್ನು ಹಿಡಿದು ಅಲ್ಲಿನ ಅಧಿಕಾರಿಗಳ ಜೊತೆ ಮಾತನಾಡಿ, ಈ ಕೆಲಸ ಯಾವಾಗ ಪ್ರಾರಂಭವಾಗಿದೆ, ಎಲ್ಲಿಗೆ ನಿಂತಿದೆ. ಎಂದು ಮಾಹಿತಿಗಳನ್ನು ತಿಳಿದುಕೊಳ್ಳುವುದಕ್ಕೇ ಸುಮಾರು ೬ ತಿಂಗಳು ಅಥವಾ ಒಂದು ವರ್ಷ ಬೇಕಾಗುತ್ತದೆ. ಯಾವ ಯಾವ ಇಲಾಖೆಯಲ್ಲಿ ಯಾವ ಯಾವ ಖಾತೆಗಳು ಬರುತ್ತವೆ ಎಂಬುದನ್ನು ತಿಳಿದುಕೊಳ್ಳುವುದಕ್ಕೆ ೬ ತಿಂಗಳಾಗುತ್ತದೆ. ಇನ್ನು ನೀವು ಕೊಡತಕ್ಕ ಸ್ವಲ್ಪ ಹಣದಲ್ಲಿ ಆ ಜಿಲ್ಲಾ ಪರಿಷತ್ತಿನವರು ಎಷ್ಟರಮಟ್ಟಿಗೆ ಕೆಲಸವನ್ನು ಮಾಡುತ್ತಾರೋ ನನಗಂತೂ ಗೊತ್ತಿಲ್ಲ.

ಇನ್ನು ಎರಡನೆಯದಾಗಿ ಇದೇ ಸದನದಲ್ಲಿ ಮಾನ್ಯ ಸಚಿವರಾದ ದೇವೇಗೌಡರು ಒಂದು ಮಾತನ್ನು ಹೇಳಿದರು. ನಾನು ಏನು ಹೇಳಿದೆ ಎಂದರೆ ಬಜೆಟ್‌ನಲ್ಲಿ ಮೈನರ್ ಇರಿಗೇಷನ್‌ಗೋಸ್ಕರ, ಬಿಲ್ಡಿಂಗ್ ವರ್ಕ್ಸ್‌ಗೋಸ್ಕರ, ಸೇತುಬಂಧನ ಕಾರ್ಯಕ್ರಮಗಳಿಗೋಸ್ಕರ, ಬಜೆಟ್‌ನಲ್ಲಿ ಮೂರನೇ ಒಂದು ಭಾಗಕ್ಕೆ ಪ್ರಾವಿಷನ್ ಮಾಡಿಲ್ಲ. ಆದ್ದರಿಂದ ಇವುಗಳಿಗೆ ಅಡ್ಮಿನಿಸ್ಟ್ರೇಟಿವ್ ಪ್ರಾವಿಷನ್ ಸಿಕ್ಕುವುದಿಲ್ಲ, ಹಣಕಾಸು ಇಲಾಖೆಯ ಮಾನ್ಯತೆ ಸಿಕ್ಕಿಲ್ಲ ಎಂದು ನಾನು ಹೇಳಿದೆ. ಅದಕ್ಕೆ ಅವರು ಏನು ಹೇಳಿದರು ಎಂದರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆ ನಾನು ಮಾತನಾಡಿದ್ದೇನೆ, ಮೂರನೇ ಒಂದು ಭಾಗ ಅಲ್ಲದಿದ್ದರೆ ೧/೧೦ ಭಾಗ ಮಾಡಿಯಾದರೂ ಕೊಡಬೇಕೆಂದು ಹೇಳಿದ್ದೇನೆಂದು ಹೇಳಿದರು. ಸ್ವಾಮಿ, ನಾನೊಂದರೂ ಕೇಳುತ್ತೇನೆ, ಮೊನ್ನೆ ಮಾನ್ಯ ಮುಖ್ಯ ಮಂತ್ರಿಗಳ ಹೇಳಿಕೆಯ ಪ್ರಕಾರ ಮೂರನೇ ಒಂದು ಭಾಗ ಬಜೆಟ್ ಪ್ರಾವಿಷನ್ ಇಲ್ಲದ ಕಾರಣ ನಾವು ಈ ಕೆಲಸವನ್ನು ತೆಗೆದುಕೊಳ್ಳುವುದಕ್ಕೆ ಆಗಲಿಲ್ಲ ಎಂದು ಅವರೇ ಹೇಳಿದ್ದಾರೆ. ಮಾನ್ಯ ಮುಖ್ಯ ಮಂತ್ರಿಗಳೇ ಈ ಮಾನ್ಯ ಸಭೆಗೆ ಹೇಳಿದ್ದಾರೆ. ಅರ್ಧ ಬಡ್ಜೆಟ್ ಪ್ರಾವಿಷನ್ ಇದೆ. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೊಡುತ್ತೇವೆಂದು ಹೇಳುತ್ತಾರೆ. ಅದು ಕೂಡ ಒಂದು ತಿಂಗಳು ಎರಡು ತಿಂಗಳಾದರೂ ಕೂಡ ಬರುವುದಿಲ್ಲ. ಏತಕ್ಕೆ ಈ ರೀತಿ ಮೋಸ ಮಾಡಬೇಕು ? ಮಾನ್ಯ ಮುಖ್ಯಮಂತ್ರಿಗಳು ಹೇಳುತ್ತಾರೆ ಅರ್ಧ ಪ್ರಾವಿಷನ್ ಇಲ್ಲದೆ ಇದ್ದರೆ ಮಾಡುವುದಕ್ಕೆ ಬರುವುದಿಲ್ಲವೆಂದು ಹಣಕಾಸಿನ ಪರಿಸ್ಥಿತಿ ಸರಿಯಾಗಿ ಇಲ್ಲವಾದ ಕಾರಣದಿಂದ ಆ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕಾಗುವುದಿಲ್ಲವೆಂದು ಖಡಾಖಂಡಿತವಾಗಿ ಹೇಳಿದರು. ಆದರೆ ಈ ಸಭೆಯ ಮುಂದೆ ವಿಚಾರ ಬಂದಾಗ ಮಾನ್ಯ ದೇವೇಗೌಡರು ಹೇಳುತ್ತಾರೆ, ಮಾನ್ಯ ಮುಖ್ಯಮಂತ್ರಿಗಳ ಜೊತೆಯಲ್ಲಿ ಚರ್ಚೆಮಾಡಿ ೧/೧೦ ಬಡ್ಜೆಟ್ ಪ್ರಾವಿಷನ್ ಕಡಿಮೆ ಇದ್ದರೂ ಕೂಡ ನಾನು ಅದನ್ನು ತೆಗೆದುಕೊಳ್ಳುತ್ತೇನೆ. ಆ ಕೆಲಸವನ್ನು ನಿರ್ವಹಿಸುತ್ತೇನೆಂದು ಹೇಳುತ್ತಾರೆ. ಇದು ಯಾವ ಸರ್ಕಾರ - ದೇವೇಗೌಡರ ಸರ್ಕಾರವೇ ಎಂದು ಕೇಳಬೇಕಾಗುತ್ತದೆ. ಈ ರೀತಿಯಾಗಿ ಹೇಳಿದರೆ ನಿಮ್ಮನ್ನು ಯಾವ ರೀತಿ ನಂಬಬೇಕು ? ಬಹುಶಃ ದೇವೇಗೌಡರ ಸರ್ಕಾರ ಬಂದಮೇಲೆ ಮಾಡುತ್ತಾರೋ ಏನೋ ಗೊತ್ತಿಲ್ಲ ಈ ರೀತಿಯಾಗಿ ಹೇಳಿದರೆ ಜನರಿಗೆ ನಂಬಿಕೆ ಯಾವರೀತಿ ಬರುತ್ತದೆ ? ಇವತ್ತು ಜನರಲ್ಲಿ

ನಂಬಿಕೆ ಹೋಗಿದೆ ಎಂದು ನೇರವಾಗಿ ಹೇಳಬೇಕಾಗಿದೆ. ಹೋದಸಲ ಟೋಕನ್ ಗ್ರ್ಯಾಂಟ್ ಇಟ್ಟಿದ್ದು ಯಾವ ಕೆಲಸವನ್ನು ಇನ್ನೂ ಕೂಡ ಪ್ರಾರಂಭ ಮಾಡಿಲ್ಲ. ಅನೇಕ ಕೆಲಸಗಳನ್ನು ಮಾಡಲು ಟೋಕನ್ ಗ್ರ್ಯಾಂಟ್ ಇಟ್ಟಿದ್ದರು. ಎಸ್ಟಿಮೇಟ್ ಮಾಡಿ ಟೆಕ್ನಿಕಲ್ ಅಪ್ರೂವಲ್ ಕೊಟ್ಟಿದ್ದರು. ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಕೂಡ ಕೊಟ್ಟಿದ್ದರು. ಆದರೂ ಕೂಡ ಯಾವ ಕೆಲಸವನ್ನೂ ಮಾಡಲಿಲ್ಲವೆಂದರೆ ಜನರ ಕಣ್ಣನ್ನು ಒರಿಸಲಿಕ್ಕೆ ಹೋಗಿ ಮಣ್ಣನ್ನು ಹಾಕುವಂಥ ಕೆಲಸ ಮಾಡುತ್ತಿದ್ದಿರಿ ಎಂದು ಹೇಳಬೇಕಾಗಿದೆ. ಬರೇ ಸಮಾಧಾನ ಮಾಡುವಂಥ ಕೆಲಸವನ್ನು ಮಾಡುತ್ತಿದ್ದೀರೆಂದು ನೇರವಾಗಿ ಕೇಳುತ್ತಿದ್ದೇನೆ. ಇದಕ್ಕೆ ಸ್ಪಷ್ಟವಾಗಿ ಉತ್ತರವನ್ನು ಹೇಳಬೇಕು. ಈ ವರ್ಷವಲ್ಲ ನಾವು ಕೇಳುತ್ತಿರುವುದು, ಮೂರು ವರ್ಷಗಳಿಂದಲೂ ನೋಡುತ್ತಿದ್ದೇವೆ. ಬಂದಂಥ ಯಾವ ಕೆಲಸವನ್ನೂ ಕೂಡ ಪ್ರಾರಂಭ ಮಾಡಿಲ್ಲ. ಆದರೆ ಕೆಲವು ಕೆಲಸಗಳು ಪ್ರಾರಂಭವಾಗಿದ್ದು ಯಶಸ್ವಿಯಾಗಿ ಆಗುವುದಿದ್ದರೂ ಕೂಡ ಅವುಗಳನ್ನು ಕೈಬಿಟ್ಟಿದ್ದೀರಿ. ಯಾದಗಿರಿಯಲ್ಲಿ ಸಬ್ ಟ್ರೆಜರಿ ಕೆಲಸಕ್ಕೆ ಬಡ್ಜೆಟ್ ಪ್ರಾವಿಷನ್ ನೀಡಿದ್ದರೂ ಕೂಡ ಆ ಕೆಲಸ ನಿಂತುಹೋಗಿದೆ ಎಂದರೆ ನನಗೆ ಏನೂ ಅರ್ಥವಾಗುತ್ತಿಲ್ಲ. ನಡೆಯುತ್ತಿರುವ ಕೆಲಸಗಳನ್ನು ಯಾವ ಕಾರಣಕ್ಕೂ ನಿಲ್ಲಿಸಬೇಡಿ ಎಂದು ಕೇಳಿಕೊಂಡರೆ ಮಾಡೋಣವೆಂದು ಹೇಳಿ ಈ ರೀತಿಯಾದ ತಾರತಮ್ಯವನ್ನು ಮಾಡುತ್ತಿದ್ದೀರೆಂದು ನಮಗೆ ಭಾಸವಾಗುತ್ತದೆ. ಒಂದು ಕಡೆ ತಾವು ಕೆಲಸಗಳನ್ನು ಕೊಡುವಾಗ ಸರಿಯಾದ ರೀತಿಯಲ್ಲಿ ನೋಡಿಕೊಂಡು ಹಿಂದುಳಿದ ಭಾಗಗಳಿಗೆ ಹೆಚ್ಚಿನ ಪ್ರಾಮುಖ್ಯತೆಯನ್ನು ಕೊಟ್ಟು ಹೆಚ್ಚಿನ ಕೆಲಸಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳುತ್ತೀರಿ, ಮತ್ತೊಂದು ಕಡೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಇಲ್ಲ, ಎಸ್ಟಿಮೇಟ್ ತಯಾರಾಗಿಲ್ಲ. ಒಂದು ನಯಾ ಪೈಸೆಯನ್ನೂ ಕೂಡ ಖರ್ಚುಮಾಡುವುದಕ್ಕಾಗುವುದಿಲ್ಲವೆಂದು ಸ್ಪಷ್ಟವಾಗಿ ಹೇಳುತ್ತೀರಿ. ಏತಕ್ಕೆ ಈ ರೀತಿ ಮಾಡುತ್ತೀರಿ ಎನ್ನತಕ್ಕಂಥ ಮಾತನ್ನು ಕೇಳುತ್ತಿದ್ದೇನೆ. ಇನ್ನೊಂದು ವಿಚಾರವನ್ನು ಮಾನ್ಯ ಸಚಿವರು ಹೇಳಿದರು ಹೆದ್ದಾರಿ, ಸೇತುಬಂಧನ ಇವೇ ಮುಂತಾದ ೨೩ ಯೋಜನೆಗಳು ಇವೆ ಎಂದು ಬಹುಶಃ ತಮಗೂ ಕೂಡ ಗೊತ್ತಿರಬಹುದು, ತಾವು ಮಂತ್ರಿಮಂಡಲದಲ್ಲಿ ಇದ್ದವರು. ಆದರ ಲಾಭವನ್ನು ಪಡೆದುಕೊಂಡಿರುತ್ತೀರೆಂದು ಗೊತ್ತಾಗುತ್ತದೆ. ಈ ಸೇತುಬಂಧನ ಮತ್ತು ಹೆದ್ದಾರಿಗೆ ಸುಮಾರು ೧೧೨ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇದರಲ್ಲಿ ೨೭ ಕೆಲಸಗಳು ನಡೆಯುತ್ತಿವೆ ಎಂದು ಹೇಳುತ್ತೀರಿ. ನಾನು ಕೇಳಬೇಕಾದರೆ ಈ ಕೆಲಸಗಳು ಎಲ್ಲೆಲ್ಲಿ ನಡೆದಿವೆ ಎಂದರೆ ಎಲ್ಲಿ ಜನ ತಾವಾಗಿಯೇ ಸುಮಾರು ೨೦ ಪರ್ಸೆಂಟ್ ಮೆಟೀರಿಯಲ್ಸ್ ಕನ್‌ಸ್ಟ್ರಕ್ಷನ್‌ಗೆ ಕೊಟ್ಟಿರುತ್ತಾರೋ ಅಂಥ ಕಡೆ ಕೊಡಬೇಕೆಂದು ಮಾಡಿದ್ದೀರಿ. ಯಾವ ಜಿಲ್ಲೆಗಳಲ್ಲಿ ಈ ಕೆಲಸಗಳನ್ನು ತೆಗೆದುಕೊಂಡಿದ್ದೀರಿ, ಎಷ್ಟರಮಟ್ಟಿಗೆ ಪ್ರಚಾರ ಮಾಡಿದ್ದೀರಿ ? ಎಷ್ಟರಮಟ್ಟಿಗೆ ಹಳ್ಳಿಯ ಜನ ಖರ್ಚು ಮಾಡುವುದಕ್ಕೆ ಇವತ್ತಿನ ದಿವಸ ತಯಾರಾಗಿ ಈ ಕೆಲಸದಲ್ಲಿ ಬಾಗಿಯಾಗಿದ್ದಾರೆ. ಎನ್ನತಕ್ಕಂಥದ್ದನ್ನೆಲ್ಲ ತಾವು ಹೇಳಬೇಕು. ನೀವು ತೆಗೆದುಕೊಂಡಿರತಕ್ಕಂಥ ೧೧ ಕೋಟಿ ರೂಪಾಯಿಗಳ ಕೆಲಸದಲ್ಲಿ ನಮ್ಮ ಭಾಗದಲ್ಲಿ ಒಂದು ಕೆಲಸ ಕೂಡ ಪ್ರಾರಂಭವಾಗಿಲ್ಲ. ಸೇತು ಬಂಧನ ಎನ್ನತಕ್ಕಂಥದ್ದು ಒಂದು ಹೊಸ ಯೋಜನೆಯಾಗಿರುತ್ತದೆ. ಮತ್ತೆ ಹೆದ್ದಾರಿ ಎಂದು ಹೇಳತಕ್ಕಂಥದ್ದರಲ್ಲಿ ತಾರತಮ್ಯವಾಗಿದೆ. ಸಾವಿರಕ್ಕಿಂತಲೂ ಕಡಿಮೆ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳಲ್ಲಿ ತೆಗೆದುಕೊಂಡಿರತಕ್ಕಂಥ ಯೋಜನೆ ಇದು. ಆದರೆ ಈ ನಮ್ಮ ಕಡೆಯಲ್ಲಿ ಸಾವಿರಕ್ಕಿಂತಲೂ ಹೆಚ್ಚಾಗಿ ಜನಸಂಖ್ಯೆ ಇರತಕ್ಕಂಥ ಹಳ್ಳಿಗಳು ಒಂದೂ ಕೂಡ ಇಲ್ಲ. ರೆವಿನ್ಯೂ ವಿಲೇಜಸ್ ತೆಗೆದುಕೊಂಡರೂ ಕೂಡ ಸುಮಾರು ೧೦೦ಕ್ಕೆ ೯೦–೯೫ ಪರ್ಸೆಂಟ್ ಹಳ್ಳಿಗಳು ಹ್ಯಾಮ್‌ಲೆಟ್ ತಾಂಡಗಳು ಕಡಿಮೆ ಪಾಪ್ಯುಲೇಷನ್ ಹೊಂದಿರುತ್ತದೆ. ಆದರೆ ಈ ಯೋಜನೆಯ ಪ್ರಯೋಜನ ಆ ಭಾಗಕ್ಕೆ ಆಗುತ್ತಿಲ್ಲ. ಇತರ ಯೋಜನೆಗಳಿಂದಲೂ ಆ ಭಾಗಕ್ಕೆ ಅನ್ಯಾಯವಾಗಿದೆ. ಅದರಲ್ಲಿ ಯಾವ ಯಾವ ಜಿಲ್ಲೆಗೆ ಅನುಕೂಲ ಮಾಡಿದ್ದೀರಿ ಎಂಬುದನ್ನು ಹೇಳಬೇಕು. ಮೂರನೆಯದಾಗಿ, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಎಂದು ಇದೆ. ಇದರ ಬಂಡವಾಳ ಒಂದು ಕೋಟಿ ೧೫ ಲಕ್ಷ ರೂಪಾಯಿ ಇರಬಹುದು. ಅದಕ್ಕೆ ಸರ್ಕಾರದವರು ಸುಮಾರು ೬೦ ಲಕ್ಷ ರೂಪಾಯಿಗಳನ್ನು ಕೊಟ್ಟು ಕಂಪನಿಯನ್ನು ರಿಜಿಸ್ಟರ್ ಮಾಡಿ ೧೯೬೯ರಲ್ಲಿ ಅದು ಪ್ರಾರಂಭವಾಗಿದೆ. ಈ ಕಂಪನಿ ಪ್ರಾರಂಭವಾದರೂ ಇಲ್ಲಿಯವರೆಗೆ ೩ ಕೋಟಿ ೩೧ ಲಕ್ಷ ರೂಪಾಯಿ ನಷ್ಟದಲ್ಲಿ ನಡೆದಿದೆ. ಒಂದು ಕಡೆ ಕಂಟ್ರಾಕ್ಟರ್ಸ್ ಪ್ರೈವೇಟ್ ಆಗಿ ಕಾಂಟ್ರಾಕ್ಟ್ ಮಾಡಿದವರು ಲಾಭದಲ್ಲಿರುತ್ತಾರೆ. ಲ್ಯಾಂಡ್ ಆರ್ಮಿ ಚನ್ನಾಗಿ ಕೆಲಸ ಮಾಡುತ್ತಿದೆ, ಇಷ್ಟು ಕೋಟಿ ರೂಪಾಯಿ ಪ್ರಾಫಿಟ್ ಆಯಿತು ಎಂದು ಬಹಿರಂಗವಾಗಿ ಹೇಳಿಕೊಂಡು ಬೋನಸ್ ಕೊಡುತ್ತಿದ್ದಾರೆ. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಇಲ್ಲಿಯವರೆಗೆ ಸಪ್ಪರ್

ಆಗಿದೆ. ಸಫರ್ ಆಗಿ ೩ ಕೋಟಿ ೩೧ ಲಕ್ಷ ರೂಪಾಯಿ ಲಾಸ್ ಆಗಿದೆ. ನೀವು ಅಧಿಕಾರಕ್ಕೆ ಬಂದು ೪ ವರ್ಷವಾಯಿತು, ೪ ವರ್ಷದಿಂದ ಅದು ನಿಮ್ಮ ಅಧೀನದಲ್ಲಿದೆ. ನೀವು ಪ್ರಾಫಿಟ್ ತೋರಿಸಿರುವುದು ೩೦ ಲಕ್ಷ ರೂಪಾಯಿ. ೩ ಕೋಟಿ ೩೧ ಲಕ್ಷ ರೂಪಾಯಿ ಲುಕ್ಸಾನಾಗಿರುವಾಗ ೩೦ ಲಕ್ಷ ರೂಪಾಯಿ ಪ್ರಾಫಿಟ್ ಅಂದರೆ ೩ ಕೋಟಿ ರೂಪಾಯಿ ನಷ್ಟವೇ ಆಯಿತಲ್ಲ. ಇದಕ್ಕೆ ಜಾಸ್ತಿ ಪ್ರೋತ್ಸಾಹ ನೀಡುತ್ತಿದ್ದೀರಿ. ಇದರ ಟರ್ನ್ ಓವರ್ ೧೫ ಕೋಟಿ ೪೩ ಲಕ್ಷ ರೂಪಾಯಿ ೧೯೮೪-೮೫ರವರೆಗೆ. ಲಾಸ್ ೩.೩೧ ಕೋಟಿ ರೂಪಾಯಿ. ಏತಕ್ಕೆ ಹೀಗಾಯಿತೆಂದರೆ, ವರ್ಕ್‌ಲೋಡ್ ಇಲ್ಲ, ಅದಕ್ಕೋಸ್ಕರ ಹೀಗಾಯಿತು ಎಂದು ಹೇಳುತ್ತಾರೆ. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನ ಉದ್ದೇಶವಾದರೂ ಏನು ಎಂದು ಪ್ರಶ್ನೆ ಕೇಳುತ್ತೇನೆ. ಎಲ್ಲೆಲ್ಲಿ ಕಂಟ್ರಾಕ್ಟರ್ಸ್ ಕೆಲವು ಕೆಲಸಗಳು ಲಾಭದಾಯಕವಲ್ಲವೆಂದು ಮುಂದೆ ಬರುವುದಿಲ್ಲ ಅಥವಾ ಷೆಡ್ಯೂಲ್ಡ್ ರೇಟ್ ಪ್ರಕಾರ ಕೆಲಸ ಮಾಡುವುದಕ್ಕೆ ತಯಾರಿರುವುದಿಲ್ಲ ಅಂಥ ಕಡೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ನಿನವರಿಗೆ ಕೆಲಸ ಒಪ್ಪಿಸಬೇಕೆಂದು ಇದೆ. ಅದಕ್ಕೋಸ್ಕರ ಈ ಏಜೆನ್ಸಿಯನ್ನು ಕ್ರಿಯೇಟ್ ಮಾಡಿದಿರಿ. ಅದರ ಪ್ರಕಾರ ೧೯೮೫-೮೬ರಲ್ಲಿ ೪ ಕೋಟಿ ೧೨ ಲಕ್ಷ ರೂಪಾಯಿಗಳ ಕೆಲಸ ಕೊಟ್ಟಿದ್ದೀರಿ. ೧೯೮೬-೮೭ರಲ್ಲಿ ೫ ಕೋಟಿ ೩೦ ಲಕ್ಷ ರೂಪಾಯಿಗಳ ಕೆಲಸ ಕೊಟ್ಟಿದ್ದೀರಿ. ಹೀಗೆ ಸುಮಾರು ೨೦ ಕೋಟಿ ರೂಪಾಯಿನ ಕೆಲಸ ಮಾಡಿದ ಮೇಲೆ ೩೦ ಲಕ್ಷ ರೂಪಾಯಿ ಪ್ರಾಫಿಟ್ ಮಾಡಿದ್ದಾರೆ. ೩ ಕೋಟಿ ರೂಪಾಯಿ ಲುಕ್ಸಾನು ಮಾಡಿದ್ದಾರೆ. ಇದು ಅದರ ಎಫಿಷಿಯನ್ಸಿ. ಅದು ನೇರವಾಗಿ ಇವರ ಕಂಟ್ರೋಲ್‌ನಲ್ಲಿದೆ. ಅದು ಕೆಲಸ ಇಲ್ಲವೆಂದು ಸಫರ್ ಮಾಡಬೇಕಾದರೆ ಕಾರಣವೇನು ಎಂದು ಕೇಳುತ್ತೇನೆ. ಗುಲ್ಬರ್ಗದಲ್ಲಿ ಒಂದು ಮಿನಿ ವಿಧಾನಸೌಧ (ಡಿಸ್ಟ್ರಿಕ್ಟ್ ಕಾಂಪ್ಲೆಕ್ಸ್) ಕಟ್ಟಬೇಕಾಗಿತ್ತು. ಅದಕ್ಕೆ ಬಡ್ಜೆಟ್ ಪ್ರಾವಿಷನ್ ೧ ಕೋಟಿ ೪೦ ಲಕ್ಷ ರೂಪಾಯಿ ಇತ್ತು. ಹೋದ ಸಾರಿಯೂ ಇತ್ತು, ಅದರ ಹಿಂದಿನ ಸಾರಿಯೂ ಇತ್ತು. ಅದಕ್ಕೆ ಟೆಂಡರ್ ಕರೆದಾಗ ಅನೇಕ ಕಂಟ್ರಾಕ್ಟರ್ಸ್ ಹೆಚ್ಚಾಗಿ ಕೇಳುತ್ತಾರೆಂದು ಬಂದ ಬಂದ ಟೆಂಡರ್‌ಗಳೆಲ್ಲ ರಿಜೆಕ್ಟ್ ಆಗಿ ಹೋಗುತ್ತಿವೆ. ಹೀಗಿರುವಾಗ ಇವರು ಕೆಲಸ ಇಲ್ಲವೆಂದು ಸುಮ್ಮನೆ ಕುಳಿತಿದ್ದರೆ ಹೇಗೆ ? ಈ ಕಾರ್ಪೊರೇಷನ್ನಿಗೆ ಅಂಥ ಕೆಲಸವನ್ನು ಏತಕ್ಕೆ ಕೊಡಲಿಲ್ಲ ? ಏತಕ್ಕೆ ಅವರಿಂದ ಆ ಕೆಲಸವನ್ನು ಮಾಡಿಸಲಿಲ್ಲವೆಂದರೆ ಅವರು ಅಂಥ ದೊಡ್ಡ ದೊಡ್ಡ ಕೆಲಸ ಮಾಡತಕ್ಕ ಯೋಗ್ಯತೆಯನ್ನು ಹೊಂದಿಲ್ಲವೆಂದು ಇನ್ನೊಂದು ಕಡೆ ಬಂದಿದೆ. ಅದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯುವರು ಹೇಳಿದ್ದಾರೆ. ನನಗನ್ನಿಸಿದ ಮಟ್ಟಿಗೆ ತಮ್ಮ ಮತಕ್ಷೇತ್ರದಲ್ಲಿ ಇರಿಗೇಷನ್ ಡಿಪಾರ್ಟ್‌ಮೆಂಟ್ ಮೇಲೆ ೧೧-೯-೧೯೮೫ರಲ್ಲಿ ಪಿ.ಎ.ಸಿ.ಯವರು ರಿಪೋರ್ಟ್ ಸಬ್‌ಮಿಟ್ ಮಾಡಿದ್ದಾರೆ. ಅಧ್ಯಕ್ಷರೆ, ನಮ್ಮ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನವರಿಗೆ ಕೇವಲ ೧೦ ಲಕ್ಷ ರೂಪಾಯಿಯ ಕೆಲಸ ವಹಿಸಿಕೊಟ್ಟಿದ್ದರು ಹಾರಂಗಿ ಪ್ರಾಜೆಕ್ಟ್ ಕೆಳಗೆ. ಅದರ ಬಗ್ಗೆ ಪಬ್ಲಿಕ್ಸ್ ಅಕೌಂಟ್ ಕಮಿಟಿ ರಿಪೋರ್ಟ್‌ನಲ್ಲಿ–

"The Committee surprised that the Karnataka State Construction Corporation Ltd. has failed to cxecute these two small works costing less than Rs. 10 lakhs." ಎಂದು ಹೇಳಿದ್ದಾರೆ.

ಅಂದರೆ ೧೦ ಲಕ್ಷ ರೂಪಾಯಿನ ಕೆಲಸ ಕೂಡ ಮಾಡತಕ್ಕ ಯೋಗ್ಯತೆ ಇಲ್ಲ ಎಂದು ಒಂದು ಕಡೆ ಪಬ್ಲಿಕ್ ಅಕೌಂಟ್ಸ್ ಕಮಿಟಿ ರಿಮಾರ್ಕ್ಸ್, ಇನ್ನೊಂದು ಕಡೆ ಅವರಿಗೆ ಕೆಲಸ ಇಲ್ಲದ ಕಾರಣ ಇಷ್ಟು ಲುಕ್ಸಾನಾಗುತ್ತಿದೆ ಎಂದು ಹೇಳುತ್ತೀರಿ. ಮತ್ತೊಂದು ಕಡೆ ತಮ್ಮ ನೇತೃತ್ವದಲ್ಲಿ ೧೦ ಕೋಟಿ ರೂಪಾಯಿನ ಕೆಲಸವನ್ನು ಇವತ್ತು ಕೊಟ್ಟಿದ್ದೀರಿ. ಇದು ನನಗೆ ಅರ್ಥವಾಗುತ್ತಿಲ್ಲ. ಕೆಲಸ ಒಂದು ಕಡೆ ಕೊಡಿಸಿದ್ದೀರಿ. ಆದರೂ ಲುಕ್ಸಾನಿದೆ. ಇನ್ನೊಂದು ಕಡೆ ಕೆಲಸ ಮಾಡತಕ್ಕ ಯೋಗ್ಯತೆ ಇಲ್ಲ ಎಂಬ ರಿಮಾರ್ಕ್ಸ್ ಇವೆ. ಅದಕ್ಕಾಗಿ ಇದರ ಬಗ್ಗೆ ಸಂಪೂರ್ಣ ತನಿಖೆ ಮಾಡಿ ಎಂದು ಹೇಳುತ್ತೇನೆ. ೧೯೭೮ ರಿಂದ ಆಗಿದೆಯೋ ೧೯೭೦ನೇ ಇಸವಿಯಿಂದ ಆಗಿದೆಯೋ ಇದಕ್ಕೆ ಕಾರಣ ಏನು ಎಂಬ ಬಗ್ಗೆ ವೈಟ್‌ಪೇಪರ್ ಪಬ್ಲಿಷ್ ಮಾಡಿ. ಸುಮ್ಮನೆ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಒಂದು ಕಡೆ, ಒಂದು ಕಡೆ ಲ್ಯಾಂಡ್ ಆರ್ಮಿ, ಇನ್ನೊಂದು ಕಡೆ ಪಿ ಡಬ್ಲ್ಯು. ಡಿ. ಮೂರು ಇಟ್ಟುಕೊಂಡಿದ್ದೀರಿ. ಪಿ. ಡಬ್ಲ್ಯು. ಡಿ. ಯವರು ಇನ್‌ಎಫಿಷಿಯೆಂಟ್ ಎಂದು, ಮುಖ್ಯಮಂತ್ರಿಗಳು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮಾಡಿದ್ದಾರೋ ಏನೋ ಗೊತ್ತಿಲ್ಲ. ಆ ಕಡೆ ದೊಡ್ಡ ಆರ್ಮಿ ಇದೆ. ಅದು ಅಲ್ಲಲ್ಲಿ ಕೆಲಸ ಮಾಡುತ್ತಿದೆ, ಆದರಲ್ಲೂ ಕೂಡ ಲೋಪ ದೋಷ ಇದೆ. ಅಲ್ಲಿ ಕೇಳುವವರು ಹೇಳುವವರು

ಯಾರೂ ಇಲ್ಲ. ಅವರು ಏನು ರೇಟ್ ಕೋಟ್ ಮಾಡುತ್ತಾರೆ ಅದರಂತೆ ಕೆಲಸ ಮಾಡುತ್ತಾರೆ. ಆ ಕಾರ್ಪೊರೇಷನ್‌ನವರು ಅಡ್ವಾನ್ಸ್ ಅಮೌಂಟ್ ತೆಗೆದುಕೊಳ್ಳುತ್ತಾರೆ, ನಂತರ ಕೆಲಸ ಎಗ್ಸಿಕ್ಯೂಟ್ ಮಾಡುತ್ತಾರೆ. ಪಿ. ಡಬ್ಲ್ಯೂ. ಡಿ. ನಲ್ಲಿ ಆ ರೀತಿ ಇಲ್ಲ. ಮೊದಲು ಎಲ್. ಓ. ಸಿ. ರೇಟ್ ಮಾಡಬೇಕು, ಆಮೇಲೆ ಟೆಕ್ನಿಕಲ್ ಅಪ್ರೂವಲ್ ಆಗಬೇಕು. ಎಲ್. ಓ. ಸಿ. ಮಾಡಿಕೊಂಡು ಅವರು ಕೊಟ್ಟಷ್ಟು ಹಣವನ್ನು ತೆಗೆದುಕೊಂಡು ಕೆಲಸ ಪ್ರಾರಂಭ ಮಾಡಬೇಕು. ಇವತ್ತು ಮೂರು ಏಜೆನ್ಸಿ ಸರ್ಕಾರದಲ್ಲಿದೆ. ಯಾರ ಯಾರ ಆಶೀರ್ವಾದ ಯಾವುದರ ಮೇಲಿದೆಯೋ ಅದಕ್ಕೆ ಕೆಲಸ ಜಾಸ್ತಿ ಸಿಗುತ್ತದೆ. ದೇವೇಗೌಡರ ಆಶೀರ್ವಾದ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮೇಲಿದೆ. ಅದಕ್ಕಾಗಿ ೧೦ ಕೋಟಿ ರೂಪಾಯಿನ ಕೆಲಸ ಕೊಟ್ಟಿದ್ದಾರೆ. ನಜೀರ್ ಸಾಹೇಬರು ಲ್ಯಾಂಡ್ ಆರ್ಮಿ ಮುಖಾಂತರ ಕೆಲಸ ಮಾಡಿಸುತ್ತಾರೆ. ಅದಕ್ಕಾಗಿ ಅಲ್ಲಿ ಕೋಟ್ಯಾಂತರ ರೂಪಾಯಿ ಕೆಲಸ ಸಿಗುತ್ತಿದೆ. ಪಿ. ಡಬ್ಲ್ಯೂ. ಡಿ. ಯವರು ಕೈ ಕಟ್ಟಿಕೊಂಡು ನೋಡತಕ್ಕ ಕೆಲಸ ಮಾಡುತ್ತಿದ್ದಾರೆ. ಬೇರೆ ಏನೂ ಕೆಲಸ ಇಲ್ಲ. ಒಂದು ಕಡೆ ಹಣವೂ ಅಲ್ಲ. ಸುಣ್ಣ ಬಣ್ಣದ ಕೆಲಸ ಬಿಟ್ಟರೆ ಬಾಕಿ ಕೆಲಸ ನಿಮ್ಮ ಖಾತೆಯಿಂದ ಆಗುತ್ತಿಲ್ಲ. ಹೊಸ ಕೆಲಸ ಸೇರಿಸಿದ್ದರೂ ಬಜೆಟ್ ಪ್ರಾವಿಷನ್ ಇಲ್ಲ ಎಂದು ಫೈನಾನ್ಸ್ ಡಿಪಾರ್ಟ್‌ಮೆಂಟ್‌ನವರು ತಿರುಗಿ ಹಾಕುತ್ತಾರೆ, ಮತ್ತಿತರ ಸಣ್ಣಪುಟ್ಟ ಕೆಲಸಗಳನ್ನು ಲ್ಯಾಂಡ್ ಆರ್ಮಿ ಕಾರ್ಪೊರೇಷನ್ ಮತ್ತು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ಗೆ ವಹಿಸಿಕೊಡುತ್ತಿದ್ದಾರೆ ಈ ಪರಿಸ್ಥಿತಿಯಲ್ಲಿ ದೇವೇಗೌಡರು ಸಿಕ್ಕಿ ಬಿದ್ದಿದ್ದಾರೆ. ತ್ರಿಶಂಕು ಸ್ಥಿತಿಯಲ್ಲಿದ್ದಾರೆ. ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್‌ನಲ್ಲಿ ಮೂರು ಕೋಟಿ ರೂಪಾಯಿ ನಷ್ಟ ಏನಾಗಿದೆ ಅದರ ಬಗ್ಗೆ ವೈಟ್ ಪೇಪರ್ ಪಬ್ಲಿಷ್ ಮಾಡಬೇಕೆಂದು ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ತದನಂತರ ಯು. ಕೆ. ಪಿ ಬಗ್ಗೆ ಹೇಳಬೇಕೆಂದರೆ ಇದು ಬಹಳ ದೊಡ್ಡ ಪ್ರಾಜೆಕ್ಟ್. ಪದೇ ಪದೇ ಈ ಸದನದಲ್ಲಿ ಉತ್ತರ ಕರ್ನಾಟಕದಿಂದ ಬಂದಂಥ ಅನೇಕ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಶ್ರೀಮಾನ್ ಕದಪಟ್ಟಿ ಅವರು ಮೊನ್ನೆ ಬಹಳ ಚೆನ್ನಾಗಿ ಮಾತನಾಡಿದರು. ಅದೇರೀತಿಯಾಗಿ ಅನೇಕ ಸದಸ್ಯರು ಇಲ್ಲಿ ಪ್ರಸ್ತಾಪ ಮಾಡಿದ್ದಾರೆ. ಇರಿಗೇಷನ್‌ನಲ್ಲಿ ಹಿಂದುಳಿದ ಭಾಗಕ್ಕೆ ಎಷ್ಟರಮಟ್ಟಿಗೆ ಆದ್ಯತೆ ಕೊಡಬೇಕಾಗಿತ್ತೋ ಅದನ್ನು ಕೊಟ್ಟಿಲ್ಲ ಎಂಬ ಮಾತನ್ನು ಬಹಳ ನೊಂದ ಮನಸ್ಸಿನಿಂದ ಹೇಳುತ್ತೇನೆ.

ಅದನ್ನು ಸ್ಪಷ್ಟವಾಗಿ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳಲ್ಲಿ ಕಾಣಬಹುದು. ಅದೇನೂ ವಿಶೇಷವಾಗಿ ಯು. ಕೆ. ಪಿ. ಯಲ್ಲಿ ಆಲ್‌ಮಟ್ಟಿ ಡ್ಯಾಂ ಆಯಿತು. ಮೊನ್ನೆ ತಾನೇ ಫೌಂಡೇಷನ್ ಹಾಕಿ ಬಂದಂತಹ ಮುಳುವಾಡಿ ಏತ ನೀರಾವರಿ ಯೋಜನೆ, ಕಾರಂಜಾ ಪ್ರಾಜೆಕ್ಟ್‌ಗೆ ೮ ಕೋಟಿ ಕೊಟ್ಟಿರುವುದನ್ನು ನಾನು ನೋಡಿದ್ದೇನೆ. ಅದನ್ನು ಬಿಟ್ಟರೆ ಬೆಣ್ಣೆತೊರೆ ಯೋಜನೆ, ಲೋಯರ್ ಮುಲ್ಲಾಮರಿ, ಅಪ್ಪರ್ ಮುಲ್ಲಾಮರಿ, ಚಳುಕಿನಾಳ ಯೋಜನೆ ಇವುಗಳಿಗೆ ಯಾವುದಕ್ಕೂ ಸಫಿಷಿಯಂಟ್ ಆಗಿ ಫಂಡ್ಸನ್ನು ಇಟ್ಟಿಲ್ಲ. ಯು.ಕೆ.ಪಿ. ಬಗ್ಗೆಯೂ ಕೂಡ ತಾವು ಎಷ್ಟರಮಟ್ಟಿಗೆ ವಾದ ಮಾಡುತ್ತಿದ್ದಿರೋ ಅಷ್ಟರ ಮಟ್ಟಿಗೆ ನೀವು ನಡೆದುಕೊಂಡಿಲ್ಲ. ನೀವೇ ಈ ಸದನದಲ್ಲಿ ಹೇಳಿದ್ದೀರಿ. ಎಂತಹ ಪರಿಸ್ಥಿತಿ ಬಂದರೂ ಯು.ಕೆ.ಪಿ. ಯೋಜನೆಗೆ ಕನಿಷ್ಟಪಕ್ಷ ೨೦೦ ಕೋಟಿ ರೂಪಾಯಿಗಳ ಹಣವನ್ನು ಕೊಡತಕ್ಕಂತಹ ವ್ಯವಸ್ಥೆ ಮಾಡುತ್ತೇನೆಂದು ಹೇಳಿದ್ದೀರಿ. ಅದೇ ರೀತಿ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳಿಗೆ ೧೦೦ ಕೋಟಿ ಹಣವನ್ನು ಒದಗಿಸುತ್ತೇನೆ ಎನ್ನತಕ್ಕಂತಹ ವಾದವನ್ನು ತಾವು ಮಾಡಿದ್ದೀರಿ. ಆದರೆ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳಿಗೆ ತಾವು ವಾದ ಮಾಡಿದಂತೆ ೧೦೦ ಕೋಟಿ ರೂಪಾಯಿಗಳನ್ನು ಒದಗಿಸಿ ಅದನ್ನು ಸಾಧನೆ ಮಾಡಿಕೊಂಡಿದ್ದೀರಿ. ಅದೇ ರೀತಿಯ ಸಾಧನೆಯನ್ನು ಯು. ಕೆ. ಪಿ. ವಿಚಾರದಲ್ಲೂ ತಾವು ಏಕೆ ಮಾಡಿಲ್ಲ ? ಆ ಬಗ್ಗೆ ತಾವು ಏಕೆ ಹಠ ಹಿಡಿಯಲಿಲ್ಲ ? ಆ ಕೆಲಸವನ್ನು ತಾವು ಏಕೆ ಮಾಡಲಿಲ್ಲ ಎನ್ನುವುದನ್ನು ನಾನು ಇವತ್ತಿನ ದಿವಸ ಕೇಳುತ್ತಿದ್ದೇನೆ. ನಾನು ಇದರಲ್ಲಿ ತಾರತಮ್ಯ ಮಾಡಿದ್ದೀರಿ ಅಂತ ಹೇಳಿದರೆ, ತಾವು ಏನು ತಿಳಿದುಕೊಳ್ಳುತ್ತೀರೆಂದರೆ ನಾನು ಏನೇ ಕೆಲಸ ಮಾಡಿದರೂ ಇವರು ಯಾವಾಗಲೂ ನನ್ನನ್ನು ದೂರುತ್ತಾರೆ, ನನ್ನ ಮೇಲೆ ಅಪವಾದ ತರುತ್ತಾರೆ ಎನ್ನತಕ್ಕಂತಹ ಮಾತನ್ನು ತಾವು ಆಡುತ್ತೀರಿ. ಆದರೆ ನಮ್ಮ ಮುಂದೆ ಇಟ್ಟಂತಹ ಬಡ್ಜೆಟ್ಟಿನಲ್ಲಿ ತಾವು ಏನು ಹಣವನ್ನು ಪ್ರೊವೈಡ್ ಮಾಡಿದ್ದೀರಿ ಎಂದರೆ ೧೨೦ ಕೋಟಿ ರೂಪಾಯಿಗಳನ್ನು ಯು. ಕೆ. ಪಿ. ಯೋಜನೆಗೆ ಇಟ್ಟಿದ್ದೀರಿ. ಅದು ಸಿಬ್ಬಂದಿ ವೆಚ್ಚ ಸೇರಿ. ಅದನ್ನೂ ಕೂಡ ಖಂಡಿತವಾಗಿ ಕೊಡುತ್ತೇವೆಂಬುದಾಗಿ ಅಲ್ಲ. ರಿಸೋರ್ಸಸ್ ಮೊಬಲೈಜೇಷನ್ ನೋಡಿಕೊಂಡು ಅಂದರೆ ಹಣಕಾಸಿನ ಪರಿಸ್ಥಿತಿಯನ್ನು ನೋಡಿಕೊಂಡು ನಾವು ಹಣವನ್ನು ಖರ್ಚು ಮಾಡುತ್ತೇವೆ ಎನ್ನತಕ್ಕಂತಹದ್ದನ್ನು ತಾವು ಹೇಳಿದ್ದೀರಿ. ಅಂದರೆ ತಾವು ಏನು ಹೇಳಿದ್ದೀರಿ, ಅಷ್ಟನ್ನೂ ಕೂಡ ಖಚಿತವಾಗಿ ಖರ್ಚು

ಮಾಡುವುದಿಲ್ಲ ಎಂಬುದು ಇದರಿಂದ ಸ್ಪಷ್ಟವಾದ ಹಾಗೆ ಆಯಿತು. ಏಕೆಂದರೆ ಕಲೆಕ್ಷನ್ ಆಗಬೇಕು. ರಿಸೋರ್ಸಸ್ ಮೊಬಲೈಜೇಷನ್ ಆಗಬೇಕು. ಎಷ್ಟು ಟ್ಯಾಕ್ಸನ್ನು ಹಾಕಿದ್ದೀರೋ ಅಷ್ಟೂ ವಸೂಲು ಆಗಬೇಕು ಆಗ ಮಾತ್ರ ಇದು ಸಾಧ್ಯವಾಗುತ್ತದೆ. ಇಲ್ಲದಿದ್ದರೆ ಇಲ್ಲ ಎನ್ನತಕ್ಕಂತಹ ಮಾತು ಒಂದು ಕಡೆ. ಆದರೆ ಹೇಮಾವತಿ ಪ್ರಾಜೆಕ್ಟ್ ತಮ್ಮದು. ತಮ್ಮ ಹಾಸನ ಜಿಲ್ಲೆಯಲ್ಲಿ ಆಗತಕ್ಕಂತಹದ್ದು. ನನ್ನ ಕಾಲದಲ್ಲೇ ಇದನ್ನು ಮುಗಿಸಬೇಕೆಂಬ ಆಸೆ ಇದ್ದರೂ ಇರಬಹುದು. ಆದರೆ ಅದರ ಜೊತೆಯಲ್ಲೇ ಬೇರೆಯವರೂ ಬದುಕಲಿ ಎನ್ನತಕ್ಕಂತಹ ದೃಷ್ಟಿಯಿಂದ ನೋಡಬೇಕೆ ಹೊರತು, ಕೇವಲ ಒಂದು ಜಿಲ್ಲೆಯ ಜನರಿಗೆ ಅನುಕೂಲವಾಗಲಿ, ನನ್ನ ಕೈಯಲ್ಲಿ ಅಧಿಕಾರ ಇದೆ, ಒಂದು ಪ್ರಾಜೆಕ್ಟನ್ನು ಮುಗಿಸಿದರೆ ಸಾಕು ಎನ್ನತಕ್ಕಂತಹದ್ದು ಅಷ್ಟೊಂದು ಸಮಂಜಸವಾಗುವುದಿಲ್ಲ ಎನ್ನುವ ಮಾತನ್ನು ತಮ್ಮ ಮೂಲಕ ಅವರ ಗಮನಕ್ಕೆ ತರುತ್ತೇನೆ.

ಛೇರ್ಮನ್.—ಇರತಕ್ಕಂತಹ ಕಂಡೀಷನ್ ಎರಡಕ್ಕೂ ಅಪ್ಲೈಯಾಗುತ್ತದೆ. ಕಾವೇರಿ ಮತ್ತು ಕೃಷ್ಣಾ ಎರಡಕ್ಕೂ ಅಪ್ಲೈಯಾಗುತ್ತದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಇರಲಿ. ೨೦೦ ಕೋಟಿ ರೂಪಾಯಿಗಳನ್ನು ಕೊಡದಿದ್ದರೂ ಪರವಾಗಿಲ್ಲ. ಆದರೆ ಅದೇ ಕಾವೇರಿ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳು ಅಂದರೆ ಕಬಿನಿಗೆ ಎಷ್ಟು ಕೊಟ್ಟಿದ್ದೀರಿ ? ಹಾರಂಗಿಗೆ ಎಷ್ಟು ಕೊಟ್ಟಿದ್ದೀರಿ ? ಹೇಮಾವತಿಗೆ ಎಷ್ಟು ಕೊಟ್ಟಿದ್ದೀರಿ ? ಹೇಮಾವತಿಗೆ ೬೫ ಕೋಟಿ ರೂಪಾಯಿಗಳವರೆಗೆ ಕೊಟ್ಟಿದ್ದೀರಿ. ಇನ್ನುಳಿದ ಯೋಜನೆಗಳಿಗೆ ೧೨ ಕೋಟಿ ೧೩ ಕೋಟಿ ೧೬ ಕೋಟಿ ಈ ರೀತಿ ಪ್ರಾವಿಜನ್ ಮಾಡಿದ್ದೀರಿ. ಅದನ್ನು ಬೇಕಾದರೆ ಓದಿ ಅಂದರೆ ಓದುತ್ತೇನೆ. ಹೋದ ಸಲ ಏನು ಹಣ ಇತ್ತು ಅದಕ್ಕಿಂತ ಜಾಸ್ತಿ ಪ್ರಾವಿಜನ್ ಹೇಮಾವತಿ ಯೋಜನೆಯ ಬಗ್ಗೆ ತಾವು ಮಾಡಿಕೊಂಡಿದ್ದೀರಿ. ಅದನ್ನು ತಾವು ಮಾಡಬಾರದು. ಅಲ್ಲಿನ ಜನತೆಗೆ ನೀರನ್ನು ಕೊಡಬಾರದು ಎನ್ನತಕ್ಕಂತಹ ವಾದ ನಮ್ಮದಲ್ಲ. ಆದರೆ ತಮ್ಮ ಕೈಯಲ್ಲಿ ಆ ಒಂದು ಅಧಿಕಾರ ಬಂದ ಮೇಲೆ ತಾವು ಜ್ಯುಡಿಷಿಯಸ್ಸಾಗಿ ಕೆಲಸವನ್ನು ಮಾಡಬೇಕು. ಆದರೆ ಅದನ್ನು ಬಿಟ್ಟು ಏನೋ ನನಗೆ ಅಧಿಕಾರ ಸಿಕ್ಕಿದೆ, ನಮ್ಮ ಭಾಗದ ಜನರಿಗೆ ಎಷ್ಟು ಸಹಾಯಬೇಕೋ ಅದನ್ನು ಮಾಡೋಣವೆಂದು ಆ ಒಂದೇ ಪ್ರಾಜೆಕ್ಟ್ ಮುಗಿಸಬೇಕೆಂದು ಹಠಹಿಡಿದುಕೊಂಡು ಕುಳಿತರೆ ಹೇಗೆ ? ಯು. ಕೆ. ಪಿ. ಯೋಜನೆಗಳು ಇರುವಂತಹ ಭಾಗ ಬರಗಾಲ ಪೀಡಿತ ಪ್ರದೇಶಗಳೆಂದು ತಾವು ಯಾವಾಗಲೂ ಹೇಳುತ್ತಿದ್ದೀರಿ. ಗುಲ್ಬರ್ಗವಾಗಲಿ, ರಾಯಚೂರಾಗಲಿ, ಹಾಗೂ ಬಿಜಾಪುರವಾಗಲಿ ಸತತವಾಗಿ ಬರಗಾಲಕ್ಕೆ ತುತ್ತಾಗತಕ್ಕ ಪ್ರದೇಶ. ಅದು ಗೊತ್ತಿದ್ದೂ ಕೂಡ ಆ ಪ್ರದೇಶಗಳಲ್ಲಿರತಕ್ಕ ಪ್ರಾಜೆಕ್ಟ್‌ಗಳನ್ನು ಬೇಗ ಮುಗಿಸಬೇಕು ಎನ್ನತಕ್ಕಂತಹ ಕಳಕಳಿ ನಮಗೆ ಏಕೆ ಇಲ್ಲ ? ೧೫ ವರ್ಷದ ಲೆಕ್ಕ ಹಿಡಿದುಕೊಂಡು ೨೦೦೦ ಇಸವಿಯೊಳಗೆ ಕೃಷ್ಣಾ ಬೇಸಿನ್‌ನಲ್ಲಿ ಬರತಕ್ಕ ಯೋಜನೆಗಳಲ್ಲಿ ನೀರನ್ನು ಉಪಯೋಗ ಮಾಡುವುದಕ್ಕೆ ಇನ್ನೂ ೧೫ ವರ್ಷಗಳು ಇವೆ. ಅಲ್ಲಿಯವರೆಗೂ ಕಾದು ನೋಡೋಣ. ಅಲ್ಲಿಯವರೆಗೂ ಅವಕಾಶ ಇದೆ. ಮುಗಿಸೋಣ ಅಂತ ತಾವು ಹೇಳಿದ್ದೀರಿ. ಆದರೆ ತಮ್ಮ ಪ್ರಾಜೆಕ್ಟ್‌ಗೆ ಮಾತ್ರ ಕೋಟ್ಯಾಂತರ ರೂಪಾಯಿಗಳನ್ನು ಪ್ರಾವಿಜನ್ ಮಾಡಿದ್ದೀರಿ. ಅದೇ ರೀತಿ ಯು. ಕೆ. ಪಿ. ವಿಚಾರದಲ್ಲಿ ತಾವು ಮಾಡಿಲ್ಲ ಎಂಬುದು ನನ್ನ ಟೀಕೆ. ಅದಕ್ಕೆ ತಾವು ಉತ್ತರವನ್ನು ಕೊಡಬೇಕು. ಯಾವ ರೀತಿ ಮಾಡುತ್ತೀರೋ ಮಾಡಿ. ತಾವು ಮುಖ್ಯ ಮಂತ್ರಿಗಳ ಮನವೊಲಿಸುತ್ತೀರೋ, ವಿಶ್ವ ಬ್ಯಾಂಕಿನಿಂದ ಹಣ ತರುತ್ತೀರೋ, ಯಾವ ಬ್ಯಾಂಕಿನಿಂದ ತರುತ್ತೀರೋ ಗೊತ್ತಿಲ್ಲ. ಈ ಪ್ರಾಜೆಕ್ಟ್‌ಗಳು ಮುಗಿಯಬೇಕೆಂದು ನಮ್ಮ ಆಸೆ. ಆ ಜನರಿಗೆ ನೀರು ಸಿಗಬೇಕು ಎಂದು ನಮ್ಮ ಒಂದು ಗುರಿ. ಈಗ ಒಂದನ್ನು ಮಾಡೋಣ. ಈ ಸದನದಲ್ಲಿ ಈ ಬಗ್ಗೆ ಅನೇಕ ಸಲ ಒತ್ತಾಯ ಬಂದಿದೆ. ಒಂದು ಕೆಲಸ ಮಾಡಿ. ಇವತ್ತು ಎಲ್ಲಾ ಪ್ರಾಜೆಕ್ಟ್‌ಗಳನ್ನೂ ಎಂದರೆ, ಕೃಷ್ಣಾ ಯೋಜನೆ, ಘಟಪ್ರಭಾ ಮಲಪ್ರಭಾ, ಎಲ್ಲಾ ಪ್ರಾಜೆಕ್ಟ್‌ಗಳನ್ನು ನಿಲ್ಲಿಸಿ ಹೇಮಾವತಿಯನ್ನು ಮಾತ್ರ ಕೈಗೆತ್ತಿಕೊಂಡು ೨ ವರ್ಷದಲ್ಲಿ ಮುಗಿಸಿ ಅಲ್ಲಿನ ಜನರಿಗೆ ನೀರುಣಿಸೋಣ. ಅದರಿಂದ ಕೆಲವರ ಸಮಸ್ಯೆಯಾದರೂ ಬಗೆಹರಿಯಬಹುದು. ಆ ಭಾಗದ ಜನ ಕೇಳಿದರೆ, ಸ್ವಲ್ಪ ತಡೀರಿ, ಎರಡು ವರ್ಷದಲ್ಲಿ ಅಲ್ಲಿ ಕೆಲಸ ಆಗಲಿ, ಯಾರು ಕೇಳಬೇಡಿ ಎಂದು ಹೇಳೋಣ. ೨ ವರ್ಷದಲ್ಲಿ ಹೇಮಾವತಿ ಪ್ರಾಜೆಕ್ಟ್ ಮುಗಿಯುತ್ತದೆ. ಅದು ಮುಗಿದ ನಂತರ ಕೃಷ್ಣಾ ಮೇಲ್ದಂಡೆ ಪ್ರಾಜೆಕ್ಟ್ ಬರುತ್ತದೆ. ಆನಂತರ ೧೫ ವರ್ಷದಲ್ಲಿ ಅದನ್ನು ಮುಗಿಸಬಹುದು. ಅದು ನಿಧಾನವಾಗಿ ಮುಗಿಯಲಿ. ಅವರಾದರೂ......

ವೈಸ್ ಛೇರ್ಮನ್.—ಆ ಬಗ್ಗೆ ಸೂಚನೆ ತಂದರೆ ನಾನು ಅದನ್ನು ಒಪ್ಪಿಕೊಳ್ಳುತ್ತೇನೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆಗಲಿ, ಆ ಬಗ್ಗೆ ನೋಡೋಣ. ಈ ರೀತಿಯಾಗಿ ತಾವು ತಾರತಮ್ಯ ಮಾಡಿದರೆ ನಿಜವಾಗಿಯೂ ಎರಡನ್ನೂ ಮುಗಿಸಲು ಆಗುವುದಿಲ್ಲ. ಆ ರೀತಿ ಮಾಡಿದರೆ ತಾವೂ ಒಪ್ಪಿಕೊಳ್ಳುತ್ತೀರೆಂದು ನಾನು ತಿಳಿದುಕೊಂಡಿದ್ದೇನೆ. ದೇವೇಗೌಡರು ಒಂದು ಕೆಲಸ ಪೂರ್ತಿ ಮಾಡಿದರೆ ಸಾಕು. ಸರ್ ಎಂ. ವಿಶ್ವೇಶ್ವರಯ್ಯನವರ ಕಾಲದಲ್ಲಿ ಕನ್ನಂಬಾಡಿ ಕಟ್ಟೆ ಆಯಿತು ..

ಶ್ರೀ ಎಸ್, ಬಂಗಾರಪ್ಪ.—ಕೃಷ್ಣ ಬೇಸಿನ್, ಕಾವೇರಿ ಬೇಸಿನ್‌ನ ಯೋಜನೆಗಳ ಬಗ್ಗೆ ಒಂದು ರೆಸಲ್ಯೂಷನ್ ತರಬೇಕೆಂದು ಈ ಸದನದಲ್ಲಿ ಹಿಂದೆ ಕೂಡಾ ಚರ್ಚೆ ಬಂದಿತ್ತು. ಆ ಬಗ್ಗೆ ಒಂದು ಸೂಚನೆಯನ್ನು ತರಬೇಕೆಂದು ಸಭೆಯ ಅಧ್ಯಕ್ಷತೆ ವಹಿಸಿರುವವರು ಹೇಳಿದ್ದಾರೆ. ಅದನು ಮಾನ್ಯ ಸದಸ್ಯರು ತರಲಿ.

ಶ್ರೀ ಎಚ್. ಡಿ. ದೇವೇಗೌಡ.—ಒಂದೇ ಒಂದನ್ನು ಹೇಳುತ್ತೇನೆ. ನೀವು ದಯಮಾಡಿ ಡಿಸ್ಟರ್ಬ್ ಮಾಡುವುದಕ್ಕೆ ಹೋಗಬೇಡಿ. ಅವರಿಗೆ ಉತ್ತರ ಹೇಳುವುದಕ್ಕೆ ಶಕ್ತಿ ನನಗಿದೆ. I know in what angle he is going to argue and I know in what angle I have to reply.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮಗೆ ಉತ್ತರ ಕೊಡಲು ಶಕ್ತಿ ಇಲ್ಲ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ನಿಮಗೆ ಶಕ್ತಿ ಇಲ್ಲ ಎಂದು ಹೇಳಿ.

ಶ್ರೀ ಎಚ್. ಡಿ. ದೇವೇಗೌಡ.—ನಿಮಗೆ ಡಿಸ್ಟರ್ಬ್ ಮಾಡುವುದು ಬೇಡ ಎಂದು ನಾನು (ವೈಸ್ ಛೇರ್ಮನ್)ಗೆ ಹೇಳಿದೆ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ನಿಮಗೆ ಉತ್ತರ ಕೊಡಲು ಶಕ್ತಿ ಇಲ್ಲ ಎಂದು ನಾನು ತಿಳಿದುಕೊಂಡಿಲ್ಲ. ಅಷ್ಟು ಮೂರ್ಖ ಅಲ್ಲ ನಾನು. ನಿಮ್ಮ ಶಕ್ತಿಯನ್ನು ಯಾವ ರೀತಿ ಉಪಯೋಗ ಮಾಡುತ್ತಿದ್ದೀರಿ, ನಿಮ್ಮ ಪ್ರಭಾವವನ್ನು ಯಾವ ರೀತಿ ಉಪಯೋಗ ಮಾಡುತ್ತೀರಿ ಎಂದು ನಾನು ಹೇಳುತ್ತಿದ್ದೇನೆ. ನನಗೆ ನೀವು ಯಾವ ರೀತಿ ಕನ್ವಿನ್ಸ್ ಮಾಡುತ್ತೀರಿ ಎನ್ನುವುದು ನನಗೆ ಗೊತ್ತಿದೆ. ನೀವು ಕೊಟ್ಟಿರತಕ್ಕ ಮಾತುಗಳು ಎಷ್ಟು ಇವೆ ಸಣ್ಣಪುಟ್ಟ ಕೆಲಸಗಳ ಬಗ್ಗೆ ತಾವು ಕೊಟ್ಟ ಮಾತನ್ನು ಎಷ್ಟು ನಿಭಾಯಿಸಿದ್ದೀರಿ, ಎಷ್ಟರ ಮಟ್ಟಿಗೆ ತಾವು ನಮ್ಮನ್ನು ವಿಶ್ವಾಸಕ್ಕೆ ತೆಗೆದುಕೊಂಡಿದ್ದೀರೆಂಬ ಬಗ್ಗೆ ನಾನು ಹೇಳುತ್ತೇನೆ ನನಗೆ ಹೀಗೆ ಹೆದರಿಸಿದರೆ ಹೆದರುವ ಮನುಷ್ಯ ನಾನಲ್ಲ. ನೀವು ಹೇಳತಕ್ಕ ಧಾಟಿಯಲ್ಲಿ ನೀವು ಹೇಳಿ. ನಾನು ಹೇಳತಕ್ಕ ಧಾಟಿ ಇದೇ. ನಮಗೆ ಬರತಕ್ಕ ಭಾಷೆ ಇದೊಂದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ನಿಮಗೆ (ವೈಸ್ ಛೇರ್ಮನ್) ಏಕೆ ಹೇಳಿದೆ ಎಂದರೆ ತಾವು ಹೇಮಾವತಿ ಜೋನ್ ಭಾಗದಿಂದ ಬಂದಿರುವವರು. ಆದ್ದರಿಂದ ತಾವು ಆ ಬಗ್ಗೆ ಹೇಳಬೇಡಿ ಎಂದು ನಾನು ಹೇಳಿದ್ದು. Because you are now presiding over the proceedings. ೨೫ ವರ್ಷಗಳ ನನ್ನ ರಾಜಕೀಯ ಜೀವನದಲ್ಲಿ ಯಾರು ಎಷ್ಟೇ ಟೀಕೆ ಮಾಡಿದರೂ ನಾನು ಪ್ರತಿ ಟೀಕೆ ಮಾಡುವುದಕ್ಕೆ ಹೋಗಿಲ್ಲ. ನಾನು ಅದನ್ನು ತೆಗದುಕೊಂಡಿದ್ದೇನೆ.

ಶ್ರೀ ಎಸ್. ಬಂಗಾರಪ್ಪ.—ಅವರಿಗೂ ಸಂಬಂಧಪಟ್ಟಿದ್ದರಿಂದ ಅವರು ಹೇಳಿದ್ದಾರೆ.

ಶ್ರೀ ಎಚ್. ಡಿ. ದೇವೇಗೌಡ.—ಅವರು ಹೇಳಬಾರದು ಎಂದು ನಾನು ಹೇಳುತ್ತೇನೆ. ಅವರು ಸಭೆಯ ಅಧ್ಯಕ್ಷತೆ ವಹಿಸಿದ್ದಾರೆ.

ಶ್ರೀ ಎಸ್. ಬಂಗಾರಪ್ಪ.—ಅವರು ಹೇಳಿದರೆ ಒಳ್ಳೆಯದೇ ಅಲ್ಲವೇ ? ಅದರಲ್ಲಿ ತಪ್ಪು ಏನೂ ಇಲ್ಲ. ಅವರು ಸಲಹೆ ಕೊಟ್ಟರೆ ಅದರಿಂದ ಒಳ್ಳೆಯದೇ ಆಗುತ್ತದೆ. ನಮ್ಮ ಪ್ರಕಾರ ಅವರು ಒಳ್ಳೆಯ ಸಲಹೆಯನ್ನೇ ಕೊಟ್ಟಿದ್ದಾರೆ.

ಶ್ರೀ ಎಂ. ಎಂ. ಖರ್ಗೆ.—ಮಾನ್ಯ ಲೋಕೋಪಯೋಗಿ ಮಂತ್ರಿಗಳು ಬಹಳ ಸಿಟ್ಟಿನಲ್ಲಿದ್ದಾರೆ.

ವೈಸ್ ಛೇರ್ಮನ್.—ಹೆಚ್ಚು ಸಮಯ ಆಯಿತು. ಬೇಗ ಭಾಷಣ ಮುಗಿಸಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಆಯಿತು. ಕೊನೆಯ ವಿಷಯವನ್ನು ಹೇಳಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತೇನೆ. ಇದನ್ನೆಲ್ಲಾ ನಾನು ಏಕೆ ಹೇಳುತ್ತಿದ್ದೇನೆ ಎಂದರೆ, ಇವತ್ತು ನಿಮ್ಮ ಕೈಯ್ಯಲ್ಲಿ ಅಧಿಕಾರ ಬಂದಿದೆ. ಅದನ್ನು ತಾವು ನ್ಯಾಯಸಮ್ಮತವಾಗಿ ಉಪಯೋಗ ಮಾಡಬೇಕೇ ಹೊರತು ಯಾವ ಧಾಟಿಯಲ್ಲಿ ಮಾತನಾಡುತ್ತೀರಿ. ನಾನು ಯಾವ ರೀತಿ ಉತ್ತರ ಕೊಡಬೇಕೋ ಅದು ನನಗೆ ಗೊತ್ತು ಆ ರೀತಿ ಕೊಡುತ್ತೇನೆ ಎಂದು ಹೇಳಿದರೆ ಹೇಗೇ ಇವತ್ತು ನಾವು ಕೇಳಿದರೂ ಉತ್ತರ ಕೊಡುತ್ತೀರಿ, ನಾವು ಕೇಳದೇ ಇದ್ದರೂ ಉತ್ತರವನ್ನು ಕೊಡುತ್ತೀರಿ. You are responsible to this House ಇವತ್ತು ಅನ್ಯಾಯವಾಗಿದೆ. ಅದನ್ನು ಸರಿಪಡಿಸುವುದಕ್ಕೆ ಏನು ಮಾಡುತ್ತೀರಿ ? ಇವತ್ತು ರಸ್ತೆ ಕೆಲಸದಲ್ಲಿಯಾಗಲೀ ದೊಡ್ಡ, ಮಧ್ಯಮ ಹಾಗೂ ಚಿಕ್ಕ ನೀರಾವರಿ ಕಾಮಗಾರಿಗಳಲ್ಲಾಗಲೀ ಅಲೋಕೇಶನ್‌ನಲ್ಲಿ ತಾರತಮ್ಯ ಆಗಿದೆ ಎಂದು ನಾನು ಹೇಳುತ್ತಿದ್ದೇನೆ. ಇದನ್ನು ಯಾವ ರೀತಿ ಸರಿಪಡಿಸುತ್ತೀರಿ ಎಂದು ತಾವು ಹೇಳಬೇಕು.

೨-೦೦ ಪಿ. ಎಂ.

ಮೈನರ್ ಇರಿಗೇಷನ್ ಇವತ್ತಿನ ದಿವಸ ಏನಾಗಿದೆ ಅಂದರೆ, ನಾನು ಆಗಲೇ ಕೆಲವೊಂದು ಟ್ಯಾಂಕ್‌ಗಳ ಬಗ್ಗೆ ಬರೆದುಕೊಟ್ಟಿದ್ದೆ ಅದಕ್ಕೆ ಮೂರು ವರ್ಷಗಳ ಹಿಂದೆ ಮಂಜೂರಾತಿ ಸಿಕ್ಕಿದೆ. ಟೋಕನ್ ಗ್ರಾಂಟ್ ಸಹ ಬಂದಿದೆ. ಮಂಜೂರು ಆಗಿ ಎರಡು ಮೂರು ವರ್ಷಗಳಾದರೂ ಏನೂ ಪ್ರಯೋಜನವಿಲ್ಲದಂತಾಗಿದೆ. ಲಿಂಗೇರಿ, ಕೊಂಕಲ ಅಣೆಕಟ್ಟು ಮತ್ತೊಂದು ಈ ತರಹ ಮೂರು ನಾಲ್ಕು ಇವೆ. ಅದೇ ರೀತಿ ಬೀದರ್, ಗುಲ್ಬರ್ಗ, ರಾಯಚೂರು ಜಿಲ್ಲೆಗಳಲ್ಲಿ ಇವೆ. ಮೊದಲೇ ಅಲ್ಲಿ ಇರಿಗೇಷನ್ ಕಡಿಮೆ ಇದೆ. ಇಡೀ ರಾಜ್ಯದಲ್ಲಿ ೨೫ ಲಕ್ಷ ಹೆಕ್ಟೇರ್ ಭೂಮಿ ನೀರಾವರಿ ಇದ್ದರೆ, ಆ ಭಾಗಕ್ಕೆ ಹೋಲಿಸಿದರೆ ಅಲ್ಲಿ ಒಂದೆರಡು ಪರ್ಸೆಂಟ್ ಬರುತ್ತದೆ, ಅದಕ್ಕಿಂತ ಹೆಚ್ಚಾಗಿ ಬರುವುದಿಲ್ಲ. ಅಂದಮೇಲೆ ನೀವು ಆ ಕಡೆ ಗಮನಕೊಡತಕ್ಕದ್ದು ಅವಶ್ಯಕತೆ ಇದೆಯೆಂದು ನಾನು ತಿಳಿದುಕೊಂಡಿದ್ದೇನೆ. ಅದಕ್ಕೆ ತಕ್ಕಂತೆ ಆಕ್ಟ್ ಮಾಡಬೇಕೆಂದು ನನ್ನ ಹತ್ತು ನಾಲ್ಕು ವರ್ಷಗಳು ಮುಗಿದರೂ ಕೂಡ ಅನೇಕ ಸಲ ಅದರ ಮೇಲೆ ವಾದ ಬಂದಿರುತ್ತದೆ. ತಾವೊಂದು ಪುಸ್ತಕವನ್ನು ಕೊಟ್ಟಿದ್ದೀರಿ ಅದರಲ್ಲಿ ಮೈನರ್ ಇರಿಗೇಷನ್ ಪೊಟೆನ್ಸಿಯಲ್ ಅಚೀವ್‌ಮೆಂಟ್ ಸ್ವಾತಂತ್ರ್ಯ ಬಂದಾಗಿನಿಂದಲೂ ಹಿಡಿದುಕೊಂಡು ಪ್ರತಿ ಸಲದ ಪಂಚವಾರ್ಷಿಕ ಯೋಜನೆಯಲ್ಲಿ ಇರಿಗೇಷನ್ ಪೊಟೆನ್ಸಿಯಲ್ ಎಷ್ಟು ಕ್ರಿಯೇಟ್ ಆಯಿತು ಎನ್ನತಕ್ಕದ್ದು ಇಲ್ಲಿದೆ. ಅದನ್ನು ತಾವು ನೋಡಿದರೆ ಬಹುಶಃ ಇವರೇ ಹೆಚ್ಚಿನ ರೀತಿಯಲ್ಲಿ ಮಾಡಿದ್ದಾರೆ ಇನ್ನೊಬ್ಬರು ಕಡಿಮೆ ರೀತಿಯಲ್ಲಿ ಮಾಡಿದ್ದಾರೆಂದು ಹೇಳುವುದಿಲ್ಲ. ಅದನ್ನು ತೆಗೆದುಕೊಂಡು ನೋಡಿದರೆ ಆ ಭಾಗಕ್ಕೆ ಇರಿಗೇಷನ್‌ನಲ್ಲಿ ಅನ್ಯಾಯವಾಗಿದೆ. ಮಂತ್ರಿಗಳು ಉತ್ತರ ಕೊಡುವಾಗ ನೀವೂ ಇದ್ರಿ, ಅವರೂ ಇದ್ದರು, ಪಾಟೀಲರು ಇದ್ದರು ಎಂದು ಹೇಳಿದರು. ನಾನು ಹೇಳುತ್ತೇನೆ ಯಾರಾದರೂ ಏನಾದರೂ ಮಾಡಲಿ ತಾವೇನು ಮಾಡಿದಿರಿ ತಮ್ಮ ಕಾಲದಲ್ಲಿ ಏನಾಯಿತು, ತಾವು ಅಧಿಕಾರಕ್ಕೆ ಬಂದಮೇಲೆ ಏನು ಮಾಡಿದ್ದೀರಿ ಅದನ್ನು ಹೇಳಿ ಅವರು ಮಾಡಿರುವುದಕ್ಕೆ ನೀವು ಉತ್ತರ ಕೊಡಲಿಕ್ಕೆ ಹೋಗಬೇಡಿ. ನೀವು ಏನು ಮಾಡಿದ್ದೀರಿ ಅದನ್ನು ಕೇಳುತ್ತೇನೆ ಏನೂ ಮಾಡದಿದ್ದರೆ ಏತಕ್ಕೆ ಇರಬೇಕು ? ಇವತ್ತು ಟಾರ್ಗೆಟ್ ಪ್ರಕಾರ ಇರಿಗೇಷನ್ ಪೊಟೆನ್ಸಿಯಲ್ ಕ್ರಿಯೇಟ್ ಮಾಡತಕ್ಕದ್ದು ೬ನೇ ಪಂಚವಾರ್ಷಿಕ ಯೋಜನೆಯಲ್ಲಿ ೯೦ ಸಾವಿರ ಹೆಕ್ಟೇರ್ ಇತ್ತು. ಅದರಲ್ಲಿ ತಮ್ಮ ಅಚೀವ್‌ಮೆಂಟ್ ಎಷ್ಟಾಗಿದೆ ಅಂದರೆ ಕೇವಲ ೫೯ ಸಾವಿರದ ೫೮೩ ಹೆಕ್ಟೇರ್. ಟಾರ್ಗೆಟ್‌ಗಿಂತಲೂ ಸುಮಾರು ೩೧ ಸಾವಿರ ಹಿಂದೆ ಇದೆ. ನೀವು ಏನು ಅಚೀವ್‌ಮೆಂಟ್ ಮಾಡಿದ್ದೀರಿ ನಿಮ್ಮ ಕಾಲದಲ್ಲಿ ಏನು ಮಾಡಲಿಕ್ಕೆ ಸಾಧ್ಯವಾಯಿತು ಅದನ್ನು ಹೇಳಬೇಕು. ಮೂರು ವರ್ಷಗಳ ಕಾಲ ನಾವಿದ್ದರೂ ಆಮೇಲೆ ನೀವು ಅಧಿಕಾರಕ್ಕೆ ಬಂದಿದ್ದೀರಿ. ನೀವು ಇದ್ದೀರಿ ಎಂದು ಅವರು ಹೇಳಬಹುದು. ನಾನು ಹೇಳುತ್ತೇನೆ ಒಂದು ಗುರಿಯನ್ನು ಇಟ್ಟುಕೊಂಡಮೇಲೆ ಅದನ್ನು ತಾವು ತಲುಪಬೇಕು ಆ ಚಿಂತನೆಯಿಂದ ತಾವು ಕೆಲಸ ಮಾಡಬೇಕು. ತಮ್ಮ ಗುರಿಯನ್ನು ಏತಕ್ಕೆ ಮುಟ್ಟಲಿಲ್ಲ ಎನ್ನತಕ್ಕ ಮಾತನ್ನು ಕೇಳುತ್ತೇನೆ ಯು.ಕೆ.ಪಿ. ಯಲ್ಲಿ ಮತ್ತೊಂದು ವಿಷಯ ಏನೆಂದರೆ ಕಾವೇರಿ ಬೇಸಿನ್‌ಗೆ ಯಾವ ರೀತಿಯಾದ ಒಂದು ತಾಪತ್ರಯ ಇದೆ ಅದೇ ರೀತಿಯಾದ ತಾಪತ್ರಯ ಇದೆ. ಅದು ತೆಲುಗು ಗಂಗಾ ಯೋಜನೆ. ಅದರ ಬಗ್ಗೆ ನಾನು ಇವತ್ತು ಪತ್ರಿಕೆಯಲ್ಲಿ ಓದಿದ್ದೇನೆ. ರಾಜ್ಯಸಭೆಯಲ್ಲಿ ಮಿಸ್ ಲಲಿತ ಎಂಬುವರು ಮದ್ರಾಸ್ ನಗರಕ್ಕೆ ನೀರು ಸರಬರಾಜು ಮಾಡಲಿಕ್ಕೆ ತೆಲುಗು ಗಂಗಾ ಯೋಜನೆಯನ್ನು ಬೇಗ ಮುಗಿಸಬೇಕೆಂದು ಹಠ ಹಿಡಿದಿದ್ದಾರೆ. ಎರಡನೆಯದು ಈ ಪ್ರಾಜೆಕ್ಟನ್ನು ಎನ್. ಟಿ. ರಾಮರಾವ್‌ರವರು ಬಹಳ ಫಾಸ್ಟ್

ಆಗಿ ತೆಗೆದುಕೊಂಡು ಹೋಗುತ್ತಿದ್ದಾರೆ. ತಲೆಯ ಮೇಲೆ ತೂಗಾಡುವ ಕತ್ತಿ ನಮ್ಮ ಮೇಲೆ ಇದೆ. ಆದಕ್ಕೆ ಏನಾದರೂ ಔಷಧಿಯನ್ನು ಕಂಡು ಹಿಡಿಯಬೇಕು. ಅದನ್ನು ಬಿಟ್ಟು ವಾದಕ್ಕೋಸ್ಕರವಾದವನ್ನು ಮಾಡುವುದು ಬೇಡವೆಂದು ಕೇಳಿಕೊಳ್ಳುತ್ತೇನೆ. ಹರಿಜನ ಗಿರಿಜನ ಇಂಜಿನಿಯರ್‌ಗಳ ಬಗ್ಗೆ ಈಗಾಗಲೇ ಸದನದಲ್ಲಿ ಕಾಲಿಂಗ್ ಅಟೆನ್‌ಷನ್ ಮುಖಾಂತರ ತಂದಿದ್ದೇವೆ. ಅರ್ಧಗಂಟೆ ಚರ್ಚೆ ಮಾಡಲಿಕ್ಕೆ ಅವಕಾಶ ಮಾಡಿಕೊಡಿಯೆಂದು ಕೇಳಿದ್ದೇವೆ ಅದು ಆಗಲಿಲ್ಲ. ಈ ರೋಸ್ಟರ್ ಸಿಸ್ಟಮ್ ಅನ್ನು ಫಾಲೋ ಮಾಡದೇ ಹೋದರೆ, ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ನಿಂದ ಎಕ್ಸಿಕ್ಯೂಟಿವ್ ಇಂಜಿನಿಯರ್ ಮಾಡದೇ ಹೋದರೆ, ಮತ್ತೆ ಇವರಿಗೆ ಬಡ್ತಿ ಅವಕಾಶಗಳು ಸಿಗುವುದಿಲ್ಲ ಎಂದು ಹೇಳುತ್ತೇನೆ. ತಾವು ಒಂದು ಸಮಯದಲ್ಲಿ ಹೇಳಿದಿರಿ, ಇದನ್ನು ಮಾಡುತ್ತಾ ಹೋದರೆ ಒಂದು ಕಾಲ ಬರುತ್ತದೆ.—ಇಲಾಖೆಗಳ ಮುಖ್ಯಸ್ಥರು ಎಲ್ಲಾ ಕಡೆಗೂ ಚೀಫ್ ಇಂಜಿನಿಯರ್‌ಗಳು ಬರೇ ಶೆಡ್ಯೂಲ್ಡ್ ಕ್ಯಾಸ್ಟೇ ಇರುತ್ತಾರೆ ಎಂದು. ಈ ಮಾತನ್ನು ಹೇಳಿದ್ದೀರಿ. ನಾನು ತಮ್ಮ ಗಮನಕ್ಕೆ ತರುವುದೇನೆಂದರೆ, ಈ ಇಲಾಖೆಯಲ್ಲಿರತಕ್ಕಂಥ ಒಟ್ಟು ಸೂಪರ್‌ಟೈಂ ಸ್ಕೇಲ್ ಚೀಫ್ ಇಂಜಿನಿಯರ್‌ಗಳ ಸಂಖ್ಯೆ ೧೦ ಇದರಲ್ಲಿ ಎಸ್.ಸಿ ಎಸ್.ಟಿ ೩. ಸಿಕ್ಕಿದ ಪ್ರಾತಿನಿಧ್ಯ ಎಷ್ಟೆಂದರೆ ೩೦ ಪರ್ಸೆಂಟ್. 30% promotion by virtue of Seniority, not on roster system. ಚೀಫ್ ಇಂಜಿನಿಯರ್ಸ್ ೩೪. ಇದರಲ್ಲಿ ಎಸ್.ಸಿ ಮತ್ತು ಎಸ್.ಟಿ ೫. ಅಂದರೆ ಪರ್ಸೆಂಟೇಜ್ ೧೪.೭ ಆಯಿತು. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ಒಟ್ಟು ಸಂಖ್ಯೆ ೯೪, ಎಸ್.ಸಿ ಮತ್ತು ಎಸ್.ಟಿ ೫. ಅಂದರೆ ೭.೭ ಪರ್ಸೆಂಟೇಜ್ ಆಯಿತು. ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ಒಟ್ಟು ಸಂಖ್ಯೆ ೧೫೪೨, ಇವರಲ್ಲಿ ಎಸ್.ಸಿ/ಎಸ್.ಟಿ ೧೮೮, ಪರ್ಸೆಂಟೇಜ್ ೧೨. ೧೯೯೦ರ ಕೊನೆಯ ವೇಳೆಗೆ ಏನು ಪರಿಸ್ಥಿತಿ ಆಗುತ್ತದೆ ಎಂದರೆ Chief Engineers on Super-time scale, 12. it might be 1 6% after two eligible SC/ST Chief Engineers are promoted. ಚೀಫ್ ಇಂಜಿನಿಯರ್‌ಗಳು ೬೦, ಆವಾಗ ಇದೇ ರೀತಿಯಾಗಿ ಪ್ರಮೋಶನ್ ಕೊಟ್ಟರೆ ೨೫ ಪರ್ಸೆಂಟ್ ಆಗುತ್ತದೆ. ಸಿನಿಯಾರಿಟಿ ಪ್ರಕಾರ ಪ್ರಮೋಶನ್ ಕೊಟ್ಟರೆ ಇಷ್ಟು. ಸೂಪರಿಂಟೆಂಡಿಂಗ್ ಇಂಜಿನಿಯರ್‌ಗಳು ೧೦೦—ಇದು ೧೭ ಪರ್ಸೆಂಟಿಗೆ ಬರುತ್ತದೆ. ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ೪೦೦, ಇದು ಒಟ್ಟು ಸಂಖ್ಯೆ. ಎಸ್.ಸಿ/ಎಸ್.ಟಿ ೮ provided all SC/ST Executive Engineers are continued in service. ಆಮೇಲೆ ಅಸಿಸ್ಟೆಂಟ್ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳು ಒಟ್ಟು ಸಂಖ್ಯೆ ೧೬೦೦, ಇದರಲ್ಲಿ ಎಸ್.ಸಿ/ಎಸ್.ಟಿ ೧೮೦ ಮತ್ತು ಪರ್ಸೆಂಟೇಜ್ ೧೧.೨೫ ಬರುತ್ತದೆ. ಆದ್ದರಿಂದ ಬೇರೆಯವರಿಗೆ ತೊಂದರೆಯಾಗತಕ್ಕಂಥ ಪ್ರಶ್ನೆ ಬರುವುದಿಲ್ಲ ಆಮೇಲೆ ಪೇಸ್ಕೇಲ್ ಜಾಸ್ತಿಯಾದರೆ ತಾವು ಒಪ್ಪಿಕೊಂಡಿದ್ದೀರಿ. ರೀಜರ್ವೇಶನ್ ಇನ್ ಪ್ರಮೋಶನ್, ಎಕ್ಸಿಕ್ಯೂಟಿವ್ ಇಂಜಿನಿಯರ್ ಲೆವಲ್‌ಗೆ ಒಪ್ಪಿಕೊಂಡ ಮೇಲೆ, ಪೇಸ್ಕೇಲ್ ಬದಲಾವಣೆ ಆದರೆ ಇದು ಮುಖ್ಯಮಂತ್ರಿಗಳಿಗೆ ಮತ್ತು ನಿಮಗೆ ನೇರವಾಗಿ ಸಂಬಂಧಪಟ್ಟಿದ್ದು ತಮಗೆ ಪ್ರಭಾವ ಇದೆಯೆಂದು ಒಪ್ಪಿಕೊಂಡಿದ್ದೇವೆ. ಈ ಪ್ರಭಾವವನ್ನು ಶೆಡ್ಯೂಲ್ಡ್ ಕಾಸ್ಟ್ ಅಧಿಕಾರಿಗಳಿಗೆ ಉಪಯೋಗವಾಗುವಂತೆ ಏಕೆ ಬೀರಬಾರದು ? ಇದರ ಬಗ್ಗೆ ತಾವು ಏಕೆ ಹಿಂದು ಮುಂದು ನೋಡುತ್ತಿದ್ದೀರಿ ಎನ್ನತಕ್ಕಂಥ ಮಾತನ್ನು ಕೇಳುತ್ತೇನೆ. ಇದರ ಬಗ್ಗೆ ಕೂಡ ಅವರು ಹೇಳಬೇಕು, ಒಂದು ನಿಲುವನ್ನು ತಳೆಯಬೇಕೆಂದು ಹೇಳುತ್ತಾ, ಸಾಕಷ್ಟು ಸಮಯ ಆಗಿದೆ. ಇಷ್ಟು ಮಾತ್ರ ಹೇಳಿ ಇವೆಲ್ಲಕ್ಕೂ ಜಸ್ಟಿಫೈ ಮಾಡಬೇಕು, ಸರಿಪಡಿಸಬೇಕು. ಈ ಡಿಸ್ಪಾರಿಟಿ ಏನು ಆಗಿದೆ, ಅದನ್ನು ಖಂಡಿತವಾಗಿಯೂ ಸರಿಪಡಿಸುತ್ತಾರೆ ಎಂದು ಭಾವಿಸಿ, ಸಪ್ಲಿಮೆಂಟರಿ ಬಜೆಟ್‌ನಲ್ಲಾಗಲೀ ಸರಿಪಡಿಸಿ ಒಂದನೇ ಪ್ರಾರಂಭ ಬಡ್ಜೆಟ್ ಪ್ರಾವಿಷನ್ ಇಡುತ್ತಾರೆ ಎಂದು ಭಾವಿಸಿಕೊಂಡು, ಕರ್ನಾಟಕ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮೇಲೆ ಶ್ವೇತಪತ್ರವನ್ನು ಪ್ರಕಟಿಸುತ್ತಾರೆ ಎಂದು ಕೇಳಿಕೊಂಡು, ನನಗೆ ಇಷ್ಟು ಸಮಯ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಬಿ. ಗಂಗಣ್ಣ (ಕಳ್ಳಂಬೆಳ್ಳ). ಸನ್ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ೧೯೮೭ ೮೮ನೇ ಸಾಲಿಗೆ ಮಂಡಿಸಿರತಕ್ಕಂಥ ಆಯವ್ಯಯವನ್ನು ಮನಃಪೂರ್ವಕವಾಗಿ ಬೆಂಬಲಿಸುತ್ತಾ, ಅವರ ನಾಲ್ಕು ವರ್ಷಗಳಲ್ಲಿ ಕೈಗೊಂಡಿರತಕ್ಕ ಎಲ್ಲಾ ಇಲಾಖೆಗಳ ಬಗ್ಗೆ, ಕಾರ್ಯಕ್ರಮಗಳ ಬಗ್ಗೆ ಸಂಕ್ಷಿಪ್ತವಾಗಿ ಈ ಸಭೆಗೆ ತಮ್ಮ ಮೂಲಕ ವಿನಂತಿಕೊಳ್ಳುವುದಕ್ಕೆ ಪ್ರಯತ್ನಪಡುತ್ತೇನೆ. ಶ್ರೀಮಾನ್ ದೇವೇಗೌಡರು ಸ್ವತಃ ತಾಂತ್ರಿಕ ತಜ್ಞರೂ, ಪರಿಣಿತರೂ ಆಗಿ ಈ ಇಲಾಖೆಗಳನ್ನು ತಮ್ಮ ಹತೋಟಿ

ಯಲ್ಲಿ ತೆಗೆದುಕೊಳ್ಳುವುದಕ್ಕೆ, ಈ ನಾಲ್ಕು ವರ್ಷಗಳಲ್ಲಿ ತುಂಬಾ ಪ್ರಯತ್ನಪಟ್ಟಿರುವುದು, ಅವರ ಪರಿಶ್ರಮ ಏನೆಂಬುದು ಈ ಇಲಾಖೆಗೆ ಸಂಬಂಧಿಸಿದ ಅಂಕಿಅಂಶಗಳಿಂದ ಗೊತ್ತಾಗುತ್ತದೆ. ಇದನ್ನು ನಮ್ಮ ಎಲ್ಲಾ ಸ್ನೇಹಿತರೂ ಒಪ್ಪಿಕೊಂಡಿದ್ದಾರೆ. ಅವರ ಬಗ್ಗೆ ಟೀಕೆ ಮಾಡುವುದಕ್ಕೋಸ್ಕರ ಟೀಕೆ ಮಾಡುತ್ತಾರೆ ಎಂದು ನಾನು ಭಾವಿಸಿಕೊಂಡಿದ್ದೇನೆ.

ನಾನು ಈ ಇಲಾಖೆಯ ಬಗ್ಗೆ ಮಾತನಾಡುವ ಪೂರ್ವದಲ್ಲಿ ಒಂದು ಗಾದೆಯನ್ನು ಹೇಳಬೇಕೆಂಬ ಆಸೆ ಇದೆ. ಇದನ್ನು ಯಾರೂ ವಿಪರ್ಯಾಸವೆಂದು ಭಾವಿಸಬಾರದು. "ಇಚ್ಛಿಪಟ್ಟಿನ ವಾಳ್ಳಿಕಿ ಇಂಜಿನಿಯರಿಂಗ್ ಇಲಾಖೆ" ಎಂದು. ಸನ್ಮಾನ್ಯ ದೇವೇಗೌಡರು ಹಿಂದಿನ ಜನ್ಮದಲ್ಲಿ ಮಾಡಿದ ಪುಣ್ಯದ ಕೆಲಸದಿಂದ ಇವತ್ತು ಸಾರ್ವಜನಿಕರಿಗೆ ಪುಣ್ಯದ ಕೆಲಸಗಳನ್ನು ದೊರಕಿಸಿಕೊಡುವುದಕ್ಕೆ ಈ ಇಲಾಖೆ ಅವರಿಗೆ ಸಿಕ್ಕಿದೆಯೆಂದು ಭಾವಿಸಿಕೊಂಡಿದ್ದೇನೆ.

ಇನ್ನು ರಸ್ತೆಗಳ ಬಗ್ಗೆ ಪ್ರಸ್ತಾಪ ಮಾಡುವುದಾದರೆ ೧೯೮೫ರಲ್ಲಿ ೭೮,೨೭೭ ಕಿಲೋಮೀಟರ್ ರಸ್ತೆಯನ್ನು ಈ ಇಲಾಖೆ ಅಭಿವೃದ್ಧಿಪಡಿಸಿದೆ. ೧೯೮೬–೮೭ರ ಡಿಸೆಂಬರ್ ೩೧ರವರೆಗೆ ೭೮,೪೪೬ ಕಿಲೋಮೀಟರ್ ರಸ್ತೆಯನ್ನು ಇಲಾಖೆ ಅಭಿವೃದ್ಧಿಪಡಿಸಿತು. ನಂತರ ೧೯೮೭ರ ಮಾರ್ಚಿಯವರೆಗೆ ೧೭೪ ಕಿಲೋಮೀಟರ್ ಮಾತ್ರ ಸೇರಿಸಿ, ೭೮,೬೨೦ ಕಿಲೋಮೀಟರ್ ರಸ್ತೆಯನ್ನು ಅಭಿವೃದ್ಧಿ ಮಾಡುವುದಕ್ಕೆ ಒಂದು ಕಾರ್ಯಕ್ರಮ ಹಾಕಿಕೊಂಡಿದ್ದಾರೆ. ಸನ್ಮಾನ್ಯ ದೇವೇಗೌಡರು ನಮ್ಮ ಮುಂದೆ ಈ ಒಂದು ಬಡ್ಜೆಟ್ ಮಂಡಿಸಿದ್ದಾರೆ. ಇದರ ಮೂಲಕ ನಮ್ಮ ಗ್ರಾಮಾಂತರ ರಸ್ತೆಗಳು ಅಭಿವೃದ್ಧಿಯಾಗುವುದಿಲ್ಲವೆಂದು ಭಾವಿಸಿದ್ದೇನೆ. ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಈಗಾಗಲೇ ಜಿಲ್ಲಾ ಪರಿಷತ್ತುಗಳು ರಚನೆಯಾಗಿವೆ. ೧-೪-೧೯೮೭ರಿಂದ ಇವು ಕಾರ್ಯೋನ್ಮುಖವಾಗಿ ಗ್ರಾಮಾಂತರ ಭಾಗದ ಸಣ್ಣಪುಟ್ಟ ರಸ್ತೆಗಳೆಲ್ಲವೂ ಜಿಲ್ಲಾ ಪರಿಷತ್ತಿಗೆ ವರ್ಗಾವಣೆ ಆಗುವುದರಿಂದ ತಾಲ್ಲೂಕು, ಹಳ್ಳಿ ಸಬ್‌ಡಿವಿಜನ್ ಮಾರ್ಕೆಟಿಂಗ್ ಕೇಂದ್ರಗಳಿಗೆ ಹೋಗಿಬರತಕ್ಕ ಮುಖ್ಯ ರಸ್ತೆಗಳನ್ನು ಸರ್ಕಾರ ಹೆಚ್ಚಿನ ಆಸಕ್ತಿಯಿಂದ, ಇವುಗಳು ರಾಜ್ಯದ ಹೆದ್ದಾರಿ ರಸ್ತೆಗಳೆಂದು ತೀರ್ಮಾನ ಮಾಡುವುದರ ಮೂಲಕ ಇವುಗಳನ್ನು ಅಭಿವೃದ್ಧಿ ಮಾಡಿದರೆ ಗ್ರಾಮಾಂತರ ಜನರಿಗೆ ಸಾರಿಗೆ ಸಂಪರ್ಕವನ್ನು ಹೆಚ್ಚು ಒದಗಿಸಿದಂತಾಗುತ್ತದೆ. ನಮ್ಮ ಜಿಲ್ಲೆ ಮಟ್ಟಿಗೆ ಹೇಳುವುದಾದರೆ, ಈಗ ತಕ್ಷಣದಲ್ಲಿ ರಸ್ತೆ ವಾಹನ ಸೌಲಭ್ಯವನ್ನು ರಾಷ್ಟ್ರೀಕರಣ ಮಾಡುತ್ತೇವೆಂದು ನಮ್ಮ ಸಾರಿಗೆ ಇಲಾಖೆ ನಿಲುವನ್ನು ತೆಗೆದುಕೊಂಡಿರುವುದರಿಂದ. ಈ ರಸ್ತೆಗಳನ್ನು ಅಭಿವೃದ್ಧಿಗೊಳಿಸಬೇಕಾದುದು ಅಗತ್ಯವಾಗಿದೆ. ಸನ್ಮಾನ್ಯ ದೇವೇಗೌಡರು ಇವುಗಳ ಬಗ್ಗೆ ಹೆಚ್ಚು ಆಸಕ್ತಿ ವಹಿಸಿ, ಹಣವನ್ನು ಸಂಪನ್ಮೂಲವನ್ನು ಸರ್ಕಾರದಿಂದ ಒದಗಿಸಿ ಸಾಕಷ್ಟು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ. ಗ್ರಾಮಾಂತರ ರಸ್ತೆಗಳಲ್ಲಿ ಅತಿ ಮುಖ್ಯವಾದ ಪೀಪಲ್ಸ್ ಪಾರ್ಟಿಸಿಪೇಷನ್ ರೋಡ್ಸ್, ಆರ್.ಎಲ್.ಇ. ಯೋಜನೆಯಡಿ ಬರತಕ್ಕ ರಸ್ತೆ ಎಂ.ಎನ್.ಪಿ. ಯೋಜನೆಯಡಿ ಬರತಕ್ಕ ರಸ್ತೆಗಳು ಏನಿವೆ ಇವುಗಳ ಅಳವಡಿಕೆ ನಮ್ಮ ಭಾಗದಲ್ಲಿ ಕಡಿಮೆಯಾಗಿದೆ. ನಮ್ಮ ತುಮಕೂರು ಜಿಲ್ಲೆ ಅತ್ಯಂತ ಹಿಂದುಳಿದಿರುವ ಜಿಲ್ಲೆಯಾಗಿರುವುದರಿಂದ, ಇವುಗಳಿಗೆ ಪ್ರಾಮುಖ್ಯತೆ ಕೊಟ್ಟು ಈ ವರ್ಷದ ಬಜೆಟ್ ಹೆಡ್‌ನಲ್ಲಿ ಹಾಕಬೇಕೆಂದು ಕೇಳಿಕೊಳ್ಳುತ್ತೇನೆ. ನಮ್ಮ ಕ್ಷೇತ್ರಕ್ಕೆ ಸೇರುವ ಕೆಲವು, ಟಾರ್ ಹಾಕುವ ಸ್ವಲ್ಪ ಸ್ವಲ್ಪ ಉದ್ದದ ರಸ್ತೆಗಳನ್ನು ಮಾತ್ರ ಸೇರಿಸಿದ್ದಾರೆ. ಇವುಗಳಿಗೆ ಹೆಚ್ಚು ಹಣ ಕೊಡಬೇಕು ಹಣವನ್ನು ಕೊಟ್ಟು ಪ್ರೋತ್ಸಾಹ ಕೊಡಬೇಕು. ಈ ಟಾರ್ ಹಾಕತಕ್ಕಂಥ ಕಾರ್ಯ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕೆಂದು ಹೇಳುತ್ತೇನೆ. ಅಯಾಕಟ್ಟು ರಸ್ತೆ ನಮ್ಮ ಭಾಗದಲ್ಲಿ ಆಗಿಲ್ಲ, ಇವುಗಳನ್ನೂ ಮಾಡಿಸಬೇಕು. ಬೋರನಕಣಿವೆ ಜಲಾಶಯದಿಂದ ಹಿಡಿದು ತಿಮ್ಮನಹಳ್ಳಿ, ಬಾಣಾವಾರ, ಲಕ್ಕನಹಳ್ಳಿವರೆಗೆ ಡಾಂಬರು ಹಾಕಿಸಬೇಕಾಗಿದೆ; ಅಲ್ಲಿ ಒಂದು ಜಮೀನು ಅಕ್ವೈರು ಮಾಡಿಕೊಂಡು, ರಸ್ತೆ ಲಿಂಕ್ ಮಾಡಿ, ಕೆಲಸ ಮಾಡಿಸಬೇಕಾಗಿರುವುದರಿಂದ, ಅಲ್ಲಿ ಈಗ ಕೆಲಸ ನಿಂತುಹೋಗಿದೆ. ಇದನ್ನು ಮಾಡಿಸಬೇಕೆಂದು ಲೋಕೋಪಯೋಗಿ ಸಚಿವರನ್ನು ಕೇಳಿಕೊಳ್ಳುತ್ತೇನೆ. ಇನ್ನು ದೊಡ್ಡ ಅಗ್ರಹಾರ, ಚಿಕ್ಕ ಅಗ್ರಹಾರ ಮತ್ತು ಬಸವನಹಳ್ಳಿಗೆ ಬರತಕ್ಕಂಥ ರಸ್ತೆಯನ್ನು ಶೀಘ್ರವಾಗಿ ೧೯೮೭–೮೮ನೇ ಸಾಲಿನಲ್ಲಿಯೇ ಲೋಕೋಪಯೋಗಿ ರಸ್ತೆ ಎಂದು ಸಾರಬೇಕು. ಹಾಗೂ ಇದನ್ನು ಅಭಿವೃದ್ಧಿಪಡಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಇನ್ನು ಕಟ್ಟಡಗಳ ಬಗ್ಗೆ ನಮ್ಮ ಕ್ಷೇತ್ರಕ್ಕೆ ಯಾವ ಹಣವನ್ನೂ ಒದಗಿಸಿಲ್ಲ. ದೊಡ್ಡ ಅಗ್ರಹಾರ ಗ್ರಾಮಕ್ಕೆ ಒಂದು ಆಸ್ಪತ್ರೆಗೆ ಕಟ್ಟಡ ಇಲ್ಲ, ಕಟ್ಟಡವನ್ನು ಕಟ್ಟಿಸಿಕೊಡಬೇಕು.

(ಸಭಾಧ್ಯಕ್ಷರು ಅಧ್ಯಕ್ಷ ಪೀಠದಲ್ಲಿ ಉಪಸ್ಥಿತರಾದರು)

ಇರತಕ್ಕಂಥ ಸರ್ಕಾರಿ ಪ್ರೌಢಶಾಲೆಗೆ ಶಾಲಾಕಟ್ಟಡದ ಕೊರತೆ ಇರುವುದರಿಂದ ಅದಕ್ಕೆ ಹಣ ಒದಗಿಸಿ ಕೊಡಬೇಕು. ಕಳ್ಳಂಬೆಳ್ಳಕ್ಕೆ ಪಿ.ಹೆಚ್.ಸಿ. ಮಂಜೂರಾಗಿದೆ. ಅದರ ಎಸ್ಟಿಮೇಟ್ ಮೂರು ನಾಲ್ಕು ಲಕ್ಷ ರೂಪಾಯಿಗಳಿಗೆ ಬಂದಿದೆ. ಅದನ್ನೂ ಕೂಡಾ ತೀವ್ರವಾಗಿ ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ಸೇತುವೆಗಳ ಬಗ್ಗೆ ಹೇಳುವುದಾದರೆ, ಎಂ.ಎನ್.ಪಿ ಮತ್ತು ಆರ್.ಎಲ್.ಇ.ಜಿ.ಪಿ. ಇಂತಹ ಕೇಂದ್ರ ಸಹಾಯಿತ ಯೋಜನೆಗಳ ಮೂಲಕ ಸಣ್ಣ ಸಣ್ಣ ಸೇತುವೆಗಳನ್ನು ಮಾಡಿಸಿಕೊಡಬೇಕು. ನಾಲ್ಕು ಲಕ್ಷ ರೂಪಾಯಿ, ಐದು ಲಕ್ಷ ರೂಪಾಯಿಗೆ ಆಗತಕ್ಕಂಥ ಸಣ್ಣ ಸಣ್ಣ ಸೇತುವೆಗಳನ್ನು ಮಾಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ನೀರಾವರಿ ವಿಚಾರದಲ್ಲಿ ನಮ್ಮ ಮಾನ್ಯ ಸ್ನೇಹಿತರುಗಳಾದ ಶ್ರೀ ವೀರಪ್ಪ ಮೊಯಿಲಿಯವರು ಹಾಗೂ ಖರ್ಗೆಯವರು ಭಾಷಣ ಮಾಡಿ, ಅದರಲ್ಲಿ ಆಗಿರತಕ್ಕಂಥ ವಿಧಾನ ಪ್ರಗತಿಯ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ನಾನು ಪರಿಶೋಧನೆ ಮಾಡಿರುವ ಪ್ರಕಾರ ನೋಡಿದರೆ. ೧೯೭೬ರಿಂದ ೧೯೮೦–೮೧ರವರೆಗೆ ಹಾಗೂ ೧೯೮೨–೮೩ರ ಅಂತ್ಯದವರೆಗೆ ನೀರಾವರಿ ಪೊಟೆನ್‌ಷಿಯಲ್ ೦.೯೫ ಪರ್ಸೆಂಟ್ ಆಗಿದೆ. ಆದರೆ ೧೯೮೩–೮೪ರಿಂದ ೧೯೮೭–೮೮ರವರೆಗೆ ಇದು ೧.೫೮ಕ್ಕೆ ಬಂದಿದೆ. ಎಂದರೆ ನಮ್ಮ ಸರಕಾರ, ನಮ್ಮ ಪಕ್ಷ ತನ್ನ ಅಧೀನಕ್ಕೆ ಸರಕಾರವನ್ನು ತೆಗೆದುಕೊಂಡ ನಂತರ, ನೀರಾವರಿ ಪೊಟೆನ್‌ಷಿಯಲ್ ಏನಿದೆ ಅದನ್ನು ಅಭಿವೃದ್ಧಿ ಪಡಿಸಿದೆ ಎಂದು ಈ ಅಂಕಿಅಂಶಗಳಿಂದ ಗೊತ್ತಾಗುತ್ತದೆ ಎಂದು ನಾನು ಭಾವಿಸಿದ್ದೇನೆ. ಆದರೆ ಬಹಳಷ್ಟು ಮಾಡಿದ್ದೇವೆ ಎಂದು ನಾವು ಬೆನ್ನು ತಟ್ಟಿಕೊಳ್ಳುವಹಾಗೆ ಇಲ್ಲ, ಇನ್ನೂ ಮಾಡಬೇಕಾದ ಸಾಕಷ್ಟು ಕೆಲಸಗಳು ಇವೆ. ಸರಕಾರದ ಹಣಕಾಸಿನ ಪರಿಸ್ಥಿತಿಯು ಬಗ್ಗೆ ಮಾನ್ಯ ಮುಖ್ಯ ಮಂತ್ರಿಗಳು ಮತ್ತು ಲೋಕೋಪಯೋಗಿ ಸಚಿವರು ಹೇಳಿರುವ ಪ್ರಕಾರ ಅದು ಸುಧಾರಣೆಗೆ ಬರುವವರೆಗೆ, ಈ ಅಲ್ಪ ಪ್ರಗತಿಯನ್ನೇ ನಾವು ಪರವಾಗಿಲ್ಲ ಎಂಬ ಭಾವನೆಯೊಂದಿಗೆ ಸಂತೋಷಪಟ್ಟುಕೊಳ್ಳಬೇಕಾದ, ತೃಪ್ತಿ ಪಟ್ಟುಕೊಳ್ಳಬೇಕಾದ, ಪರಿಸ್ಥಿತಿ ಇದೆ ಎಂಬುದು ನನ್ನ ವೈಯ್ಯಕ್ತಿಕ ಅಭಿಪ್ರಾಯ.

ನನ್ನ ಕ್ಷೇತ್ರವಾದ ಕಳ್ಳಂಬೆಳ್ಳ ಕ್ಷೇತ್ರದಲ್ಲಿ ಬೋರನಕಣಿವೆ ಜಲಾಶಯ ಇದೆ. ಈ ಜಲಾಶಯಕ್ಕೆ ಸುಮಾರು ಹತ್ತು ವರ್ಷಗಳಿಂದ ಒಂದು ಬೆಳೆಗೂ ಸಾಕಾಗುವಷ್ಟು ನೀರು ಬರುತ್ತಿಲ್ಲ. ವರ್ಷೇ ವರ್ಷೇ ಇದಕ್ಕೆ ನೀರಿನ ಕೊರತೆ ಜಾಸ್ತಿಯಾಗುತ್ತಿದೆ. ಗಾಯಿತ್ರಿ ಜಲಾಶಯದಲ್ಲಿ ನೀರು ಇದೆ ಮತ್ತು ಬುಕ್ಕಾಪಟ್ಟಣ ಹಾಗೂ ರಾಮಲಿಂಗಾಪುರ ಕೆರೆಗಳ ಜೌಗು ನೀರು ಹೋಗಬೇಕಾದ ಪರಿಸ್ಥಿತಿಯಿರುತ್ತದೆ ಜೌಗು ಇರುವುದರಿಂದ ಈ ಕೆರೆಗಳ ಕೆಳಗೆ ಸರಿಯಾಗಿ ಬೆಳೆ ಆಗುತ್ತಿಲ್ಲ. ಗಾಯಿತ್ರಿ ಜಲಾಶಯದಲ್ಲೂ ಸರಿಯಾಗಿ ಆಗುತ್ತಿಲ್ಲ. ಆದ ಕಾರಣ ಬೋರನ ಕಣಿವೆ ಕೆರೆಗೆ ಗಂಟೇನಹಳ್ಳಿ ಕೆರೆ ಕೋಡಿ ಮುಖಾಂತರ ನೀರನ್ನು ತಿರುಗಿಸಿದರೆ ಅನುಕೂಲವಾಗುತ್ತದೆ. ಅಲ್ಲಿ ಸುಮಾರು ಒಂದು ಒಂದೂವರೆ ಸಾವಿರ ಎಕರೆಗೆ ಆಗುವ ನೀರು. ಗಾಯಿತ್ರಿ ಜಲಾಶಯ ಮತ್ತು ಗಂಟೇನಹಳ್ಳಿ ಕೆರೆಗಳಿಗೆ ಆಗಿ ಜಾಸ್ತಿಯಾಗುತ್ತದೆ. ಆದುದರಿದ ಗಂಟೇನಹಳ್ಳಿ ಕೆರೆ ಕೋಡಿಯ ನೀರನ್ನು ಬೋರನಕಣಿವೆ ಜಲಾಶಯಕ್ಕೆ ತಿರುಗಿಸುವುದರ ಮೂಲಕ ವರ್ಷಕ್ಕೆ ಒಂದು ಬೆಳೆಯನ್ನಾದರೂ ತೆಗೆದುಕೊಳ್ಳುವ ಸೌಲಭ್ಯವನ್ನು ಕಲ್ಪಿಸಿಕೊಡಬೇಕೆಂದು ಸನ್ಮಾನ್ಯ ಲೋಕೋಪಯೋಗಿ ಸಚಿವರು ಇದನ್ನು ಮಾಡಿಸಿಕೊಡಬೇಕೆಂದು ನಾನು ಪ್ರಾರ್ಥಿಸಿಕೊಳ್ಳುತ್ತೇನೆ. ನನ್ನ ಕ್ಷೇತ್ರದಲ್ಲಿ ಬುಕ್ಕಾಪಟ್ಟಣ ಹೋಬಳಿಯ ಕೀಲಾರದ ಹಳ್ಳಿ ಮತ್ತು ಹುಲಿಯಾರು ಹೋಬಳಿಯ ಸೂಲೆನೂರು ಕೆರೆ, ಇವುಗಳನ್ನು ಮಾಡಿಸಿಕೊಡಬೇಕೆಂದು ಬಹಳ ವರ್ಷಗಳಿಂದ ಕೇಳುತ್ತಿದ್ದೇನೆ. ಇವುಗಳಿಗೆ ಹಣ ಮಂಜೂರಾಗದೆ ಕೆಲಸ ಪ್ರಾರಂಭವಾಗಿಲ್ಲ. ಇವುಗಳನ್ನೂ ಕೂಡಾ ಮಾಡಿಸಿಕೊಡಬೇಕು. ಇನ್ನು ಬೋರನ ಕಣಿವೆ ಜಲಾಶಯದ ಎಡನಾಲೆ ತೀರಾ ದುಸ್ಥಿತಿಯಲ್ಲಿದೆ, ನೀರು ಬಿಟ್ಟಿದ್ದೆಲ್ಲಾ ಹಳ್ಳಕ್ಕೆ ಹೋಗುತ್ತದೆ. ಅಚ್ಚುಕಟ್ಟಿಗೆ ಹೋಗುತ್ತಿಲ್ಲ. ಆದುದರಿಂದ ಇದನ್ನು ಪರಿಶೀಲನೆ ಮಾಡಿ ತಕ್ಕಷ್ಟು ಕೆಲಸ ಮಾಡಿಸಿಕೊಡಬೇಕೆಂದು ಹೇಳುತ್ತೇನೆ. ಇನ್ನು ನನ್ನ ಕ್ಷೇತ್ರಕ್ಕೆ ಬಜೆಟ್‌ನಲ್ಲಿ ಅವಕಾಶ ಮಾಡಿಕೊಟ್ಟಿರತಕ್ಕಂಥ ಬೂದಿಗುಂಟೆ ಕಾವಲ್ ಕೆರೆ ಏನಿದೆ, ಅದು ಕೈತಪ್ಪಿನಿಂದ ಸಿರಾ ತಾಲ್ಲೂಕು ಎಂದು ಬಿದ್ದಿದೆ, ಅದನ್ನು ಚಿಕ್ಕನಾಯಕನಹಳ್ಳಿ ತಾಲ್ಲೂಕು ಎಂದು ಸರಿಪಡಿಸಬೇಕೆಂದು ಒಂದು ಆದೇಶವನ್ನು ಮಾನ್ಯ ಮಂತ್ರಿಗಳು ಕೊಡಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.— ಮುಕ್ತಾಯ ಮಾಡಿ.

ಶ್ರೀ ಬಿ. ಗಂಗಣ್ಣ.— ಸ್ವಲ್ಪ ಅವಕಾಶ ಕೊಡಿ ಸ್ವಾಮಿ, ನನ ಜಿಲ್ಲೆಯಿಂದ ಯಾರೂ ಮಾತನಾಡಿಲ್ಲ.

ಅಧ್ಯಕ್ಷರು.— ಅದಕ್ಕೆ ನಾನು ಏನು ಮಾಡಲಿ?

ಶ್ರೀ ಬಿ. ಗಂಗಣ್ಣ.— ಒಂದು ಐದು ನಿಮಿಷ ಅವಕಾಶ ಕೊಡಿ.

ಅಧ್ಯಕ್ಷರು.— ಇನ್ನೂ ೧೪ ಮಂದಿ ಮಾತನಾಡಬೇಕು, ನಾಲ್ಕು ಘಂಟೆಗೆ ಮಾನ್ಯ ಸಚಿವರು ಉತ್ತರ ಕೊಡಬೇಕು. ೧೦ ಮಿನಿಟ್‌ಗಿಂತ ಯಾರಿಗೂ ಜಾಸ್ತಿ ಇಲ್ಲ.

ಶ್ರೀ ಬಿ ಗಂಗಣ್ಣ.— ಈ ಸಂದರ್ಭದಲ್ಲಿ ನೀರಾವರಿಗೆ ಅದರಲ್ಲೂ ಸಣ್ಣ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು ಕ್ಷಾಮಕ್ಕೆ ಒಳಗಾಗತಕ್ಕಂಥ ಸಿರಾ, ಕಳ್ಳಂಬೆಳ್ಳ, ಗುಬ್ಬಿ, ಪಾವಗಡ, ಮಧುಗಿರಿ ಕ್ಷೇತ್ರಗಳಿಗೆ ಸಣ್ಣ ನೀರಾವರಿಯಲ್ಲಿ ಹೆಚ್ಚಿನ ಅವಕಾಶ ಮಾಡಿಕೊಡಬೇಕು ಎಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತೇನೆ, ಇನ್ನು ಈ ಇಲಾಖೆಯಲ್ಲಿ ಪ್ಲಾನ್ ಮತ್ತು ನಾನ್ ಪ್ಲಾನ್ ಸ್ಕೀಮ್‌ನಲ್ಲಿ ಕಾಮಗಾರಿಗಳು ತೀವ್ರ ಗತಿಯಲ್ಲಿ ಆಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಇದರ ಬಗ್ಗೆ ಹೆಚ್ಚಿನ ಜವಾಬ್ದಾರಿಯನ್ನು ಅಧಿಕಾರಿಗಳ ಮೇಲೆ ಹೊರಿಸದೆ, ಸ್ಟಿಪ್ಯುಲೇಟೆಡ್ ಪೀರಿಯಡ್‌ನಲ್ಲಿ ಕಾಮಗಾರಿಗಳನ್ನು ಪೂರೈಸುವುದಕ್ಕೆ ಅವಕಾಶ ಮಾಡಿಕೊಡಬೇಕು. ಕ್ವಾಲಿಟಿ ಆಫ್ ವರ್ಕ್ ಏನಿದೆ ಅದನ್ನು ಸರಿಪಡಿಸಬೇಕು. ಇವತ್ತು ಕ್ವಾಲಿಟಿ ಆಫ್ ವರ್ಕ್ ತೀರಾ ಹದಗೆಟ್ಟು ಹೋಗಿದೆ. ಕ್ವಾಲಿಟಿ ಕಂಟ್ರೋಲ್ ಡಿವಿಜನ್ ಇದೆಯೋ ಇಲ್ಲವೋ ಎಂಬ ಪರಿಸ್ಥಿತಿ ಬಂದಿದೆ.

ಅವೆಲ್ಲವುಗಳನ್ನು ಸಹ ಮಾನ್ಯ ಮಂತ್ರಿಗಳು ಗಮನಿಸಿ ಇಲಾಖೆಯನ್ನು ಪುನಶ್ಚೇತನಗೊಳಿಸಬೇಕೆಂದು ನಾನು ಹೇಳುತ್ತೇನೆ. ಇದೇ ಸಂದರ್ಭದಲ್ಲಿ ನಾನು ಮತ್ತೊಂದು ಮನವಿ ಮಾಡಿಕೊಳ್ಳುವುದೇನೆಂದರೆ ಗ್ರಾಮಾಂತರ ಪ್ರದೇಶಗಳಲ್ಲಿ ಇರತಕ್ಕಂಥ ಹ್ಯಾಮ್ಲೆಟ್ಸ್‌ಗೆ ವಿದ್ಯುಚ್ಛಕ್ತಿಯನ್ನು ಒದಗಿಸಿ ಕೊಡುತ್ತೇವೆ ಎನ್ನುವ ಮಾತನ್ನು ಸಹ ಹೇಳಿದ್ದೀರಿ ಈ ಹಿಂದೆ ಈ ಕೆಲಸ ಇರಲಿಲ್ಲ. ಈಗ ಮಾಡುತ್ತೇವೆಂದು ಹೇಳಿದ್ದೀರಿ, ಅದನ್ನು ನಾನು ಸ್ವಾಗತ ಮಾಡುತ್ತೇನೆ. ಇನ್ನು ಐ.ಪಿ. ಸೆಟ್‌ಗಳಿಗೆ ಬೇಕಾದಂಥ ವಿದ್ಯುಚ್ಛಕ್ತಿಯನ್ನು ಗ್ರಾಮಾಂತರ ಪ್ರದೇಶಗಳಲ್ಲಿ ಸರ್ಕಾರದವರು ಒದಗಿಸಿಕೊಡುತ್ತಿಲ್ಲ. ಈ ಬಗ್ಗೆ ಮಾನ್ಯ ಮಂತ್ರಿಗಳು ಗಮನಹರಿಸಬೇಕು ನಮ್ಮ ಕಡೆ ವಿದ್ಯುಚ್ಛಕ್ತಿ ಯಾವಾಗಲೂ ಕಡಿಮೆ ಓಲ್ಟೇಜ್ ಇರುತ್ತದೆ. ಇದಕ್ಕೆ ಮೂಲ ಕಾರಣ ನಮ್ಮಲ್ಲಿರುವ ಓ.ಸಿ.ಬಿ. ಸೆಂಟರ್ ಡಿಫೆಕ್ಟ್ ಇದನ್ನು ಸರಿ ಮಾಡಬೇಕೆಂದು ಸಹ ನಾನು ಈ ಸಂದರ್ಭದಲ್ಲಿ ಅರಿಕೆ ಮಾಡಿಕೊಳ್ಳುತ್ತೇನೆ ಇನ್ನು...

ಅಧ್ಯಕ್ಷರು.— ತಾವು ದಯವಿಟ್ಟು ಮುಗಿಸಿ. ೧೦ ನಿಮಿಷವಾಯಿತು.

ಶ್ರೀ ಬಿ. ಗಂಗಣ್ಣ.— ಆಯಿತು ಅಧ್ಯಕ್ಷರೇ ಕಡೆಯದಾಗಿ ಒಂದೇ ಒಂದು ವಿಚಾರವನ್ನು ಪ್ರಸ್ತಾಪ ಮಾಡುತ್ತೇನೆ...

ಅಧ್ಯಕ್ಷರು.— ಇಲ್ಲ ಮುಗಿಸಿಬಿಡಿ.

ಶ್ರೀ ಬಿ. ಗಂಗಣ್ಣ.— ಇನ್ನೂ ಹೆಚ್ಚಿನ ವಿಚಾರಗಳು ಪ್ರಸ್ತಾಪ ಮಾಡಬೇಕೆಂದಿದ್ದರೂ ಸಮಯದ ಅಭಾವದಿಂದ ನನಗೆ ಇಷ್ಟು ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ ಎಸ್. ಆಚಾರ್ (ಬೈಂದೂರು)— ಸನ್ಮಾನ್ಯ ಅಧ್ಯಕ್ಷರೇ, ಗ್ರಾಮಾಭಿವೃದ್ಧಿ ಕಾರ್ಯಕ್ರಮದ ಅಡಿಯಲ್ಲಿ ಈ ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಗಳು ಬರುತ್ತವೆ. ಈ ಇಲಾಖೆಗಳು ತಮ್ಮ ಸಾಧನೆಯಲ್ಲಿ, ತಮಗೆ ಬೇಕಾದಷ್ಟು ಹಣವನ್ನು ಪಡೆದು ಪ್ರಗತಿಪರವಾದಂಥ ಕೆಲಸಕಾರ್ಯಗಳನ್ನು ಮಾಡುವುದರಲ್ಲಿ ಬಹುತೇಕವಾಗಿ ಹಿಂದೆ ಬಿದ್ದಿವೆ. ತಮ್ಮ ಇಲಾಖೆಗಳ ಅಭಿವೃದ್ಧಿಗೆ ಬೇಕಾದಷ್ಟು ಹಣಕಾಸನ್ನು ಪಡೆಯುವುದರಲ್ಲಿ ಅಸಮರ್ಪಕವಾಗಿರುವ ದೃಷ್ಟಿಯಿಂದ ನಾನು ಈ ಬೇಡಿಕೆಗಳನ್ನು ವಿರೋಧಿಸಿ ಮಾತನಾಡುತ್ತೇನೆ. ನಮ್ಮ ರಾಜ್ಯದಲ್ಲಿ ನೀರಾವರಿ ಯೋಜನೆಗಳು ಹೆಚ್ಚಾಗಬೇಕು, ಅಧಿಕ ಉತ್ಪಾದನೆಯಾಗಬೇಕು. ಉತ್ಪಾದನೆಯಾದಂಥ ಮಾಲನ್ನು ಮಾರಾಟ ಮಾಡಲು ಸಮರ್ಪಕವಾದಂಥ ರಸ್ತೆಗಳ ಸೌಕರ್ಯವಿರಬೇಕು. ಈ ಕೆಲಸ ಗ್ರಾಮ ಆ ಮಟ್ಟದಲ್ಲಿ ಹೆಚ್ಚು ಆಗಬೇಕು. ಇದು ಎಲ್ಲರಿಗೂ ತಿಳಿದಂತಹ ನೀತಿ ನಿಯಮ. ಆದರೆ ಇಲ್ಲಿ ಆದ್ಯತೆಗಳು ಬುಡಮೇಲಾಗಿವೆ. ಅದರ ಬದಲಿಗೆ ಹಸಿರು ಕಾರ್ಡ್ ಕೊಡುವುದು, ಅಗ್ಗದ ದರದಲ್ಲಿ ಬಟ್ಟೆ ಕೊಡುವುದು, ಉಚಿತ ಪಠ್ಯ ಪುಸ್ತಕಗಳನ್ನು ಕೊಡುವುದು, ಇತ್ಯಾದಿ ಕೆಲಸ ಕಾರ್ಯಗಳನ್ನು ಮಾಡುತ್ತಾ ಬಂದಿರುವುದರಿಂದ ನೀರಾವರಿ ಮತ್ತು ರಸ್ತೆಗಳಿಗೆ ಕೊಡಬೇಕಾದಂತಹ ಆದ್ಯತೆ ಇವತ್ತು ಬಹಳ ಕಡಿಮೆಯಾಗಿದೆ. ಸನ್ಮಾನ್ಯ ಮಂತ್ರಿಗಳು ತಮ್ಮ ಇಲಾಖೆಯ ಮೇಲೆ ಸಂಪೂರ್ಣ

ಹತೋಟಿಯನ್ನು ಇಟ್ಟುಕೊಂಡಿರತಕ್ಕಂಥವರು ಮಾನ್ಯ ಮಂತ್ರಿಗಳಿಗೆ ಸಾಧನೆಯ ಹಿನ್ನೆಲೆ ಇದೆ. ಸಮಸ್ಯೆಗಳ ಅರಿವು ಇದೆ ಆಡಳಿತದ ಅನುಭವ ಇದೆ. ಹಾಗಿದ್ದರೂ ಕೂಡ ಆದ್ಯತೆಗಳು ಬುಡಮೇಲಾಗಲು ಕಾರಣಗಳೇನು ? ಅವರಿಗೆ ಬೇಕಾದಷ್ಟು ಹಣವನ್ನು ಒದಗಿಸಿಕೊಳ್ಳಲು ಏತಕ್ಕೆ ವ್ಯವಸ್ಥೆಯಾಗಿಲ್ಲ ? ಅವರೇತಕ್ಕೆ ಅಸಹಾಯಕರಾದರು ? ಅವರಿಗೆ ಕೋಪ ಬರಲಿಲ್ಲವೇ ? ನನಗನಿಸುತ್ತದೆ, ಅವರಿಗೆ ಸ್ವಲ್ಪ ಲೋ-ಕೋಪ ಆಗಿ ಯೋಗಿಗಳಾಗುತ್ತಿದ್ದಾರೆ. ಏನೇ ಬರಲಿ ಅಭಿವೃದ್ಧಿ ಕೆಲಸ ಕಾರ್ಯಗಳಾಗಬೇಕು. ನನ್ನ ದೃಷ್ಟಿಯಲ್ಲಿ ಅವರಿಗೆ ಸರ್ವ ಶಕ್ತಿ ಇದೆ. ಅವರಿಗೆ ಈ ವಿಚಾರದಲ್ಲಿ ಸ್ವಲ್ಪ ಕೆಚ್ಚೆದೆ ಬರಬೇಕು. ನಮ್ಮ ರಾಜ್ಯದಲ್ಲಿ ನೀರಾವರಿ ಮತ್ತು ರಸ್ತೆಗಳ ನಿರ್ಮಾಣ ಕೆಲಸ ಬಹಳ ವ್ಯವಸ್ಥಿತವಾಗಿ ಆಗಬೇಕು. ಅದಕ್ಕೆ ಒಂದು ರೀತಿನೀತಿಗಳನ್ನು ರೂಪಿಸಿಕೊಂಡು ತಕ್ಕ ಬಂಡವಾಳವನ್ನು ಈ ಬಡ್ಜೆಟ್‌ನಲ್ಲಿ ಅಳವಡಿಸಿಕೊಳ್ಳತಕ್ಕ ಜವಾಬ್ದಾರಿ ಲೋಕೋಪಯೋಗಿ ಸಚಿವರಿಗೆ ಸೇರಿದ್ದು. ಅವರು ತಮ್ಮ ಕಾರ್ಯನಿರ್ವಹಣಾ ಪತ್ರದಲ್ಲಿ ಪ್ರಾಥಮಿಕ ಅಭಿವೃದ್ಧಿ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಅವರು ಹೇಳಿರುವಂತೆ ಅನೇಕ ಕೆಲಸಗಳು ಆಗಿಲ್ಲ. ನೀತಿ ನಿಯಮಗಳು ರಚನೆಯಾಗಿಲ್ಲ. ಗ್ರಾಮಾಭಿವೃದ್ಧಿ ಕೆಲಸಕಾರ್ಯಗಳಿಗೆ ಬಂಡವಾಳವನ್ನು ಹಾಕಿಲ್ಲ. ಇವೆಲ್ಲಾ ನಮಗೆ ಇವತ್ತು ಕಂಡುಬರುತ್ತಿವೆ. ಅನೇಕ ಯೋಜನೆಗಳ ಕೆಲಸ ಪೂರ್ಣವಾಗಿಲ್ಲ. ಇನ್ನು ಕೆಲವು ನೀರಾವರಿ ಯೋಜನೆಗಳು ಪೂರ್ಣಗೊಂಡಿದ್ದರೂ ಸಹ ಅವು ಬಳಕೆಗೆ ಬಂದಿಲ್ಲ. ಸಮರ್ಪಕವಾದ ವ್ಯವಸ್ಥೆಯಾಗಿಲ್ಲ. ಅನೇಕ ಕಾರ್ಯಕ್ರಮಗಳು ಸ್ಥಗಿತಗೊಂಡಿವೆ. ನೀರಾವರಿ ಕೆಲಸಗಳು ಕುಂಠಿತವಾಗಿವೆ. ಇವುಗಳಿಗೆಲ್ಲಾ ನಾವು ಒಂದು ಡೆಡ್‌ಲೈನ್ ಹಾಕಿಕೊಳ್ಳಬೇಕು. ಕಳೆದ ವರ್ಷ ಈ ಸದನದಲ್ಲಿ ಮಂಡಿಸಿದ್ದ ಬಡ್ಜೆಟ್ ಭಾಷಣದ ಮೇಲೆ ಮಾತನಾಡುವಂತಹ ಸಂದರ್ಭದಲ್ಲಿ ಕೃಷ್ಣಾ ಮತ್ತು ಕಾವೇರಿ ಯೋಜನೆಗಳಿಗೆ ೩೦೦ ಕೋಟಿ ರೂಪಾಯಿಗಳು ಕೊಡಬೇಕೆಂದು ಒಕ್ಕೊರಲಿನಿಂದ ಹೇಳಿದರೂ ಸಹ ಅದು ಸುಧಾರಣೆ ಯಾಗಲಿಲ್ಲ. ಈ ಬಗ್ಗೆ ಈಗಾಗಲೇ ನಮ್ಮ ಅನೇಕ ಜನ ಮಾನ್ಯಸ್ನೇಹಿತರು ಪ್ರಸ್ತಾಪ ಮಾಡಿದ್ದಾರೆ. ಆದ್ದರಿಂದ ಆ ಬಗ್ಗೆ ನಾನು ಹೆಚ್ಚು ಏನನ್ನು ಹೇಳುವುದಕ್ಕೆ ಹೋಗುವುದಿಲ್ಲ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಗೆ ಸಂಬಂಧಪಟ್ಟ ಹಾಗೆ ನಾನು ಪ್ರಸ್ತಾಪ ಮಾಡುವುದಾದರೆ ವರಾಹಿ ಯೋಜನೆಯನ್ನು ೯೭ನೇ ಇಸವಿಯಲ್ಲಿ ಸೇರಿಸಿ ಒಂದೂವರೆ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇವೆಂದು ಆಶ್ವಾಸನೆಯನ್ನು ಕೊಟ್ಟಿದ್ದರು. ಆದರೆ ಅವರ ವಾಗ್ದಾನವನ್ನು ಉಳಿಸಿಕೊಂಡಿದ್ದಾರೆಯೋ ಎನ್ನುವ ಪ್ರಶ್ನೆ ನನ್ನ ಮುಂದೆ ಇದೆ. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬೃಹತ್ ನೀರಾವರಿ ಯೋಜನೆ ಇದೊಂದೆ. ಇದು ಮಾನ್ಯ ಮಂತ್ರಿಗಳ ಗಮನದಲ್ಲಿದೆ. ಈ ಯೋಜನೆಯಿಂದ ಸಕ್ಕರೆ ಕಾರ್ಖಾನೆಗಳಿಗೆ ಬೇಕಾದಂಥ ಕಬ್ಬು ಬೆಳೆಯುವುದಕ್ಕೆ ಅನುಕೂಲವಾಗುತ್ತದೆ.

ಆ ವಿಷಯ ಸಹ ಮಾನ್ಯ ಸಚಿವರಿಗೆ ಗೊತ್ತಿರುವುದರಿಂದ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಈ ವರಾಹಿ ಯೋಜನೆಯ ಪ್ರಸ್ತಾಪ ಬಂದಾಗ ಅದರ ಕುರಿತು ಎಚ್ಚರಿಕೆಯಿಂದ ಕೆಲಸವಾಗುವಂತೆ ಮಾಡಬೇಕೆಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಬಹಳ ಕೆಲಸವಾಗಬೇಕಾಗಿದೆ. ಹಳೆಯ ರಸ್ತೆಗಳೆಲ್ಲವೂ ದುರಸ್ತಿಯಾಗಬೇಕು. ದುರಸ್ತಿ ಕೆಲಸವು ಸರಿಯಾಗಿ ಆಗುತ್ತಿಲ್ಲ, ರಸ್ತೆಗಳು ಸರಿಯಾಗಿ ದುರಸ್ತಿಯಾಗದೇ ಹೋದರೆ ಎಷ್ಟು ತೊಂದರೆಯಾಗುತ್ತದೆಂದು ಮಾನ್ಯ ಸಚಿವರಿಗೂ ಗೊತ್ತಿದ್ದ ವಿಷಯವೇ. ದುರದೃಷ್ಟವಶಾತ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹವಾಮಾನದ ಪರಿಸ್ಥಿತಿ ಚೆನ್ನಾಗಿರುವುದಿಲ್ಲ. ಈ ಹವಾಮಾನ ಪರಿಸ್ಥಿತಿ ನೋಡಿಕೊಂಡು ರಸ್ತೆಗಳ ಕೆಲಸವನ್ನು ಮಾಡಿಸಬೇಕಾಗಿರುತ್ತದೆ. ಜನವರಿ ಮತ್ತು ಫೆಬ್ರವರಿ ತಿಂಗಳುಗಳಲ್ಲಿ ಹಣವನ್ನು ರಿಲೀಸ್ ಮಾಡಿ ಕೆಲಸವನ್ನು ಮಾರ್ಚಿಯೊಳಗೆ ಮಾಡಬೇಕೆಂದು ಹೇಳುತ್ತಾರೆ. ಇಷ್ಟು ಕಡಿಮೆ ಅವಧಿಯಲ್ಲಿ ಕೆಲಸ ಮಾಡುವುದು ಹೇಗೆ ಸಾಧ್ಯವಾಗುತ್ತದೆ? ಮಾರ್ಚ್ ಮುಗಿದ ನಂತರ ಕೆಲಸ ಮಾಡುವುದಕ್ಕೆ ಆಗುವುದಿಲ್ಲ, ಮಾರ್ಚ್ ತಿಂಗಳ ನಂತರ ಮಳೆಗಾಲ ಪ್ರಾರಂಭ ವಾಗುವುದರಿಂದ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಯಾವ ರಸ್ತೆಯ ರಿಪೇರಿಯನ್ನೂ ಮಾಡುವುದಕ್ಕಾಗುವುದಿಲ್ಲ. ಇನ್ನೂ ಒಂದು ಸಮಸ್ಯೆ ನಮ್ಮ ದಕ್ಷಿಣಕನ್ನಡ ಜಿಲ್ಲೆಯಲ್ಲಿ ಇದೆ. ಒಂದು ವಿಚಾರವನ್ನು ಹೇಳಿದರೆ ತಮಗೆ ಅರ್ಥವಾದೀತು. ನನ್ನ ಕ್ಷೇತ್ರವಾದ ಬೈಂದೂರಿನಲ್ಲಿ ಎಡತೊರೆಯೆಂಬ ಒಂದು ಸ್ಥಳ ಇದೆ. ಇಲ್ಲಿ ಉಪ್ಪು ನೀರು ತಡೆಗೆ ಅಡೆಕಟ್ಟೆಗೆ ಹಾಕಿದ್ದ ಹಲಗೆಗಳು ಕಿತ್ತು ಹೋಗಿ ಅಥವಾ ಮುರಿದು ಹೋಗಿ ಬಹಳ ತೊಂದರೆಯಾಗಿದೆ. ಎರಡು ವರ್ಷದಿಂದಲೂ ಈ ಕೆಲಸವನ್ನು ಸರ್ಕಾರದವರು ಮಾಡಿಸಿಲ್ಲ. ಇದರ ಬಗ್ಗೆ ನಾನು ಜಿಲ್ಲಾಭಿವೃದ್ಧಿ ಮಂಡಳಿ ಸಭೆಯಲ್ಲಿ ಹೇಳಿದ್ದೇನೆ. ಸಂಬಂಧಪಟ್ಟ ಇಲಾಖೆಯವರು ಹಲಗೆಗಳನ್ನು ತಂದಿದ್ದಾರೆ. ಹಲಗೆಗಳನ್ನು ತಂದಿದ್ದಾರೆಯೋ ಹೊರತು ಅವುಗಳನ್ನು ಇನ್ನೂ ಫಿಕ್ಸ್

ಮಾಡಿಲ್ಲ. ಹಲಗೆಗಳನ್ನು ಫಿಕ್ಸ್ ಮಾಡದಿದ್ದರೆ ಏನು ಉಪಯೋಗವಾಗುವುದಿಲ್ಲ. ಈ ಹಲಗೆಗಳನು ಫಿಕ್ಸ್ ಮಾಡಿದಾಗ ಮಾತ್ರ ರೈತರಿಗೆ ಉಪಯೋಗಿಸಿಕೊಳ್ಳಲು ಅನುಕೂಲವಾಗುತ್ತದೆ. ಇನ್ನು ಗ್ರಾಮೀಣ ಭಾಗಗಳ ರಸ್ತೆಗಳ ಕುರಿತು ಹೇಳುವುದಾದರೆ, ಹತ್ತು ಸಾವಿರದ ಆರುನೂರ ಎಂಭತ್ತೈದು ಕಿಲೋಮೀಟರ್‌ನಷ್ಟು ರಸ್ತೆಗಳು ಸರ್ವಋತು ರಸ್ತೆಗಳಾಗಲು ಯೋಗ್ಯವಾಗಿವೆ ಇನ್ನು ಹದಿನಾರು ಸಾವಿರದ ಮುನ್ನೂರ ನಲ್ವತ್ತುಮೂರು ಕಿಲೋಮೀಟರ್‌ನಷ್ಟು ಕಚ್ಚಾ ರಸ್ತೆಗಳು ನಮ್ಮ ರಾಜ್ಯದಲ್ಲಿ ಇವೆ. ಮಳೆಗಾಲ ಬಂದಾಗ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ರಸ್ತೆಗಳೆಲ್ಲಾ ಕೊಚ್ಚಿ ಹೋಗುತ್ತವೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವರ್ಷ ವರ್ಷವೂ ರಸ್ತೆಗಳನ್ನು ಮಾಡುವ ಬದಲಾಗಿ ಶಾಶ್ವತವಾಗಿ ರಸ್ತೆ ಇರುವಂತೆ ರಾಷ್ಟ್ರೀಯ ಅಭಿವೃದ್ಧಿ ಕಾರ್ಯಕ್ರಮದ ಜೊತೆಗೆ ತೆಗೆದುಕೊಂಡು ದಕ್ಷಿಣ ಕನ್ನಡ ಜಿಲ್ಲೆಯ ರಸ್ತೆಗಳ ಅಭಿವೃದ್ಧಿ ಮಾಡಬೇಕು. ಹಾಗೆಯೇ ಮೀನುಗಾರಿಕಾ ಕೇಂದ್ರಗಳಿಗೆ ಹೋಗಬೇಕಾದ ಅನೇಕ ರಸ್ತೆಗಳು ಇವೆ, ಈ ರಸ್ತೆಗಳು ಸರಿಯಾದ ರೀತಿಯಲ್ಲಿ ಇರುವುದಿಲ್ಲ. ಮೀನುಗಾರಿಕೆ ಇಲಾಖೆಯವರು ಮತ್ತು ಪಿ.ಡಬ್ಲ್ಯೂ.ಡಿ. ಇಲಾಖೆಯವರು ಜೊತೆಗೂಡಿಕೊಂಡು ಈ ರಸ್ತೆಗಳನ್ನು ಅಭಿವೃದ್ಧಿ ಮಾಡುವ ಕಡೆ ಗಮನ ಹರಿಸಬೇಕು. ಯಾವ ಇಲಾಖೆಯವರು ಈ ರಸ್ತೆಗಳಿಗೆ ಯಾವ ರೀತಿ ಸಹಾಯವನ್ನು ಮಾಡಬೇಕು ಎಂಬ ಬಗ್ಗೆ ತೀರ್ಮಾನ ಮಾಡಿ ಒಂದು ನಿಯಮಾವಳಿಯನ್ನು ರೂಪಿಸಿಕೊಳ್ಳಬೇಕು. ಆ ನಿಯಮಾವಳಿ ಪ್ರಕಾರ ರಸ್ತೆಗಳನ್ನು ನಿರ್ಮಾಣ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಕೇಳಿ ಕೊಳ್ಳುತ್ತೇನೆ. ಭಾರತ ದೇಶದ ರಸ್ತೆ ಅಭಿವೃದ್ಧಿ ಕಾರ್ಯಕ್ರಮವು ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ರೂಪಿತವಾಗಿದೆ ಎಂದು ತಿಳಿದೆ. ರೂಪಿತವಾಗಿರುವುದು ಕಾರ್ಯಗತವಾದರೆ ಬಹಳ ಸಂತೋಷ. ೧೯೮೬–೮೭ರಲ್ಲಿ ರಾಜ್ಯ ಸರ್ಕಾರವು ಎಷ್ಟು ರಸ್ತೆಗಳನ್ನು ಅಭಿವೃದ್ಧಿ ಮಾಡಬೇಕೆಂದು ಗುರಿ ಹಾಕಿಕೊಂಡಿತ್ತು? ಹಾಗೂ ಎಷ್ಟು ಸಾಧನೆ ಮಾಡಲಾಗಿದೆ? ೧೯೮೭–೮೮ರಲ್ಲಿ ಎಷ್ಟು ರಸ್ತೆ ಗಳನ್ನು ಅಭಿವೃದ್ಧಿ ಮಾಡಬೇಕೆಂದು ಗುರಿ ಹಾಕಿಕೊಂಡಿದೆ ಎಂಬುದನ್ನು ತಿಳಿಸಬೇಕು. ಆದಿವಾಸಿ ಮತ್ತು ಹರಿಜನವಾಡಿ (ಸ್ಥಳ)ಗಳಿಗೆ ಹೆಚ್ಚು ರಸ್ತೆ ಸೌಲಭ್ಯಗಳನ್ನು ಕೊಡಬೇಕು. ರಾಜ್ಯ ಸರ್ಕಾರವು ಸೇತು ಬಂಧನ ಕಾರ್ಯಕ್ರಮದಲ್ಲಿ ಗುರಿಯನ್ನು ಸಾಧನೆ ಮಾಡುವಲ್ಲಿ ಹಿಂದೆ ಬಿದ್ದಿದೆ. ಈ ಸೇತು ಬಂಧನ ಕಾರ್ಯಕ್ರಮದಲ್ಲಿ ಹೆಚ್ಚು ಕೆಲಸವನ್ನು ಮಾಡಬೇಕೆಂದು ತಿಳಿಸುತ್ತೇನೆ.

ಅಧ್ಯಕ್ಷರು.—ಮುಕ್ತಾಯ ಮಾಡಿ.

ಶ್ರೀ ಜಿ. ಎಸ್. ಆಚಾರ್.—ಇನ್ನೊಂದು ವಿಚಾರವನ್ನು ಹೇಳಿ ಮುಗಿಸುತ್ತೇನೆ, ರಾಷ್ಟ್ರೀಯ ಹೆದ್ದಾರಿಗಳಲ್ಲಿ ವಾಹನಗಳಿಗೆ ಶುಲ್ಕವನ್ನು ವಿಧಿಸಿ ಹಣವನ್ನು ಸಂಗ್ರಹ ಮಾಡುತ್ತಾರೆ. ಅದೇ ರೀತಿ ಇತರ ದಾರಿಗಳಲ್ಲೂ ಸೇತುವೆ ನಿರ್ಮಿಸಿ ಶುಲ್ಕ ವಿಧಿಸಬಹುದು.

ಅಧ್ಯಕ್ಷರು.—ದಯವಿಟ್ಟು ಕೂಡಿ.

ಶ್ರೀ ಜಿ. ಎಸ್. ಆಚಾರ್.—ಇನ್ನೊಂದು ವಿಚಾರವನ್ನು ಹೇಳಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಅವಕಾಶ ಕೊಡುವುದಿಲ್ಲ. ಇನ್ನೂ ೧೪ ಜನ ಮಾತನಾಡುವವರು ಇದ್ದಾರೆ. ಕುಮಾರಗೌಡರೇ ನೀವು ಮಾತನಾಡಿ.

೨–೩೦ ಪಿ.ಎಂ.

† ಶ್ರೀ ಕುಮಾರಗೌಡ ಎ. ಪಾಟೀಲ್.—ಸನ್ಮಾನ್ಯ ಸಭಾಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಸಚಿವರು ಸದನದಲ್ಲಿ ಮಂಡಿಸಿರತಕ್ಕಂಥ ಗೊತ್ತುವಳಿಗೆ ನನ್ನ ಬೆಂಬಲವನ್ನು ಸೂಚಿಸುತ್ತಾ, ನನ್ನ ಕೆಲವು ಮಾತುಗಳನ್ನು ಇಲ್ಲಿ ಹೇಳಲಿಚ್ಛಿಸುತ್ತೇನೆ. ಲೋಕೋಪಯೋಗಿ ಇಲಾಖೆಯು ಲೋಕಕ್ಕೇ ಉಪಯೋಗ ಮಾಡತಕ್ಕಂಥ ಇಲಾಖೆ. ಲೋಕೋಪಯೋಗಿ ಕಾರ್ಯಗಳನ್ನು ಮಾಡುವಂತಹ, ಮಹತ್ತರವಾದಂತಹ ಖಾತೆ. ನಮ್ಮ ಹಳ್ಳಿಗಾಡಿನಲ್ಲಿ ೮೦ ಪರ್ಸೆಂಟ್‌ನಷ್ಟು ಜನರು ಕೃಷಿ ಮೇಲೆ ತಮ್ಮ ಜೀವನವನ್ನು ಅವಲಂಬಿಸಿರುವವರಿದ್ದಾರೆ. ಅದಕ್ಕೆ ನೀರಾವರಿ ಸೌಲಭ್ಯವನ್ನು ಕಲ್ಪಿಸಿಕೊಡುವಂತಹ ಖಾತೆಯೂ ಇದಾಗಿದೆ.

ಈ ನೀರಾವರಿಯಲ್ಲಿ ಮೂರು ವಿಭಾಗಗಳು ಇವೆ. ಅಂದರೆ ಮೂರು ತರಗತಿಗಳಾಗಿ ಇದನ್ನು ವಿಂಗಡಿಸಿದ್ದಾರೆ. ದೊಡ್ಡ ನೀರಾವರಿ ಅಂದರೆ ಅದು ೧೦ ಸಾವಿರ ಎಕರೆ ಪ್ರದೇಶಗಳಿಂದ ಹಿಡಿದು ಹೆಚ್ಚಿಗೆ ಇದ್ದರೆ ಅದು ದೊಡ್ಡ ನೀರಾವರಿ ಎನಿಸುತ್ತದೆ. ೧೦ ಸಾವಿರದಿಂದ ೨ ಸಾವಿರದವರೆಗೆ ಇರುವುದು ಮಧ್ಯಮ ನೀರಾವರಿ ಎನಿಸುತ್ತದೆ. ಎರಡು ಸಾವಿರಕ್ಕಿಂತ ಕಡಿಮೆ ಇದ್ದರೆ ಅದು ಸಣ್ಣ ನೀರಾವರಿ ಎನಿಸುತ್ತದೆ.

ನಮ್ಮ ದೇಶಕ್ಕೆ ಸ್ವಾತಂತ್ರ್ಯ ಬಂದನಂತರ ಒಮ್ಮೆಗೇ ನಾವು ಬಹಳ ಯೋಜನೆಗಳನ್ನು ತೆಗೆದು ಕೊಂಡಿದ್ದೇವೆ. ದೊಡ್ಡ ದೊಡ್ಡ ಅಣೆಕಟ್ಟುಗಳನ್ನು ಕಟ್ಟಿಸಿದ್ದೇವೆ, ಆದರೆ ಕೆಲವು ಅಣೆಕಟ್ಟುಗಳ ಕೆಲಸವು ಅಪೂರ್ಣವಾಗಿ ಇದು ತನಕವೂ ಇದೆ. ಕೃಷ್ಣ ಯೋಜನೆಗೆ ೧೯೬೪ನೇ ಇಸವಿಯಲ್ಲಿ ದಿವಂಗತ ಮಾಜಿ ಪ್ರಧಾನಿಯವರಾದ ಲಾಲ್ ಬಹದ್ದೂರ್ ಶಾಸ್ತ್ರಿಯವರು ಅಡಿಗಲ್ಲನ್ನು ಹಾಕಿದ್ದರು, ಆದರೆ ದುರ್ದೈವವಶಾತ್ ೨೩ ವರ್ಷಗಳು ಸಂದರೂ ಇದುತನಕವೂ ಆ ಯೋಜನೆಯು ಪೂರ್ಣಗೊಂಡಿಲ್ಲ. ಇನ್ನೂ ಪೂರ್ಣಗೊಳ್ಳಬೇಕಾದರೆ, ಈಗ ಕಾರ್ಯಪ್ರವೃತ್ತರಾದರೆ ೧೫ ವರ್ಷಗಳು ಬೇಕಾಗಬಹುದು. ಇಷ್ಟೆಲ್ಲ ಹಣವನ್ನು ಅಲ್ಲಿ ಖರ್ಚು ಮಾಡಿಯೂ ಕೂಡ ಪ್ರತಿಫಲ ನಮಗೆ ಬಂದಿಲ್ಲ, ನಾನು ಹೇಳುವು ದಾದರೆ, ದೊಡ್ಡ ದೊಡ್ಡ ನೀರಾವರಿಗಳಿಗೆ ಆದ್ಯತೆಯನ್ನು ಕೊಟ್ಟು ನಿಧಾನ ಪ್ರವೃತ್ತಿಯಿಂದಾಗಿ ಅನಾನುಕೂಲತೆಗಳನ್ನು ಹೊಂದುವುದರ ಬದಲು, ಸಣ್ಣ ನೀರಾವರಿಗಳಿಗೆ ಹೆಚ್ಚಿನ ಒಂದು ಆದ್ಯತೆ ಯನ್ನು ಕೊಟ್ಟರೆ ಅನುಕೂಲವಾಗುತ್ತದೆ

ಫ್ರಾನ್ಸ್ ದೇಶದ ತಜ್ಞರು ಹೇಳಿದ್ದಾರೆ, ದೊಡ್ಡ ದೊಡ್ಡ ಉದ್ದಿಮೆಗಳಿಗಿಂತ ಸಣ್ಣ ಸಣ್ಣ ಉದ್ದಿಮೆಗಳು ಯಾವಾಗಲೂ ಹೆಚ್ಚು ಯಶಸ್ವಿಯಾಗುತ್ತವೆ ಎಂದು. ಹಾಗೆಯೇ ಸಣ್ಣ ನೀರಾವರಿ ಯೋಜನೆಗಳು ಬೇಗನೆ ಫಲ ಕೊಡುತ್ತವೆ. ನಾವುಗಳು ಎಷ್ಟೋ ಬಾರಿ, ಇಲ್ಲಿ ಹೇಳುತ್ತಾ ಇದ್ದೇವೆ, ಲಿಫ್ಟ್ ಇರಿಗೇಷನ್ ಮಹಾರಾಷ್ಟ್ರದಲ್ಲಿ ತುಂಬಾ ಚೆನ್ನಾಗಿ ಅಭಿವೃದ್ಧಿಗೆ ಕಾರಣವಾಗಿದೆ ಎಂದು. ಹೋದ ಸಲ ಇದಕ್ಕಾಗಿ ಕಾವೇರಿ ಮತ್ತು ಕೃಷ್ಣ ಬೇಸಿನ್ ಹೀಗೆ ಎರಡು ಕಾರ್ಪೊರೇಶನ್‌ಗಳನ್ನು ಮಾಡಿದ್ದೀರಿ. ಅದಕ್ಕಾಗಿ ಕಚೇರಿ, ಸಿಬ್ಬಂದಿ, ಇತ್ಯಾದಿಯಾಗಿ ವ್ಯವಸ್ಥೆಯೂ ಆಯಿತು, ವೆಚ್ಚವೂ ಆಯಿತು, ಆದರೆ ಸೂಕ್ತ ಪ್ರಯೋಜನ ಮಾತ್ರ ಕಂಡುಬಂದಿಲ್ಲ ಎಂದುನನಗನ್ನಿಸುತ್ತದೆ. ಇದು ಗುಡ್ಡ ಅಗೆದು ಇಲಿಯನ್ನು ಹುಡುಕಿದಂತಾಯಿತು ಎಂದು ಹೇಳಬಯಸುತ್ತೇನೆ. ಸಣ್ಣ ನೀರಾವರಿಗಳನ್ನು ಮಾಡುವುದರಿಂದಾಗಿ, ಸ್ವಲ್ಪ ಹಣದಲ್ಲಿ, ಸ್ವಲ್ಪ ದಿವಸಗಳಲ್ಲಿ, ಹೆಚ್ಚು ನೀರಾವರಿಯನ್ನು ಮಾಡಿಕೊಳ್ಳು ವುದಕ್ಕೆ ಅನುಕೂಲವಾಗುತ್ತದೆ ಸ್ವಲ್ಪವೇ ಹಣವನ್ನು ಖರ್ಚುಮಾಡಿ ಅಲ್ಪಾವಧಿಯಲ್ಲಿಯೇ ನೀರಾವರಿ ಸೌಲಭ್ಯಗಳನ್ನು ಪರಿಮಿತವಾಗಿ ನಾವು ಪಡೆದುಕೊಳ್ಳುವುದು ಸಾಧ್ಯವಾಗುತ್ತದೆ. ನಮ್ಮ ಕ್ಷೇತ್ರದಲ್ಲಿ ಮಮದಾಪುರ ಕೆರೆ ಎಂದು ಇದೆ. ಈಗ ಅದರಲ್ಲಿ ನೀರು ಇಲ್ಲ. ಅದು ಆದಿಲ್‌ಶಾಹಿ ಅರಸರ ಕಾಲದಲ್ಲಿ ಕಟ್ಟಿಸಿದಂತಹ ಒಂದು ಕೆರೆ. ಅಲ್ಲಿರುವ ಕೆರೆಯನ್ನು ಸರಿಯಾಗಿ ಇಟ್ಟುಕೊಂಡು ಅಲ್ಲಿಂದ ನೀರನ್ನು ಲಿಫ್ಟ್ ಮಾಡಿದರೆ, ನಾಳೆಯೇ ಆ ಭಾಗದ ಎಲ್ಲಾ ರೈತರಿಗೆ ಸಾಕಾಗುವಷ್ಟು ನೀರಾವರಿಯ ಸೌಲಭ್ಯ ದೊರೆಯುತ್ತದೆ, ಇದನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಇಂತಹ ೨-೩ ಕೆಲಸಗಳನ್ನು ಅಂದರೆ ಲಿಫ್ಟ್ ಇರಿಗೇಶನ್‌ನ್ನು ಬಜೆಟ್‌ನಲ್ಲಿ ಸೇರಿಸಿದ್ದರೂ ಕೂಡ ಇದು ಮುಳುಗಡೆ ಪ್ರದೇಶದಲ್ಲಿ ಬರುತ್ತದೆ ಎಂದು ಅಧಿಕಾರಿಗಳು ಹೇಳಿ ದೂರ ಮಾಡುತ್ತಾರೆ. ಇದು ಮುಳುಗಡೆ ಪ್ರದೇಶವಾಗಬೇಕಾದರೆ ಇನ್ನೂ ೧೫-೨೦ ವರ್ಷಗಳ ಕಾಲ ಬೇಕಾದೀತು. ಲಿಫ್ಟ್ ಇರಿಗೇಶನ್ ಸ್ಕೀಮುಗಳನ್ನು ಅಲ್ಲಿ ಮಾಡುವುದರಿಂದ ಯಾವ ತೊಂದರೆಯೂ ಇಲ್ಲ. ಮಾನ್ಯ ತಂಗಳ್‌ರವರು ಕೂಡ ಹೇಳಿದರು, ಅವರ ಕ್ಷೇತ್ರದ ಜನರು ತಮ್ಮ ಪಾಲಿನ ಹಣವನ್ನು ಕೂಡ ಕೊಡಲಿಕ್ಕೆ ಸಿದ್ಧರಾಗಿದ್ದಾರೆ, ಅವರಿಗೆ ಬ್ಯಾರೇಜ್‌ಗಳನ್ನು ಸೂಕ್ತ ಪ್ರದೇಶದಲ್ಲಿ ಹಾಕಿಸಿಕೊಡುವ ವ್ಯವಸ್ಥೆ ಮಾಡಬೇಕಾಗಿತ್ತು. ಆದರೆ ಇದು ತನಕವೂ ಮಾಡಲಿಲ್ಲ ಎಂದು ದೂರಿದ್ದಾರೆ. ಈ ಬ್ಯಾರೇಜ್ ಗಳನ್ನು ಮಾಡುವುದರಿಂದ ೬-೭ ಸಾವಿರ ಎಕರೆ ಪ್ರದೇಶಗಳಿಗೆ ನೀರಾವರಿ ಸೌಲಭ್ಯವಾಗುತ್ತದೆ. ಕಟ್ಟಿಸಿದವುಗಳನ್ನು ಕೂಡ ಮೂಲ ಅಣೆಕಟ್ಟು ಬಿಟ್ಟು ಬೇರೆ ಕಡೆ ಕಟ್ಟಿಸಿದ್ದಾರೆ, ತೂಬುಗಳು ಬಂದ ಮೇಲೆ ೧೦ ಕಿ.ಮೀ. ಗಳ ಅಂತರದಲ್ಲಿ ಕಟ್ಟೆಯನ್ನು ಕಟ್ಟಿಸಿದರೆ ಅದರಿಂದ ನೀರಿನ ತೇವಾಂಶ ಉಳಿಯು ತ್ತದೆ. ಆ ಪ್ರದೇಶದಲ್ಲಿನ ಬಾವಿಗಳಿಗೂ ನೀರು ದೊರೆಯುತ್ತದೆ ಕೆಲವು ಕೆಲಸಗಳು ನಿಧಾನವಾಗಿ ನಡೆದ ಕಾರಣ ಅದರ ವೆಚ್ಚಗಳು ೧೫ ಪರ್ಸೆಂಟ್ ಇದ್ದುದು ೩೦ ಪರ್ಸೆಂಟ ಗೆ ಹೆಚ್ಚಿಗೆ ಆಗಿದೆ ಎಂದು ತಿಳಿದು ಬಂದಿದೆ. ದೇವೇಗೌಡರು ನೀರಾವರಿಯ ಖಾತೆಯ ಉಕ್ಕಿನ ಮನುಷ್ಯರು. ಅವರು ಒಬ್ಬರೇ

ಆಸಕ್ತಿಯಿಂದ ಇದ್ದರೆ ಆಗುವುದಿಲ್ಲ, ಅವರ ಸಿಬ್ಬಂದಿ ಕೂಡ, ದಕ್ಷತೆಯಿಂದ, ಕಳಕಳಿಯಿಂದ ಕೆಲಸ ಮಾಡಬೇಕಾಗುತ್ತದೆ. ಇದು ಸಾಧ್ಯವಾದರೆ ನೀರಾವರಿ ಅಭಿವೃದ್ಧಿಯಾಗುವುದು.

ಹವಾಮಾಲಿನ್ಯವಾಗುವುದನ್ನು ತಡೆಗಟ್ಟುವಂತೆ ಜಲಮಾಲಿನ್ಯವಾಗುವುದನ್ನೂ ಸರಿಮಾಡಬೇಕು. ಗಂಗಾನದಿಯಲ್ಲಿ ಹೊಲಸಾಗಿದೆ ಎಂದು ಅದನ್ನು ಪರಿಶುದ್ಧಗೊಳಿಸುತ್ತಿದ್ದಾರೆ. ಆದರೆ ಅಧಿಕಾರಿಗಳು ಮನಸ್ಸು ಮಾಡಿದರೆ ಇದನ್ನು ಸರಿಮಾಡಬಹುದು. ಶ್ರೀ ದೇವೇಗೌಡರು ಮನಸ್ಸು ಕೊಟ್ಟು ಈ ಕೆಲಸವನ್ನು ಕೈಗೆತ್ತಿಕೊಳ್ಳಬೇಕೆಂದು ನಾನು ಹೇಳುತ್ತೇನೆ. ನಾವು ಕಟ್ಟಿದಂಥ ಯೋಜನೆಗಳು ಮರು ದಿವಸವೇ ಬಿದ್ದುಹೋಗುತ್ತವೆ. ಹೋದವರ್ಷ ನಾರಾಯಣಪುರ ಅಣೆಕಟ್ಟಿನಿಂದ ೧೦ ಕಿ. ಮೀ. ದೂರದಲ್ಲಿ ಎಡದಂಡೆ ಕಾಲುವೆ ಬಿರುಕು ಬಿಟ್ಟಿತು ಎಂದು ಗೊತ್ತಾಯಿತು ಹೀಗೆ ಏಕೆ ಆಗುತ್ತದೆ ಎಂಬುದನ್ನು ತಾವು ವಿಚಾರ ಮಾಡಬೇಕು. ಜಪಾನ್‌ರವರು ಬೈನಾಕ್ಯುಲರ್‌ನಿಂದ ವಾಚ್ ಮಾಡಿ ಹೆಸರು ಗಳಿಸುತ್ತಿದ್ದಾರೆ ಅವರು ಮಣ್ಣು ಹೊಯ್ದು ಹೊನ್ನು ಗಳಿಸಿದರೆ ನಾವು ಹೊನ್ನು ಹೊಯ್ದು ಮಣ್ಣು ಗಳಿಸುತ್ತಿದ್ದೇವೆ. ಎಲ್ಲ ಅಧಿಕಾರಿಗಳೂ ಕೆಟ್ಟವರು ಎಂದು ಹೇಳುವುದಿಲ್ಲ. ಕೆಳಗಡೆಗೆ ಬಂದಂತೆಲ್ಲ ದುಡ್ಡು ಕೊಟ್ಟು ಕೆಲಸಕ್ಕೆ ಲೈಸೆನ್ಸ್ ಪಡೆಯುವುದು ಜಾಸ್ತಿ ಇದೆ. ನೀವು ಸೇತುವೆಗಳನ್ನೇ ಮಾಡಿ, ಬಿಲ್ಡಿಂಗ್ಸ್‌ನ್ನೇ ಮಾಡಿ, ಮಾಡುವ ಸಮಯದಲ್ಲಿ ಅವುಗಳ ಆಯುಸ್ಸು ಇಷ್ಟು ವರ್ಷ ಎಂದು ಆಯುಸ್ಸು ಕಟ್ಟಿ. ಒಂದು ಪಕ್ಷ ಆ ಆಯುಸ್ಸಿನೊಳಗೇ ಬಿರುಕು ಬಿಟ್ಟರೆ ಸಂಬಂಧಪಟ್ಟ ಜೂನಿಯರ್ ಇಂಜಿನಿಯರ್, ಚೀಫ್ ಇಂಜಿನಿಯರ್‌ಗಳನ್ನು ಮನೆಗೆ ಕಳಿಸಿಬಿಡಿ ಇಲ್ಲವೇ ಇನ್ನೂ ಉಗ್ರವಾದ ಶಿಕ್ಷೆ ಕೊಡುವ ಕಾನೂನು ಈ ಸದನದಲ್ಲಿ ತನ್ನಿ. ನಮ್ಮ ಹೈವೇ ೧೩ರಲ್ಲಿ ಕಟ್ಟಿದ ಎಲ್ಲ ಬ್ರಿಡ್ಜಸ್ ಬಿದ್ದುಹೋಗುತ್ತಿವೆ. ಇದರ ಕಡೆಗೆ ಸೆಂಟ್ರಲ್ ಗವರ್ನ್‌ಮೆಂಟನ್ನು ತೋರುವುದು ದುರ್ದೈವದ ಸಂಗತಿ. ನಮ್ಮಲ್ಲಿ ಎಲ್ಲೆಲ್ಲಿ ಹಳ್ಳಗಳು, ಸಣ್ಣ ನದಿಗಳು ಹರಿಯುತ್ತಿವೆಯೋ ಅಲ್ಲೆಲ್ಲಾ ಬ್ಯಾರೇಜುಗಳನ್ನು ಕಟ್ಟಬೇಕು, ಒಂದು ಹನಿ ನೀರೂ ವೇಸ್ಟಾಗದಂತೆ ನೋಡಿಕೊಳ್ಳಬೇಕು. ಈಗ ನೀರಾವರಿ ಆಗುತ್ತಿರುವುದು ಕೇವಲ ೧೮ ಪರ್ಸೆಂಟ್ ಮಾತ್ರ. ನಮ್ಮ ಎಲ್ಲ ಯೋಜನೆಗಳೂ ಪೂರ್ಣವಾದರೆ ೪೦ ಪರ್ಸೆಂಟ್ ನೀರಾವರಿ ಆದಂತಾಗುತ್ತದೆ ಎಂದು ಮಂತ್ರಿಗಳು ಹೇಳಿದ್ದಾರೆ ಗಂಗಾ ಕಲ್ಯಾಣ ಯೋಜನೆಯನ್ನು ಎಫೆಕ್ಟೀವಾಗಿ ಇಂಪ್ಲಿಮೆಂಟ್ ಮಾಡಿಸಿ ರೈತರಿಗೆ ಸಹಾಯ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಆದೇ ಪಕ್ಕದ ರಾಜ್ಯಗಳಲ್ಲಿ ನೋಡಿ. ನಾನು ಕಳೆದ ಸಲ ಶ್ರೀಶೈಲಕ್ಕೆ ಹೋದಾಗ ನೋಡಿದೆ. ಎಲ್ಲಿ ನೋಡಿದರೂ ತೆಲುಗು ಗಂಗಾ ಯೋಜನೆಗೆ ಸಂಬಂಧಿಸಿದಂತೆ ಕಾಲುವೆ ತೋಡುವ ಕೆಲಸ ಶುರು ಮಾಡಿದ್ದಾರೆ. ಇದರ ಬಗ್ಗೆ ನಮ್ಮವರು ಸೀರಿಯಸ್ಸಾಗಿ ಯೋಜಿಸುತ್ತಲೇ ಇಲ್ಲ. ಕಾಲುವೆ ತೋಡುತ್ತಿದ್ದು, ಲ್ಯಾಂಡ್ ಅಕ್ವಿಜಿಷನ್ ಕಾರ್ಯವೇ ಪೂರ್ತಿ ಆಗಿಲ್ಲ. ಆದರೆ ಇಲ್ಲಿ ಬಜೆಟ್ ಪೇಪರಲ್ಲಿ ಮಾತ್ರ ಇಷ್ಟೊಂದು ಹಣ ಖರ್ಚಾಗಿದೆ ಎಂದು ನಾವು ನೋಡುತ್ತೇವೆ.

ಇನ್ನೊಂದು, ಅಪ್ಪರ್ ಕೃಷ್ಣಾ ಯೋಜನೆಯಿಂದ ಬಹಳ ಹಳ್ಳಿಗಳು ಮುಳುಗುತ್ತವೆ. ಆದರಲ್ಲೂ ಬಾಗಲಕೋಟೆ ಸುತ್ತಮುತ್ತ ೧೦೦ ಹಳ್ಳಿಗಳು ಮುಳುಗುತ್ತವೆ. ಅದು ಒಳ್ಳೆಯ ಫಲವತ್ತಾದ ಭೂಮಿ. ಬಿಜಾಪುರ ಜಿಲ್ಲೆಯೊಂದರಲ್ಲೇ ಲಕ್ಷಾಂತರ ಎಕರೆ ನೀರು ತುಂಬುತ್ತದೆ. ಈ ರೀತಿ ಭೂಮಿ ಕಳೆದುಕೊಳ್ಳುವವರಿಗೆ ಬೇಗನೆ ಹಣ ಕೊಡುವ ತೀರ್ಮಾನ ಮಾಡಬೇಕು. ಅಲ್ಲಿನ ಜನರು ಏನು ಹೇಳುತ್ತಾರೆಂದರೆ. ನಾವು ಏನಪ್ಪ ಮಾಡೋದು, ನಮ್ಮದೆಲ್ಲ ಮುಳುಗಿ ಹೋಗುತ್ತದಂತೆ, ಯಾವಾಗ ಆಗುತ್ತದೋ ಗೊತ್ತಿಲ್ಲ, ಅದಕ್ಕೇ ಬ್ಯಾಂಕಿನಿಂದ ಸಾಲ ತೆಗೆದುಕೊಂಡು ಬೇರೆ ಉದ್ಯೋಗ ಮಾಡುವ ಸ್ಥಿತಿ ತಲುಪಿದ್ದೇವೆ ಎನುತ್ತಾರೆ. ಮಾನ್ಯ ದೇವೇಗೌಡರು ರೈತರ ಮಕ್ಕಳಾದ್ದರಿಂದ ಎಲ್ಲಾ ಅಡ್ಡಿ ಆತಂಕಗಳನ್ನೂ ಬೇಗನೆ ನಿವಾರಿಸಬೇಕೆಂದು ಕೇಳಿಕೊಳ್ಳುತ್ತೇನೆ. ಯಾವುದೇ ಅಣೆಕಟ್ಟು ತೆಗೆದುಕೊಂಡರೂ ಅದನ್ನು ಪೂರ್ತಿ ಮಾಡಿ, ಆಮೇಲೆ ಬೇರೆ ಯೋಜನೆಗಳಿಗೆ ಕೈಇಡಿ. ಸುಮ್ಮನೆ ತಿರುಪತಿ ಚೌರ ಮಾಡಿದಂತೆ ಅಲ್ಲೊಂದು ಸ್ವಲ್ಪ ಇಲ್ಲೊಂದು ಸ್ವಲ್ಪ ಮಾಡಬೇಡಿ. ಕರ್ನಾಟಕ ಕನ್‌ಸ್ಟ್ರಕ್ಷನ್ ಕಂಪನಿ ಎಂದು ಮಾಡಿದ್ದೀರಿ. ಇಂಥ ಎಷ್ಟೋ ಕಾರ್ಪೊರೇಷನ್‌ಗಳು ಲಾಸ್‌ನಲ್ಲಿವೆ. ಆಂಧ್ರದ ಕಡೆಯಲ್ಲಿ ಇಂಥ ಕೆಲಸಗಳನ್ನು ಡಿಪಾರ್ಟ್‌ಮೆಂಟಿನವರೇ ಮಾಡಿಸುತ್ತಾರೆ. ಇಲ್ಲೂ ಡಿಪಾರ್ಟ್‌ಮೆಂಟಿನವರೇ ಮಾಡಿದರೆ ಭದ್ರತೆ ಬರುತ್ತದೆ. ಇಷ್ಟು ಹೇಳಲು ನನಗೆ ಅವಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಡಿ. ಎ. ಚಿನ್ನಪ್ಪ (ಕೊಡಗು).—ಮಾನ್ಯ ಅಧ್ಯಕ್ಷರೇ, ನೀರಾವರಿ ಇಲಾಖೆಯ ಬೇಡಿಕೆ ಮೇಲಿನ ಚರ್ಚೆಯಲ್ಲಿ ಭಾಗವಹಿಸಲು ನಾನು ಸಂತೋಷಪಡುತ್ತಾ ನೀರಾವರಿ ಇಲಾಖೆಯ ಬಗೆ

ಒಂದೆರಡು ಮಾತುಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಈಗ ಅಲ್ಲಿನ ಪರಿಸ್ಥಿತಿ ಏನಾಗಿದೆ ಎಂದರೆ ಮೂರ್‍ನಾಲ್ಕು ತಿಂಗಳಿಂದ ಕಂಟ್ರಾಕ್ಟರ್‍ಸ್ ಕೆಲಸವನ್ನು ನಿಲ್ಲಿಸಿದ್ದಾರೆ. ಟೆಂಡರ್ ಕರೆದರೂ ಕೂಡ ಅರ್ಜಿ ಹಾಕಲು ಯಾರೂ ಮುಂದೆ ಬರುತ್ತಿಲ್ಲ. ಇಲಾಖೆಯವರೇ ಕೆಲಸ ಮಾಡಬೇಕೆಂದು ಹೇಳುತ್ತಿದ್ದಾರೆ. ಈ ಪರಿಸ್ಥಿತಿಯಲ್ಲಿ ಲೋಕೋಪಯೋಗಿ ಇಲಾಖೆ ಯಾವುದೇ ಕೆಲಸವಿಲ್ಲದೆ ಸ್ಥಗಿತವಾಗಿ ನಿಂತಿದೆ. ಇರಿಗೇಷನ್ ಬಗ್ಗೆ ಕಳೆದ ವರ್ಷ ಮಾತನಾಡುತ್ತಾ ಹೇಳಿದ್ದೆ, ಮಲೆನಾಡಿಗೇ ಸೆಪರೇಟ್ ಸ್ಕೀಮ್ ಅನ್ನು ಮಾಡಬೇಕು, ಮಲೆನಾಡಿನ ಪರಿಸ್ಥಿತಿಯೇ ಬೇರೆ, ಬಯಲು ಸೀಮೆಯ ಪರಿಸ್ಥಿತಿಯೇ ಬೇರೆಯಾದ್ದರಿಂದ ಈ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳಬೇಕು ಎಂದು ಆಗಲಿ ಮಾಡುತ್ತೇವೆಂದು ಅವರೂ ಕೂಡ ಒಪ್ಪಿಕೊಂಡಿದ್ದರು ಆದರೆ ಇಲ್ಲಿಯವರೆಗೆ ಅದು ಆಗಿಲ್ಲ. ಮಲೆನಾಡಿನಲ್ಲಿ ನದಿಗಳು ಹರಿಯುತ್ತವೆ. ಅವಕ್ಕೆ ಸಣ್ಣ ಸಣ್ಣ ಅಣೆಕಟ್ಟುಗಳನ್ನು ಕಟ್ಟಿದರೆ ೧೦–೧೫ ಹೆಕ್ಟೇರ್‌ಗಳಿಗೆ ನೀರು ಸಿಗುತ್ತದೆ. ಮಲೆನಾಡಿನಲ್ಲಿದ್ದಂತಹ ನೀರು ನೇರವಾಗಿ ಬಯಲು ಸೀಮೆಗೆ ಬರುತ್ತದೆ. ಮಲೆನಾಡಿನವರಿಗೆ ಇದರಿಂದ ಪ್ರಯೋಜನವಾಗುತ್ತಿಲ್ಲ. ಅಲ್ಲಿ ಮಳೆ ಬೀಳುತ್ತದೆ, ಹಳ್ಳಗಳು ತುಂಬುತ್ತವೆ. ಬಯಲು ಸೀಮೆಗೆ ಬರುತ್ತದೆ. ಮಲೆನಾಡಿನ ನೀರಿನ ಉಪಯೋಗ ಸರಿಯಾಗಿ ಆಗುತ್ತಿಲ್ಲ ಸಣ್ಣ ಸಣ್ಣ ಕಟ್ಟೆಗಳನ್ನು ಹಾಕಿ ಮಲೆನಾಡಿನ ಜಮೀನಿಗೆ ನೀರನ್ನು ಒದಗಿಸಿಕೊಡಬೇಕು. ಇದು ಬಹಳ ಮುಖ್ಯವಾದುದು ಇನ್ನು ಮಲೆನಾಡಿನಲ್ಲಿ ಕೆರೆಗಳು ಬಹಳ ಕಡಿಮೆ ಇವೆ ಕೆರೆಗಳನ್ನು ಆಳವಾಗಿ ತೋಡಿದರೂ ಕೂಡ ನೀರು ಇಲ್ಲ ನೀರು ಇಲ್ಲದ ಜಾಗದಲ್ಲಿ ಇರಿಗೇಷನ್ ಇಲಾಖೆಯವರು ತೋಡಿರುವುದರಿಂದ ಕೆರೆಗಳು ಒಣಗಿ ಹೋಗಿವೆ. ಇದರ ಬಗ್ಗೆ ಹೆಚ್ಚಿನ ಗಮನಕೊಡಬೇಕೆಂದು ನಾನು ಮಂತ್ರಿಯವರಲ್ಲಿ ಕೇಳಿಕೊಳ್ಳುತ್ತೇನೆ. ನಾನು ಕೆಲವು ಅಂಕಿ ಅಂಶಗಳನ್ನು ಕೊಡುತ್ತೇನೆ. ನೀರಾವರಿಯಲ್ಲಿ ಎಂ. ಐ. ಪ್ಲಾನ್‌ನಲ್ಲಿ ೭೫ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೪೦ ಹೆಕ್ಟೇರ್ ಭೂಮಿಗೆ ನೀರಾವರಿ ಒದಗಿಸಿದ್ದಾರೆ, ಇದು ಸಾಲದು ಇನ್ನೂ ಹೆಚ್ಚಾಗಿ ಮಾಡಬೇಕು. ಹಾಗೂ ೧೦೩ ಟ್ರೈಬಲ್ ಸಬ್ ಪ್ಲಾನ್‌ನಲ್ಲಿ ೨೫೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ೫೦ ಹೆಕ್ಟೇರ್ ಭೂಮಿಗೆ ನೀರನ್ನು ಒದಗಿಸಿದ್ದಾರೆ, ಇದನ್ನು ಹೆಚ್ಚು ಮಾಡಿದರೆ ಪ್ರಯೋಜನವಾಗುತ್ತದೆ. ಒಣ ಭೂಮಿ ಇರತಕ್ಕಂತಹವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಇನ್ನು ರಸ್ತೆಗಳ ಬಗ್ಗೆ ಹೇಳುವುದಾದರೆ ಮಡಕೇರಿಯಿಂದ ತಲಕಾವೇರಿಗೆ ಹೋಗತಕ್ಕಂತಹ ರಸ್ತೆಗಳು ಬಹಳವಾಗಿ ಹಾಳಾಗಿವೆ ಆ ರಸ್ತೆಯನ್ನು ಸ್ಟೇಟ್ ಹೈವೇ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ತಲಕಾವೇರಿ ಜಾತ್ರೆಗೆ ಲಕ್ಷಾಂತರ ಜನ ಹೋಗುತ್ತಾರೆ, ಅಲ್ಲಿ ಸರಿಯಾದ ರಸ್ತೆ ಇಲ್ಲ. ಅಲ್ಲಿ ನಾಲ್ಕು ಬ್ರಿಡ್ಜ್ ಹಾಕಬೇಕಾಗುತ್ತದೆ. ಅದನ್ನು ಸಹ ಮಾಡಿಲ್ಲ. ನಾನು ಈ ಬಗ್ಗೆ ಮಾನ್ಯ ಮಂತ್ರಿಯವರನ್ನು ಮತ್ತು ಕಾರ್ಯದರ್ಶಿಯಾದ ಶ್ರೀ ರೆಡ್ಡಿಯವರನ್ನೂ ಪರ್ಸನಲ್ ಆಗಿ ಭೇಟಿ ಮಾಡಿ ಮನವಿಯನ್ನು ಕೊಟ್ಟಿದ್ದೇನೆ ಆದರೆ ಇದರ ಬಗ್ಗೆ ಗಮನ ಕೊಟ್ಟಿಲ್ಲ. ಇಂದು ಒದು ಪ್ರಸಿದ್ಧ ಯಾತ್ರಾ ಸ್ಥಳವಾಗಿದ್ದು ಇಲ್ಲಿಗೆ ಕರ್ನಾಟಕದಿಂದ, ತಮಿಳುನಾಡಿನಿಂದ ಯಾತ್ರಾರ್ಥಿಗಳು ಬರುತ್ತಾರೆ. ಅವರು ರಸ್ತೆಗಳಿಲ್ಲದೆ ಬಹಳ ಕಷ್ಟಪಡುತ್ತಿದ್ದಾರೆ. ರಸ್ತೆಗಳನ್ನು ಮತ್ತು ಬ್ರಿಡ್ಜ್ ಅನ್ನು ಮಾಡಿಕೊಡಬೇಕೆಂದು ನಾನು ತಮ್ಮಲ್ಲಿ ಕೇಳಿಕೊಳ್ಳುತ್ತೇನೆ. ಕೊಡಗಿನ ಬಹಳಷ್ಟು ರಸ್ತೆಗಳ ಬಗ್ಗೆ ಕಳೆದ ಬಡ್ಜೆಟ್‌ನಲ್ಲಿ ಬಂದಿದೆ. ಅದಕ್ಕೆ ಮುಂಚಿನ ಬಡ್ಜೆಟ್‌ನಲ್ಲೂ ಕೂಡ ಬಂದಿದೆ. ಆದರೆ ಇಲ್ಲಿಯವರೆಗೆ ಆ ರಸ್ತೆಗಳ ಕೆಲಸವನ್ನು ಪ್ರಾರಂಭ ಮಾಡಿಲ್ಲ. ಸುಮ್ಮನೆ ಬಡ್ಜೆಟ್ಟಿನಲ್ಲಿಟ್ಟರೆ ಪ್ರಯೋಜನವಾಗಲಾರದು, ಜನರಿಗೆ ಅನುಕೂಲ ಮಾಡಿಕೊಡಬೇಕು. ಬಡ್ಜೆಟ್ಟಿನಲ್ಲಿ ಬಂದಿತ್ತು ಏಕೆ ಆಗಲಿಲ್ಲವೆಂದು ಜನರು ಕೇಳುತ್ತಿದ್ದಾರೆ. ಇದಕ್ಕೆ ಶಾಸಕರು ಜವಾಬು ಕೊಡಬೇಕು. ಈ ರೀತಿ ಪರಿಸ್ಥಿತಿ ಇದ್ದಾಗ ಬಹಳಷ್ಟು ಕಿಷ್ಕಿಂದೆಗೆ ಸಿಕ್ಕಿಹಾಕಿಕೊಳ್ಳುತ್ತೇವೆ. ಕೊಡಗಿನಲ್ಲಿ ಮೂರು ತಾಲ್ಲೂಕುಗಳು ಇದ್ದು ಬಹಳಷ್ಟು ಸಣ್ಣ ಡಿಸ್ಟ್ರಿಕ್ ಆಗಿರುವುದರಿಂದ ಮೂರು ತಾಲ್ಲೂಕಿಗೂ ಸರಿಸಮಾನವಾದ ಹಣವನ್ನು ಹಂಚಬೇಕು ಮತ್ತು ಸರಿಸಮಾನವಾದ ಕೆಲಸಗಳನ್ನು ತೆಗೆದುಕೊಳ್ಳಬೇಕೆಂದು ನಾನು ವಿನಂತಿಸಿಕೊಳ್ಳುತ್ತೇನೆ. ಹಿಂದಿನ ಮೂರು ವರ್ಷಗಳಲ್ಲಿ ಸೋಮವಾರಪೇಟೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಸೋಮವಾರ ಪೇಟೆಯಲ್ಲಿ೧೯೮೪–೮೫ರಲ್ಲಿ ೪೨ ರಸ್ತೆಗಳು, ವೀರಾಜಪೇಟೆಗೆ ೨೩ ರಸ್ತೆಗಳು, ಮಡಿಕೇರಿಗೆ ೨೨ ರಸ್ತೆಗಳು ೧೯೮೫–೮೬ರಲ್ಲಿ ಸೋಮವಾರಪೇಟೆಗೆ ೫೭ ರಸ್ತೆಗಳು, ಮಡಿಕೇರಿಗೆ ೨೧ರಸ್ತೆಗಳು ವೀರಾಜಪೇಟೆಗೆ ೨೧ ರಸ್ತೆಗಳು ೧೯೮೬–೮೭ ರಲ್ಲಿಸುಮಾರು ೪೭ ರಸ್ತೆಗಳು, ಮಡಿಕೇರಿಗೆ ೨೫ ರಸ್ತೆಗಳು, ವೀರಾಜಪೇಟೆಗೆ ೨೦ ರಸ್ತೆಗಳು. ಅದೇ ರೀತಿಯಲ್ಲಿ ಸೇತುವೆಗಳಲ್ಲಿ ಕೂಡಾ ಸೋಮವಾರ ಪೇಟೆಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟಿದ್ದಾರೆ. ಸೋಮವಾರಪೇಟೆ ಒಂದೇ ಅಲ್ಲ ಬೆಳೆ ಬೆಳೆಯುತಕ್ಕಂಥದ್ದು. ಮಡಿಕೇರಿ ಮತ್ತು

ವೀರಾಜಪೇಟೆ ಜನರೂ ಕೂಡಾ ಅಷ್ಟೇ ಹಕ್ಕುದಾರರು. ಅವರು ಇದನ್ನು ಮನಗಂಡು ಭಿನ್ನಭೇದ ಮಾಡಬಾರದು ಎಂದು ನಾನು ಅವರಲ್ಲಿ ವಿನಂತಿಸಿಕೊಳ್ಳುತ್ತೇನೆ. ಈ ರಸ್ತೆಗಳಲ್ಲಿ ೨೩ ರಸ್ತೆಗಳನ್ನು ಅವರು ಪ್ರಾರಂಭ ಮಾಡಿ ಅದರಲ್ಲಿ ೧೨.೮೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಿಕ್ಕೆ ಕೊಟ್ಟರೆ ಅದರಲ್ಲಿ ಕೇವಲ ೫ ಲಕ್ಷ ಮಾತ್ರ ಅವರು ಖರ್ಚು ಮಾಡಿದ್ದಾರೆ. ಸೇತುವೆಗಳಲ್ಲಿ ೪ ಸೇತುವೆಗಳನ್ನು ಪ್ರಾರಂಭ ಮಾಡಿ ೧೨.೯೦ ಲಕ್ಷ ಇದ್ದರೂ ಅದರಲ್ಲಿ ೪.೭೪ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದಾರೆ. ಕೆರೆಗಳನ್ನು ೩೪ ಎಂದು ಲಿಸ್ಟನ್ನು ಕೊಟ್ಟಿದ್ದಾರೆ. ಅದರಲ್ಲಿ ೨ ಕೆರೆ ಮಾತ್ರ ಕಮೆನ್ಸ್ ಮಾಡಿದ್ದಾರೆ. ಅದಕ್ಕೆ ೧.೧೦ ಲಕ್ಷ ಇದ್ದರೆ ಅದರಲ್ಲಿ ಹತ್ತು ಸಾವಿರ ರೂಪಾಯಿ ಮಾತ್ರ ಖರ್ಚು ಮಾಡಿದ್ದಾರೆ. ಈ ಪರಿಸ್ಥಿತಿಯನ್ನು ನಾವು ನೋಡಿದಾಗ ಎಷ್ಟರ ಮಟ್ಟಿಗೆ ಈ ಕಾರ್ಯವನ್ನು ನಡೆಸಲಿಕ್ಕೆ ಸಾಧ್ಯತೆ ಆಗುತ್ತದೆ ಎಂಬುದನ್ನು ನಾವು ಯೋಚಿಸ ಬೇಕಾಗುತ್ತದೆ. ಭಿನ್ನಭಾವವನ್ನು ಮಾಡಬಾರದು ಎಂದು ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿ ಕೊಳ್ಳುತ್ತೇನೆ. ಹಿಂದೆ ಎಷ್ಟು ಸ್ಯಾಂಕ್ಷನ್ ಆಗಿತ್ತು, ಅದಕ್ಕೆ ಆದ್ಯತೆ ಕೊಟ್ಟು ಪೂರೈಸಬೇಕು ಎಂದು ನಾನು ಕೇಳಿಕೊಳ್ಳುತ್ತೇನೆ. ಈಗ ಒಂದು ಪರಿಸ್ಥಿತಿ ಉದ್ಭವವಾಗಿದೆ. ಈಗಾಗಲೇ ಕೆಲವಷ್ಟು ಕೆಲಸಗಳನ್ನು ಅಂದರೆ ಡೆವಲಪ್‌ಮೆಂಟ್ ಕೆಲಸ ಏನು ಇದೆ ಅದನ್ನು ಜಿಲ್ಲಾ ಪರಿಷತ್ತಿಗೆ ವಹಿಸತಕ್ಕಂಥ ಒಂದು ಸಂದರ್ಭ ಬಂದಿದೆ. ಅದನ್ನು ವಹಿಸುತ್ತಾರೆ. ಜಿಲ್ಲಾ ಪರಿಷತ್ತಿಗೆ ಕೊಡತಕ್ಕಂಥ ಸಂದರ್ಭದಲ್ಲಿ ಹಣವನ್ನು ಜಿಲ್ಲಾ ಪರಿಷತ್ತಿಗೆ ಯಾವ ರೀತಿ ಟ್ರಾನ್ಸ್‌ಫರ್ ಮಾಡುತ್ತಾರೆ ಎಂಬುದನ್ನು ನಾವು ವಿಚಾರ ಮಾಡಿ ನೋಡಬೇಕಾಗುತ್ತದೆ. ಏಕೆಂದರೆ ಆ ಹಣ ಎಲ್ಲಾ ಅಲ್ಲಿಗೆ ಹೋಗಬೇಕಾದರೆ ಬಹಳ ವ್ಯವಸ್ಥೆ ಆಗಲಿಕ್ಕೆ ಇದೆ. ಜಿಲ್ಲಾಪರಿಷತ್ತುಗಳಲ್ಲಿ ಇಂಥ ಡೆವಲಪ್‌ಮೆಂಟ್ ವರ್ಕ್ಸ್ ಏನಾಗುತ್ತವೆ ಎಂದರೆ ಅಲ್ಲಿ ಅವರು ಆದ್ಯತೆ ಕೊಡುವುದಕ್ಕೆ ಆಗುವುದಿಲ್ಲ ಅಲ್ಲಿ ಇಂಜಿನಿಯರುಗಳು ಇರುವುದಿಲ್ಲ, ಇಂಜಿನಿಯರುಗಳು ಇಲ್ಲದೆ ಆಗುವುದಿಲ್ಲ. ಮತ್ತೇ ಅವರಿಗೆ ಲಿಮಿಟ್ ಕೊಟ್ಟಿರುತ್ತಾರೆ, ಇಷ್ಟು ಲಕ್ಷಕ್ಕೆ ಇಷ್ಟು ಸಾವಿರ ಎಂದು ಎಸ್ಟಿಮೇಟ್ ಮಾಡಬೇಕಾಗುತ್ತದೆ. ಆಗ ಪಿ.ಡಬ್ಲ್ಯೂ. ಡಿ. ಗೆ ಸರ್ಕಾರಕ್ಕೆ ಬರುತ್ತದೆ. ಆಗ ಎಷ್ಟರಮಟ್ಟಿಗೆ ಸ್ಯಾಂಕ್ಷನ್ ಆಗಲಿಕ್ಕೆ ಸಾಧ್ಯತೆ ಇದೆ ಎನ್ನುವುದನ್ನು ನೋಡಬೇಕಾಗುತ್ತದೆ, ಈ ದಿಕ್ಕಿನಲ್ಲಿ ಒಳ್ಳೆಯ ಪ್ರಯತ್ನವನ್ನು ಸರ್ಕಾರ ಮಾಡಬೇಕು. ಜಿಲ್ಲಾ ಪರಿಷತ್ತಿನಲ್ಲಿ ಆದ್ಯತೆಯ ಮೇಲೆ ಕೆಲಸ ಮಾಡಲಿಕ್ಕೆ ಕಷ್ಟವಾಗುತ್ತದೆ. ಆಗ ಎಲ್ಲಾ ಕೆಲಸಗಳು ಕುಂಠಿತಗೊಳ್ಳುತ್ತವೆ. ಎಲ್ಲಾ ಎಸ್ಟಿಮೇಟ್ ಆಗಿ, ಜಿಲ್ಲಾ ಪರಿಷತ್ತಿಗೆ ಅಪ್ರೂವಲ್ ಆಗಿ ಬರತಕ್ಕಂಥದ್ದು ಎಂದರೆ ಹೆಚ್ಚು ವರ್ಷಗಳೇ ಹಿಡಿಯುತ್ತವೆ. ಆದ್ದರಿಂದ ಇದರ ಬಗ್ಗೆ ಹೆಚ್ಚಾಗಿ ಸರ್ಕಾರ ಗಮನ ಕೊಡಬೇಕು. ಜಿಲ್ಲಾಪರಿಷತ್ತಿನಿಂದ ಜನತೆಗೇ ಅಧಿಕಾರವನ್ನು ಕೊಡುವುದಕ್ಕೆ ಮಾಡಿದ್ದೀರಿ. ಆ ಅಧಿಕಾರವನ್ನು ಅವರು ನಡೆಸಬೇಕಾದರೆ ಸರ್ಕಾರ ಯೋಜನೆಯನ್ನು ಏತಕ್ಕೆ ಮಾಡಲಿಕ್ಕೆ ಸಾಧ್ಯ ಇಲ್ಲ. ಇದರ ಬಗ್ಗೆ ಸರ್ಕಾರ ಗಮನ ಕೊಡದಿದ್ದರೆ ಜಿಲ್ಲಾ ಪರಿಷತ್ತು ಯಶಸ್ವಿಯಾಗಲಿಕ್ಕೆ ಸಾಧ್ಯ ಇಲ್ಲ. ಮಂಡಲ ಪಂಚಾಯಿತಿಗಳು ಯಶಸ್ವಿಯಾಗಲಿಕ್ಕೆ ಸಾಧ್ಯ ಇಲ್ಲ ಎಂದು ನಾನು ಹೇಳಬಯಸುತ್ತೇನೆ. ನನಗೆ ಇವತ್ತು ೪-೬ ಮಾತುಗಳನ್ನಾಡಲು ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಶ್ರೀ ಶಿವಲಿಂಗೇಗೌಡ ಗೈರುಹಾಜರಿ,

ಶ್ರೀ ಡಿ. ಜಿ. ಬಸವನ ಗೌಡ (ಹೊನ್ನಾಳಿ).—ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಲೋಕೋಪಯೋಗಿ ಇಲಾಖೆಯ ಮಂತ್ರಿಗಳು ಮಂಡಿಸಿರತಕ್ಕ ಬೇಡಿಕೆಗಳಿಗೆ ನನ್ನ ಬೆಂಬಲವನ್ನು ವ್ಯಕ್ತಪಡಿಸುತ್ತಾ, ಕೆಲವು ಮಾತುಗಳನ್ನು ಹೇಳಲು ಎದ್ದು ನಿಂತಿದ್ದೇನೆ.

ಅಧ್ಯಕ್ಷರು.—ನೇರವಾಗಿ ವಿಷಯಕ್ಕೆ ಬನ್ನಿ.

ಶ್ರೀ ಡಿ. ಜಿ. ಬಸವನ ಗೌಡ.—ಸ್ವಾಮಿ, ಈ ಲೋಕೋಪಯೋಗಿ ಇಲಾಖೆಯು ನಮ್ಮ ರಾಜ್ಯದ ಅಭಿವೃದ್ಧಿಯ ಸಂಕೇತ ಎಷ್ಟು ಒಳ್ಳೊಳ್ಳೆಯ ಕೆಲಸಗಳನ್ನು ಈ ಇಲಾಖೆಯು ಮಾಡುತ್ತಿದೆ, ಇದರಿಂದ ಸರ್ಕಾರಕ್ಕೆ ಮತ್ತು ನಮ್ಮ ಪಕ್ಷಕ್ಕೆ ಅಷ್ಟು ಒಳ್ಳೆಯ ಹೆಸರು ಬರುತ್ತದೆ, ಈ ಇಲಾಖೆಯು ಒಬ್ಬ ಒಳ್ಳೆಯ, ಸಮರ್ಥ ವ್ಯಕ್ತಿಯ ಕೈಗೆ ಸಿಕ್ಕಿದೆ. ಕಳೆದ ನಾಲ್ಕು ವರ್ಷಗಳಿಂದ ಅನೇಕ ಕೆಲಸ ಕಾರ್ಯ ಗಳನ್ನು ಗ್ರಾಮಾಂತರ ಪ್ರದೇಶದಲ್ಲಿ ಮತ್ತು ಪಟ್ಟಣಗಳಲ್ಲಿ, ಈ ಎಲ್ಲಾ ಕಡೆ ಮಾಡಿರತಕ್ಕದ್ದನ್ನು ನಾವು ನೋಡುತ್ತೇವೆ. ಮುಖ್ಯವಾಗಿ ಶ್ರೀ ಮಾನ್ ದೇವೇಗೌಡರು ಹೆಚ್ಚಿನ ವಿಷಯಗಳನ್ನು ದೊಡ್ಡ

ನೀರಾವರಿ ಹಾಗೂ ಸಣ್ಣ ನೀರಾವರಿ ಬಗ್ಗೆ ಹೇಳಿದ್ದಾರೆ. ಗ್ರಾಮಾಂತರ ಪ್ರದೇಶಗಳಲ್ಲಿ ಕೆಲಸಗಳನ್ನು ಮಾಡದೆ, ಅದನ್ನು ಬರೀ ಬಾಯಿ ಮಾತಿನ ಮೂಲಕ ಹೇಳಿ ನಮ್ಮನ್ನು ತೃಪ್ತಿ ಪಡಿಸದೆ ಕಾರ್ಯಗತ ಮಾಡಬೇಕೆಂದು ಅವರನ್ನು ತಮ್ಮ ಮೂಲಕ ಕೇಳುವುದಕ್ಕೆ ಇಚ್ಛೆ ಪಡುತ್ತೇನೆ. ಅದರಲ್ಲೂ ಹೆಚ್ಚಿನ ದಾಗಿ ತಮ್ಮ ತಾಲ್ಲೂಕಿಗೆ ಸಂಬಂಧ ಪಟ್ಟಂತೆ ಅವರು ಕಳೆದ ಮೂರು ವರ್ಷಗಳಿಂದ ಏಳನೇ ಪಂಚ ವಾರ್ಷಿಕ ಯೋಜನೆಯಲ್ಲಿ ಕೆಲಸ ಕೈ ಗೊಳ್ಳುತ್ತಾರೆ ಎಷ್ಟು ಅಚ್ಚುಕಟ್ಟು ಪ್ರಾಧಿಕಾರದ ಕೆಲಸ ಪೂರೈಸಿದ್ದಾರೋ ಅಷ್ಟನ್ನೂ ಹೇಳಿದ್ದಾರೆ. ಇದು ೭-೮ ತಾಲ್ಲೂಕುಗಳ ಯೋಜನಾ ಕಾರ್ಯವಾಗಿರುವುದರಿಂದ ಈ ಕೆಲಸಗಳನ್ನು ಅವರು ಗೊತ್ತಾದ ಅವಧಿಯಲ್ಲಿ ಮಾಡಿರುವುದಕ್ಕಾಗಿ ನಾವು ಅವರಿಗೆ ಋಣಿಯಾಗಿದ್ದೇವೆ ಎಂದು ತಮ್ಮ ಮೂಲಕ ಹೇಳ ಬಯಸುತ್ತೇನೆ. ನಮ್ಮ ಭದ್ರಾ ಅಚ್ಚುಕಟ್ಟು ಪ್ರಾಧಿಕಾರದಲ್ಲಿ ೩-೪ ಹಳ್ಳಿಗಳಿಗೆ ಇದು ಪ್ರಯೋಜನಕಾರಿ ಆಗಿದೆ. ಆದರೆ ಆಯ ವ್ಯಯದಲ್ಲಿ ಈ ಪ್ರಾಧಿಕಾರಕ್ಕೆ ಸರ್ಕಾರ ಕೊಟ್ಟಿರತಕ್ಕ ಹಣ ತೀರಾ ಕಡಿಮೆ. ಆದುದರಿಂದ ಹೆಚ್ಚು ಹೆಚ್ಚಾಗಿ ಹಣವನ್ನು ಈ ಪ್ರಾಧಿಕಾರಕ್ಕೆ ಕೊಡಬೇಕು ಎಂದು ಕೇಳುತ್ತೇನೆ. ಏಕೆಂದರೆ ನಮ್ಮ ಭದ್ರಾ ಪ್ರಾಜೆಕ್ಟ್ ಕೆಳಗಡೆ ಸುಮಾರು ೪ ಸಕ್ಕರೆ ಕಾರ್ಖಾನೆಗಳು ಬರುತ್ತವೆ. ಈ ಕಾರ್ಖಾನೆಯಿಂದ ಸರ್ಕಾರಕ್ಕೆ ಹೆಚ್ಚಿನ ವರಮಾನ ಬರುತ್ತದೆ. ಹೀಗೆ ಇದ್ದು ವಾಹನಗಳ ಸಂಚಾರಕ್ಕೆ ಸರಿಯಾದ ರಸ್ತೆಗಳು ಇಲ್ಲದೆ ತುಂಬಾ ತೊಂದರೆ ಆಗಿದೆ. ಇದರ ಬಗ್ಗೆ ತೀವ್ರವಾದ ಗಮನ ಹರಿಸಬೇಕು ಎಂದು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳನ್ನು ಕೇಳಿ ಕೊಳ್ಳುತ್ತೇನೆ. ಇದೇ ಪ್ರಾಧಿಕಾರಕ್ಕೆ ನಮ್ಮ ತಾಲ್ಲೂಕಿನಲ್ಲಿ ಸುಮಾರು ವರ್ಷಗಳಿಂದ ಅಂದಾಜು ತಯಾರಾಗಿದೆ. ಸರ್ಕಾರ ಬಜೆಟ್‌ನಲ್ಲಿ ಸರಿಯಾಗಿ ಮಂಜೂರಾತಿ ನೀಡಿಲ್ಲ, ಮಂಜೂರಾತಿ ಆಗದೆ ೩-೪ ವರ್ಷಗಳಾಗಿವೆ. ಆದುದರಿಂದ ಕೆಲಸಗಳು ನಿಂತು ಹೋಗಿವೆ. ನಮ್ಮ ಹೊನ್ನಾಳಿ ತಾಲ್ಲೂಕಿನ ದೇವನಹಳ್ಳಿ ಎಂಬಲ್ಲಿ ನೀರಾವರಿ ಯೋಜನೆಗಳಿಗೆ ಆದಷ್ಟು ಜಾಗ್ರತೆಯಾಗಿ ತುಂಗಭದ್ರಾ ನದಿಯ ನೀರನ್ನು ಎತ್ತಿ ಕಾರ್ಯಗತ ಮಾಡತಕ್ಕ ಯೋಜನೆಗಳನ್ನು ತೀವ್ರವಾಗಿ ಮಾಡಿದರೆ ಜನರು ತಮಗೆ, ಸರ್ಕಾರಕ್ಕೆ ಋಣಿಯಾಗಿರುತ್ತಾರೆ. ಇದೇ ಪ್ರಾಧಿಕಾರಕ್ಕೆ ಭದ್ರಾ ಯೋಜನೆ ಬಗ್ಗೆ ಕೇಳಿದೆ. ಬೇರೆ ಯೋಜನೆ ಅಂದರೆ, ಕೆ. ಆರ್. ಎಸ್. ಮತ್ತು ತುಂಗಭದ್ರಾ ಯೋಜನೆಗಳಿಗೆ ನೀಡಿದಂತೆ ರಿಪೇರಿ ಮತ್ತು ನವೀಕರಣ ಕಾರ್ಯಕ್ಕೆ ಹೆಚ್ಚಿನ ದುಡ್ಡನ್ನು ಒದಗಿಸಿ ಇದಕ್ಕೆ ಏಕೆ ಕಡಿಮೆ ಹಣವನ್ನು ಕೊಟ್ಟಿದ್ದೀರಿ ? ಈ ಎಲ್ಲಾ ಕೆಲಸ ಕಾರ್ಯಗಳಿಗೆ ಸಮನಾಗಿ ದುಡ್ಡನ್ನು ಸರಿದೂಗಿಸ ಬೇಕೆಂದೂ, ಕೆಲಸ ಕಾರ್ಯಗಳನ್ನು ಬೇಗನೆ ಮಾಡಬೇಕೆಂದೂ ತಮ್ಮ ಮುಖಾಂತರ ಅವರನ್ನು ಕೇಳಿ ಕೊಳ್ಳುತ್ತೇನೆ. ಈಗ ನಮ್ಮ ರಾಜ್ಯದಲ್ಲಿ ರಾಷ್ಟ್ರೀಯ ಹೆದ್ದಾರಿಗಳು ಅನೇಕವು ಇವೆ. ಸುಮಾರು ವರ್ಷಗಳಿಂದ ನಮ್ಮ ರಾಜ್ಯ ಸರ್ಕಾರದಲ್ಲಿ ಆಗದೇ ಇರುವ ರಾಷ್ಟ್ರೀಯ ಹೆದ್ದಾರಿಗಳ ಬೇಡಿಕೆ ಪಟ್ಟಿಯನ್ನು ಕೇಂದ್ರ ಸರ್ಕಾರದ ಮುಂದೆ ಇಟ್ಟಿದ್ದಾರೆ. ಇದು ಒಂದೂ ಕಾರ್ಯಗತ ಆಗಿಲ್ಲ. ನಮ್ಮ ರಾಜ್ಯದಲ್ಲಿ ಸುಮಾರು ೯ ಸಾವಿರ ಕಿಲೋ ಮೀಟರ್ ಬೇಡಿಕೆ ಇದೆ ಎಂದು ಕಾಣುತ್ತದೆ ೩,೮೦೦ ಕಿಲೋ ಮೀಟರ್‌ನಲ್ಲಿ ೯೬೦ ಕಿಲೋ ಮೀಟರ್ ಮಾತ್ರ ಈಗ ಆಗಿದೆ. ಬೇಡಿಕೆಯನ್ನು ಸಲ್ಲಿಸಿರುವುದು ಸುಮಾರು ೩,೯೦೦ ಕಿಲೋ ಮೀಟರ್‌ಗೆ. ಇದನ್ನು ಕೇಂದ್ರ ಸರ್ಕಾರಕ್ಕೆ ವಹಿಸಿಕೊಳ್ಳಬೇಕು. ಸುಮಾರು ೧೧ ರಾಷ್ಟ್ರೀಯ ಹೆದ್ದಾರಿಗಳು ಆಗ ಬೇಕಾಗಿರುವ ಈ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಡ ತಂದು ಪ್ರಾಂತೀಯ ಹೆದ್ದಾರಿಗಳನ್ನು, ರಾಷ್ಟ್ರೀಯ ಹೆದ್ದಾರಿಗಳನ್ನಾಗಿ ಮಾಡಿದರೆ ವಾಹನಗಳ ಸಂಚಾರ, ಹೆಚ್ಚು ಒತ್ತಡವಿಲ್ಲದೆ ಅನುಕೂಲವಾಗುತ್ತದೆ. ಮಾನ್ಯ ಮಂತ್ರಿಗಳು ನಮ್ಮ ರಾಜ್ಯದ ಬೇಡಿಕೆಯನ್ನು ಕೇಂದ್ರ ಸರ್ಕಾರದ ಮುಂದೆ ತಂದರೆ, ವಾಹನಗಳ ಸಂಚಾರಕ್ಕೆ ಸುಗಮ ದಾರಿಯಾಗುತ್ತದೆ. ಇದರಿಂದ ನಮ್ಮ ರಾಜ್ಯಕ್ಕೂ ಒಳ್ಳೆಯ ಹೆಸರು ಬರುತ್ತದೆ ಎಂದು ಹೇಳ ಬಯಸುತ್ತೇನೆ ಹಾಗೂ ತಾವು ನನಗೆ ಕೊಟ್ಟ ಸಮಯಕ್ಕಿಂತ ಮುಂಚಿತವಾಗಿ ನನ್ನ ಕೆಲವು ಮಾತುಗಳನ್ನು ಮುಗಿಸುತ್ತಿದ್ದೇನೆ ಮತ್ತು ತಮಗೆ ವಂದನೆಯನ್ನು ಸಲ್ಲಿಸುತ್ತಿದ್ದೇನೆ.

† ಶ್ರೀ ಎಸ್. ಜಿ. ನಂಜಯ್ಯನ ಮಠ (ಗುಳೇದ ಗುಡ್ಡ ಕ್ಷೇತ್ರ) ಅಧ್ಯಕ್ಷರೇ, ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆಯಲ್ಲಿ ರಾಜ್ಯ ಸರ್ಕಾರ ಯೋಜನೆಗಳಿಗೆ ತೊಡಗಿಸಿರುವಂತಹ ಹಣದ ಬಗ್ಗೆ ಈ ಒಂದು ಮುಂಗಡ ಪತ್ರದಲ್ಲಿ ಕೊಟ್ಟಿರತಕ್ಕಂಥ ಪ್ರಾಧಾನ್ಯತೆಯನ್ನು ಗಮನಿಸಿ ಯಾವ ಒಂದು ಇಲಾಖೆಗೆ ಹೆಚ್ಚಿನ ಪ್ರಾಮುಖ್ಯತೆ ಕೊಡುತ್ತೇವೆ ಮತ್ತು ಭಾರತದ ಬೆನ್ನೆಲುಬು ಆಗಿರುವಂತಹ ರೈತನ ನೀರಾವರಿಗೆ ಹೆಚ್ಚಿನ ಆದ್ಯತೆಯನ್ನು ಕೊಡುತ್ತೇವೆಂಬ ಮಾತನ್ನು ಹೇಳಿ ಅಧಿಕಾರಕ್ಕೆ ಸರ್ಕಾರ ಬಂದಿತ್ತೋ, ಆ ಮೂಲ ಮಾತನ್ನು ಮರೆತು ಇವತ್ತು ತಂದಿರತಕ್ಕ ತನ್ನ ಕಳೆಪೆ ರೀತಿಯಾದಂತಹ ಆಯ

ವ್ಯಯವನ್ನು ವಿರೋಧಿಸುತ್ತೇನೆ. ಇದರಲ್ಲಿರತಕ್ಕ ಅಂಕಿ ಸಂಖ್ಯೆಗಳನ್ನು ಕುರಿತು ಹಲವಾರು ವಿಷಯಂಗಳನ್ನು ಹಿರಿಯ ಸದಸ್ಯರು ಹೇಳಿದ್ದಾರೆ. ನಾನೀಗ ವಿಶೇಷವಾಗಿ ನನ್ನ ಜಿಲ್ಲೆಗೆ ಸಂಬಂಧಪಟ್ಟ ಅದರಲ್ಲೂ ಮುಖ್ಯವಾಗಿ ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟ ಕೆಲವೊಂದು ವಿಷಯಗಳನ್ನು ತಮ್ಮ ಮೂಲಕ ಅವರ ಗಮನಕ್ಕೆ ತರಲು ಇಷ್ಟ ಪಡುತ್ತೇನೆ. ಈ ಒಂದು ಮುಂಗಡ ಪತ್ರದಲ್ಲಿ ನನ್ನ ಜಿಲ್ಲೆಗೆ ಸಂಬಂಧಿಸಿದಂತಹ ಯೋಜನೆಗಳಿಗೆ ತೊಡಗಿಸಿರುವಂತಹ ಹಣವನ್ನು ಮತ್ತು ನಿಜವಾದ ಪರಿಸ್ಥಿತಿಯನ್ನು ನೋಡಿದರೆ ನಿಜವಾಗಿಯೂ ಖೇದವಾಗುತ್ತದೆ. ಹೈದರಬಾದ್ ಕರ್ನಾಟಕ, ಬಾಂಬೆ ಕರ್ನಾಟಕ ಪ್ರದೇಶಗಳಿಗೆ ಬಹುಶಃ ಈ ಒಂದು ಯೋಜನೆಗಳನ್ನು ಅಳವಡಿಸಿಕೊಂಡಿರುವಂತಹ ವಿಷಯವನ್ನಾಗಲೀ ಅದಕ್ಕೆ ಒದಗಿಸಿರತಕ್ಕಂಥ ಹಣಕಾಸಿನ ವಿಷಯವನ್ನಾಗಲೀ ನೋಡಿದರೆ ನಮ್ಮನ್ನು ಮಲಯ ಮಕ್ಕಳು ಎನ್ನುವ ಹಾಗೆ ಈ ಯೋಜನೆಗಳನ್ನು ಅಳವಡಿಸಿದ್ದಾರೆ. ಅದು ಹೇಗೆ ಮಾಡಿದ್ದಾರೆಂದರೆ ‘‘ ಒಬ್ಬ ಮಗನಿಗೆ ಹತ್ತು ಷರ್ಟ್ ಹೊಲಿಸಿ ಮತ್ತೊಬ್ಬ ಮಗನಿಗೆ ಒಂದು ಷರ್ಟ್ ಹೊಲಿಸಿದಾಗ, ನನಗೂ ಹತ್ತು ಷರ್ಟ್ ಬೇಕೆಂದಾಗ, ಅವನ ಹತ್ತು ಅಂಗಿ ನೋಡುತ್ತಿರು ’’ ಎನ್ನುವ ರೀತಿಯಲ್ಲಿ ಈ ಯೋಜನೆಗಳನ್ನು ಇವತ್ತು ಅಳವಡಿಸಿದ್ದಾರೆ. ಹೇಮಾವತಿ ಯೋಜನೆಗೆ ೩೪ ಕೋಟಿ ರೂಪಾಯಿಗಳನ್ನು ಒದಗಿಸಿದ್ದಾರೆ. ಇದನ್ನು ನೋಡಿದರೆ, ಮಾನ್ಯ ಲೋಕೋಪಯೋಗಿ ಮಂತ್ರಿಗಳು ವಿಶೇಷವಾದ ಆಸಕ್ತಿಯನ್ನು ಈ ಯೋಜನೆಗೆ ವಹಿಸಿದ್ದಾರೆ. ಇವತ್ತು ಬಹಳ ಬರಗಾಲಕ್ಕೆ ತುತ್ತಾಗಿರುವಂತಹ ಹಾಗೂ ಬರವನ್ನು ವರವನ್ನಾಗಿ ಸ್ವೀಕರಿಸಿರತಕ್ಕಂಥ ಹೈದರ್ ಬಾದ್ ಕರ್ನಾಟಕ, ಬಾಂಬೆ ಕರ್ನಾಟಕದ ಜನರಿಗೆ ತಮ್ಮ ಪ್ರಭಾವಶಾಲಿ ನಾಯಕತ್ವದಿಂದ ನೀರನ್ನು ಕೊಡತಕ್ಕದ್ದನ್ನು ನೀವು ಮಾಡಿದರೆ ಬಳಲಿರುವ ಜನತೆಗೆ ಸಮಾಧಾನವಾಗುತ್ತದೆಂದು ನಿಮ್ಮ ಮೂಲಕ ಅವರ ಗಮನಕ್ಕೆ ತರುತ್ತೇನೆ. ನನ್ನ ಕ್ಷೇತ್ರದಲ್ಲಿ ಸಂಚಾರ ಮಾಡಿದಂತಹ ಸಂದರ್ಭದಲ್ಲಿ ನೋಡಿದಾಗ ಲೋಕೋಪಯೋಗಿ ಇಲಾಖೆಯವರು ರಸ್ತೆಗೆ ಕಳೆದ ೬-೭ ತಿಂಗಳಿನಿಂದ ಒಂದು ಅಡಿ ಮಣ್ಣನ್ನು ಹಾಕಿಲ್ಲ ಮತ್ತು ಮಣ್ಣು ಹಾಕುವ ಸಾಮರ್ಥ್ಯವನ್ನು ಇವತ್ತು ಹೊಂದಿಲ್ಲ. ಇದಕ್ಕೆ ಕಾರಣವನ್ನು ಕೇಳಿದಾಗ ಸಂಬಂಧಪಟ್ಟ ಅಧಿಕಾರಿಗಳು ಎನ್ ಓ ಸಿ ಬಂದಿಲ್ಲ ಅನ್ನುತ್ತಾರೆ ಇವತ್ತು ಪತ್ರಿಕೆಗಳನ್ನು ನೋಡಿದರೆ ಮಾನ್ಯ ಮಂತ್ರಿಗಳು ಈ ರಸ್ತೆ ದುರಸ್ತಿಗೆ ೨-೩ ನೂರು ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿಕೆಗಳನ್ನು ನೀಡುತ್ತಿದ್ದಾರೆ. ಆದರೆ ಈ ಹಣ ಮುಟ್ಟದೆ ಹೋದರೆ ಈ ರಸ್ತೆಗಳು ಸುಧಾರಿಸುವುದು ಹೇಗೆ ? ಸಣ್ಣ ಮಳೆ ಬಂದು ಮೋರಿ ಕೆಟ್ಟಾಗ ಸಾವಿರ ರೂಪಾಯಿಗಳನ್ನು ಖರ್ಚು ಮಾಡಿ ದುರಸ್ತಿ ಮಾಡಲು ಲೋಕೋಪಯೋಗಿ ಇಲಾಖೆ ಅಧಿಕಾರಿಗಳಿಗೆ ತಿಳಿಸಿದರೆ, ಹಿಂದಿನ ಬಿಲ್‌ಗಳಿಗೆ ಎನ್. ಓ. ಸಿ. ಬಂದಿಲ್ಲವಾದ ಕಾರಣ ಅದನ್ನೀಗ ಮಾಡಲು ಸಾಧ್ಯವಿಲ್ಲವೆಂಬ ನಿರಾಶದಾಯಕವಾದ ಉತ್ತರ ನೀಡುತ್ತಾರೆ. ಇಂತಹ ಪರಿಸ್ಥಿತಿ ಇವತ್ತು ಇದೆ. ಯಾವುದಾದರೂ ಟೆಂಡರ್ ಕರೆದರೆ ಕಛೇರಿ ಕಡೆ ಕಂಟ್ರಾಕ್ಟರ್‌ಗಳು ನೋಡದೆ ಓಡಿ ಹೋಗುವ ಪರಿಸ್ಥಿತಿ ಇವತ್ತು ಇದೆ. ಈ ಇಲಾಖೆ ಅತಿ ಹೆಚ್ಚು ಅಭಿವೃದ್ಧಿ ಕಾರ್ಯಗಳನ್ನು ಹೊಂದಿರತಕ್ಕಂಥ ಇಲಾಖೆ, ಇವತ್ತು ನೀರಾವರಿಯಾಗಲೀ, ರಸ್ತೆಗಳಾಗಲೀ ಇದು ಮುಖ್ಯವಾಗಿ ಹೆಚ್ಚು ಪ್ರಾಮುಖ್ಯತೆಯನ್ನು ಹೊಂದಿರತಕ್ಕಂಥ ಇಲಾಖೆ. ಇದು ಇಷ್ಟು ನಿಧಾನವಾಗಿ ಸಾಗಿದರೆ ರಾಜ್ಯದ ಅಭಿವೃದ್ಧಿ ತೀವ್ರವಾಗಿ ಆಗಲು ಹೇಗೆ ಸಾಧ್ಯ ? ಅದಕಾರಣ, ಇದನ್ನು ಗಮನಿಸಿ, ಇವತ್ತು ಪೆಂಡಿಂಗ್ ಇರತಕ್ಕಂಥ ಬಿಲ್ಲನ್ನು ಬೇಗ ಕೊಟ್ಟು, ಮುಂದೆ ಸಾಗುವಂತಹ ಕೆಲಸಗಳನ್ನು ತೀವ್ರಗತಿಯಲ್ಲಿ ಮಾಡಿದರೆ ಅಭಿವೃದ್ಧಿಗೆ ಹೆಚ್ಚು ಒತ್ತು ಕೊಟ್ಟಂತೆ ಆಗುತ್ತದೆಂದು ಹೇಳುತ್ತೇನೆ.

೩-೦೦ ಪಿ. ಎಂ.

ಇವತ್ತು ಕೃಷ್ಣಾನದಿ ಜಲಾಶಯದ ಕೆಳಗೆ ಸುಮಾರು ೨೦ ಲಕ್ಷ ಎಕರೆ ನೀರಾವರಿ ಯೋಜನೆಯಲ್ಲಿದೆ. ಕಾವೇರಿ ಜಲಾಶಯದ ಕೆಳಗೆ ಸುಮಾರು ೬ ರಿಂದ ೬.೫ ಲಕ್ಷ ಎಕರೆ ಜಮೀನು ನೀರಾವರಿ ಯೋಜನೆಯಲ್ಲಿದೆ. ಕಾವೇರಿ ಜಲಾಶಯಕ್ಕೆ ೧೦೦ ಕೋಟಿ ರೂಪಾಯಿಗಳನ್ನು ಮತ್ತು ಕೃಷ್ಣಾ ಜಲಾಶಯದ ಕೆಳಗೆ ಬರತಕ್ಕಂತ ಯೋಜನೆಗೆ ೨೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಇವತ್ತು ನಾವು ಆರು ಲಕ್ಷ ಮತ್ತು ೨೦ ಲಕ್ಷ ಎಕರೆ ನೀರಾವರಿಗೆ ಇರತಕ್ಕಂತಹ ಒಂದು ಅಂತರವನ್ನು ನೋಡಿದರೆ ೫೦ ಲಕ್ಷ ರೂಪಾಯಿಗಳನ್ನು ಕಾವೇರಿ ಜಲಾಶಯಕ್ಕೆ ಇಟ್ಟು ೨.೫ ಕೋಟಿ ರೂಪಾಯಿಗಳನ್ನು ಕೃಷ್ಣಾ ಜಲಾಶಯದ ಕೆಳಗೆ ಬರತಕ್ಕಂತಹ ಯೋಜನೆಗಳಿಗೆ ಕೊಟ್ಟಿದ್ದೀರಿ. ಇದರಿಂದ ನಮಗೆ ಅರ್ಥವಾಗುವುದೇನೆಂದರೆ ತಾವು ಎಲ್ಲಾ ಯೋಜನೆಯನ್ನು ಸಮಾನಾಂತರವಾಗಿರತಕ್ಕ ಒಂದು ದೃಷ್ಟಿಯಿಂದ

ನೋಡುತ್ತಿಲ್ಲವೆಂದು. ಈ ರೀತಿ ಮಾಡುತ್ತಿರುವುದರಿಂದ ರಾಜ್ಯ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ ಮತ್ತು ಜನರಿಗೆ ಅನುಕೂಲವನ್ನು ಮಾಡುವುದಕ್ಕೆ ಸಾಧ್ಯವಾಗುವುದಿಲ್ಲವೆಂದು ಮನದಟ್ಟಾಗುತ್ತದೆ. ಆದ್ದರಿಂದ ತಾವು ಈ ಯೋಜನೆಗಳ ಬಗ್ಗೆ ಒಂದು ನಿರ್ದಿಷ್ಟವಾದ ಯೋಜನೆಯನ್ನು ಹಾಕಿಕೊಂಡು ಇಂತಿಷ್ಟು ಸಮಯದಲ್ಲಿ, ಇಂತಿಷ್ಟು ಹಣವನ್ನು ತೊಡಗಿಸಿದರೆ ಜನರಿಗೆ ಪ್ರಯೋಜನವಾಗಲು ಸಾಧ್ಯವಾಗುತ್ತದೆ. ಇವತ್ತು ಅಲ್ಲಿ ನಡೆದಿರತಕ್ಕ ರೀತಿ ನೀತಿಯನ್ನು ನೋಡಿದರೆ ನಮ್ಮ ಮೊಮ್ಮಕ್ಕಳ ಕಾಲಕ್ಕಾದರೂ ನೀರಾವರಿ ಯೋಜನೆ ಬರುವುದೋ ಇಲ್ಲವೋ ಎಂಬಂತೆ ಸಂಶಯಾಸ್ಪದ ರೀತಿಯಲ್ಲಿ ನಡೆಯುತ್ತಿದೆ. ೧೯೬೨ ನೇ ಇಸವಿಯಲ್ಲಿ ಪ್ರಾರಂಭವಾದ ಒಂದು ಯೋಜನೆಯು ೧೯೮೬ ಮುಗಿದು ೧೯೮೭ ಕ್ಕೆ ಕಾಲಿಟ್ಟಿದ್ದರೂ ಕೂಡ ನಮಗಿರಲಿ, ನಮ್ಮ ಮೊಮ್ಮಕ್ಕಳಿಗೂ ಬರುವ ಸೂಚನೆ ಕಾಣುತ್ತಿಲ್ಲವೆಂದು ನಮ್ಮಂತಹ ಯುವಕರು ಮಾತನಾಡುವ ರೀತಿಯಲ್ಲಿ ಈ ಯೋಜನೆಗಳು ನಡೆಯುತ್ತಿವೆ. ಆದ್ದರಿಂದ ಈ ಸಮಯದಲ್ಲಿ ನಾನು ತಮ್ಮ ಮುಖಾಂತರ ಒಂದು ಸಲಹೆಯನ್ನು ಕೊಡುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಈ ಕಣ್ಣೀರು ಒರೆಸುವಂತಹ ಕಾರ್ಯಕ್ರಮಗಳನ್ನೂ ಮತ್ತು ತಂತ್ರಗಳನ್ನು ಬಿಟ್ಟು, ಕಣ್ಣೀರು ಯಾವ ಆಳದಿಂದ ಬರುತ್ತದೆ ಎಂಬುದನ್ನು ಗಮನಿಸಿದರೆ ನಿಜಕ್ಕೂ ಜನರ ಒಂದು ಸಮಸ್ಯೆಯನ್ನು ಮತ್ತು ಸ್ಥಿತಿಯನ್ನು ಪರಿಹರಿಸಲು ಸಹಾಯವಾಗುತ್ತದೆ. ಇವತ್ತು ತಾವು ಹಲವಾರು ಯೋಜನೆಗಳನ್ನು ಅಂದರೆ ಬಟ್ಟೆ, ಪುಸ್ತಕ, ವೇತನ ಅಂತ ಎಷ್ಟು ಖರ್ಚು ಮಾಡುತ್ತೀರಿ ಅದನ್ನು ಬಿಟ್ಟು ನನ್ನ ಒಂದು ಸಲಹೆಯ ಪ್ರಕಾರ ಆ ಹಣವನ್ನೆಲ್ಲ ಈ ನೀರಾವರಿ ಇಲಾಖೆಗೆ ಕೊಡಬೇಕೆಂದು ಹೇಳುತ್ತೇನೆ. ಇದರಿಂದ ಲಕ್ಷಾಂತರ ಮತ್ತು ಕೋಟ್ಯಾಂತರ ಜನರಿಗೆ ಅನುಕೂಲವಾಗಿ ಅವರು ಬದುಕಲಿಕ್ಕೆ ಸಾಧ್ಯವಾಗುತ್ತದೆಂದು ಈ ಒಂದು ಸಲಹೆಯನ್ನು ತಮ್ಮ ಮುಖಾಂತರ ಇವತ್ತು ಸರ್ಕಾರಕ್ಕೆ ನಾನು ಕೊಡಲು ಇಷ್ಟಪಡುತ್ತೇನೆ. ಅಲ್ಲದೆ ಶ್ರೀಮಾನ್ ದೇವೇಗೌಡರಂತಹ ಹಿರಿಯರು ನಮ್ಮ ಜಿಲ್ಲೆಗೆ ಬಂದಿದ್ದಾಗ ಆ ಜಿಲ್ಲೆಯಲ್ಲಿ ಮಳೆ ಬೀಳದೆ ಬರಗಾಲ ಪರಿಸ್ಥಿತಿಯನ್ನು ಕಂಡು ಸುಮಾರು ೫ ಲಕ್ಷ ಎಕರೆ ನೀರಾವರಿಯ ಯೋಜನೆಯನ್ನು ಮಾಡುತ್ತೇನೆಂಬ ಮಾತನ್ನು ಹೇಳಿದರು. ನಾವು ಕೂಡ ಪಕ್ಷಾತೀತವಾಗಿ ಜನರ ಅಭಿವೃದ್ಧಿ ದೃಷ್ಟಿಯಿಂದ ಬಹಳ ಸಂತೋಷ ಪಟ್ಟೆವು ಮತ್ತು ಸ್ವಾಗತ ಮಾಡಿದೆವು ಕಾರಣ ಈ ಯೋಜನೆಯನ್ನು ಮಾಡುತ್ತಾರೆಂಬ ನಂಬಿಕೆ ನಮಗೆ ಇತ್ತು ಆ ಸಮಯದಲ್ಲಿ. ಆದರೆ ಈ ಮುಂಗಡ ಪತ್ರದಲ್ಲಿ ಶ್ರೀಮಾನ್ ದೇವೇಗೌಡರು ಹೇಳಿದಂತಹ ಯಾವುದೇ ಮಾತೂ ಕೂಡ ಪ್ರಸ್ತಾಪಕ್ಕೆ ಬಂದಿಲ್ಲ. ನೀವೇ ಹೀಗೆ ಮಾಡಿದರೆ ಇನ್ನು ಈ ಯೋಜನೆಯನ್ನು ಅಳವಡಿಸಿ ಕಾರ್ಯಗತವನ್ನು ಯಾರು ಮಾಡುತ್ತಾರೆಂಬ ಪ್ರಶ್ನೆಯನ್ನು ನಾನು ಈ ಸಂದರ್ಭದಲ್ಲಿ ಕೇಳುವುದಕ್ಕೆ ಇಷ್ಟಪಡುತ್ತೇನೆ. ಆದ್ದರಿಂದ ತಜ್ಞರ ವರದಿಯನ್ನು ತರಿಸಿ ಆದಷ್ಟು ತೀವ್ರವಾಗಿ ಕೆಲಸವನ್ನು ಪ್ರಾರಂಭಿಸಲು ತಾವು ಯೋಜನೆ ಮಾಡಬೇಕೆಂದು ಹೇಳುವುದರ ಜೊತೆಗೆ ಲೋಕೋಪಯೋಗಿ ಇಲಾಖೆಯಾಗಲೀ, ನೀರಾವರಿ ಇಲಾಖೆಗಳಲ್ಲಿ ಆಗಲೀ ಕೆಲಸವನ್ನು ಹಂಚುವಾಗ ಮಾತ್ರ ತಾರತಮ್ಯವನ್ನು ಮಾಡಬಾರದೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಇನ್ನೊಂದು ವಿಚಾರವೇನೆಂದರೆ ಹೋದ ಸಲ ಮುಂಗಡ ಪತ್ರದಲ್ಲಿ ನೀರಾವರಿ ಯೋಜನೆಗಳಿಗೆ ೨೭ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ಆದರೆ ಈ ವರ್ಷ ಮುಂಗಡ ಪತ್ರದಲ್ಲಿ ಏನು ಪ್ರಸ್ತಾಪ ಮಾಡಿಲ್ಲ. ನಮ್ಮ ಕ್ಷೇತ್ರವು ಹಳ್ಳ ಗುಂಡಿಗಳಿಂದ ಕೂಡಿದ್ದು ಯಾವ ಕಾರ್ಯಕ್ರಮವನ್ನು ಕೈಗೊಂಡಿಲ್ಲ. ಆದರೆ ನಮ್ಮ ಕ್ಷೇತ್ರದ ಹತ್ತಿರವಿರುವ ಅಂದರೆ ಬೇರೆ ಪಕ್ಷದ ಶಾಸಕರು ಯಾರು ಇದ್ದಾರೆ ಅವರ ಕ್ಷೇತ್ರದಲ್ಲಿ ಸೇತುವೆಗಳು ಮತ್ತು ನೀರಾವರಿ ಯೋಜನೆಗಳನ್ನು ಕೈಗೊಂಡಿದ್ದಾರೆ. ನಾನು ಮಾತ್ರ ಇದರಿಂದ ವಂಚಿತನಾಗಿದ್ದೇನೆ. ಆದ್ದರಿಂದ ನಾನು ತಮ್ಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ ಈಗಲಾದರೂ ಸಹ ಸುಮಾರು ೧೦-೧೫ ಲಕ್ಷಗಳನ್ನಾದರೂ ನಮ್ಮ ಕ್ಷೇತ್ರಕ್ಕೆ ಕೊಡಬೇಕೆಂದು ಹೇಳುತ್ತೇನೆ.

ಶ್ರೀ ಕೆ. ಮಲ್ಲಪ್ಪ (ಮಾಯಕೊಂಡ) —ಮಾನ್ಯ ಸಭಾಧ್ಯಕ್ಷರೆ, ಲೋಕೋಪಯೋಗಿ ಸಚಿವರು ಮಂಡಿಸಿರತಕ್ಕ ಬೇಡಿಕೆಗಳನ್ನು ಬೆಂಬಲಿಸುತ್ತಾ, ಈ ಸಂದರ್ಭದಲ್ಲಿ ಕೆಲವು ಮಾತುಗಳನ್ನಾಡಲು ಇಚ್ಛಿಸುತ್ತೇನೆ. ಕರ್ನಾಟಕ ರಾಜ್ಯದಲ್ಲಿ, ದಕ್ಷಿಣ ಭಾರತದಲ್ಲಿ ತುಂಗಾ ನದಿಗೆ ಅಡ್ಡಲಾಗಿ, ಹರಿಹರದ ಬಳಿ ಕಟ್ಟಿರತಕ್ಕಂಥ ಸೇತುವೆ ಶಿಥಿಲವಾಗಿ ಸುಮಾರು ಒಂದೂವರೆ ತಿಂಗಳಿಗೆ ಮೇಲಾಗಿದೆ. ಅದರ ಮಾರ್ಗವನ್ನು ಬದಲಾಯಿಸಿರುವುದರಿಂದ ಪ್ರವಾಸಿಗಳಿಗೆ ಮತ್ತು ವಾಹನ ಸಂಚಾರಗಳಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ಈ ಕೂಡಲೇ ಆ ಸೇತುವೆಯನ್ನು ದುರಸ್ತಿ ಮಾಡಿಸಿ ಎಂದಿನಂತೆ ವಾಹನ ಸಂಚಾರಿಗಳಿಗೆ ಮತ್ತು ಪ್ರಯಾಣಿಕರಿಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ

ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಮತ್ತೆ ಮಾನ್ಯ ಸಚಿವರು, ತಾವು ಊರಿಗೆ ಹೋಗಬೇಕಾದರೆ, ಅದನ್ನು ನೋಡಿರುತ್ತೀರಿ, ಅದರ ಕಷ್ಟ ನಿಮಗೆ ಮನವರಿಕೆಯಾಗಿರುತ್ತದೆ. ಮತ್ತು ಈಗಾಗಲೇ ಭದ್ರ ಜಲಾಶಯಕ್ಕೆ ಸಂಬಂಧಪಟ್ಟಂತ ಯೋಜನೆಯನ್ನು ವ್ಯವಸ್ಥಿತ ರೀತಿಯಲ್ಲಿ ಮಾಡಬೇಕೆನ್ನುವ ದೃಷ್ಟಿಯಿಂದ ಆ ಚಾನಲ್‌ಗಳನ್ನು ಸಿಮೆಂಟ್ ಲೈನಿಂಗ್ ಮಾಡಿ, ಕೊನೆ ಭಾಗದಲ್ಲಿರುವ ರೈತರಿಗಿರುವ ನೀರಿನ ತೊಂದರೆಯನ್ನು ತಪ್ಪಿಸಬೇಕೆನ್ನುವ ದೃಷ್ಟಿಯಿಂದ ಈಗಾಗಲೇ ಸುಮಾರು ೧೧೦ ಕೋಟಿ ರೂಪಾಯಿಗಳ ಒಂದು ಅಂದಾಜು ಮಾಡಿದ್ದಾರೆ. ಅದು ಈಗ ಮಾನ್ಯ ಸಚಿವರ ಮುಂದೆ ಇದೆ. ಅದನ್ನು ಕೂಡಲೇ ದುರಸ್ತಿ ಮಾಡಿಸುವಾಗ ಕೊನೇ ಭಾಗದಲ್ಲಿರತಕ್ಕ ರೈತರಿಗೆ ನೀರನ್ನು ಒದಗಿಸಿದರೆ ಬಹಳ ಅನುಕೂಲವಾಗುತ್ತದೆ. ಮತ್ತು ಅದನ್ನು ವಲಯವಾರು ಮಾಡಬೇಕೆಂಬ ಆಸೆ ಸರ್ಕಾರಕ್ಕೆ ಮತ್ತು ಮಾನ್ಯ ಸಚಿವರಿಗೆ ಇರುವುದರಿಂದ, ಅದಕ್ಕೆ ಸಿಮೆಂಟ್ ಲೈನಿಂಗ್ ಮಾಡದೆ ಹೋದರೆ ಅದನ್ನು ವಲಯವಾರು ಮಾಡುವುದಕ್ಕೆ ಬಹಳ ಕಷ್ಟವಾಗುತ್ತದೆ. ಆದ್ದರಿಂದ ವಲಯವಾರು ಮಾಡುವಾಗ ಈ ರೈತರಿಗೆ ನೀರನ್ನು ಒದಗಿಸಿ, ನೀರಿನ ತೊಂದರೆಯನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ಈಗಾಗಲೇ ರಾಜ್ಯದಲ್ಲಿ ಹಲವಾರು ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಂಡಿದ್ದಾರೆ. ಈ ದೊಡ್ಡ ನೀರಾವರಿ ಯೋಜನೆಗಳನ್ನು ತೆಗೆದುಕೊಂಡರೆ ಅದಕ್ಕೆ ಸಾಕಷ್ಟು ಕಾಲವಕಾಶ ಬೇಕಾಗುತ್ತದೆ. ಇದಕ್ಕೆ ಹೆಚ್ಚಿನ ಮೊತ್ತದ ಹಣ ಬೇಕಾಗಿರುವುದರಿಂದ, ಇದು ಹೆಚ್ಚಿನ ಕಾಲವಕಾಶವನ್ನು ತೆಗೆದುಕೊಳ್ಳುತ್ತದೆ. ಒಮ್ಮೊಮ್ಮೆ ಇದು ಸುಮಾರು ೧೦ ರಿಂದ ೨೦-೩೦ ವರ್ಷಗಳನ್ನು ತೆಗೆದುಕೊಳ್ಳುತ್ತದೆ. ಆದರೆ ಈ ಸಣ್ಣ ನೀರಾವರಿ ಯೋಜನೆಗಳಿಗೆ ಸುಮಾರು ೧೫ ರಿಂದ ೨೦-೩೦ ಲಕ್ಷ ಬೇಕಾಗುತ್ತದೆ. ಸಣ್ಣ ನೀರಾವರಿ ಯೋಜನೆಗಳನ್ನು ಮತ್ತು ಏತ ನೀರಾವರಿ ಯೋಜನೆಗಳನ್ನು ಸರ್ಕಾರ ಕೈಗೊಂಡರೆ ಕೂಡಲೆ ಇದರ ಉಪಯೋಗ ಪಡೆಯಲು ಸಾಧ್ಯವಾಗುತ್ತದೆ. ದೊಡ್ಡ ನೀರಾವರಿ ಯೋಜನೆಗಳಿಗೆ ಎಷ್ಟು ಆದ್ಯತೆಯನ್ನು ಕೊಡುತ್ತೀರೋ ಅಷ್ಟೇ ಆದ್ಯತೆಯನ್ನು ಸಣ್ಣ ಮತ್ತು ಏತ ನೀರಾವರಿ ಯೋಜನೆಗಳಿಗೆ ಕೊಟ್ಟರೆ, ರೈತರು ತಮ್ಮ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಿಕೊಳ್ಳುತ್ತಾರೆ. ಗ್ರಾಮಾಂತರ ಪ್ರದೇಶಗಳಲ್ಲಿರುವ ಕೇವಲ ಒಕ್ಕಲುತನದ ಆಧಾರದ ಮೇಲೆ ಜೀವಿಸತಕ್ಕ ಕೃಷಿ ಕಾರ್ಮಿಕರಿಗೆ ಸೌಲಭ್ಯಗಳನ್ನು ಒದಗಿಸಲು ಸಹ ಅನುಕೂಲವಾಗುತ್ತದೆ. ಇದರಿಂದ ದೇಶದ ಮತ್ತು ರಾಷ್ಟ್ರದ ಉತ್ಪಾದನೆ ಹೆಚ್ಚುತ್ತದೆ. ಹಾಗೂ ಆಹಾರಧಾನ್ಯಗಳ ಉತ್ಪಾದನೆಯೂ ಹೆಚ್ಚಲು ಅನುಕೂಲವಾಗುತ್ತದೆ. ಈ ದೃಷ್ಟಿಯಿಂದ ದೊಡ್ಡ ನೀರಾವರಿ ಯೋಜನೆಗಳಿಗೆ ಕೊಡುವಷ್ಟೆ ಆದ್ಯತೆಯನ್ನು ಈ ಸಣ್ಣ ನೀರಾವರಿ ಯೋಜನೆಗಳಿಗೆ ಕೊಟ್ಟು, ಹೆಚ್ಚಿನ ಹಣವನ್ನು ಕೊಡಿಸಬೇಕು. ಎಲ್ಲಿ ಜಲಸಂಪನ್ಮೂಲವಿದೆಯೋ, ಅದು ನದಿಯಾಗಿರಲಿ, ಹಳ್ಳವಾಗಿರಲಿ ಅಥವಾ ಬಾವಿಯಾಗಲೀ ಅಲ್ಲಿರುವ ನೀರನ್ನು ಈ ಏತ ನೀರಾವರಿ ಯೋಜನೆಯಲ್ಲಿ ಬಳಸಿಕೊಳ್ಳಬೇಕು. ಕೇವಲ ಸಮುದ್ರಕ್ಕೆ ಹರಿದುಹೋಗತಕ್ಕಂಥ ನೀರನ್ನು ಉಪಯೋಗಿಸಿಕೊಂಡು ರಾಜ್ಯದಲ್ಲಿ ಹೆಚ್ಚಿನ ಉತ್ಪಾದನೆಗೆ ಅನುಕೂಲ ಮಾಡಿಕೊಡಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರನ್ನು ಕೋರುತ್ತೇನೆ. ಇನ್ನು ನಮ್ಮ ರಾಜದಲ್ಲಿ ಸರ್ಕಾರ ಗಂಗಾಕಲ್ಯಾಣ ಯೋಜನೆಯನ್ನು ಮಾಡಿದೆ. ಅದು ತ್ವರಿತ ಗತಿಯಲ್ಲಿ ಆಗಬೇಕು. ಇದರ ಅಧಿಕಾರಿಗಳು ಒಂದು ಬೋರ್‌ವೆಲ್ ತೋಡಬೇಕಾದ ಸಂದರ್ಭದಲ್ಲಿ ಬಹಳ ವಿಳಂಬ ಮಾಡುತ್ತಿದ್ದಾರೆ. ಸರ್ಕಾರ ಹಣ ಕೊಡುವುದಕ್ಕೆ ತಯಾರಿದ್ದರೂ ಅಧಿಕಾರಿಗಳ ಮಟ್ಟದಲ್ಲಿ ಬಹಳ ತೊಂದರೆಯಾಗುತ್ತಿದೆ. ಎರಡು ಅಥವಾ ಮೂರು ಜಿಲ್ಲೆಗೆ ಒಬ್ಬರಂತೆ ಜಲಸಂಪನ್ಮೂಲವನ್ನು ತೋರಿಸತಕ್ಕಂಥ ತಜ್ಞರು ಇರುವುದರಿಂದ, ಅವರು ಇದರಲ್ಲಿ ಬಹಳ ತಡಮಾಡುತ್ತಿದ್ದಾರೆ. ಆದ್ದರಿಂದ ಪ್ರತಿಯೊಂದು ಜಿಲ್ಲೆಗೂ ಒಬ್ಬ ಜಲಸಂಪನ್ಮೂಲ ತಜ್ಞರನ್ನು ಏರ್ಪಾಡು ಮಾಡಿದರೆ ರೈತರಿಗೆ ತುಂಬಾ ಪ್ರಯೋಜನವಾಗುತ್ತದೆ. ಸರ್ಕಾರ ಸಾಕಷ್ಟು ಹಣವನ್ನು ಖರ್ಚು ಮಾಡುವಾಗ, ಅಧಿಕಾರಿಗಳ ಮಟ್ಟದಲ್ಲಿ ತೊಂದರೆ ಆಗುವುದರಿಂದ ಇದನ್ನು ತಪ್ಪಿಸಬೇಕೆಂದು ತಮ್ಮ ಮೂಲಕ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನೊಂದು ವಿಷಯ ಏನೆಂದರೆ ಹಲವಾರು ಸ್ಥಳಗಳಲ್ಲಿ ನೀರಾವರಿ ಪ್ರದೇಶಗಳು ಇರುವ ಕಡೆಗಳಲ್ಲಿ ಕೆಲವು ಜಮೀನುಗಳು ಜೌಗು ಬಿದ್ದಿವೆ. ಆ ಪ್ರದೇಶಕ್ಕೆ ಎಷ್ಟು ನೀರು ಕೊಟ್ಟರೂ ಕೂಡಬೆಳೆ ಬರುವುದಿಲ್ಲ. ಉತ್ತಮವಾದ ಜಮೀನುಗಳು ಜಾಗು ಪ್ರದೇಶದಲ್ಲಿ ಸೇರಿಕೊಂಡಿರುವುದರಿಂದ ಆ ಜಮೀನಿನಲ್ಲಿ ನೀರು ತುಂಬಿಕೊಳ್ಳುವುದರಿಂದ ಆ ಪ್ರದೇಶದ ರೈತರಿಗೆ ಯಾವ ಬೆಳೆಯೂ ಬರದೇ ಬಹಳ ನಷ್ಟವನ್ನು

ಅನುಭವಿಸುತ್ತಿದ್ದಾರೆ. ಅದಕ್ಕೋಸ್ಕರವಾಗಿ ನಾನು ತಮ್ಮಲ್ಲಿ ಕೇಳಿಕೊಳ್ಳುವುದೇನೆಂದರೆ ತಾವು ಈ ಕಾಡಾ ಕಮಿಟಿಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟರೆ ಅವರು ನೀರಾವರಿ ಪ್ರದೇಶದಲ್ಲಿರುವ ಜೌಗನ್ನು ತಡೆಯಲು ಅನುಕೂಲವಾಗುತ್ತದೆ. ಇದರಿಂದ ರೈತರಿಗೂ ಸಹಾಯವಾದಂತಾಗುತ್ತದೆ. ಅಲ್ಲದೆ ಇದರಿಂದ ರೈತನು ತನ್ನ ಆರ್ಥಿಕ ಪರಿಸ್ಥಿತಿಯನ್ನು ಕೂಡ ಸುಧಾರಣೆ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದಕ್ಕೆ ತಾವು ಹೆಚ್ಚಿಗೆ ಹಣವನ್ನು ಕೊಡಬೇಕು. ಅದರಲ್ಲೂ ಕೂಡ ಈ ಭದ್ರಾ ಜಲಾಶಯದ ಕೆಳಗೆ ೪ ತಾಲ್ಲೂಕುಗಳು ಏನು ಇವೆ ಅದಕ್ಕೆ ಸೇರಿದಂತಹ ೮ ಜಲಾಶಯದಿಂದ ಬರತಕ್ಕಂಥಾ ನೀರು ಜೌಗು ಜಮೀನುಗಳಿಗೆ ತುಂಬಿಕೊಂಡು ಆ ರೈತರಿಗೆ ಏನೂ ಬೆಳೆ ಬಾರದೇ ಇರುವ ಪರಿಸ್ಥಿತಿ ಇದೆ. ಆದುದರಿಂದ ತಾವು ಈ ಕಮಿಟಿಗಳಿಗೆ ಹೆಚ್ಚಿನ ಹಣವನ್ನು ಒದಗಿಸಿಕೊಟ್ಟರೆ ಆ ಜೌಗು ಬಿದ್ದಿರತಕ್ಕಂಥಾ ಜಮೀನುಗಳನ್ನು ಉತ್ಕೃಷ್ಟವಾಗಿ ಮಾಡುವುದಕ್ಕೆ ಬಹಳ ಅನುಕೂಲವಾಗುತ್ತದೆ, ಮತ್ತು ಈ ಭದ್ರ ಜಲಾಶಯಕ್ಕೆ ಸಂಬಂಧಪಟ್ಟಂತೆ ಹೇಳುವುದಾದರೆ ನೀವು ಕಾಡಾ ಕಮಿಟಿಗಳಿಗೆ ಹೆಚ್ಚಿನ ಹಣ ಒದಗಿಸಿ ಕೊಟ್ಟರೆ ಅಲ್ಲಿ ರಸ್ತೆ ಸೇತುವೆಗಳನ್ನೂ ಸಹ ಮಾಡುವುದಕ್ಕೆ ಹೆಚ್ಚು ಸಹಾಯವಾಗುತ್ತದೆ ಎಂದು ಮತ್ತೊಮ್ಮೆ ಹೇಳುತ್ತೇನೆ.

ಇನ್ನು ಹರಿಹರ—ದಾವಣಗೆರೆ ಏನು ಇದೆ ಈ ರಾಷ್ಟ್ರೀಯ ಹೆದ್ದಾರಿ ಮಧ್ಯೆ ಕೇವಲ ೨—೩ ಕಿಲೋಮೀಟರ್ ಹಂತದಲ್ಲಿ ಎರಡು ರೈಲ್ವೆ ಕ್ರಾಸಿಂಗ್‌ಗಳು ಇವೆ. ಮಾನ್ಯ ಸಚಿವರೂ ಹಾಗೂ ಮಾನ್ಯ ಸಭಾಧ್ಯಕ್ಷರೂ ಈ ಎರಡೂ ಗೇಟನ್ನು ದಾಟಿ ಹೋಗಬೇಕಾಗುತ್ತದೆ. ಇದರಿಂದ ೨೦ ನಿಮಿಷಗಳ ಕಾಲ ವ್ಯಯವಾಗುತ್ತದೆ. ಮಾನ್ಯ ಲೋಕೋಪಯೋಗಿ ಸಚಿವರು ಇದರ ಬಗ್ಗೆ ಸ್ಥಳ ಪರಿಶೀಲನೆ ಮಾಡಿದ್ದಾರೆ. ನಾಯಕ್‌ರವರೂ ಕೂಡ ಇದರ ಕಷ್ಟವನ್ನು ಅನುಭವಿಸುತ್ತಿದ್ದಾರೆ. ಇದನ್ನು ಮಾಡಿಕೊಟ್ಟರೆ ಎಲ್ಲರಿಗೂ ಅನುಕೂಲವಾಗುತ್ತದೆ. ಇದರಿಂದ ಕಾಲವ್ಯಯವಾಗುವುದು ತಪ್ಪುವುದಲ್ಲದೆ ೨—೩ ಲೀಟರ್ ಡೀಸಲ್ ಸಹ ಉಳಿಸಲಿಕ್ಕೆ ಸಾಧ್ಯ. ಇದರಿಂದ ಪ್ರಯಾಣಿಕರಿಗೆ ಹಾಗೂ ಬಸ್ ಮುಂತಾದ ವಾಹನಗಳಿಗೆ ಬಹಳ ಅನುಕೂಲವಾಗುತ್ತದೆ. ಇದರ ಬಗ್ಗೆ ಕೂಡಲೇ ಆದ್ಯತೆ ಕೊಟ್ಟು ಈ ಎರಡೂ ರೈಲ್ವೆ ಗೇಟ್ ಪಕ್ಕ ರಸ್ತೆ ಮಾಡಿಕೊಟ್ಟರೆ ರೈಲ್ವೆ ಕ್ರಾಸ್ ಮಾಡುವುದೂ ತಪ್ಪುತ್ತದೆ ಎಲ್ಲರಿಗೂ ಅನುಕೂಲವಾಗುತ್ತದೆ. ನನ್ನ ಕ್ಷೇತ್ರಕ್ಕೆ ಈ ಎರಡೂ ಗೇಟ್ ಪಕ್ಕದ ಹತ್ತಿರ ರಸ್ತೆ ಮಾಡಿ ಕೊಡಬೇಕೆಂದು ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಇನ್ನು ದಾವಣಗೆರೆ ತಾಲ್ಲೂಕಿನಲ್ಲಿ ಲೋಕೀಕೆರೆ, ಕಾಶೀಪುರ, ಕತ್ತರಗುಳ್ಳ, ದೊಡ್ಡಹಳ್ಳಿ ಈ ಗ್ರಾಮಗಳು ಇವೆ. ಅಲ್ಲಿಯ ರೈತರು ತಾವು ಬೆಳೆದ ದವಸಧಾನ್ಯವನ್ನಾಗಲಿ ಅಥವಾ ಉಪಕರಣವನ್ನಾಗಲಿ ಸಾಗಿಸುವುದಕ್ಕೆ ಬಹಳ ಕಷ್ಟವಾಗಿದೆ. ಆದುದರಿಂದ ಮಾನ್ಯ ಸಚಿವರು ಆ ಹಳ್ಳಿಗಳಿಗೆ ರಸ್ತೆಗಳನ್ನಾಗಲಿ ಸೇತುವೆಗಳನ್ನಾಗಲಿ ಮಾಡಿಸಿಕೊಟ್ಟರೆ ಆ ರೈತರಿಗೆ ಹೆಚ್ಚಿನ ಅನುಕೂಲವಾಗುತ್ತದೆ. ಅದನ್ನು ಮಾಡಿಸಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಏತ ನೀರಾವರಿ ಯೋಜನೆ ಮಾಡತಕ್ಕಂಥದ್ದು ಬಹಳ ಇವೆ. ಈ ಏತ ನೀರಾವರಿ ಯೋಜನೆಗೆ ಮಾನ್ಯ ಸಚಿವರು ಆದ್ಯತೆ ಕೊಟ್ಟು ಆ ಕೆಲಸವನ್ನು ಮಾಡಿಕೊಡುವುದರ ಜೊತೆಗೆ ಆ ರೈತರು ಉತ್ಪಾದನೆ ಮಾಡುವುದಕ್ಕೆ ಇನ್ನೂ ಇತರೇ ಸಹಾಯ ಸವಲತ್ತುಗಳು ಏನು ಬೇಕೊ ಅದನ್ನೂ ಸಹ ಮಾಡಿಕೊಡಬೇಕೆಂದು ಹೇಳಿ, ಮಾನ್ಯ ಅಧ್ಯಕ್ಷರು ನನಗೆ ಮಾತನಾಡಲು ಇಷ್ಟು ಕಾಲವಕಾಶ ಕೊಟ್ಟಿದ್ದಕ್ಕಾಗಿ ಅವರನ್ನು ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಎಂ. ಶಿವಣ್ಣ (ಹೆಗ್ಗಡದೇವನಕೋಟೆ).— ಮಾನ್ಯ ಅಧ್ಯಕ್ಷರೇ, ಮಾನ್ಯ ಲೋಕೋಪಯೋಗಿ ಹಾಗೂ ನೀರಾವರಿ ಸಚಿವರು ಈ ಸದನದಲ್ಲಿ ಮಂಡಿಸಿರತಕ್ಕಂಥ ಬೇಡಿಕೆಗಳನ್ನು ವಿರೋಧಿಸಿ ಈ ಸಂದರ್ಭದಲ್ಲಿ ಕೆಲವು ವಿಚಾರಗಳನ್ನು ಅವುಗಳ ಬಗ್ಗೆ ಹೇಳುವುದಕ್ಕೆ ಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ, ಈ ಇಲಾಖೆಗೆ ಹೆಸರು ಸೂಚಿಸುವುದು ಏನು ಇದೆ ಅದನ್ನು ಹೇಳುವುದಕ್ಕೆ ಬಯಸುತ್ತೇನೆ. ಸಾಮಾನ್ಯವಾಗಿ ಒಂದೊಂದು ಇಲಾಖೆಗೂ ಕೂಡ ಒಂದೊಂದು ಹೆಸರನ್ನು ಇಟ್ಟುಕೊಂಡಿದ್ದಾರೆ. ಒಂದೊಂದು ಇಲಾಖೆಯೂ ತನ್ನ ಹೆಸರಿಗೆ ತಕ್ಕಂತೆ ಒಂದು ಯೋಜನೆ ಮಾಡಬೇಕು. ಉದಾಹರಣೆಗೆ ಸಮಾಜ ಕಲ್ಯಾಣ ಇಲಾಖೆ ಎಂದರೆ ಸಮಾಜವನ್ನು ಉದ್ಧಾರ ಮಾಡತಕ್ಕಂಥ ಇಲಾಖೆ ಎಂದು ಹೇಳುತ್ತೇವೆ. ಹಾಗೆಯೇ ಲೋಕೋಪಯೋಗಿ ಇಲಾಖೆ ಎಂದರೆ ಲೋಕವನ್ನು ಉದ್ಧಾರ ಮಾಡುವ ರೀತಿಯಲ್ಲಿ ಈ ಇಲಾಖೆ ಇರಬೇಕೆನ್ನುವುದಕ್ಕೆ ಈ ಹೆಸರನ್ನು ಇಟ್ಟುಕೊಂಡಿದ್ದಾರೆ.

ಆದರೆ ಏನು ಈ ಒಂದು ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಇದೆ, ಈ ಇಲಾಖೆಯನ್ನು ನೋಡಿಕೊಳ್ಳುತ್ತಿರುವ ಮಾನ್ಯ ದೇವೇಗೌಡರ ಬಗ್ಗೆ ಹೇಳಬೇಕೆಂದರೆ, ಅವರು ಎಲ್ಲ ವಿಚಾರಗಳನ್ನು ಬಹಳ ಚೆನ್ನಾಗಿ ತಿಳಿದುಕೊಂಡಿದ್ದಾರೆ. ವಿಷಯಗಳನ್ನು ಚೆನ್ನಾಗಿ ತಿಳಿದುಕೊಂಡಿರುವವರ ಬಗ್ಗೆ ಒಂದು ಗಾದೆ ಮಾತು ನಮ್ಮ ಕಡೆ ಇದೆ. ಏನೆಂದರೆ, ಚೆನ್ನಾಗಿ ಅರೆದು ಕುಡಿದಿದ್ದಾರೆ, ತಿಂದು ತೇಗಿದ್ದಾರೆ ಎಂದು ಹೇಳುತ್ತಾರೆ. ಈ ಗಾದೆಯ ಮಾತಿನಂತೆ ಮಾನ್ಯ ಮಂತ್ರಿಗಳು ಎಲ್ಲ ವಿಚಾರಗಳನ್ನು ಚೆನ್ನಾಗಿ ತಿಳಿದುಕೊಂಡಿದ್ದಾರೆ. ಇವರು ಎಲ್ಲವನ್ನೂ ಬಲ್ಲವರಾಗಿದ್ದಾರೆ ಮತ್ತು ಸಾಕಷ್ಟು ನುರಿತವರಾಗಿದ್ದಾರೆ. ಈ ಹಿಂದೆ ಮಾನ್ಯ ಚೆನ್ನಬಸಪ್ಪನವರು ಈ ಇಲಾಖೆಯ ಮಂತ್ರಿಗಳಾಗಿದ್ದಾಗ, ಅವರು ಪ್ರವಾಸ ಹೋಗುತ್ತಿದ್ದ ಕಡೆಗಳಲ್ಲಿ ಇಂಜಿನಿಯರ್‌ಗಳು ಅವರನ್ನು ಕಂಡು ಹೆದರುತ್ತಿದ್ದರಂತೆ. ಈಗಲೂ ಸಹ ಇಂಜಿನಿಯರ್‌ಗಳು ಇವರನ್ನು ಕಂಡರೆ ಹೆದರುತ್ತಾರೆ. ಆದರೆ ಈ ಇಲಾಖೆಯಲ್ಲಿರುವಂಥ ಪರ್ಸೆಂಟೇಜ್ ಏನಿದೆ, ಇದು ಇವತ್ತಿನವರೆಗೂ ಕಡಿಮೆ ಆಗಿಲ್ಲ. ಅದೇ ರೀತಿ ಕಳಪೆ ಕೆಲಸಗಳೂ ಸಹ ಕಡಿಮೆ ಆಗಿಲ್ಲ. ಈ ಮಾತನ್ನು ಹೇಳಿದರೆ ಮಾನ್ಯ ಮಂತ್ರಿಗಳು ತಪ್ಪಾಗಿ ಭಾವಿಸುವುದಿಲ್ಲವೆಂದು ನಾನು ತಿಳಿದುಕೊಂಡಿದ್ದೇನೆ. ಈ ನೀರಾವರಿ ಬಗ್ಗೆ ಹಿರಿಯ ಸದಸ್ಯರು ಹೆಚ್ಚಾಗಿ ಪ್ರಸ್ತಾಪ ಮಾಡಿರುವುದರಿಂದ ನಾನು ನನ್ನ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಕೆಲವು ವಿಚಾರಗಳನ್ನು ಮಾತ್ರ ಈಗ ಹೇಳುತ್ತೇನೆ. ಮೈಸೂರು ಜಿಲ್ಲೆಯಲ್ಲಿ ಕಪಿಲಾ, ನುಗು ಮತ್ತು ತಾರಕ ಎಂಬ ಮೂರು ಜಲಾಶಯಗಳಿವೆ. ಕಬಿನಿ ಜಲಾಶಯದಿಂದ ೪ ಲಕ್ಷದ ೭೦ ಸಾವಿರ ಎಕರೆಗಳಿಗೆ ನೀರನ್ನು ಒದಗಿಸಲಾಗುತ್ತಿದೆ ಈ ಜಲಾಶಯದಿಂದ ನನ್ನ ಕ್ಷೇತ್ರದಲ್ಲಿ ಕೇವಲ ಎರಡು ಸಾವಿರ ಎಕರೆಗಳಿಗೆ ನೀರು ಸಿಗುತ್ತಿದೆ ನುಗು ಜಲಾಶಯದಿಂದ ನಂಜನಗೂಡು ಮತ್ತು ಇತರ ಕೆಲವು ತಾಲ್ಲೂಕ್‌ಗಳಿಗೆ ಅನುಕೂಲವಾಗಿದೆ. ಆದರೆ ಈ ಜಲಾಶಯದಿಂದ ನನ್ನ ಕ್ಷೇತ್ರದಲ್ಲಿ ಕೇವಲ ಒಂದು ಸಾವಿರ ಎಕರೆಗೆ ನೀರು ಸಿಗುತ್ತಿದೆ. ತಾರಕ ಜಲಾಶಯದ ಕೆಲಸ ೧೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಮುಗಿದಿದೆ. ಇದರ ಕೆಲಸ ೧೯೮೦ ರಲ್ಲಿ ಮುಗಿಯಿತು. ಆದರೆ ಗೇಟ್ ಹಾಕುವ ಕೆಲಸ ನಡೆದಿಲ್ಲ. ಈ ಜಲಾಶಯದಿಂದ ನನ್ನ ಕ್ಷೇತ್ರದಲ್ಲಿ ಒಂದು ಎಕರೆಗೂ ಸಹ ನೀರು ಸಿಕ್ಕಿಲ್ಲ. ಈ ಬಗ್ಗೆ ನಾನು ಒಂದು ಪ್ರಶ್ನೆ ಹಾಕಿದಾಗ ಈ ಜಲಾಶಯದಿಂದ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಲಾಗುತ್ತಿದೆ ಎಂದು ಉತ್ತರ ಕೊಟ್ಟಿದ್ದರು. ಆದರೆ ವಾಸ್ತವಾಂಶದ ಪ್ರಕಾರ ಮತ್ತು ನನಗೆ ತಿಳಿದ ಪ್ರಕಾರ ಈ ಜಲಾಶಯದಿಂದ ೨೦೦—೩೦೦ ಎಕರೆಗಳಿಗೆ ಮಾತ್ರ ನೀರು ಸಿಕ್ಕಿರಬಹುದೇ ಹೊರತು ಅದಕ್ಕಿಂತ ಹೆಚ್ಚಿನ ಪ್ರದೇಶಗಳಿಗೆ ನೀರು ಸಿಕ್ಕಿಲ್ಲ. ಈ ಜಲಾಶಯಕ್ಕೆ ಕಬಿನಿ ಜಲಾಶಯದ ಹಿನ್ನೀರನ್ನು ಲಿಫ್ಟ್ ಮಾಡಿಕೊಟ್ಟರೆ ಸುಮಾರು ೨೨ ಸಾವಿರ ಎಕರೆಗಳಿಗೆ ನೀರನ್ನು ಒದಗಿಸಬಹುದು. ಆದ್ದರಿಂದ ಈ ಕೆಲಸವನ್ನು ಮಾಡಿಕೊಡಲು ಮಾನ್ಯ ಮಂತ್ರಿಗಳು ಪ್ರಯತ್ನ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಮುಖ್ಯ ಮಂತ್ರಿಗಳು ಮೈಸೂರು ಜಿಲ್ಲೆಗೆ ಭೇಟಿ ಕೊಟ್ಟಿದ್ದಾಗ ನಾನು ಈ ಬಗ್ಗೆ ಅವರಿಗೆ ಮನವಿ ಪತ್ರವನ್ನು ಕೊಟ್ಟಿದ್ದೆ. ಇದಕ್ಕೆ ಸಂಬಂಧಪಟ್ಟಂತೆ ಅವರಿಂದ ನನಗೆ ಬಂದಿರುವ ಪತ್ರದಲ್ಲಿ ಏನು ಹೇಳಿದ್ದಾರೆಂದರೆ, ಕಬಿನಿ ಜಲಾಶಯದ ಎರಡನೇ ಹಂತದ ಕೆಲಸವನ್ನು ೩೦ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಪ್ರಾರಂಭ ಮಾಡಲಾಗಿದೆ. ಈ ಕೆಲಸವಾದ ನಂತರ ೬—೭ ತಾಲ್ಲೂಕ್‌ಗಳಿಗೆ ನೀರನ್ನು ಒದಗಿಸಬೇಕಾಗಿರುವುದರಿಂದ ತಾರಕಾ ಜಲಾಶಯಕ್ಕೆ ೬೫ ಟಿ. ಎಂ. ಸಿ. ನೀರಿನಲ್ಲಿ ೪ ಟಿ. ಎಂ. ಸಿ ನೀರನ್ನು ಕೊಡುವುದಕ್ಕಾಗುವುದಿಲ್ಲವೆಂದು ತಿಳಿಸಿದ್ದಾರೆ. ತಾರಕಾ ಜಲಾಶಯಕ್ಕೆ ಕಬಿನಿ ಜಲಾಶಯದಿಂದ ನೀರನ್ನು ಒದಗಿಸದಿದ್ದರೆ ೧೪ ಕೋಟಿ ರೂಪಾಯಿಗಳ ವೆಚ್ಚದಲ್ಲಿ ಕಟ್ಟಿರುವ ಈ ಯೋಜನೆ ವೇಸ್ಟ್ ಆಗುತ್ತದೆ. ಈ ಕಬಿನಿ ಯೋಜನೆಯಿಂದ ನೀರನ್ನು ಕೊಡಬೇಕಾದರೆ ಹತ್ತು ವರ್ಷಗಳಾದರೂ ಬೇಕಾಗುತ್ತದೆಂದು ತಜ್ಞರು ಹೇಳುತ್ತಿದ್ದಾರೆ. ಆದರೆ ಇದು ತಪ್ಪು ಅಭಿಪ್ರಾಯವಾಗಿದೆ. ಈ ಕಬಿನಿ ಜಲಾಶಯಕ್ಕೆ ಜೂನ್, ಜುಲೈ, ಆಗಸ್ಟ್, ಮತ್ತು ಸೆಪ್ಟೆಂಬರ್ ಈ ನಾಲ್ಕು ತಿಂಗಳಲ್ಲಿ ಬರುವಂಥ ಫ್ಲಡ್ ವಾಟರನ್ನು ತಾರಕಾ ಜಲಾಶಯಕ್ಕೆ ಲಿಫ್ಟ್ ಮಾಡಿದರೆ ಅದು ತುಂಬುತ್ತದೆ. ಕಬಿನಿ ಜಲಾಶಯದ ಎರಡನೇ ಹಂತದ ಕೆಲಸಕ್ಕೆ ಕೆಲವಾರು ತಿಂಗಳ ಹಿಂದೆ ಶಂಕುಸ್ಥಾಪನೆ ಮಾಡಿ ಬಂದಿದ್ದಾರೆ. ಮೈಸೂರು ಜಿಲ್ಲೆಯಲ್ಲಿರುವ ಹೆಗ್ಗಡೆದೇವನಕೋಟೆ ತಾಲ್ಲೂಕ್ ಈ ಹಿಂದೆ ಇಡೀ ರಾಜ್ಯದಲ್ಲಿಯೇ ಸಮೃದ್ಧವಾದ ತಾಲ್ಲೂಕ್ ಆಗಿತ್ತು ಎಂದು ಹೇಳಿದರೆ ತಪ್ಪಾಗಲಾರದು. ಏಕೆಂದರೆ ಅಲ್ಲಿ ಫಲವತ್ತಾದ ಅರಣ್ಯ ಸಂಪತ್ತು ಇತ್ತು, ಫಲವತ್ತಾದ ಭೂಮಿ ಇತ್ತು, ಎಲ್ಲ ರೀತಿಯಲ್ಲೂ ಚೆನ್ನಾಗಿತ್ತು. ಆದರೆ ಜಲಾಶಯ ನಿರ್ಮಾಣ ಆದಂಥ ಸಂದರ್ಭದಲ್ಲಿ ಯಾವ ಪ್ರದೇಶಕ್ಕೆ ಸೌಲಭ್ಯ ಆಗಬೇಕೋ ಅದು ಆಗಲಿಲ್ಲ. ಈಗ ನನ್ನ ತಾಲ್ಲೂಕು ಬರಡಾಗತಕ್ಕ ಸಂದರ್ಭ ಒದಗಿದೆ.

ನನ್ನ ತಾಲ್ಲೂಕಿನಲ್ಲಿ ೩೩ ಹಳ್ಳಿಗಳನ್ನು ಮುಳುಗಡೆ ಮಾಡಿ ಸ್ಥಳಾಂತರ ಪಡಿಸಿರತಕ್ಕ ಹಳ್ಳಿಗಳಿಗೆ ಇವತ್ತಿನ ವರೆಗೆ ಕುಡಿಯುವ ನೀರಿನ ಸೌಲಭ್ಯ ಆಗಿಲ್ಲ, ರಸ್ತೆಯಾಗಿಲ್ಲ. ಈ ಬಗ್ಗೆ ಪುನರ್ವಸತಿ ಸಮಿತಿ ಎಂದು ಏನು ಮಾಡಿದರು ಆ ಸಮಿತಿ ಶ್ರೀಮಾನ್ ದೇವರಾಜ ಅರಸರು ಮುಖ್ಯ ಮಂತ್ರಿಯಾಗಿದ್ದ ಸಂದರ್ಭ ದಲ್ಲಿ ಮುಕ್ತಾಯವಾಯಿತು. ಮತ್ತೆ ಆ ಸಮಿತಿ ಸೇರಲಿಲ್ಲ. ಜನಗಳಿಗೆ ಸೌಲಭ್ಯ ಆಗಲಿಲ್ಲ. ಈಗ ಕಬಿನಿ ಎರಡು ಹಂತ ಮಾಡಿ, ೩೦ ಸಾವಿರ ಎಕರೆ ಅಂದರೆ ೧೫ ಸಾವಿರ ಎಕರೆ ಅರಣ್ಯ ಪ್ರದೇಶ, ೧೫ ಸಾವಿರ ಎಕರೆ ಫಲವತ್ತಾದ ಹಿಡುವಳಿ ಪ್ರದೇಶವನ್ನು ಮುಳುಗಡೆ ಮಾಡಿ ಈಗ ಮುಳುಗಡೆಯಾಗಿರುವುದರ ಜೊತೆಗೆ ಇನ್ನೂ ಬಲಿ ಕೊಡತಕ್ಕಂಥ ಸಂದರ್ಭ ಇದೆ. ಈ ಸಂದರ್ಭದಲ್ಲಿ ನಾನು ಬಹಳ ವ್ಯಥೆಯಿಂದ ಹೇಳಬೇಕಾಗಿದೆ. ಬೇರೆಯವರಿಗೆ ನೀರು ಕೊಡಿ ಅದರ ಬಗ್ಗೆ ಚಿಂತೆ ಇಲ್ಲ. ಆದರೆ ನಮ್ಮನ್ನು ಉಳಿಸಿ ಬೇರೆಯವರಿಗೆ ಕೊಡಿ ಎಂದು ಈ ಸಂದರ್ಭದಲ್ಲಿ ಹೇಳಬೇಕಾಗಿದೆ ನಾವು ಚೆನ್ನಾಗಿದ್ದೇವೆ, ನಿಮ್ಮ ಕ್ಷೇಮಕ್ಕೆ ಕಾಗದ ಬರೆಯಿರಿ ಎಂದು ಎಲ್ಲರೂ ಹಾಗೇ ಬರೆಯುವುದು. ಆದುದರಿಂದ ನಮ್ಮನ್ನು ಚೆನ್ನಾಗಿಟ್ಟು ಅವರಿಗೆ ನೀರು ಕೊಡತಕ್ಕ ವ್ಯವಸ್ಥೆಯನ್ನು ಮಾಡಬೇಕು ಎಂದು ಈ ಸಂದರ್ಭದಲ್ಲಿ ಒತ್ತಾಯಪೂರ್ವಕವಾಗಿ ನಮ್ಮ ಮಾನ್ಯ ಮಂತ್ರಿಗಳಿಗೆ ಹೇಳಬಯಸುತ್ತೇನೆ. ಮಾನ್ಯ ಅಧ್ಯಕ್ಷರೇ ನಮ್ಮ ಮೈಸೂರು ಜಿಲ್ಲೆ ಯಲ್ಲಿ ಇನ್ನೊಂದು ಬಹು ಮುಖ್ಯವಾದಂಥ ವಿಚಾರ ಇದೆ. ಮಾಜಿ ಮಂತ್ರಿಗಳಾದ ಸಿದ್ಧರಾಮಯ್ಯ ನವರು ಇಲ್ಲೇ ಇರಬಹುದು ಎಂದು ನಾನು ಭಾವನೆ ಮಾಡಿದ್ದೇನೆ. ಈ ವರುಣಾನಾಲೆ ಏನು ಇದೆ, ಈ ವರುಣಾ ನಾಲೆ ನಮ್ಮ ಮೈಸೂರು ಜಿಲ್ಲೆಗೆ ಹೆಚ್ಚಿನ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡತಕ್ಕ ನಾಲೆ. ಇದರಿಂದ ಮೈಸೂರಿನ ಪಕ್ಕದಲ್ಲಿರುವ ಹೆಗ್ಗಡದೇವನಕೋಟೆಗೂ ಸ್ವಲ್ಪ ನೀರಾವರಿ ಯಾಗುತ್ತದೆ. ಅಂತಹ ಒಂದು ಪ್ರದೇಶಕ್ಕೆ ನೀರಾವರಿ ಸೌಲಭ್ಯವನ್ನು ಒದಗಿಸಿಕೊಡಿ ಎಂದು ಕೇಳಿದ ಸಂದರ್ಭದಲ್ಲಿ ಮಾನ್ಯ ಮಂತ್ರಿಗಳಿಂದ ಉತ್ತರ ಬಂದಿದೆ, ಶ್ರೀಮಾನ್ ದೇವರಾಜ ಅರಸ್‌ರವರು ಮುಖ್ಯ ಮಂತ್ರಿಗಳಾಗಿದ್ದಾಗ ಇನ್ನು ೨-೩ ವರ್ಷಗಳಲ್ಲಿ ಈ ನಾಲೆಯನ್ನು ಪೂರ್ಣಗೊಳಿಸಿ ನೀರನ್ನು ಒದಗಿಸುತ್ತೇವೆ ಎಂದು ಹೇಳಿದ್ದರು. ಈಗ ಉತ್ತರ ಬಂದಿದೆ, ಇನ್ನು ೭-೮ ವರ್ಷಗಳಲ್ಲಿ ರಾಜ್ಯದ ಹಣಕಾಸಿನ ಸಂಪನ್ಮೂಲಗಳನ್ನು ನೋಡಿಕೊಂಡು ಮಾಡುತ್ತೇವೆ ಎಂದು. ಈ ರೀತಿ ಮಾಡುವುದಾದರೆ ಒಂದು ಮಾತನ್ನು ಹೇಳಬೇಕಾಗುತ್ತದೆ. ತಾವು ರಾಜ್ಯದಲ್ಲಿ ಏನು ಜಲಾಶಯಗಳ ಕೆಲಸಕಾರ್ಯಗಳನ್ನು ಕೈಗೊಂಡಿದ್ದೀರಿ, ಅಷ್ಟಕ್ಕೇ ಸೀಮಿತಗೊಳಿಸಿ ಈ ಕೆಲಸಕಾರ್ಯಗಳನ್ನು ಮಾಡಿದರೆ ಸಾಕು. ಹೊಸದಾಗಿ ಏನಾದರು ಮಾಡಿದ್ದೇ ಆದರೆ ನೀವು ಏನೇನೂ ಮಾಡದೆ, ಇವತ್ತಿನ ಸರ್ಕಾರಗಳು ಏನಿವೆ, ಇವತ್ತಿನ ಒಂದು ರಾಜಕಾರಣ ಏನು ಮಾಡುತ್ತಾ ಇದ್ದೇವೆ ಇದನ್ನು ಮುಂದಿನ ಪೀಳಿಗೆ ಕ್ಷಮಿಸಲಾರದು ಎಂದು ಹೇಳಿದರೆ ತಪ್ಪಾಗಲಾರದು. ಆದುದರಿಂದ ಈ ಒಂದು ನಾಲೆಗೆ ಹೆಚ್ಚಿನ ಹಣಕಾಸಿನ ಸೌಲಭ್ಯವನ್ನು ಒದಗಿಸಿಕೊಟ್ಟು ಬೇಗ ಆಗುವಂತೆ ಕಾರ್ಯಮಾಡಬೇಕು.

ಇನ್ನು ಸಣ್ಣ ನೀರಾವರಿ ವಿಚಾರದಲ್ಲಿ ಹೇಳುವುದಾದರೆ ಈಗ ೨-೩ ತಾಲ್ಲೂಕುಗಳಿಗೆ ಒಂದು ಸಬ್‌ಡಿವಿಜನ್ ಮಾಡಿದಿರಿ. ಸಣ್ಣ ನೀರಾವರಿ ಇಲಾಖೆಯನ್ನು ಮಾಡಿದ ಮೇಲೆ ಸಣ್ಣ ನೀರಾವರಿ ಕೆಲಸಗಳು ಹೆಚ್ಚಾಯಿತು. ಸಣ್ಣ ನೀರಾವರಿ ಇಲಾಖೆಯಲ್ಲಿ ೨-೩ ತಾಲ್ಲೂಕುಗಳನ್ನು ಸೇರಿಸಿ ಒಂದು ಸಬ್‌ಡಿವಿಜನ್ ಮಾಡಿ ಒಬ್ಬ ಇಂಜಿನಿಯರನ್ನು ಕೊಟ್ಟಿದ್ದಾರೆ. ಸಾಮಾನ್ಯ ಜನರ ಕಾಂಟ್ಯಾಕ್ಟ್ ಇರುವುದು ಸಣ್ಣ ನೀರಾವರಿ ಇಲಾಖೆಯಲ್ಲಿ. ಆದುದರಿಂದ ಸರ್ಕಾರ ಪ್ರತಿ ತಾಲ್ಲೂಕಿನಲ್ಲಿ ಅಸಿಸ್ಟೆಂಟ್ ಇಂಜಿನಿಯರ್ ಗ್ರೇಡಿನ ಅಧಿಕಾರಿಯನ್ನು ನೇಮಿಸಿ,ಕಛೇರಿಯನ್ನು ತೆರೆಯಬೇಕು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಅಧ್ಯಕ್ಷರೇ ಅನೇಕ ರೀತಿಯಲ್ಲಿ ಕಳಪೆಯಾಗಿರತಕ್ಕ ಕೆಲಸ ಕಾರ್ಯಗಳ ಬಗ್ಗೆ ಕೆಲವು ಉದಾಹರಣೆಗಳನ್ನು ಕೊಡಲಿಕ್ಕೆ ಇಷ್ಟಪಡುತ್ತೇನೆ. ಮೈಸೂರು ನಗರದಲ್ಲಿ ಭವ್ಯವಾದಂಥ ಕೆ.ಆರ್. ಆಸ್ಪತ್ರೆ ಕಟ್ಟಡವನ್ನು ಕಟ್ಟುವುದಕ್ಕಾಗಿ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡ ಲಾಯಿತು. ಸಾವಿರಾರು ಜನಗಳ ಜೀವನವನ್ನು ರಕ್ಷಣೆ ಮಾಡತಕ್ಕ ಕಟ್ಟಡ ಕೆಲವೇ ತಿಂಗಳಲ್ಲಿ ಬಿರುಕು ಬಿಟ್ಟು, ಮುರಿದು ಬೀಳತಕ್ಕ ಪರಿಸ್ಥಿತಿಗೆ ಬಂದಿದೆ. ಇದಕ್ಕೆ ಕಾರಣಕರ್ತರಾದಂಥ ಇಂಜಿನಿಯರುಗಳು ಏನಿದ್ದಾರೆ, ಇಂಥವರ ಮೇಲೆ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳದೇ ಹೋದರೆ......

ಅಧ್ಯಕ್ಷರು.—ಮುಕ್ತಾಯಮಾಡಿ.

ಶ್ರೀ ಎಂ. ಶಿವಣ್ಣ.—ಇಲ್ಲಿ ವಿಶಾಲವಾದಂಥ ವಿಧಾನ ಸೌಧ ಕಟ್ಟಿದ್ದಾರೆ.

ಅಧ್ಯಕ್ಷರು.—ಆಗುವುದಿಲ್ಲ.

ಶ್ರೀ ಎಂ. ಶಿವಣ್ಣ.—ತಪ್ಪು ಮಾಡಿದ ಇಂಜಿನಿಯರುಗಳ ಮೇಲೆ......

ಅಧ್ಯಕ್ಷರು.—ನಿಮ್ಮದು ರೆಕಾರ್ಡ್ ಆಗುವುದಿಲ್ಲ. ೧೦ ನಿಮಿಷ ಆಯಿತು. ಗಡಿಯಾರ ನೋಡಿ ಕೊಂಡು ಮಾತನಾಡುವುದಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇನ್ನು ೨ ಮಿನಿಟ್‌ನಲ್ಲಿ ಮುಗಿಸಿಬಿಡುತ್ತಾರೆ. ಕನ್‌ಕ್ಲೂಡ್ ಮಾಡಲಿ.

ಅಧ್ಯಕ್ಷರು.—ಇವರು ಪ್ರತಿ ಸಾರಿ ಹೀಗೆ ಮಾಡುತ್ತಾರೆ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೇ, ರಸ್ತೆಗಳ ವಿಚಾರದಲ್ಲಿ......

ಅಧ್ಯಕ್ಷರು.—ಅವರು ಹೊಸ ವಿಚಾರ ಹೇಳುತ್ತಾರೆ. ಕೂಡ್ರಿ ಮತ್ತೆ ನಿಮಗೆ ಹೇಳುವುದಕ್ಕೆ ಅವಕಾಶ ಕೊಡುವುದಿಲ್ಲ. ನಾನು ಚನ್ನಪ್ಪನವರನ್ನು ಕರೆಯುತ್ತೇನೆ.

ಶ್ರೀ ಎಂ. ಶಿವಣ್ಣ.—ರಸ್ತೆಗಳ ಬಗ್ಗೆ ಹೇಳಿ, ನಿಮಗೆ ಧನ್ಯವಾದ ಹೇಳುತ್ತೇನೆ.

ಅಧ್ಯಕ್ಷರು.—ಧನ್ಯವಾದಗಳನ್ನು ನಿಮಗೆ ಹೇಳುತ್ತೇನೆ. ಶಿಸ್ತು ಪಾಲನೆ ಮಾಡದಿದ್ದರೆ ಹೇಗೆ ?

ಶ್ರೀ ಎಂ. ಶಿವಣ್ಣ.—ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

†ಶ್ರೀ ಹೆಚ್. ಜಿ. ಚನ್ನಪ್ಪ (ಮಾಗಡಿ).—ಮಾನ್ಯ ಅಧ್ಯಕ್ಷರೆ, ಮಾನ್ಯ ಲೋಕೋಪಯೋಗಿ ಮಂತ್ರಿಯವರು ಮಂಡಿಸಿರುವ ಬೇಡಿಕೆಗಳನ್ನು ಸಂಪೂರ್ಣವಾಗಿ ಸ್ವಾಗತಿಸುತ್ತಾ, ಕೆಲವು ವಿಷಯಂ ಗಳನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಇಲ್ಲಿಯವರೆಗೆ ಮಾತನಾಡಿದಂಥ ಅನೇಕ ಸದಸ್ಯರುಗಳು ನೀರಾವರಿಗೆ ಹೆಚ್ಚಿನ ಮಹತ್ವ ಕೊಡಬೇಕೆಂದು ಮಾತನಾಡಿದ್ದಾರೆ. ಇವತ್ತು ದೊಡ್ಡ ದೊಡ್ಡ ಯೋಜನೆಗಳಿಗಿಂತ ಸಣ್ಣ ನೀರಾವರಿ ಯೋಜನೆಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಮಾಡುವುದರಿಂದ ಇಡೀ ದೇಶ ಹೆಚ್ಚಿನ ಪ್ರಗತಿ ಹೊಂದುತ್ತದೆಂಬ ವಿಷಯವನ್ನು ನಾನು ಆಗಾಗ ಹೇಳುತ್ತಾ ಬಂದಿದ್ದೇನೆ. ಇವತ್ತು ಕೂಡ ಅದೇ ಮಾತನ್ನು ಹೇಳುತ್ತೇನೆ. ಇವತ್ತು ಆಯವ್ಯಯದಲ್ಲಿ ಅಪ್ಪರ್ ಕೃಷ್ಣ, ಕಾವೇರಿ ಹಾಗೂ ತುಂಗಭದ್ರ ಯೋಜನೆಗಳಿಗೆ ೨೦೦–೩೦೦ ಕೋಟಿ ರೂಪಾಯಿಗಳನ್ನು ಒದಗಿಸಿದರೂ ಅವುಗಳನ್ನು ಪೂರ್ಣಗೊಳಿಸುವುದಕ್ಕೆ ಒಂದೆರಡು ವರ್ಷಗಳಲ್ಲಿ ಸಾಧ್ಯವಾಗುವುದಿಲ್ಲ. ಇನ್ನು ೧೫–೨೦ ವರ್ಷಗಳಾದರೂ ಬೇಕಾಗುತ್ತದೆಂಬ ಅಂಶವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ದೇಶಾದ್ಯಂತ ನೀರಾವರಿ ಸೌಕರ್ಯಗಳನ್ನು ಒದಗಿಸಬೇಕಾದರೆ, ಸಣ್ಣ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆ ಕೊಟ್ಟರೆ, ದೇಶದ ಎಲ್ಲಾ ಭಾಗಕ್ಕೂ ನೀರಾವರಿ ಸೌಕರ್ಯವನ್ನು ಒದಗಿಸುವುದಕ್ಕೆ ಸಾಧ್ಯವಾಗುತ್ತದೆ. ಇವತ್ತು ನಮ್ಮದು ಕೃಷಿ ಪ್ರಧಾನವಾದ ದೇಶವಾಗಿದ್ದು, ಹಿಂಗಾರು ಮತ್ತು ಮುಂಗಾರು ಮಳೆಯನ್ನೇ ಅವಲಂಬಿಸಿಕೊಂಡು ಕೃಷಿ ಜೀವನ ಮಾಡುತ್ತಿದ್ದೇವೆ. ನಮ್ಮಲ್ಲಿ ಒಂದು ಗಾದೆ ಮಾತಿದೆ. ''ಇಂಡಿಯನ್ ಮಾನ್‌ಸೂನ್ ಈಸ್ ಗ್ಯಾಂಬ್ಲಿಂಗ್'' ಎಂದು. ಜೂಜುಗಾರರಿಗೆ ಅದೃಷ್ಟ ಪರೀಕ್ಷೆ ಚೆನ್ನಾಗಿದ್ದರೆ ಹಣ ಬರುತ್ತದೆ. ಹಾಗೆ ನಮ್ಮ ಮಳೆಗಾಲವೂ ಇದೆ. ಒಂದು ವರ್ಷ ಅತಿವೃಷ್ಟಿ; ಮತ್ತೊಂದು ವರ್ಷ ಅನಾವೃಷ್ಟಿ ಆಗುತ್ತಿದ್ದು ಕೃಷಿಗೆ ಬಹಳ ತೊಂದರೆಯಾಗುತ್ತಿದೆ. ಇವತ್ತು ಮೈನರ್ ಇರಿಗೇಷನ್‌ಗೆ ಹೆಚ್ಚು ಒತ್ತುಕೊಟ್ಟು; ಅನೇಕ ವರ್ಷಗಳ ಹಿಂದೆ ಕಟ್ಟಿರತಕ್ಕ ಕೆರೆಗಳು ದುರಸ್ತಿಯಲ್ಲಿ ಏನಿವೆ ಅವುಗಳನ್ನು ದುರಸ್ತಿ ಮಾಡುವುದರಿಂದ ಹೆಚ್ಚಿನ ಭೂಮಿಗೆ ನೀರಾವರಿ ಸೌಕರ್ಯ ವನ್ನು ಒದಗಿಸುವುದಕ್ಕೆ ಅನುಕೂಲವಾಗುತ್ತದೆ. ಇದರಿಂದ ಭೂಮಿಯೊಳಗೆ ಅಂತರ್‌ಜಲ ಜಾಸ್ತಿ ಯಾಗಿ, ಇವತ್ತು ಬೋರ್‌ವೆಲ್‌ಗಳಿಗೆ, ಮತ್ತು ಇನ್ನಿತರ ಬಾವಿಗಳಿಗೆ ನೀರಿನ ಅನುಕೂಲ ದೊರೆಯುತ್ತದೆ. ಆ ಮೂಲಕ ದೇಶದ ಎಲ್ಲಾ ಭಾಗಕ್ಕೂ ನೀರಿನ ಅನುಕೂಲವಾಗುತ್ತದೆಂದು ಹೇಳುತ್ತೇನೆ. ಅಲ್ಲದೆ ಏತನೀರಾವರಿ ಮೂಲಕ ಬೇಸಾಯಕ್ಕೂ ಅನುಕೂಲವಾಗುತ್ತದೆ.

೩–೩೦ ಪಿ.ಎಂ.

ಇವೊತ್ತು ನಮ್ಮ ಪರಿಸ್ಥಿತಿ ಏನಾಗಿದೆ ಅಂದರೆ ೧೫೦–೨೦೦ ಅಡಿಗಳವರೆಗೆ ಬೋರ್ ಹಾಕಿದರೂ ನೀರು ಸಿಕ್ಕುತ್ತಿಲ್ಲ. ಇದರಿಂದಾಗಿ ಕುಡಿಯುವ ನೀರಿಗೆ ಬಹಳ ತೊಂದರೆಯಾಗಿದೆ. ಇದರ ಜೊತೆಗೆ ಅನೇಕ ಬೋರ್‌ವೆಲ್‌ಗಳು ಫೇಲ್ಯೂರ್ ಆಗಿವೆ, ಅವುಗಳನ್ನು ಇನ್ನೂ ಆಳ ಮಾಡತಕ್ಕ ಯೋಚನೆ ಇದೆ. ಇಂತಹ ಪರಿಸ್ಥಿತಿಯಲ್ಲಿರುವಾಗ ನಾವು ದೊಡ್ಡ ದೊಡ್ಡ ಪ್ರಾಜೆಕ್ಟ್‌ಗಳನ್ನು ಕಟ್ಟಿಕೊಂಡು

ಹೋದರೆ ನಿಜವಾಗಿ ಈ ದೇಶದಲ್ಲಿ ಜಲಕ್ಷಾಮ ಅತಿ ಶೀಘ್ರವಾಗಿ ತಲೆದೋರುವುದರಲ್ಲಿ ಯಾವ ಸಂದೇಹ ಇಲ್ಲ. ಇನ್ನು ನಮ್ಮ ರಾಜ್ಯ ಕೃಷಿ ಪ್ರಧಾನ ರಾಜ್ಯವಾಗಿರುವುದರಿಂದ ಒಬ್ಬ ರೈತನಿಗೆ ಕನಿಷ್ಟ ಒಂದೆರಡು ಎಕರೆ ನೀರಾವರಿ ಜಮೀನು ಇಲ್ಲದೇ ಹೋದರೆ ಅವನು ಜೀವನವನ್ನು ಸಾಗಿಸಲಿಕ್ಕೆ ಕಷ್ಟವಾಗುತ್ತದೆ. ಸುಮಾರು ೨೦–೩೦ ಎಕರೆ ಖುಷ್ಕಿ ಜಮೀನು ಇರುವುದಕ್ಕಿಂತಲೂ ಒಂದೆರಡು ಎಕರೆ ನೀರಾವರಿ ಜಮೀನು ಇದ್ದರೆ ಅವನು ತನ್ನ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಪಡಿಸಿಕೊಂಡು, ಉತ್ತಮವಾಗಿ ಜೀವನ ಮಾಡಲಿಕ್ಕೆ ಅವಕಾಶ ಕಲ್ಪಿಸಿದಂತಾಗುತ್ತದೆ. ಇವೊತ್ತು ಬೇಡಿಕೆಯಲ್ಲಿ ಹೆಚ್ಚಿನ ಹಣವನ್ನು ಮೇಜರ್ ಇರಿಗೇಷನ್, ಮತ್ತು ಮೀಡಿಯಂ ಇರಿಗೇಷನ್‌ಗೆ ಹೆಚ್ಚಿನ ಆದ್ಯತೆ ಕೊಟ್ಟು ಮೂರನೆಯ ವರ್ಗದಲ್ಲಿ ಸಣ್ಣ ನೀರಾವರಿ ತೆಗೆದುಕೊಂಡಿದ್ದೀರಿ. ಇದಕ್ಕೂ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ನಾನು ಮಾನ್ಯ ಮಂತ್ರಿಗಳಿಗೆ ತಮ್ಮ ಮುಖಾಂತರ ಕೇಳಿಕೊಳ್ಳುವುದಕ್ಕೆ ಇಷ್ಟಪಡುತ್ತೇನೆ. ಇನ್ನು ನಮ್ಮಲ್ಲಿ ಗಂಗಾ ಕಲ್ಯಾಣ, ಸೇತುಬಂಧನ, ಹಳ್ಳಿ ಹೆದ್ದಾರಿ, ಈ ರೀತಿಯ ಉಪಯುಕ್ತ ಯೋಜನೆ ಕಾರ್ಯಕ್ರಮಗಳನ್ನು ಹಾಕಿಕೊಂಡು ಕೆಲಸ ನಡೆಯುತ್ತಿದೆ. ನಾಲ್ಕು ವರ್ಷಗಳಲ್ಲಿ ನಾವು ಏನು ಕಾರ್ಯ ಸಾಧಿಸಬೇಕಾಗಿತ್ತೋ, ಅದಕ್ಕಿಂತಲೂ ಹೆಚ್ಚಿನ ಕಾರ್ಯವನ್ನು ನಮ್ಮ ಸರ್ಕಾರ ಸಾಧಿಸಿದೆ ಎಂದು ಹೇಳಿದರೆ ತಪ್ಪಾಗಲಾರದು. ನಾನು ೨೦ ವರ್ಷಗಳ ಕಾಲ ರಾಜಕೀಯದಲ್ಲಿದ್ದು ಸದಸ್ಯನಾಗಿ ತಾಲ್ಲೂಕು ಬೋರ್ಡ್ ಅಧ್ಯಕ್ಷನಾಗಿ, ಶಾಸಕನಾಗಿ, ಕೆಲಸ ಮಾಡಿದ್ದು ನನ್ನ ಅನುಭವವನ್ನು ಹೇಳುವುದಾದರೆ, ಈ ನಾಲ್ಕು ವರ್ಷಗಳಲ್ಲಿ, ಸೇತುಬಂಧನ ಕಾರ್ಯಕ್ರಮ, ಹಳ್ಳಿ ಹೆದ್ದಾರಿ ಕಾರ್ಯಕ್ರಮ, ರಸ್ತೆ ರಿಪೇರಿ ಕಾರ್ಯಕ್ರಮ ಬಹಳ ಹೆಚ್ಚಿನ ಮಟ್ಟದಲ್ಲಿ ಆಗಿದೆ ಎಂದರೆ ಅತಿಶಯೋಕ್ತಿ ಆಗಲಾರದು ಎಂದು ತಿಳಿದು ಕೊಂಡಿದ್ದೇನೆ. ನನ್ನ ಕ್ಷೇತ್ರದಲ್ಲಿರುವುದನ್ನು ಲೆಕ್ಕ ಹಾಕಿ ಹೇಳುವುದಾದರೆ, ಅನೇಕ ಹಳ್ಳಿಗಳಿಗೆ ಆಗಬೇಕಾದಂಥ ಸುಮಾರು ೨೧–೨೫ ಸೇತುವೆಗಳು ಎರಡು ಮೂರು ವರ್ಷಗಳಲ್ಲಿ ಆಗಿವೆ. ಇಂಥ ಒಂದು ಯೋಜನೆ ನಮ್ಮ ಜನತಾ ಸರ್ಕಾರದಲ್ಲಿ ಕಾರ್ಯರೂಪಕ್ಕೆ ಬರುತ್ತಿದೆ. ಆದರೆ ಇನ್ನೂ ಆಗಬೇಕೆಂದು ಹೇಳಿದರೆ ಅದು ತಪ್ಪು ಅಲ್ಲ. ಬೇಕಾದಷ್ಟು ಕೆಲಸಗಳು ಆಗಬೇಕಾಗಿದೆ. ಇವೊತ್ತು ಅಪ್ಪರ್‌ಕೃಷ್ಣ, ಕಾವೇರಿ, ತುಂಗಭದ್ರಾ ಪ್ರಾಜೆಕ್ಟ್‌ಗಳು ಹೊಸದಾಗಿ ನಿರ್ಮಾಣ ಆಗಿಲ್ಲ. ನಮಗೆ ಸ್ವಾತಂತ್ರ ಬಂದಾಗಿನಿಂದಲೂ ಆ ಯೋಜನೆಗಳು ಇದ್ದವು. ಅವುಗಳನ್ನು ಹಂತ ಹಂತವಾಗಿ ಮಾಡಿಕೊಂಡು ಬಂದಿದ್ದರೆ, ಏಕ ಕಾಲದಲ್ಲಿ ೨೦೦–೩೦೦ ಕೋಟಿ ರೂಪಾಯಿಗಳನ್ನು ಒಂದೇ ಕಡೆ ಖರ್ಚು ಮಾಡಬೇಕಾದಂಥ ಪರಿಸ್ಥಿತಿ ಇರಲಿಲ್ಲ. ಇವೊತ್ತು ನಾವು ಅವುಗಳನ್ನು ಮಾಡದೇ ಹೋದರೆ ನಮ್ಮ ರಾಜ್ಯಕ್ಕೆ ಬರತಕ್ಕ ಸೌಲಭ್ಯವನ್ನು ಕಳೆದುಕೊಳ್ಳಬೇಕಾಗುತ್ತದೆ. ಆ ದೃಷ್ಟಿಯಿಂದ ಎಲ್ಲಾ ಕೆಲಸಗಳನ್ನು ಮೂಲೆಗೊತ್ತಿ ಲೋಕೋಪಯೋಗಿ ಇಲಾಖೆಯಿಂದ ಈ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಹಣವನ್ನು ಕೊಡಬೇಕಾದಂಥ ಪರಿಸ್ಥಿತಿ ಬಂದಿರುವುದರಿಂದ, ಬೇರೆ ಕೆಲಸಗಳು ಕುಂಠಿತವಾಗುತ್ತದೆ, ಈ ರೀತಿ ಹಣ ಒದಗಿಸುವುದರಿಂದ, ರಸ್ತೆ ಕೆಲಸಗಳು, ಸಣ್ಣ ನೀರಾವರಿ ಕೆಲಸ. ಗಂಗಾ ಕಲ್ಯಾಣ, ಹರಿಜನವಾದಿಗಳಲ್ಲಿ ಆಗಬೇಕಾದ ಕೆಲಸ ಸ್ಥಗಿತವಾಗುತ್ತದೆ. ನಾವು ಅಪ್ಪರ್‌ಕೃಷ್ಣ, ಕಾವೇರಿ, ತುಂಗಭದ್ರಾ ಪ್ರಾಜೆಕ್ಟ್‌ಗಳಿಗೆ ಹೆಚ್ಚಿನ ಹಣವನ್ನು ಕೊಡದೇ ಹೋದರೆ ನಮಗೆ ಹೆಚ್ಚಿಗೆ ನೀರು ದೊರೆಯುವುದಿಲ್ಲ. ಆದ್ದರಿಂದ, ಅದಕ್ಕೆ ಹೆಚ್ಚಿನ ಹಣವನ್ನು ಒದಗಿಸಬೇಕೆಂದು ಕಳೆದ ಅಧಿವೇಶನದಲ್ಲೇ ನಾವು ಮಾನ್ಯ ಮಂತ್ರಿಗಳಿಗೆ ಹೇಳಿದ್ದೆವು. ಇವೊತ್ತು ಯಾವ ಕಡೆಗೂ ಹೆಚ್ಚಿನ ಕೆಲಸ ಕಾರ್ಯ ಮಾಡಿಲ್ಲ ಅಂದರೆ ಅದು ಅಷ್ಟು ಸಾಧುವಾಗಿ ನನಗಂತೂ ಕಾಣಿಸುವುದಿಲ್ಲ. ಆದರೂ ನಾವೇ ಅಪ್ಪರ್‌ಕೃಷ್ಣ, ತುಂಗಭದ್ರಾ, ಕಾವೇರಿ ಜಲಾನಯನ ಪ್ರದೇಶದಲ್ಲಿ ಆಗತಕ್ಕ ಕಾಮಗಾರಿ ಕೆಲಸಕ್ಕೆ ೨೦೦–೩೦೦ ಕೋಟಿ ರೂಪಾಯಿ ಇಡಬೇಕೆಂದು, ನಮ್ಮ ನಾಯಕರ ಹುಟ್ಟು ಹಬ್ಬದ ಜ್ಞಾಪಕವಾಗಿ ೨೦೦ ಕೋಟಿ ರೂಪಾಯಿಗಳನ್ನು ಅಪ್ಪರ್‌ಕೃಷ್ಣಾ ಪ್ರಾಜೆಕ್ಟ್‌ಗೆ, ೧೦೦ ಕೋಟಿ ರೂಪಾಯಿಗಳನ್ನು ಕಾವೇರಿ ಜಲಾನಯನ ಪ್ರದೇಶಕ್ಕೆ ಕೊಡಬೇಕೆಂದು ಕೇಳಿಕೊಂಡದ್ದು ಆಗಿದೆ. ಅಷ್ಟು ಹಣವನ್ನು ಜಾಗ್ರತೆ ಮಂಜೂರು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಇವತ್ತು ನಾವು ಅಲ್ಲಲ್ಲೇ ಸಣ್ಣಸಣ್ಣ ಕೆರೆಗಳನ್ನು ನಿರ್ಮಾಣ ಮಾಡಿದರೆ ಅದರಿಂದ ನಮ್ಮ ದೇಶದ ಕ್ಷೇಮ ಸಾಧನೆಯಾಗುತ್ತದೆ. ಸಣ್ಣ ಕೈಗಾರಿಕೆಗಳನ್ನು ಮಾಡುವುದರಿಂದ ದೇಶದ ಬಹುಪಾಲು ನಿರುದ್ಯೋಗಿ ಜನರಿಗೆ ಉದ್ಯೋಗಗಳನ್ನು ಕಲ್ಪಿಸಿಕೊಡಬಹುದು ಆದರೆ ದೊಡ್ಡ ದೊಡ್ಡ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವುದರಿಂದ ಕೆಲವೇ ಕೆಲವು ಜನರಿಗೆ ಮಾತ್ರ ಉದ್ಯೋಗವನ್ನು ಒದಗಿಸಿಕೊಡಲು ಸಾಧ್ಯವಾಗುತ್ತದೆ ಅಷ್ಟೆ. ಆದರೆ ಸಣ್ಣಸಣ್ಣ ಕೈಗಾರಿಕೆಗಳಲ್ಲಿ ಉದ್ಯೋಗವನ್ನು ಕೊಡುವಷ್ಟು ಮಟ್ಟಿಗೆ ಇದರಲ್ಲಿ ಕೊಡುವುದಕ್ಕಾಗುವುದಿಲ್ಲ. ಅದೇರೀತಿ ಸಣ್ಣ ನೀರಾವರಿ ಯೋಜನೆಗಳನ್ನು ಕಾರ್ಯಗತ ಮಾಡಿದರೆ ರಾಜ್ಯದಲ್ಲಿ ಹೆಚ್ಚು ಹೆಚ್ಚು ಜನರಿಗೆ ಉದ್ಯೋಗಗಳನ್ನು ಕೊಡುವುದಕ್ಕೆ ಅವಕಾಶವಾಗುತ್ತದೆ. ಕದ್ರಿ,

ಹಾರಂಗಿ, ಕಂಬದಗಡ ಮುಂತಾದ ಯೋಜನೆಗಳು ಅರ್ಧಕ್ಕೇ ನಿಂತಿರುವುದರಿಂದ ಅವುಗಳಿಂದ ರಾಜ್ಯದ ಜನತೆಗೆ ಉಪಯೋಗ ಆಗುತ್ತಿಲ್ಲ. ಇದಕ್ಕೆ ಬದಲಾಗಿ ಸಣ್ಣ ಸಣ್ಣ ನೀರಾವರಿ ಯೋಜನೆಗಳನ್ನು ಮಾಡಿಕೊಟ್ಟಿದ್ದರೆ ಜನರಿಗೆ ತುಂಬಾ ಅನುಕೂಲವಾಗುತ್ತಿತ್ತು.

ಇನ್ನು ರಸ್ತೆಗಳ ವಿಚಾರದಲ್ಲಿ ಹೇಳುವುದಾದರೆ, ದೊಡ್ಡ ದೊಡ್ಡ ರಸ್ತೆಗಳು, ಅಂದರೆ ನ್ಯಾಷನಲ್ ಹೈವೇ, ಸ್ಟೇಟ್ ಹೈವೇಗಳಲ್ಲಿ ಇವತ್ತಿನ ದಿವಸ ಹೆಚ್ಚಿನ ಕೆಲಸಗಳು ನಡೆಯುತ್ತಿವೆ. ಆದರೆ ಹಳ್ಳಿಗಳಿಗೆ ಇನ್ನೂ ಅಷ್ಟಾಗಿ ರಸ್ತೆ ಸಂಪರ್ಕ ಆಗಿಲ್ಲ. ಈ ಕಡೆಗೆ ಸರ್ಕಾರ ಹೆಚ್ಚಿನ ಗಮನವನ್ನು ಹರಿಸುತ್ತಿರುವುದು ನಿಜಕ್ಕೂ ಸಂತೋಷ. ಹಳ್ಳಿಗಾಡಿನ ಜನರಿಗೆ ವಾಹನ ಸೌಕರ್ಯ ಇಲ್ಲದೆ ಬಹಳ ತೊಂದರೆಯಾಗಿದೆ. ಆದ್ದರಿಂದ ನಾನು ತಮ್ಮ ಮೂಲಕ ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದೇನೆಂದರೆ, ೭೦ ಸಾವಿರ ಹಳ್ಳಿಗಳು ಏನಿವೆ ಅವುಗಳಿಗೆ ಕನಿಷ್ಠ ಒಂದೊಂದು ಕಿಲೋ ಮೀಟರ್ ಡಾಂಬರ್‌ನ್ನು ಹಾಕಿಸಿ ಆ ಜನರು ಧೂಳು ಕುಡಿಯುವುದನ್ನು ತಪ್ಪಿಸುತ್ತೇವೆಂದು ಏನು ಹೇಳಿದ್ದೀರಿ ಅದರ ಪ್ರಕಾರ ಈ ದಿಸೆಯಲ್ಲಿ ತೀವ್ರ ಕ್ರಮ ತೆಗೆದುಕೊಂಡು ಎಲ್ಲೆಲ್ಲಿ ವಾಹನಗಳು ಹೆಚ್ಚು ಹೆಚ್ಚು ಓಡಾಡುತ್ತವೆ ಅಂಥ ಕಡೆ (ಹಳ್ಳಿಗಳ ಕಡೆ) ಡಾಂಬರ್‌ನ್ನು ಹಾಕಿಸಿ ಜನರು ಧೂಳು ಕುಡಿಯುವುದನ್ನು ತಪ್ಪಿಸಬೇಕು. ಜನರ ಆರೋಗ್ಯದ ಬಗ್ಗೆ ಹೆಚ್ಚು ಗಮನ ಕೊಡಬೇಕು. ಸಣ್ಣ ನೀರಾವರಿಗೆ ಮತ್ತು ರಸ್ತೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಂಡು ಇಷ್ಟು ಮಾತನಾಡಲು ಅವಕಾಶವನ್ನು ಕಲ್ಪಿಸಿಕೊಟ್ಟ ತಮಗೆ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ಬಿ. ಶಾಣಪ್ಪ (ಶಹಬಾದ್).—ಮಾನ್ಯ ಅಧ್ಯಕ್ಷರೆ, ಪ್ರತಿವರ್ಷವೂ ಕೂಡ ಸದನದ ಮುಂದೆ ಲೋಕೋಪಯೋಗಿ ಇಲಾಖೆಯ ಬೇಡಿಕೆ ಬಂದಾಗಲೆಲ್ಲಾ ನಾನು ಮಾತನಾಡುವುದಕ್ಕೆ ಎದ್ದು ನಿಂತಕೂಡಲೇ ಮಾನ್ಯ ಅಧ್ಯಕ್ಷರು ನನ್ನ ಬೆನ್ನನ್ನು ಹತ್ತಿರುತ್ತಾರೆ. ಕಳೆದ ೪ ವರ್ಷದಿಂದಲೂ ಕೂಡ ಇದೇರೀತಿ ಆಗುತ್ತಿದೆ. ನಾನು ಹೆಚ್ಚು ಹೊತ್ತು ಮಾತನಾಡದೆ, ಹೊಸ ವಿಷಯಗಳನ್ನು ಹೇಳುವುದಕ್ಕೆ ಹೋಗದೆ ಕಳೆದ ೪ ವರ್ಷಗಳಿಂದ ನಾನು ಏನೇನು ಸಲಹೆಗಳನ್ನು ಈ ಇಲಾಖೆಯ ಬಗ್ಗೆ ಕೊಟ್ಟಿದ್ದೇನೆ ಅವುಗಳ ಬಗ್ಗೆ ಮಾತ್ರ ಈಗ ಪ್ರಸ್ತಾಪ ಮಾಡುತ್ತೇನೆ. ಮಾನ್ಯ ಸದಸ್ಯರಾದ ಚನ್ನಪ್ಪನವರು ಮಾತನಾಡುವಾಗ ಹೇಳಿದಂತೆ ಅನೇಕ ಕಡೆಗಳಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದನಂತರ ಸುಮಾರು ಎಲ್ಲ ರಸ್ತೆಗಳ, ಸೇತುವೆಗಳ, ಹಳ್ಳಿ ಹೆದ್ದಾರಿಗಳ ವಿಚಾರಕ್ಕೆ ಸಂಬಂಧಪಟ್ಟಂತೆ, ಸೇತುಬಂಧನ, ಗಂಗಾ ಕಲ್ಯಾಣ, ಮುಂತಾದ ಸುಂದರ ಸ್ಕೀಂಗಳನ್ನು ರೂಪಿಸಿಕೊಂಡು ಅವೆಲ್ಲವನ್ನೂ ತಮ್ಮ ಭಾಗದಲ್ಲೇ ಮಾಡಿಕೊಂಡಿದ್ದಾರೆ, ಸಂತೋಷ. ಎಷ್ಟೇ ಆದರೂ ಇವೆಲ್ಲವನ್ನೂ ನಮ್ಮ ಕರ್ನಾಟಕ ರಾಜ್ಯದಲ್ಲೇ ಮಾಡಿದ್ದಾರೆ ಆದರೆ ಈ ಒಂದು ಸುದೈವ ನಮ್ಮ ಭಾಗಕ್ಕೆ ಇಲ್ಲವಲ್ಲಾ ಎಂಬ ಕಳವಳ ನಮ್ಮದು. ಹೈದರಾಬಾದ್ ಕರ್ನಾಟಕ ಬಹಳ ಹಿಂದುಳಿದ ಪ್ರದೇಶವೆಂಬುದು ಎಲ್ಲರಿಗೂ ಗೊತ್ತಿದೆ. ಅದಕ್ಕಾಗಿ ಹೈದರಾಬಾದ್ ಕರ್ನಾಟಕದ ಡೆವಲಪ್‌ಮೆಂಟ್‌ನ ಬಗ್ಗೆ ಅನೇಕ ಗೆಳೆಯ ಸದಸ್ಯರು ಬಹಳ ಚೆನ್ನಾಗಿ ಮಾತನಾಡಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಸಲಹೆಯನ್ನು ಮಾಡಬಯಸುತ್ತೇನೆ. ತಾವು ರೋಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಬೇಕು. ಬಳ್ಳಾರಿ, ನ್ಯಾಷನಲ್ ಹೈವೇನಲ್ಲಿದೆ. ನಾವು ನ್ಯಾಷನಲ್ ಹೈವೇ ೪ ಕ್ಕೆ ಬಂದಾಗ ನಾವು ಯಾವುದೋ ಬೇರೆ ರಾಜ್ಯಕ್ಕೆ ಬಂದವೇನೋ ಅನ್ನಿಸುತ್ತದೆ. ಅಥವಾ ಮಂಡ್ಯ, ಮೈಸೂರು ಕಡೆಗೆ ಬಂದವೇನೋ ಅನ್ನಿಸುತ್ತದೆ. ನಮ್ಮ ಭಾಗವಾದ ಹೈದರಾಬಾದ್ ಕರ್ನಾಟಕಕ್ಕೆ ಯಾರಾದರೂ ಬಂದು ನೋಡಿ, ರಸ್ತೆಗಳಲ್ಲಿ ಬಸ್ಸುಗಳು ಹೋಗುತ್ತಿದ್ದರೆ ಗಡಗಡ, ಗಡಗಡ, ಎಂದು ಶಬ್ದ ಬರುತ್ತಿರುತ್ತದೆ.

ನಮ್ಮ ಭಾಗಕ್ಕೆ ಬರಬೇಕೆಂದು ಎಲ್ಲ ಮಂತ್ರಿಗಳನ್ನೂ ಕೇಳಿಕೊಂಡೆವು. ಮಾನ್ಯ ಲೋಕೋಪಯೋಗಿ ಮಂತ್ರಿಗಳನ್ನು ಶಹಬಾದಿಗೆ ಬರಬೇಕೆಂದು ಕೇಳಿಕೊಂಡೆವು. ಮಾನ್ಯ ಹೆಚ್. ಟಿ. ಕೃಷ್ಣಪ್ಪನವರನ್ನು ಕೇಳಿಕೊಂಡೆವು. ಮಾನ್ಯ ಗೃಹ ಮಂತ್ರಿಗಳು ಒಂದು ಸಾರಿ ಬಂದಿದ್ದರು. ಮಾನ್ಯ ಗೃಹ ಸಚಿವ ರಾಚಯ್ಯನವರು ಬಂದಾಗ ಈ ಭಾಗಕ್ಕೆ ನಾನು ಏತಕ್ಕೆ ಬಂದೆನೆಂದು ಹೇಳಿದ್ದಾರೆ.

ಶ್ರೀ ಬಿ. ರಾಚಯ್ಯ.—ಆಗ ಬಿಸಲು ಕಾಲವಾಗಿತ್ತು.

ಶ್ರೀ ಕೆ. ಬಿ. ಶಾಣಪ್ಪ.—ಬಿಸಲು ವಿಷಯವಲ್ಲ ಸ್ವಾಮಿ, ರೋಡ್ಸ್ ವಿಷಯ. ಸುಮಾರು ನಾಲ್ಕು ವರ್ಷಗಳಿಂದ ತಾವು ಅನೇಕ ಇರಿಗೇಷನ್ ಪ್ರಾಜೆಕ್ಟ್‌ಗಳನ್ನು ಬಡ್ಜೆಟ್‌ನಲ್ಲಿ ತೋರಿಸುತ್ತಿದ್ದೀರಿ. ನಾವು ಬಡ್ಜೆಟ್‌ನಲ್ಲಿ ನೋಡಿ ಬಹಳ ಸಂತೋಷಪಟ್ಟೆವು. ಈ ಸಲ ಬಡ್ಜೆಟ್‌ನಲ್ಲಿ ಕೊಟ್ಟಿರತಕ್ಕಂಥದ್ದು ಸಂಣ್ಣತ್ತಿ, ಸುರುವಾಲೆ, ಬ್ರಿಡ್ಜ್‌ಗೆ ೮೭ ಲಕ್ಷ ರೂಪಾಯಿಗಳನ್ನು ತೆಗೆದಿಟ್ಟಿರುವುದು ಬಹಳ ಸಂತೋಷ

ವಾಗಿರುತ್ತದೆ. ಏತಕ್ಕೆಂದರೆ ೧೦೦೦ ಕಿಲೋಮೀಟರ್ ಕಡಿಮೆಯಾಗುತ್ತದೆ. ೧೯೭೪–೭೫–೭೬–೭೭ ರವರೆಗೆ ೬೦ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಇದ್ದರೂ ಈ ಸಾರಿ ೧೦ ಸಾವಿರ ರೂಪಾಯಿಗಳನ್ನು ಇಟ್ಟಿದ್ದೀರಿ. ನಾನು ಎರಡು ಸಾರಿ ಎಲೆಕ್ಷನ್‌ನಲ್ಲಿ ಆರಿಸಿ ಬಂದಿದ್ದೇನೆ. ದುಡ್ಡನ್ನು ಎಷ್ಟು ಕೊಟ್ಟಿರುತ್ತೀರೋ ಅಷ್ಟೇ ಇದೆ. ರೋಡ್ಸ್ ಎಷ್ಟಿತ್ತೋ ಅಷ್ಟೆ ಇದೆ. ಅಂದರೆ ಏನು ಕೆಲಸ ಮಾಡಿದ್ದೀರಿ ಎಂದು ಕೇಳಬೇಕಾಗುತ್ತದೆ. ಜನತಾ ಸರ್ಕಾರದ ಫರ್‌ಫಾರ್‌ಮೆನ್ಸ್ ಹಿಂದಿನ ಸರ್ಕಾರ ಗಳಂತೆಯೇ ಇದೆ. ಲಾಲ್‌ಪುರ್‌ಟ್ಯಾಂಕ್, ಹೊನ್ನಟ್ಟಿ ಟ್ಯಾಂಕ್‌ಗಳ ಕೆಲಸವನ್ನು ೧೯೭೦ರಲ್ಲಿ ತೆಗೆದು ಕೊಂಡರು. ಈಗಲೂ ಹಾಗೆಯೇ ಇದೆ, ಗುಲ್ಬರ್ಗಾ, ಯಾದಗಿರ್ ರೋಡ್ಸ್ ತೆಗೆದುಕೊಂಡರು. ನಾನು ಈಗ ಅಸೆಂಬ್ಲಿಗೆ ಬಂದರೂ ನಾನು ಸಣ್ಣವನಿದ್ದಾಗ ಯಾವರೀತಿ ಇತ್ತೋ ಅದೇರೀತಿಯಲ್ಲಿ ಈಗಲೂ ಕೂಡ ಇದೆ. ಕಾಂಗ್ರೆಸ್‌ನವರು ಏನೂ ಮಾಡಲಿಲ್ಲವೆಂದು ಹೇಳಿದರೂ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಏನು ಕೆಲಸ ಮಾಡುತ್ತೇವೆಂದು ಭರವಸೆಗಳನ್ನು ಕೊಟ್ಟಿದ್ದರೋ ಆ ಕೆಲಸಗಳನ್ನೂ ಕೂಡ ನಮ್ಮ ಭಾಗದಲ್ಲಿ ಮಾಡಲಿಲ್ಲ. ಮಾನ್ಯ ಮುಖ್ಯ ಮಂತ್ರಿಗಳು ನಮ್ಮ ಭಾಗಕ್ಕೆ ಬಂದಿದ್ದಾಗ ಕೆಲವು ಪ್ರಾಜೆಕ್ಟ್‌ಗಳನ್ನು ಇನಾಗ್ಯುರೇಟ್ ಮಾಡಿದರು. ಬಸ್‌ಸ್ಟ್ಯಾಂಡ್ ಒಂದು ಆಗಿರುತ್ತದೆ. ರೈಲ್ವೆ ಕ್ರಾಸ್‌ನಲ್ಲಿ ೪೪ ಲಕ್ಷ ರೂಪಾಯಿಗಳಲ್ಲಿ ಓವರ್ ಫ್ಲೈಬ್ರಿಡ್ಜ್ ಆಗಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಬಂದಾಗ ಹೇಳಿದ್ದೆವು. ಮಾನ್ಯ ವೀರೇಂದ್ರ ಪಾಟೀಲ್‌ರವರಿಗೆ ಮತ್ತು ಚಂದರಿಯವರಿಗೆ ಲೆಟರ್‌ನ್ನು ಕಳುಹಿಸಿಕೊಟ್ಟು ೧೯೭೬–೭೭ರ ಬಡ್ಜೆಟ್‌ನಲ್ಲಿ ಹಾಕುವುದಾಗಿ ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ರೈಲ್ವೆ ಇಲಾಖೆಯವರು ಎಲ್ಲ ಇನ್‌ಸ್ಪೆಕ್ಟ್ ಮಾಡಿದರು. ೧೯೭೬ರ ಬಡ್ಜೆಟ್‌ನಲ್ಲಿ ಬಂದರೂ ಅದು ಲ್ಯಾಪ್ಸ್ ಆಯಿತು. ಅದಕ್ಕೆ ಯಾರು ಹೊಣೆ ಸ್ವಾಮಿ. ಮಾನ್ಯ ಅಧ್ಯಕ್ಷರೇ, ನಾವು ಕೇಳುತ್ತೇವೆ. ಭಾಷಣ ಮಾಡುತ್ತೇವೆ, ಮಂತ್ರಿಗಳು ಉತ್ತರವನ್ನು ಕೊಡುತ್ತಾರೆ. ಆದರೆ ಏನಾದರೂ ಸ್ವಲ್ಪ ಕೆಲಸ ಮಾಡಬೇಕು, ಅನೇಕ ರೈಲ್ವೆ ಕೆಲಸಗಳನ್ನು ತೆಗೆದುಕೊಂಡು ಟೆಂಡರ್ ಕಾಲ್‌ಫರ್ ಮಾಡಿದರು. ಡಾಂಬರ್ ರೋಡ್ಸ್, ಜೆಲ್ಲಿ ರೋಡ್ಸ್ ಯಾವುದೇ ಕೆಲಸಗಳನ್ನು ತೆಗೆದುಕೊಂಡು ಮಾಡಿಲ್ಲ. ಡಿಪಾರ್ಟ್‌ಮೆಂಟ್‌ನವರು, ಇಂಜಿನೀಯರ್ಸ್ ಹೇಳುತ್ತಾರೆ, ಡಾಂಬರ್ ರೋಡ್‌ಗಳನ್ನು ಬೇಸಿಗೆ ಕಾಲ ದಲ್ಲಿ ಮಾಡಲಿಕ್ಕೆ ಆಗುವುದಿಲ್ಲವೆಂದು, ಮಳೆಗಾಲದಲ್ಲಿ ಮೂರು ಬಾರಿ ಟೆಂಡರ್‌ನ್ನು ಕರೆದು, ಟೆಂಡರ್‌ನ್ನು ಹಾಕಿದರೂ ಅದು ಲ್ಯಾಪ್ಸ್ ಆಗಿರುತ್ತದೆ. ಮೊನ್ನೆ ಇಂಜಿನೀಯರ್ಸ್ ರೋಡ್ಸ್‌ನ್ನು ಇನ್‌ಸ್ಪೆಕ್ಟ್ ಮಾಡಿದರು. ಕಂಟ್ರಾಕ್ಟರ್ಸ್ ಎಸ್. ಆರ್. ರೇಟ್ಸ್ ಜಾಸ್ತಿಯಾಗಿದೆ, ರೇಟ್ಸ್‌ನ್ನು ಚೇಂಜ್ ಮಾಡಬೇಕೆಂದು ಇನ್‌ಸಿಸ್ಟ್ ಮಾಡುತ್ತಿದ್ದಾರೆ. ಎಷ್ಟೆಷ್ಟು ಕೊಡಬೇಕು, ರಸ್ತೆಗಳು ಯಾವ ರೀತಿ ಇರಬೇಕು. ಎನ್ನುವ ಬಗ್ಗೆ ನೋಡಲು ಚೀಫ್ ಇಂಜಿನಿಯರ್ ರುದ್ರಪ್ಪನವರು ಬಂದಿದ್ದರು. ರೋಡ್ಸ್ ಸಿಂಕ್ ಆಗುತ್ತದೆಂದು ಹೇಳುತ್ತಾರೆ. ಸಿಂಕ್ ಆಗದಂತೆ ರಸ್ತೆಗಳ ನಿರ್ಮಾಣವನ್ನು ಸರ್ಕಾರ ದವರು ಮಾಡಬೇಕು.

ಅನೇಕ ಕಡೆಗಳಲ್ಲಿ ಎಷ್ಟೆಷ್ಟು ಹಣ ಖರ್ಚಾಗಿದೆ ಎಂಬುದನ್ನು ನಮ್ಮ ಭಾಗದ ಶಾಸಕರು ಹೇಳಿದ್ದಾರೆ. ಲಕ್ಷ್ಮಯ್ಯನವರು ಹೇಳಿದರು, ನನ್ನ ಕ್ಷೇತ್ರದಲ್ಲಿ ೧೯೭೫–೭೬ರಲ್ಲಿ ೪–೫ ಕೋಟಿ ರೂಪಾಯಿ ಖರ್ಚು ಮಾಡಿದ್ದಾರೆಂದು. ನಮ್ಮ ಭಾಗದಲ್ಲಿ ಲಕ್ಷದ ಪ್ರಶ್ನೆ ಇಲ್ಲ.

ಅಧ್ಯಕ್ಷರು.—ಆ ಕಡೆ ನೋಡಬೇಡಿ, ಅವರು ನಿಮ್ಮ ದಿಕ್ಕು ತಪ್ಪಿಸುತ್ತಾರೆ.

ಶ್ರೀ ಕೆ. ಬಿ. ಶಾಣಪ್ಪ.—ಹೋದಸಾರಿ ಶಹಬಾದ್ ಅನ್ನು ಡೆವಲಪ್ ಮಾಡುತ್ತೇವೆಂದು ಹೇಳಿದರು. ಈ ಸಾರಿ ಏನೂ ಆಗಲಿಲ್ಲ. ಹುಮ್ನಾಬಾದಾನಿಂದ ಹಿರಿಯೂರಿನವರೆಗೆ ವೈಯಾ ಬಿಜಾಪುರ ಚಿಂಚೋಳಿ ನ್ಯಾಷನಲ್ ಹೈವೇ ಮಾಡಬೇಕೆಂದು ಇತ್ತು. ಅದು ವರ್ಕ್‌ಔಟ್ ಆದರೆ ಪ್ರವಾಸಕ್ಕೂ ಕೂಡ ಒಳ್ಳೆಯ ವ್ಯವಸ್ಥೆ ಆದಂತಾಗುತ್ತದೆ. ಅದರ ಬಗ್ಗೆ ಮಂತ್ರಿಗಳು ಯೋಚಿಸಬೇಕು. ಆದಷ್ಟು ಬೇಗ ಸರ್ವೆ ಮಾಡಿಸಿ ಸೆಂಟ್ರಲ್ ಗವರ್ನಮೆಂಟಿನಿಂದ ಏನು ಕೇಳಬೇಕೋ ಅದನ್ನು ಕೇಳ ಬೇಕು.

ಇನ್ನು ಲಿಫ್ಟ್ ಇರಿಗೇಷನ್ ಬಗ್ಗೆ ಹೇಳುವುದಾದರೆ, ಕೆಲವು ಯೋಜನೆಗಳನ್ನು ತೆಗೆದುಕೊಂಡಿ ದ್ದಾರೆ. ಧರ್ಮಸಿಂಗರ ಕ್ಷೇತ್ರಗಳಲ್ಲಿ ಇಟ್ಟಿಗಾ ಮತ್ತು ಕಟ್ಟಿಸಂಗಾಯು ಯೋಜನೆಗಳ ಪೈಕಿ ಕಟ್ಟಿ ಸಂಗಾಯು ಮುಗಿದಿದೆ. ಅದಕ್ಕೆ ಸಾವಿರಾರು ರೂಪಾಯಿ ಖರ್ಚು ಮಾಡಿದ್ದೀರಿ. ಯಾವುದೇ ಯೋಜನೆ ತೆಗೆದುಕೊಂಡರೂ ಲಕ್ಷಾಂತರ ರೂಪಾಯಿ ಖರ್ಚು ಮಾಡಿದ ನಂತರ ಅದರ ಔಟ್‌ಗೋ ಏನು ನೀರನ್ನು ಎಷ್ಟು ಜನ ಉಪಯೋಗಿಸಿಕೊಳ್ಳುತ್ತಾರೆ ಎಂಬುದನು ನೋಡಬೇಕು. ಇಟ್ಟಿಗ್ಗಾ

ಯೋಜನೆಯನ್ನು ಮಾಡಿಕೊಡಬೇಕೆನ್ನುತ್ತೇವೆ. ಆದರೆ ಸರ್ಕಾರದಲ್ಲಿ ಹಣ ಇಲ್ಲ ಅನ್ನುತ್ತೀರಿ. ಮಾನ್ಯ ದೇವೇಗೌಡರನ್ನು ಭೇಟಿ ಆದಮೇಲೆ ಕೆಲಸ ನಡೆಸಿದ್ದಾರೆ. ಅನೇಕ ಕಡೆ ಇರಿಗೇಷನ್ ಪೊಟೆನ್‌ಷಿಯಾಲಿಟಿ ಇದೆ. ಆ ನೀರನ್ನು ತೆಗೆದು ಉಪಯೋಗಿಸಿದರೆ ನಮ್ಮ ಭಾಗದಲ್ಲಿ ೩ ಪರ್ಸೆಂಟ್ ಇದ್ದ ಇರಿಗೇಷನ್ ೫-೬ ಪರ್ಸೆಂಟಿಗೆ ಬರುವ ಚಾನ್ಸಸ್ ಇದೆ. ಮುಖ್ಯ ಮಂತ್ರಿಗಳು, ಯೋಜನೆಗಾಗಿ ೧೯೮೭-೮೮ನೇ ಸಾಲಿಗೆ ೮೭೦ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆಂದು ಹೇಳಿದ್ದಾರೆ. ಕಾವೇರಿಗಾಗಿ ನೂರು ಕೋಟಿ ರೂಪಾಯಿ ಇಟ್ಟಿದ್ದಾರೆ. ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಏನೂ ಇಡದೆ ೨೦೦ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ರಿಸೋರ್ಸ್‌ಸ್‌ಗೆ ೩೦ ಕೋಟಿ ರೂಪಾಯಿಗಳನ್ನು ವಿಶ್ವ ಬ್ಯಾಂಕಿನವರು ಕೊಡುವ ಚಾನ್ಸಸ್ ಇದೆ ಎಂದು ಹೇಳುತ್ತಾರೆ. ಅವರು ೩೦ ಕೋಟಿ ರೂಪಾಯಿಗಳನ್ನು ಅಪ್ಪರ್ ಕೃಷ್ಣಾ ಪ್ರಾಜೆಕ್ಟಿಗೆ ಕೊಟರ್ರೆ ಇನ್ನು ೧೭೦ ಕೋಟಿ ರೂಪಾಯಿ ಎಲ್ಲಿದೆ ? ಅದರ ಬಗ್ಗೆ ಇವರಲ್ಲಿ ವ್ಯಾಖ್ಯಾನ ಮಾಡಿಲ್ಲ. ೧೭೦ ಕೋಟಿ ರೂಪಾಯಿಗಳನ್ನು ಕೊಡದೆ ೧೯೮೭-೮೮ರಲ್ಲಿ ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ೨೦೦ ಕೋಟಿ ರೂಪಾಯಿ ಖರ್ಚು ಮಾಡುತ್ತೇವೆಂದು ಹೇಳಿದ್ದಾರೆ. ಅದು ಸಾಧ್ಯವಾದ ಮಾತು. ಉತ್ತರ ಕೊಡುವಾಗ ನೀರಾವರಿ ಸಚಿವರು ೨೦೦ ಕೋಟಿ ರೂಪಾಯಿಗಳನ್ನು ಯಾವ ರೀತಿ ಅಪ್ಪರ್ ಕೃಷ್ಣ ಪ್ರಾಜೆಕ್ಟಿಗೆ ಒದಗಿಸುತ್ತಾರೆಂಬುದನ್ನು ಹೇಳಬೇಕು.

ನನ್ನ ಕ್ಷೇತ್ರದ ಬಗ್ಗೆ ಹೇಳುವುದಾದರೆ, ನಮ್ಮಲ್ಲಿ ೮೫ ಹಳ್ಳಿಗಳಿವೆ. ರಾಣಿಬಾಗ್ ಬಗ್ಗೆ ಲೋಕೋಪಯೋಗಿ ಸಚಿವರಿಗೆ ಹೇಳಿದ್ದೆ ಮತ್ತು ಪತ್ರವನ್ನು ಕೂಡ ಕೊಟ್ಟಿದ್ದೆ. ಮಳೆಗಾಲದಲ್ಲಿ ಅದು ಕಟ್‌ಔಟ್ ಆಗುತ್ತದೆ. ಹಳ್ಳ ತುಂಬಿ ಹಳ್ಳಿ ಒಂದು ಕಡೆ ಆಗುತ್ತದೆ. ಬಸ್ಸುಗಳು ಹೊರಗಡೆ ನಿಲ್ಲುತ್ತವೆ. ಅಲ್ಲಿ ಸೇತುವೆ ಕಟ್ಟಬೇಕೆಂದರೆ ೫-೬ ಲಕ್ಷ ರೂಪಾಯಿ ಬೇಕಾಗುತ್ತದೆ. ಅದರ ಪಕ್ಕದಲ್ಲೇ ಸೀತನೂರು ಎಂಬ ಹಳ್ಳಿ ಇದೆ. ಆ ಎರಡು ಊರಿನ ಜನರು ೧೦-೧೫ ವರ್ಷಗಳಿಂದ ಸೇತುವೆ ಕಟ್ಟಿಸಿ ಕೊಡಿ ಎಂದು ಕೇಳುತ್ತಿದ್ದಾರೆ. ಆ ವಿಷಯವನ್ನು ಪದೇ ಪದೇ ರುದ್ರಪ್ಪನವರು ಬಂದಾಗ ಹೇಳಿದ್ದೆ ಮತ್ತು ದೇವೇಗೌಡರಿಗೆ ಹೇಳಿದ್ದೆ. ಈಗ ಎಲ್ಲಾ ಜಿಲ್ಲಾಪರಿಷತ್ತಿಗೆ ಹೋಗುತ್ತದೆಂದರೆ ಅಲ್ಲಿಯೂ ಸಮಸ್ಯೆ ಇದೆ. ಗುಲ್ಬರ್ಗಾದಲ್ಲಿ ೮೦ ಲಕ್ಷ ರೂಪಾಯಿ ಬಿಲ್ಲುಗಳನ್ನು ಪೆಂಡಿಂಗ್ ಇಟ್ಟಿದ್ದಾರೆ. ಎಕ್ಸಿಕ್ಯೂಟಿವ್ ಇಂಜನಿಯರ್ ಅನ್ನು ಕೇಳಿದ್ದಕ್ಕೆ ೪ ತಿಂಗಳಿನಿಂದ ಕೆಲಸ ಇಲ್ಲವೆಂದರು. ಹೀಗಾಗಿ ಅನೇಕ ಜನಕಂಟ್ರಾಕ್ಟರುಗಳು ಶಾಸಕರ ಬೆನ್ನು ಹತ್ತಿದ್ದಾರೆ ಇಂಜಿನಿಯರ್ ಹೇಳುತ್ತಾರೆ. ನಾವು ಕೆಲಸ ಮಾಡಿದ್ದೇವೆ. ನಮಗೆ ಹಣ ಕೊಡಿಸಿಕೊಡಿ ಎಂದು. ಈಗ ಆ ಬಿಲ್ ಪೇಮೆಂಟ್ ಆಗಬೇಕು. ಯಾವಯಾವ ರೋಡ್ಸ್ ಜಡ್.ಪಿ.ಗೆ ಹೋಗುತ್ತದೆ ಮತ್ತು ಯಾವ ಯಾವ ರೋಡ್ಸ್ ಡಿಸ್ಟ್ರಿಕ್ಟ್‌ಗೆ ಉಳಿಯುತ್ತದೋ ಅರ್ಥವಾಗುತ್ತಿಲ್ಲ. ಸ್ಟೇಟ್ ಹೈವೇ ಮತ್ತು ನ್ಯಾಷನಲ್ ಹೈವೇ ಎಂದು ಇರುತ್ತದೆ. ಅದೇ ರೀತಿ ಡಿಸ್ಟ್ರಿಕ್ಟ್ ರೋಡ್‌ಗಳು ಯಾವುದು, ಹಳ್ಳಿ ರಸ್ತೆಗಳು ಯಾವುದು ಎಂಬ ಬಗ್ಗೆ ದಯಮಾಡಿ ಕೂಲಂಕಷವಾಗಿ ರಿಪೋರ್ಟ್ ಕೊಡಬೇಕು. ಯಾವ ಯಾವ ಹಳ್ಳಿಗಳು, ಯಾವ ಯಾವ ರಸ್ತೆಗಳು ಜಡ್.ಪಿ.ಗೆ ಹೋಗುತ್ತದೆ, ಅದಕ್ಕೆ ಕೊಟ್ಟ ಹಣ ಎಷ್ಟು ಹೇಳಬೇಕು. ಇವತ್ತು ಜಡ್.ಪಿ.ಗಳು ಲೋಕೋಪಯೋಗಿ ಕೆಲಸ ಮಾಡುವ ಸ್ಥಿತಿಯಲ್ಲಿಲ್ಲ. ಅವರು ಪ್ಲಾನ್ ಇಂಪ್ಲಿಮೆಂಟ್ ಮಾಡಬೇಕು. ಇನ್ನೂ ಬಹಳಷ್ಟು ಮಾತನಾಡುವುದಿತ್ತು. ಮಾನ್ಯ ಅಧ್ಯಕ್ಷರು ಗಂಟೆ ಬಾರಿಸಿದ ಮೇಲೆ ತಲೆಯಲ್ಲಿದ್ದದ್ದೆಲ್ಲಾ ಹೊರಟುಹೋಯಿತು. ಇಷ್ಟು ಹೇಳಿ ಅಧ್ಯಕ್ಷರಿಗೆ ವಂದಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕುಶಾಲ (ಸುಳ್ಯ).—ಮಾನ್ಯ ಅಧ್ಯಕ್ಷರೆ, ೧೯೮೭-೮೮ನೇ ಸಾಲಿನ ಲೋಕೋಪಯೋಗಿ, ನೀರಾವರಿ ಆಯವ್ಯಯವನ್ನು ವಿರೋಧಿಸಿ ಎರಡು ಮಾತುಗಳನ್ನು ಆಡುವುದಕ್ಕೆ ಇಷ್ಟಪಡುತ್ತೇನೆ. ಈಗಾಗಲೇ ಹಿರಿಯ ಸದಸ್ಯರಾದ ಚಿನ್ನಪ್ಪ ಅವರು ಹೇಳಿದ ಹಾಗೆ ಮಲೆನಾಡು, ಗುಡ್ಡಗಾಡು ಪ್ರದೇಶ ಮತ್ತು ಪಟ್ಟಣ ಪ್ರದೇಶಗಳಿಗೆ ಯೋಜನೆಗಳನ್ನು ವ್ಯವಸ್ಥಿತ ರೀತಿಯಲ್ಲಿ ಹಾಕಬೇಕೆಂದು ಪ್ರಸ್ತಾಪಿಸಲಾಗಿತ್ತು. ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ವಿಧಾನಸಭಾ ಕ್ಷೇತ್ರ ಮೀಸಲು ಕ್ಷೇತ್ರ ಕೊಡಗು ಜಿಲ್ಲೆಯ ಲಗ್ತೆಯಲ್ಲಿ ಅದು ಬರುತ್ತದೆ. ಆದರಂತೆ ಇದೂ ಕೂಡ ಮಲೆನಾಡು ಪ್ರದೇಶ. ೧೯೮೬-೮೭ರ ಆಯವ್ಯಯದಲ್ಲಿ ಅನುಬಂಧ 'ಇ' ಪುಟ ಸಂಖ್ಯೆ : ೩೧೨ರಲ್ಲಿ ಸಾಧಾರಣ ಅಂದಾಜು ವೆಚ್ಚ ೧೫ ಲಕ್ಷ ರೂಪಾಯಿನಲ್ಲಿ ೮ ರಸ್ತೆ ಕಾಮಗಾರಿ ಕೆಲಸಗಳನ್ನು ಕೈಗೊಳ್ಳಲಾಗಿತ್ತು. ಅದೇ ರೀತಿ ಪುಟ ಸಂಖ್ಯೆ :

೩೨೧–೩೨೨ರಲ್ಲಿ ಸೇತುವೆ ನಿರ್ಮಾಣದ ೮ ಕೆಲಸಗಳನ್ನು ಅಂದಾಜು ವೆಚ್ಚ ೫೭ ಲಕ್ಷದಲ್ಲಿ ತೆಗೆದುಕೊಳ್ಳಲಾಗಿತ್ತು. ಆದರೆ ೧೯೮೬–೮೭ನೇ ಸಾಲಿನ ಆಯವ್ಯಯದ ವರ್ಷಾಂತ್ಯ ಮುಗಿದರೂ ಕೂಡ ಯಾವುದೇ ಕಾಮಗಾರಿಗಳನ್ನು ಪ್ರಾರಂಭಿಸಿರುವುದಿಲ್ಲ. ಅದೇ ರೀತಿ ಒಂದೆರಡು ಕೆಲಸಗಳನ್ನು ಪ್ರಾರಂಭಿಸಿದರೂ ಕೂಡ ಎಲ್.ಓ.ಸಿ. ಬರದೇ ಕಾಮಗಾರಿಗಳನ್ನು ಇನ್ನೂ ಮುಂದುವರೆಸಿರುವುದಿಲ್ಲ. ಹೀಗಿರುವಾಗ ೫೭ ಲಕ್ಷ ರೂಪಾಯಿನ ಕೆಲಸಕ್ಕೆ ೩,೯೪,೦೦೦ ರೂಪಾಯಿ ಹಣವನ್ನು ಒದಗಿಸಿ ಅದನ್ನು ಜಿಲ್ಲಾಪರಿಷತ್ತಿಗೆ ಡೈವರ್ಟ್ ಮಾಡುವಂಥ ಯೋಜನೆಗಳನ್ನು ಹಾಕಿಕೊಳ್ಳಲಾಗಿದೆ. ಈ ೩,೯೪,೦೦೦ ರೂಪಾಯಿ ಹಣದಲ್ಲಿ ಕಾಮಗಾರಿಗಳನ್ನು ಕೈಗೊಳ್ಳುವುದಿದ್ದರೆ ಮಾನ್ಯ ಸಚಿವರನ್ನು ಶಂಕುಸ್ಥಾಪನೆ ಕಾರ್ಯಕ್ರಮಕ್ಕೆ ಕರೆದರೆ ಅದರ ವೆಚ್ಚ ಮಾಡುವುದಕ್ಕೆ ಕೂಡ ಹಣ ಸಾಕಾಗಲಾರದು ಎಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಪುಟ ನಂಬ್ರ ೭ ಅನುಬಂಧ 'ಇ' ಯಲ್ಲಿ ಕಟ್ಟಡಕ್ಕಾಗಿ ಇಟ್ಟ ಹಣವನ್ನು ನಮೂದಿಸಿದ್ದಾರೆ. ಆಯವ್ಯಯ ಮುಂಗಡ ಪತ್ರವನ್ನು ತಯಾರಿಸುವಾಗ ಸಂಬಂಧಪಟ್ಟ ಇಲಾಖೆ ಅಧಿಕಾರಿಗಳು ನಕಲುಪ್ರತಿಯನ್ನು ಮಾಡುತ್ತಿದ್ದಾರೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನುಬಂಧ 'ಇ' ಯಲ್ಲಿ ಪುಟ ಸಂಖ್ಯೆ ೭೭ರಲ್ಲಿ ಗುತ್ತಿಗಾರು ಪ್ರಾಥಮಿಕ ಶಾಲೆಗೆ ಒಂದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿತ್ತು. ಕಳೆದ ಎರಡು ವರ್ಷಗಳಿಂದ ಅದನ್ನು ಪ್ರೌಢಶಾಲೆಗೆ ವರ್ಗಾಯಿಸಬೇಕೆಂದು ವರದಿ ಕೊಟ್ಟು ವರ್ಗಾವಣೆ ಆಗಿದ್ದರೂ ಕೂಡ ಆ ಒಂದು ಲಕ್ಷ ರೂಪಾಯಿ ಹಣವನ್ನು ಪ್ರೌಢಶಾಲೆಗೆ ವರ್ಗಾವಣೆ ಮಾಡದೆ ಪ್ರಾಥಮಿಕ ಶಾಲೆಗೇ ಇರಿಸಲಾಗಿದೆ. ಇನ್ನೊಂದು ವಿಷಯ ಪುಟ ೨೨ರಲ್ಲಿ ಒಂದು ಲಕ್ಷ ೨೫ ಸಾವಿರ ರೂಪಾಯಿ ಹಣವನ್ನು ಹೆಣ್ಣುಮಕ್ಕಳ ಖಾಸಗಿ ಪ್ರೌಢಶಾಲೆಗೆ ಇಡಲಾಗಿದೆ. ನಿಜವಾಗಿ ಖಾಸಗಿ ಪ್ರೌಢಶಾಲೆಗೆ ಹಣ ಇಡುವಂಥ ಪ್ರಾವಿಷನ್ ಇಲ್ಲ. ಆದ್ದರಿಂದ ಅದನ್ನು ಸುಳ್ಯ ಗಾಂಧೀನಗರ ಪ್ರೌಢಶಾಲೆಗೆ ಕೊಡಬೇಕೆಂದು ವರದಿ ಕಳುಹಿಸಿದ್ದರೂ ೧,೨೫,೦೦೦ ರೂಪಾಯಿ ಹಣವನ್ನು ಹೆಣ್ಣುಮಕ್ಕಳ ಪ್ರೌಢಶಾಲೆಗೆ, ಖಾಸಗಿ ಶಾಲೆಗೇ ತೋರಿಸಿದ್ದಾರೆ. ಆದ್ದರಿಂದ ಆ ಹಣವನ್ನು ಸುಳ್ಯ ಗಾಂಧೀನಗರ ಪ್ರೌಢಶಾಲೆಗೆ ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಪರಿಶಿಷ್ಟ ಜಾತಿ ಮತ್ತು ಪಂಗಡಗಳ ಯೋಜನೆಗೆ ಹಣ ಇಡುವ ಕುರಿತು ಹೇಳುವುದಿದ್ದರೆ ೧೯೮೬–೮೭ರಲ್ಲಿ ಒಂದು ಕಿಲೋಮೀಟರ್ ರಸ್ತೆಯನ್ನು ಈ ಯೋಜನೆಯಲ್ಲಿ ತೆಗೆದುಕೊಂಡಿದ್ದರು. ೧೯೮೭ರ ಆಯವ್ಯಯ ಬಂದರೂ ಆ ಕಾಮಗಾರಿಯನ್ನು ಇನ್ನೂ ಪ್ರಾರಂಭ ಮಾಡಿಲ್ಲ.

ಅದೇ ರೀತಿ, ವಿದ್ಯುಚ್ಛಕ್ತಿ ಒದಗಿಸುವ ಬಗ್ಗೆ ಹೇಳುವುದಾದರೆ, ಬೇರೆ ಕ್ಷೇತ್ರಗಳಲ್ಲಿ ಆಗಿರುವಂತಹ ಅಭಿವೃದ್ಧಿ ಕೆಲಸಕಾರ್ಯಗಳು ನನ್ನ ಕ್ಷೇತ್ರದಲ್ಲಿ ಆಗಿಲ್ಲ. ಮೀಸಲು ಕ್ಷೇತ್ರಕ್ಕೆ ಸಾಮಾನ್ಯವಾಗಿ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದಿದ್ದರೂ ಯಾವುದೇ ರೀತಿಯ ಆದ್ಯತೆಯನ್ನು ಯಾವುದೇ ಕಾರ್ಯಕ್ರಮಗಳಲ್ಲಿ ಕೊಟ್ಟಿಲ್ಲ. ಸುಳ್ಯ ಕ್ಷೇತ್ರದಲ್ಲಿ ಒಂದು ಲಕ್ಷಕ್ಕಿಂತ ಹೆಚ್ಚು ವಿದ್ಯುಚ್ಛಕ್ತಿ ಕನೆಕ್ಷನ್‌ಗಳು ಇವೆ. ಕಾನೂನು ಪ್ರಕಾರ ಒಂದು ಲಕ್ಷಕ್ಕಿಂತ ಹೆಚ್ಚು ವಿದ್ಯುಚ್ಛಕ್ತಿ ಕನೆಕ್ಷನ್‌ಗಳು ಇದ್ದರೆ ಅಂತಹ ಕಡೆ ವಿದ್ಯುಚ್ಛಕ್ತಿಯ ಉಪ ಕೇಂದ್ರವನ್ನು ಕೊಡಬೇಕೆಂದು ಇದ್ದರೂ, ಅದರ ಬಗ್ಗೆ ನಾನು ಸಾಕಷ್ಟು ಪ್ರಸ್ತಾಪ ಮಾಡಿದ್ದರೂ ಇಲ್ಲಿಯವರೆಗೆ ವಿದ್ಯುಚ್ಛಕ್ತಿಯ ಉಪ ಕೇಂದ್ರವನ್ನು ತೆರೆದಿಲ್ಲ. ಆ ಬಗ್ಗೆ ಇದುವರೆವಿಗೂ ಸರ್ಕಾರ ಯಾವುದೇ ರೀತಿಯ ಕ್ರಮ ತೆಗೆದುಕೊಂಡಿಲ್ಲ. ನನ್ನ ಕ್ಷೇತ್ರವನ್ನು ಮೀಸಲು ಕ್ಷೇತ್ರವೆಂದು ಹೇಳುತ್ತಾರೆ. ದಕ್ಷಿಣ ಕನ್ನಡ ಜಿಲ್ಲೆಯ ೧೫ ವಿಧಾನ ಸಭಾ ಕ್ಷೇತ್ರಗಳಲ್ಲಿ ನನ್ನ ಕ್ಷೇತ್ರ ಮೀಸಲು ಕ್ಷೇತ್ರವಾಗಿದ್ದರೂ ಆ ಕ್ಷೇತ್ರಕ್ಕೆ ಯಾವ ರೀತಿಯ ಆದ್ಯತೆಯನ್ನು ಕೊಡಬೇಕೋ ಆ ಆದ್ಯತೆಯನ್ನು ಕೊಡುತ್ತಿಲ್ಲವೆಂದು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇ ರೀತಿ ಸೇತು ಬಂಧನ ಕಾರ್ಯಕ್ರಮದ ಬಗ್ಗೆಯಾಗಲಿ, ಆರ್.ಎಲ್.ಇ.ಜಿ.ಪಿ. ಹಾಗೂ ಎನ್.ಆರ್.ಇ.ಪಿ. ಯೋಜನೆಗಳಲ್ಲಾದರೂ ೧೯೮೬–೮೭ನೇ ಸಾಲಿನಲ್ಲಿ ಯಾವ್ಯಾವ ಕಾರ್ಯಕ್ರಮಗಳು ಮಂಜೂರಾಗಿದ್ದವೋ ಆ ಕಾರ್ಯಕ್ರಮಗಳಲ್ಲಿ ಒಂದೇ ಒಂದು ಕಾರ್ಯಕ್ರಮವನ್ನೂ ಪ್ರಾರಂಭ ಮಾಡಿಲ್ಲ. ಉದಾಹರಣೆಗೆ ಹೇಳುವುದಾದರೆ, ೧೯೮೧ನೇ ಇಸವಿಯಲ್ಲಿ ಸನ್ಮಾನ್ಯ ವೀರಪ್ಪ ಮೊಯ್ಲಿಯವರು ಅರ್ಥಸಚಿವರಾಗಿದ್ದಾಗ ೯ ರಸ್ತೆ ಕಾಮಗಾರಿಗಳನ್ನು ಮಂಜೂರು ಮಾಡಿದ್ದರು. ಅದೇ ಕಾಮಗಾರಿಗಳನ್ನು ಪುನಃ ೧೯೮೬–೮೭ನೇ ಸಾಲಿನ ಬಡ್ಜೆಟ್ಟಿನಲ್ಲೂ ಸೇರಿಸಿದ್ದಾರೆ. ಅವುಗಳನ್ನು ಈವರೆವಿಗೂ ಸಂಪೂರ್ಣ ಮಾಡಿಲ್ಲ. ಅದೇ ರೀತಿ ಸಿ.ಆರ್.ಎಫ್. ಫಂಡ್‌ನಿಂದ ೫೦ ಲಕ್ಷ ಹಣವನ್ನು ಮಂಜೂರು ಮಾಡಿ ಕೊಲ್ಲಮೊಗ್ರು ಸೇತುವೆಯನ್ನು ತೆಗೆದುಕೊಂಡಿದ್ದು ಆ ಸೇತುವೆಯ ಶಂಕುಸ್ಥಾಪನೆಯನ್ನು ೧೯೮೧ರಂದೇ ಮಾಡಿದ್ದರೂ ಈ ತನಕ ಆ ಕೆಲಸ ಪೂರ್ತಿಯಾಗಿಲ್ಲ. ಅದೇ ರೀತಿ ಅಂತರರಾಜ್ಯ ರಸ್ತೆಯ ಬಗ್ಗೆ ಹೇಳುವುದಾದರೆ ಎರಡು ಇಂತಹ

ಕಾಮಗಾರಿಗಳನ್ನು ತೆಗೆದುಕೊಳ್ಳುವ ಸಲುವಾಗಿ ಸರ್ಕಾರಕ್ಕೆ ಮನವಿ ಮಾಡಿಕೊಂಡಿದ್ದೆ. ಒಂದು ಸುಬ್ರಮ್ಮಣ್ಯದಿಂದ ಸೋಮವಾರಪೇಟೆಯವರೆಗೆ ೪೫ ಕಿಲೋಮೀಟರ್ ಉದ್ದದ ರಸ್ತೆ. ಇನ್ನೊಂದು ಕರ್ನಾಟಕ ರಾಜ್ಯದಿಂದ ಕೇರಳಕ್ಕೆ ಕನೆಕ್ಟ್ ಮಾಡುವಂತಹದ್ದು. ಇವುಗಳ ಬಗ್ಗೆ ಹೆಚ್ಚಿನ ಆದ್ಯತೆಯನ್ನು ಕೊಟ್ಟು ಈ ಎರಡು ಕಾಮಗಾರಿಗಳನ್ನು ಕೊನೆ ಪಕ್ಷ ಅಡಿಷನಲ್ ಬಡ್ಜೆಟ್ಟಿನಲ್ಲಾದರೂ ಸೇರಿಸಿಕೊಂಡು ಈ ಎರಡೂ ಕಾಮಗಾರಿಗಳನ್ನು ಈ ಸಾಲಿನಲ್ಲೇ ಮಾಡಿಕೊಡಬೇಕೆಂದು ಸನ್ಮಾನ್ಯ ಸಚಿವರನ್ನು ಒತ್ತಾಯ ಮಾಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಸನ್ಮಾನ್ಯ ಅಧ್ಯಕ್ಷರೆ,

ಅಧ್ಯಕ್ಷರು.—ನೀವು ಟೈಮಿನ ಕಡೆಗೇ ನೋಡಿಕೊಂಡು ಮಾತನಾಡಬೇಕು. ಹೆಚ್ಚಿಗೆ ಸಮಯ ಇಲ್ಲ.

ಶ್ರೀ ಚಂದ್ರಕಾಂತ್ ಜಿ. ಬೆಲ್ಲದ್.—ಮಾನ್ಯ ಅಧ್ಯಕ್ಷರು ನನಗೆ ವೇಳೆಯ ನಿರ್ಬಂಧವನ್ನು ಹಾಕಿದ್ದಾರೆ. ಎಲ್ಲ ಇಲಾಖೆಗಳಿಗಿಂತಲೂ ಅತ್ಯಂತ ಪ್ರಮುಖವಾದ ಇಲಾಖೆ ಇದು. ನಮ್ಮ ರಾಜ್ಯದಲ್ಲಿ ಬೇರೆ ಎಲ್ಲಾ ಇಲಾಖೆಗಳಿಗಿಂತ ಹೆಚ್ಚು ಹಣವನ್ನು ಈ ಇಲಾಖೆಯ ವತಿಯಿಂದ ಖರ್ಚು ಮಾಡುತ್ತಿದ್ದು ಇಡೀ ರಾಜ್ಯದ ಪ್ರಗತಿಗೆ ಮುಖ್ಯವಾಗಿ ಕ್ರಿಯಾತ್ಮಕವಾದ ಇಲಾಖೆ. ಜನ ಶಕ್ತಿಯನ್ನು ಹೆಚ್ಚಿನ ಪರಿಣಾಮಕಾರಿಯಾದ ರೀತಿಯಲ್ಲಿ ಉಪಯೋಗಿಸಿ ಎಲ್ಲ ಕೈಗಳಿಗೂ ಕೆಲಸವನ್ನು ಒದಗಿಸುವಂತಹ ಇಲಾಖೆ ಎಂದರೆ ಈ ಇಲಾಖೆ ಒಂದೇ. ಈ ಇಲಾಖೆಯ ಮುಖ್ಯವಾದ ಕಾರ್ಯವೇನೆಂದರೆ, ಭಾರಿ ಮತ್ತು ಮಧ್ಯಮ ಹಾಗೂ ಚಿಕ್ಕ ನೀರಾವರಿ ಯೋಜನೆಗಳು. ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಬಹಳಷ್ಟು ವರ್ಷಗಳಿಂದ ಉಳಿದಂತಹ ಅನೇಕ ಭಾರಿ ಮತ್ತು ಮಧ್ಯಮ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ಕೊಡುವಂತಹ ಪ್ರಸಂಗ ಈ ಸರ್ಕಾರಕ್ಕೆ ಒದಗಿ ಬಂತು ಆದರೆ ಇಲ್ಲಿಯವರೆಗಿನ ಅಲಕ್ಷ್ಯತನದಿಂದ ಎಲ್ಲ ನೀರಾವರಿ ಯೋಜನೆಗಳು ಕುಂಠಿತವಾಗಿ ಅದಕ್ಕೆ ತೊಡಗಿಸುವಂತಹ ಹಣ ಈ ರಾಜ್ಯದ ಜನತೆಯ ಪ್ರಯೋಜನಕ್ಕೆ ಮುಟ್ಟಿಲ್ಲ. ಇಲ್ಲಿಯವರೆಗೂ ಈ ಹಣವನ್ನು ತೊಡಗಿಸಿರುವುದು ಬಹಳ ದೊಡ್ಡ ಪ್ರಮಾಣದಲ್ಲಿ ಇದ್ದರೂ ಇವತ್ತಿಗೂ ಸಹ ಅದರ ಪ್ರಯೋಜನ ಜನತೆಗೆ ಮುಟ್ಟಿಲ್ಲ. ಆದರೆ ಇನ್ನು ಮುಂದಾದರೂ ಇದರಲ್ಲಿ ತೊಡಗಿಸುವಂತಹ ಹಣ ತೀವ್ರವಾಗಿ ಜನತೆಗೆ ತಲುಪಿ ಅದರ ಲಾಭ ಜನತೆಯನ್ನು ಮುಟ್ಟುವ ದಿಸೆಯಲ್ಲಿ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕೆಂದು ಸನ್ಮಾನ್ಯ ಮಂತ್ರಿಗಳಲ್ಲಿ ನಾನು ವಿನಂತಿ ಮಾಡಿಕೊಳ್ಳುತ್ತೇನೆ.

೪-೦೦ ಪಿ.ಎಂ.

ಇವತ್ತಿನ ದಿವಸ ಹಣ ಹೂಡಿಕೆ ಕಾರ್ಯ ಬಹಳ ಮಹತ್ತರವಾದುದು. ಎಲ್ಲಾ ಶಾಸಕರ ಹಾಗೂ ಜನತೆಯ ಅಭಿಲಾಷೆಯಂತೆ ಚಿಕ್ಕ ನೀರಾವರಿಗೆ ಆದ್ಯತೆಯನ್ನು ಕೊಡಬೇಕು. ಇವತ್ತು ಸಣ್ಣಪುಟ್ಟ ರೈತರು ಯಾರಿದ್ದಾರೆ ಅವರೆಲ್ಲರಿಗೂ ತೀವ್ರವಾಗಿ ನೀರನ್ನು ಒದಗಿಸುವ ವ್ಯವಸ್ಥೆಯಾಗಬೇಕು. ಈ ದಿಸೆಯಲ್ಲಿ ಚಿಕ್ಕ ನೀರಾವರಿಗೆ ಏತ ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡುವುದು ಅಷ್ಟೇ ಮಹತ್ವವಾಗಿದೆ. ಇದರಲ್ಲಿ ತಾವು ಹಣ ಹೂಡಿಕೆ ಮಾಡಿದರೆ ರೈತ ಜನರ ಕೈಗೆ ಕೆಲಸ ಸಿಕ್ಕಿ ಅವರ ಆರ್ಥಿಕ ಬಲ ಕೂಡಾ ಹೆಚ್ಚುತ್ತದೆಂದು ಹೇಳುತ್ತೇನೆ. ಮಧ್ಯಮ ಮತ್ತು ದೊಡ್ಡ ನೀರಾವರಿ ಬಗ್ಗೆ ಹೇಳುವುದಾದರೆ ತೆಲುಗು-ಗಂಗಾ ಯೋಜನೆ ಬಹಳ ದೊಡ್ಡ ಸಮಸ್ಯೆಯಾಗಿದೆ. ಕಾವೇರಿ ಜಲಾನಯನದ ಯೋಜನೆಗಳನ್ನೂ ಕೂಡಾ ೨೦೦೦ನೇ ಇಸವಿಯ ಹೊತ್ತಿಗೆ ಮುಗಿಸಬೇಕಾಗುತ್ತದೆ. ಆ ದೃಷ್ಟಿಯಿಂದ ಹಣ ಬಹಳ ತುರ್ತಾಗಿ ಬೇಕಾಗಿದ್ದು ಈ ಬಗ್ಗೆ ಎಷ್ಟು ಹೆಚ್ಚು ಹಣ ಕೊಟ್ಟರೂ ಅದು ಸಾಲದು. ಇನ್ನೂ ಹೆಚ್ಚು ಹಣವನ್ನು ಈ ಯೋಜನೆಗಳಿಗೆ ಕೊಟ್ಟು ತೀವ್ರವಾಗಿ ಕೆಲಸ ಮುಗಿಸಬೇಕು. ಇವತ್ತು ನೀರಾವರಿಯಲ್ಲಿ ತೀವ್ರವಾದ ಲಾಭಸಿಗಬೇಕು ಎನ್ನುವ ದೃಷ್ಟಿಯಲ್ಲಿ ಹಣವನ್ನು ಹೂಡುವುದೂ ಕೂಡಾ ಬಹಳ ಮುಖ್ಯವಾದುದಾಗಿದೆ. ಭಾರೀ ನೀರಾವರಿ ಯಾಗಲೀ, ಮಧ್ಯಮ ನೀರಾವರಿಯಾಗಲೀ ಇವತ್ತು ಇವುಗಳಲ್ಲಿ ಹೂಡಿರುವ ಹಣದಲ್ಲಿ ಜನತೆಗೆ ಲಾಭ ಆದಷ್ಟು ಬೇಗ ಸಿಗಬೇಕಾಗಿದೆ ಇವತ್ತು ಉತ್ಪಾದನೆ ಹೆಚ್ಚು ಆಗಬೇಕು ಎನ್ನುವ ದೃಷ್ಟಿಯಲ್ಲಿ ಕೂಡಾ ಯೋಜನೆಗಳನ್ನು ಹಾಕಿಕೊಳ್ಳಬೇಕಾಗಿದೆ. ಇವತ್ತು ತುಂಗಭದ್ರಾ, ಮಲಪ್ರಭಾ ಯೋಜನೆಯ ಪ್ರದೇಶದ ಕೆಳಗೆ ಇರುವ ರೈತರು ಬಹಳ ತೊಂದರೆಯನ್ನು ಅನುಭವಿಸುತ್ತಿದ್ದಾರೆ. ಕಾಲುವೆಗಳು ಸರಿಯಾಗಿ ರಿಪೇರಿ ಆಗದೇ ಕೊನೆಯ ಭಾಗದವರಿಗೆ ಸರಿಯಾಗಿ ನೀರು ಸಿಗದೇ ಇರುವ ಪರಿಸ್ಥಿತಿ ಇದೆ. ಇವತ್ತು ಇರುವ ಕೆಲವು ಪ್ರಾಜೆಕ್ಟುಗಳಲ್ಲಿ

ಬಹಳಷ್ಟು ಹೂಳು ತುಂಬಿ ಹೂತುಹೋಗಿರುವ ಪ್ರಸಂಗವನ್ನು ನಾವು ಕಾಣುತ್ತಿದ್ದೇವೆ. ಈ ಬಗ್ಗೆ ಹೆಚ್ಚು ಆದ್ಯತೆ ಕೊಟ್ಟು ಯಾವ ಯಾವ ದೊಡ್ಡ ದೊಡ್ಡ ಯೋಜನೆಗಳು ಹೂತುಹೋಗುವ ಪರಿಸ್ಥಿತಿಗೆ ಬಂದಿವೆ ಅವುಗಳ ಬಗ್ಗೆ ತೀವ್ರವಾಗಿ ಪರಿಶೀಲನೆ ಮಾಡಿ ಕಾರ್ಯಕ್ರಮ ಕೈಗೊಳ್ಳಬೇಕು. ಇವತ್ತು ಕಾಲುವೆ ಬಗ್ಗೆ ಹೆಚ್ಚು ಆದ್ಯತೆ ಕೊಟ್ಟು ಸರಿಯಾದ ಪ್ರಮಾಣದಲ್ಲಿ ಎಲ್ಲಾ ಕಡೆ ನೀರು ವಿತರಣೆ ಆಗುವ ಕಡೆ ಲಕ್ಷ್ಯ ಕೊಡಬೇಕು. ಜೊತೆಗೆ ಕೆಲವು ಭಾಗದಲ್ಲಿ ನೀರಾವರಿ ಭೂಮಿ ಬಂಜರು ಆಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ. ಈ ಬಗ್ಗೆ ಮಾನ್ಯ ಮಂತ್ರಿಗಳು ಹಾಗೂ ಇಲಾಖೆಯ ಅಧಿಕಾರಿಗಳು ಗಮನ ಹರಿಸಿ ಅದನ್ನು ಸರಿಮಾಡುವ ಬಗ್ಗೆ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು. ಇವತ್ತು ಈ ಇಲಾಖೆ ಬಗ್ಗೆ ದೇವೇಗೌಡರಿಗೆ ಬಹಳ ಶ್ರದ್ಧೆ ಇದೆ. ಎಲ್ಲಾ ಕಾರ್ಯಕ್ರಮಗಳನ್ನು ತೀವ್ರವಾಗಿ ಮುಗಿಸುವ ಬಗ್ಗೆ ಆಸಕ್ತಿಯನ್ನು ತಳೆದಿದ್ದಾರೆ. ಅಷ್ಟೇ ಒಂದು ಆಸಕ್ತಿಯನ್ನು ಅವರು ಸರಿಯಾದ ಪ್ರಮಾಣದಲ್ಲಿ ಅಧಿಕಾರಿಗಳಿಂದ ಪಡೆದುಕೊಳ್ಳುವ ಬಗ್ಗೆ ನಿಗಾ ವಹಿಸಬೇಕು. ರಾಜಗೋಪಾಲಚಾರಿಯವರ ಕಾಲದಲ್ಲೂ ಕೂಡ ಈ ಇಲಾಖೆಯ ಕೆಲಸಕಾರ್ಯಗಳ ಬಗ್ಗೆ ಗುರುತರವಾದ ಆರೋಪಗಳು ಇದ್ದವು. ಇವತ್ತಿನ ದಿವಸ ಅದು ಕಡಿಮೆ ಆಗಿದೆ ಎಂದು ನಾನು ಹೇಳುವುದಕ್ಕೆ ಹೋಗುವುದಿಲ್ಲ. ಇವತ್ತು ದೊಡ್ಡ ದೊಡ್ಡ ಯೋಜನೆಗಳಲ್ಲಿ ಸಿಮೆಂಟ್, ಕಬ್ಬಿಣ ಹೊರಕ್ಕೆ ಹೋಗುತ್ತಿದೆ. ಎನ್ನುವ ಆಪಾದನೆಗಳು ಇವೆ. ಅವನ್ನು ಸಾಗಣೆ ಮಾಡುವವರನ್ನು ಸರಿಯಾಗಿ ಮಟ್ಟ ಹಾಕುವುದು ಸನ್ಮಾನ್ಯ ಮಂತ್ರಿಯವರ ಕರ್ತವ್ಯ ಇವತ್ತಿನ ದಿವಸ ರಾಜ್ಯದ ಯೋಜನಾ ಕಾರ್ಯದಲ್ಲಿ ಅಧಿಕಾರಿಗಳು ತಮ್ಮನ್ನು ತಾವೇ ತೊಡಗಿಸಿಕೊಂಡು ಕೆಲಸ ಮಾಡಬೇಕಾಗಿದೆ. ರಾಷ್ಟ್ರದ ಪ್ರಗತಿಯ ಬಗ್ಗೆ ಅವರು ತಮ್ಮನ್ನು ತಾವೇ ತೊಡಗಿಸಿಕೊಳ್ಳಬೇಕು. ಮತ್ತು ಪ್ರಾಮಾಣಿಕವಾಗಿ ಯೋಜನೆಗಳನ್ನು ಕಾರ್ಯಗತ ಮಾಡಬೇಕು ಎನ್ನುವ ಬಗೆ ಒಂದು ಒಳ್ಳೆಯ ಭಾವನೆ ಎಲ್ಲಾ ಅಧಿಕಾರಿಗಳಲ್ಲೂ ಬರಬೇಕು. ಏನೋ ರಾಜಕಾರಣಿಗಳು ಹೇಳುತ್ತಾರೆ. ಮಂತ್ರಿಗಳು ನಮ್ಮ ಮೇಲೆ ನಿರ್ಬಂಧ ಹಾಕುತ್ತಾರೆ ಎನ್ನುವುದನ್ನು ಬಿಟ್ಟು ಜನರ ಕೂಗಿನ ಕಡೆ ಓಗೊಟ್ಟು, ಅವರಿಗೆ ಸಹಾಯ ಮಾಡಬೇಕು ಎನ್ನುವ ದೃಷ್ಟಿ ಇಟ್ಟುಕೊಂಡು ಕೆಲಸ ಮಾಡಬೇಕಾಗಿದೆ. ನಾವೂ ಕೂಡ ದೇಶದ ಪ್ರಗತಿಗೆ ಪ್ರಮುಖ ಪಾತ್ರವನ್ನು ವಹಿಸಬೇಕು, ಶ್ರದ್ಧೆಯಿಂದ ಕೆಲಸ ಮಾಡಬೇಕು ಎನ್ನುವುದು ಅವರ ಮನಸ್ಸಿನಲ್ಲಿ ಪರಿವರ್ತನಾ ರೂಪದಲ್ಲಿ ಬರಬೇಕು. ಅದನ್ನು ನಾವು ಕಾಣಬೇಕು. ಹಿಂದೆ ಕಟ್ಟಿದ ಸೇತುವೆಗಳು ಇವತ್ತು ಯಾವ ಸ್ಥಿತಿಯಲ್ಲಿ ಇವೆ ಎಂಬುದನ್ನು ನಾವು ಇವತ್ತು ನೋಡುತ್ತಿದ್ದೇವೆ.

ಅವುಗಳ ಲೈಫ್ ಎಷ್ಟು ದಿವಸ ಇರಬೇಕು ಅಷ್ಟು ದಿವಸ ಇರುತ್ತಿಲ್ಲ. ಎಷ್ಟು ದಿವಸ ಬಾಳಿಕೆ ಬರಬೇಕೋ ಅಷ್ಟು ಬಾಳಿಕೆ ಬರುತ್ತಿಲ್ಲ. ಅದಕ್ಕೆ ಮುಖ್ಯವಾದ ಕಾರಣ ಏನೆಂದರೆ ಅವುಗಳ ಗುಣಮಟ್ಟ ಇಲ್ಲದೇ ಇರುವುದು ಲೋಕೋಪಯೋಗಿ ಇಲಾಖೆಯವರು ಕಟ್ಟಿರತಕ್ಕ ಅನೇಕ ಕಟ್ಟಡಗಳು ರಿಪೇರಿಯನ್ನು ಕಾಣುತ್ತಿವೆ. ಅದಕ್ಕೊಂದು ಉದಾಹರಣೆ ಕೊಡುವುದಾದರೆ ಧಾರವಾಡದಲ್ಲಿರತಕ್ಕ ಹಿಂದುಳಿದ ವರ್ಗಗಳವರ ವಸತಿಗೃಹವನ್ನು ಒಂದು ವರ್ಷದ ಹಿಂದೆ ಕಟ್ಟಿದ್ದಾರೆ. ಆ ವಸತಿ ಗೃಹವನ್ನು ಕಟ್ಟಿ ಒಂದು ವರ್ಷವಾಗಿದೆ, ಈಗ ಒಂದೂವರೆ ಲಕ್ಷ ರೂಪಾಯಿ ರಿಪೇರಿ ಮಾಡಲಿಕ್ಕೆ ಎಸ್ಟಿಮೇಟ್ ಮಾಡಿದ್ದಾರೆ. ಎಸ್ಟಿಮೇಟ್ ಮಾಡಿ ಇಲ್ಲಿಗೆ ಕಳುಹಿಸಿರಬೇಕು ಇಂತಹ ಸ್ಥಿತಿಯಲ್ಲಿ ಕಟ್ಟಡಗಳನ್ನು ಕಟ್ಟುತ್ತಿದ್ದಾರೆಂದರೆ ಇದು ಬಹಳ ವಿಷಾದ ಅನಿಸುತ್ತದೆ. ಸಾರ್ವಜನಿಕ ಹಣವನ್ನು ಸದುಪಯೋಗ ಮಾಡಿಕೊಳ್ಳಬೇಕು ಅದಕ್ಕೆ ಬದಲಾಗಿ ಪೋಲ್ ಮಾಡತಕ್ಕದ್ದು ಸರಿಯಲ್ಲ. ಅನೇಕ ಕಟ್ಟಡಗಳು ಇದೇ ಸ್ಥಿತಿಯಲ್ಲಿವೆ. ನಮ್ಮ ಲೋಕೋಪಯೋಗಿ ಇಲಾಖೆಯವರ ಎಸ್ಟಿಮೇಟಿಗೂ, ಬ್ಲಾಕ್ ಡೆವಲಪ್ ಮೆಂಟ್ ಆಫೀಸ್‌ನವರ ಎಸ್ಟಿಮೇಟಿಗೂ ಲ್ಯಾಂಡ್ ಆರ್ಮಿಯವರ ಎಸ್ಟಿಮೇಟಿಗೂ ಅಜಗಜಾಂತರ ವ್ಯತ್ಯಾಸವಿದೆ. ಗುಣಮಟ್ಟದ ಕಡೆಗೂ ಬಹಳಷ್ಟು ಲಕ್ಷ್ಯ ಕೊಡಬೇಕಾಗುತ್ತದೆ. ಹಣ ಸೋರಿಹೋಗದ ಹಾಗೆ ತಡೆಗಟ್ಟಬೇಕಾಗಿದೆ. ಈ ದಿಶೆಯಲ್ಲಿ ಮಾನ್ಯ ಮಂತ್ರಿಗಳು ಲಕ್ಷ್ಯ ಕೊಟ್ಟು ಕೆಲಸಮಾಡಬೇಕು. ಆ ರೀತಿ ಮಾಡುತ್ತಾರೆಂದು ನಾನು ಆಸೆಯನ್ನು ಇಟ್ಟುಕೊಂಡಿದ್ದೇನೆ. ಇವತ್ತಿನ ದಿವಸ ಬಹುಸಂಖ್ಯಾತ ರೈತ ಸಮುದಾಯ ಒಂದು ಆಸೆಯನ್ನು ಇಟ್ಟುಕೊಂಡಿದ್ದಾರೆ. ಅದೇನೆಂದರೆ, ನೀರಾವರಿ ಪ್ರಯೋಜನ ನಮಗೆ ಸಿಗುತ್ತದೆ, ಅದರಿಂದ ನಮಗೆ ಉದ್ಯೋಗ ಸಿಗುತ್ತದೆ, ರಾಜ್ಯ ಮತ್ತು ರಾಷ್ಟ್ರದ ಅಭ್ಯುದಯವಾಗಲಿಕ್ಕೆ ನೀರಾವರಿ ಕಡೆಗೆ ಮಾನ್ಯ ಮಂತ್ರಿಗಳು ಹೆಚ್ಚು ಗಮನ ಕೊಡುತ್ತಾರೆಂದು ಆಸೆಯನ್ನು ಇಟ್ಟುಕೊಂಡಿದ್ದಾರೆ. ರಾಷ್ಟ್ರೀಯ ಹೆದ್ದಾರಿಗಳ ಬಗ್ಗೆ ಹೇಳುವುದಾದರೆ ಅನೇಕ ರಾಜ್ಯದ ಹೆದ್ದಾರಿಗಳು, ಚಿಕ್ಕಪುಟ್ಟ

ಹೆದ್ದಾರಿಗಳು ಬಹಳಷ್ಟು ಹೀನ ಸ್ಥಿತಿಯಲ್ಲಿರುವುದನ್ನು ನಾವು ಕಾಣುತ್ತಿದ್ದೇವೆ. ಅದರ ಕಡೆಗೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ರಸ್ತೆಯ ಬದಿಗಳಲ್ಲಿ ಗಿಡಮರಗಳನ್ನು ನೆಡುತ್ತಿಲ್ಲ. ಹಿಂದಿನ ರಾಜ ಮಹಾರಾಜರ ಕಾಲದಲ್ಲಿ ನೆಟ್ಟಂತಹ ಗಿಡಮರಗಳನ್ನು ಈಗಲೂ ನೋಡುತ್ತಿದ್ದೇವೆ. ಉರುವಲು ಕಟ್ಟಿಗೆ ಕೊರತೆ ಇರುವುದರಿಂದ ಎಲ್ಲಾ ಮರಗಳನ್ನು ಕಡಿಯುತ್ತಿದ್ದಾರೆ, ಗಿಡಮರಗಳನ್ನು ಬೆಳೆಸುವುದಕ್ಕೆ ಅರಣ್ಯ ಇಲಾಖೆಯವರು ಸಾಕಷ್ಟು ಹಣವನ್ನು ಖರ್ಚುಮಾಡುತ್ತಿದ್ದಾರೆ. ಆದರೂ ಲೋಕೋಪಯೋಗಿ ಮಂತ್ರಿಗಳೂ ಸಹ ರಸ್ತೆಯ ಇಬ್ಬದಿಯಲ್ಲೂ ಗಿಡಗಳನ್ನು ಹಚ್ಚತಕ್ಕ ಕಾರ್ಯವನ್ನು ಮಾಡಬೇಕು ಅದರ ಜೊತೆಗೆ ರಾಷ್ಟ್ರೀಯ ಹೆದ್ದಾರಿ ನಂ ೪ ಏನಿದೆ ಅದು ಧಾರವಾಡ ಮತ್ತು ಹುಬ್ಬಳ್ಳಿ ನಡುವೆ ಹೆಚ್ಚು ವಾಹನ ದಟ್ಟಣೆ ಇರತಕ್ಕ ರಸ್ತೆ ಅಲ್ಲಿ ಮೇಲಿಂದ ಮೇಲೆ ವಾಹನ ಅಪಘಾತಗಳು ಸಂಭವಿಸುತ್ತಿರುವುದರಿಂದ ನಗರದ ಹೊರಗೆ ಬೈಪಾಸ್ ರಸ್ತೆ ತಕ್ಷಣ ಮಾಡಬೇಕು. ಆ ಕೆಲಸವನ್ನು ತೀವ್ರವಾಗಿ ಕೈಗೆತ್ತಿಕೊಳ್ಳಬೇಕಾಗುತ್ತದೆ. ಅದಕ್ಕೆ ಕೇಂದ್ರ ಸರ್ಕಾರದಿಂದ ಹಣ ಬರುವುದು ಇದೆಯೆಂದು ಕಳೆದ ವರ್ಷ ಮಾನ್ಯ ಮಂತ್ರಿಗಳು ಹೇಳಿದ್ದಾರೆ ಈಗಾಗಲೇ ಭೂಮಿಯನ್ನು ವಶಪಡಿಸಿಕೊಳ್ಳುವ ಕಾರ್ಯ ಮುಗಿದಿದೆ, ರಸ್ತೆ ಕೆಲಸವನ್ನು ತೀವ್ರವಾಗಿ ನಡೆಯುವಂತೆ ಮಾಡಬೇಕೆಂದು ಮಾನ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದರ ಜೊತೆಗೆ ಗ್ರಾಮಾಂತರ ಪ್ರದೇಶಗಳಲ್ಲಿರತಕ್ಕ ರಸ್ತೆಗಳನ್ನು ರೈತರಿಗೆ ಅನುಕೂಲವಾಗುವಂತೆ ಮಾಡಿಕೊಡಬೇಕು. ರೈತ ಉತ್ತುಬಿತ್ತು ವ್ಯವಸಾಯ ಮಾಡಲಿಕ್ಕೆ ಹೊಲ ಗದ್ದೆಗಳಿಗೆ ಹೋಗಿ ಬರಲಿಕ್ಕೆ ಅನುಕೂಲವಾಗುವಂತೆ ಚಿಕ್ಕಪುಟ್ಟ ರಸ್ತೆಗಳನ್ನು ಮಾಡಲಿಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕು. ಜಿಲ್ಲಾಪರಿಷತ್ತು ಮತ್ತು ಮಂಡಲ ಪಂಚಾಯಿತಿಗಳಿಗೆ ಚಿಕ್ಕಪುಟ್ಟ ರಸ್ತೆಗಳು ಸಣ್ಣ ನೀರಾವರಿ ಕೆಲಸ ರಸ್ತೆ ಕೆಲಸಗಳನ್ನು ವಹಿಸಿಕೊಡಲಾಗುತ್ತದೆಂದು ಹೇಳುತ್ತಿದ್ದಾರೆ. ಹೀಗೆ ವಹಿಸಿಕೊಡುವುದರ ಜೊತೆಗೆ ಲೋಕೋಪಯೋಗಿ ಇಲಾಖೆಯವರು ಬಹಳಷ್ಟು ಕೆಲಸವನ್ನು ಮಾಡಿ ರಾಜ್ಯದ ಅಭಿವೃದ್ಧಿಗಾಗಿ ಹೆಚ್ಚಿನ ಸೇವೆಯನ್ನು ಮಾಡಬೇಕೆಂದು ಕೇಳಿಕೊಳ್ಳುತ್ತೇನೆ. ಧಾರವಾಡ ನಗರದಲ್ಲಿ ಅನೇಕ ಶಾಲಾ ಕಟ್ಟಡಗಳನ್ನು ಮೆಯಿಂಟೆನೆನ್ಸ್ ಮಾಡಲಿಕ್ಕೆ ಲೋಕೋಪಯೋಗಿಇಲಾಖೆಯವರ ಹತ್ತಿರ ಹಣವಿಲ್ಲ. ಅನೇಕ ಶಾಲೆಗಳಿಗೆ ಕಟ್ಟಡಗಳು ಇಲ್ಲ ಕಟ್ಟಡ ಕಟ್ಟಲಿಕ್ಕೆ ಹಣವನ್ನು ಒದಗಿಸಿಕೊಡುತ್ತೇವೆಂದು ಕಳೆದ ವರ್ಷ ಹೇಳಲಾಗಿತ್ತು. ಆದರೂ ಇದುವರೆಗೆ ಹಣವನ್ನು ಒದಗಿಸಿಲ್ಲ ಪ್ರಾಥಮಿಕ ಶಾಲೆಗಳ ಕಟ್ಟಡಗಳನ್ನು ಕಟ್ಟಲಿಕ್ಕೆ ಹೆಚ್ಚಿನ ಆದ್ಯತೆಯನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ. ಮಾನ್ಯ ಶಿಕ್ಷಣ ಸಚಿವರಾದ ಮಂಜುನಾಥ್‌ರವರು ಧಾರವಾಡಕ್ಕೆ ಬಂದಿದ್ದಾಗ ಬಹುದಿನಗಳ ಬೇಡಿಕೆಯಾದ ಗ್ರಂಥಾಲಯ ಕಟ್ಟಡವನ್ನು ಕೊಡುತ್ತೇನೆಂದು ಆಶ್ವಾಸನೆಯನ್ನು ಕೊಟ್ಟಿದ್ದಾರೆ, ಕಟ್ಟಡದ ವಿನ್ಯಾಸ ಇಲ್ಲಿಗೆ ಬಂದಿದೆ. ಅಲ್ಲಿ ಉತ್ತಮವಾದ ಕಟ್ಟಡ ಕಟ್ಟತಕ್ಕ ಕೆಲಸವನ್ನು ಮಾನ್ಯಮಂತ್ರಿಗಳು ಮಾಡಬೇಕೆಂದು ಹೇಳಿ ನಾನು ಹೆಚ್ಚು ಮಾತನಾಡಲಿಕ್ಕೆ ಅವಕಾಶ ಇಲ್ಲದೇ ಇರುವುದರಿಂದ ನನ್ನ ಭಾಷಣವನ್ನು ಕುಂಠಿತಗೊಳಿಸಬೇಕಾಗಿದೆ. ಮುಖ್ಯವಾದ ಮತ್ತೊಂದು ವಿಚಾರವನ್ನು ಹೇಳಿ ನನ್ನ ಭಾಷಣ ಮುಕ್ತಾಯ ಮಾಡುತ್ತೇನೆ. ಭೂ ಜಲದ ಬಗ್ಗೆ ಹೆಚ್ಚಿನ ಲಕ್ಷ್ಯವನ್ನು ಕೊಡಬೇಕಾಗಿದೆ, ಬೋರ್ ಹಾಕಿದರೂ ಕೂಡ ನೀರು ಸಾಕಾಗುತ್ತಿಲ್ಲ. ಅಲ್ಲಲ್ಲಿ ಬಾಂದರ್‌ಗಳನ್ನು ಹಾಕಿ ಹರಿದುಹೋಗುವ ನೀರನ್ನು ತಡೆಗಟ್ಟಿ ಭೂಪಾತಳಿಯನ್ನು ಹೆಚ್ಚು ಮಾಡುವ ದಿಶೆಯಲ್ಲಿ ಮಾನ್ಯಮಂತ್ರಿಗಳು ಹೆಚ್ಚಿನ ಲಕ್ಷ್ಯ ವಹಿಸಬೇಕೆಂದು ಹೇಳಿ, ನನಗೆ ಮಾತನಾಡಲು ಅವಕಾಶ ಕೊಟ್ಟ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು.—ಈಗ ಮಾನ್ಯ ಮಂತ್ರಿಗಳಿಂದ ಉತ್ತರ.

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ಜಲಾನಯನ ಅಭಿವೃದ್ಧಿ ಸಚಿವರು).—ಮಾನ್ಯ ಸಭಾಧ್ಯಕ್ಷರೇ, ನಿನ್ನೆ ಮತ್ತು ಈ ದಿನ ನೀರಾವರಿ ಮತ್ತು ಲೋಕೋಪಯೋಗಿ ಇಲಾಖೆಯ ಬೇಡಿಕೆಗಳ ಬಗ್ಗೆ ನಡೆದಂಥ ಚರ್ಚೆಯಲ್ಲಿ ಭಾಗವಹಿಸಿದಂಥ ಎಲ್ಲಾ ಸದಸ್ಯರು ಮಾಜಿ ವಿರೋಧ ಪಕ್ಷದ ನಾಯಕರೂ ಹಾಗೂ ಮಾಜಿ.

(ಶ್ರೀ ವೈ. ಕೆ. ರಾಮಯ್ಯನವರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು).

ಅರ್ಥಸಚಿವರು ಹಾಗೂ ವಿರೋಧ ಪಕ್ಷದ ಉಪನಾಯಕರಿಂದ ಹಿಡಿದು ಈ ಸಭೆಯಲ್ಲಿ ಚರ್ಚೆಯಲ್ಲಿ ಭಾಗವಹಿಸಿದಂಥ ಹಲವಾರು ಸನ್ಮಿತ್ರರು ಕೊಟ್ಟಂಥ ಅಮೂಲ್ಯವಾದ ಸಲಹೆಗಳು ಮತ್ತು ರಚನಾತ್ಮಕ ಟೀಕೆಗಳು ಮತ್ತು ಸರ್ಕಾರ ಮತ್ತಷ್ಟು ತೀವ್ರತೆಯಿಂದ ಕೆಲಸ ಮಾಡಬೇಕು ಎನ್ನತಕ್ಕಂಥ ಹಲವಾರು ಸೂಚನೆಗಳನ್ನು ಕೊಟ್ಟಿದ್ದಾರೆ. ಇದಕ್ಕಾಗಿ ಪ್ರಥಮತಃ ಎಲ್ಲರಿಗೂ ನಾನು ಆಭಾರಿಯಾಗಿದ್ದೇನೆ.

ಸ್ವಾಮಿ ಈ ಇಲಾಖೆ ರಾಜ್ಯದ ಗ್ರಾಮೀಣ ಜನತೆಯ ಜನಜೀವನವನ್ನು ಹಸನು ಮಾಡತಕ್ಕಂಥ ಅವರ ಆರ್ಥಿಕ ಶಕ್ತಿಯನ್ನು ಹೆಚ್ಚು ಮಾಡತಕ್ಕಂಥ ಇಲಾಖೆಯೆಂದು ನಾನು ಒಪ್ಪಿಕೊಳ್ಳುತ್ತೇನೆ. ಲೋಕೋಪಯೋಗಿ ಮತ್ತು ನೀರಾವರಿ ಇಲಾಖೆ ಗ್ರಾಮೀಣ ಜನತೆಗೆ ನೇರವಾಗಿ ಸ್ಪಂದನ ಆಗತಕ್ಕಂಥ ಕಾರ್ಯಕ್ರಮಗಳೊಡನೆ ಆ ಹೊಣೆಗಾರಿಕೆಯನ್ನು ಹೊತ್ತಿರತಕ್ಕಂಥ ಇಲಾಖೆ ಇದರ ಕಾರ್ಯಕ್ರಮ ನಗರ ಪ್ರದೇಶಗಳಿಗೆ ಬರುವುದಿಲ್ಲ. ಅಂದರೆ ನೂರಕ್ಕೆ ಎಂಭತ್ತರಷ್ಟು ಹಳ್ಳಿಗಳಲ್ಲಿ ವಾಸ ಮಾಡತಕ್ಕಂಥ ನಮ್ಮ ಮತದಾರ ಪ್ರಭುಗಳು ಏನಿದ್ದಾರೆ, ಅವರ ಯೋಗಕ್ಷೇಮವನ್ನು ನೇರವಾಗಿ ನೋಡತಕ್ಕಂಥ ಇಲಾಖೆ. ಇದನ್ನು ನಾನು ಒಪ್ಪಿಕೊಳ್ಳುತ್ತೇನೆ ಈ ಸಂದರ್ಭದಲ್ಲಿ ಶ್ರೀಮಾನ್ ವೀರಪ್ಪ ಮೊಯಿಲಿಯವರು ಇಂದು ಈ ಸಭೆಯಲ್ಲಿ ಇರುವುದಿಲ್ಲವೆಂದು ನಿನ್ನೆಯೇ ಹೇಳಿದ್ದರು ಬಹುತೇಕವಾಗಿ ಅವರು ತಮ್ಮ ಭಾಷಣದಲ್ಲಿ ನೀರಾವರಿ ಇಲಾಖೆಯಲ್ಲಿ ಇರತಕ್ಕಂಥ ನ್ಯೂನತೆಗಳನ್ನು ತೋರಿಸುವುದಕ್ಕೆ ಪ್ರಯತ್ನ ಮಾಡಿದರು ಅವರು ಪ್ರಾರಂಭದಲ್ಲಿ ಬಹಳ ಪ್ರಾಮುಖ್ಯವಾದ ಎರಡು ವಿಷಯಗಳನ್ನು ಹೇಳಿದರು. ಅದೇನೆಂದರೆ, ಒಂದು ಮಂಡ್ಯದಲ್ಲಿ ನೀವು ನೀರಾವರಿಗೆ ಆದ್ಯತೆಯನ್ನು ಕೊಡಬೇಕೆಂದು ಸಿಂಹಘರ್ಜನೆ ಮಾಡಿದಿರಿ ಈಗ ನಿಮ್ಮ ಸಿಂಹಘರ್ಜನೆ ಇಲ್ಲ. ಮತ್ತು ಈ ರಾಜ್ಯದಲ್ಲಿ ಇರತಕ್ಕಂಥ ಹಿಂದುಳಿದ ವರ್ಗಗಳಿಗೆ ಅನ್ಯಾಯ ಆದರೆ-ನನ್ನ ಸ್ಥಾನವನ್ನು ತೆರವು ಮಾಡುತ್ತೇನೆ ಎಂದು ಘೋಷಣೆ ಮಾಡಿದಿರಿ. ಇವೆರಡೂ ಎಲ್ಲಿಗೆ ಹೋಯಿತು? ಎಂದು ಅವರು ಪ್ರಾರಂಭದಲ್ಲಿ ಹೇಳಿದರು. ಈ ಹಿಂದುಳಿದ ವರ್ಗಗಳ ಬಗ್ಗೆ ಈ ಒಂದು ಚರ್ಚೆಯಲ್ಲಿ, ವಿಷಯವನ್ನು ಎಳೆದು ಮಾತನಾಡುವುದಕ್ಕೆ ನಾನು ಹೋಗುವುದಿಲ್ಲ. ನನಗೆ ಗೊತ್ತಿದೆ, ಶ್ರೀ ವೀರಪ್ಪ ಮೊಯಿಲಿಯವರು ತುಂಬಾ ಬುದ್ಧಿವಂತರು ಇದ್ದಾರೆ. ಹೆಚ್ಚು ಕಲಿತವರು ಇದ್ದಾರೆ. ನಾನು ಸಾಮಾನ್ಯನಾದ ಒಬ್ಬ ಹಳ್ಳಿಯವ. ಆದರೆ ವಿಷಯ ವಿಶ್ಲೇಷಣೆ ಮಾಡತಕ್ಕಂಥ ಶಕ್ತಿ ನನಗೂ ಸಹ ಉಂಟು. ಆದರೆ ಯಾವ ಸಂದರ್ಭ ದಲ್ಲಿ ನಾನು ಮಾತನಾಡಿದೆ ಎಂಬುದನ್ನು ಅವರು ಹೇಳಿದ್ದರೆ ಚೆನ್ನಾಗಿತ್ತು. ಆದ್ದರಿಂದ ಇದರ ಬಗ್ಗೆ ಸೀಮಿತವಾಗಿ ಮಾತನಾಡಿ ಮುಗಿಸುತ್ತೇನೆ. ಬೇಕಾದರೆ ಈ ಸಭೆಯಲ್ಲಿ ಸಮಾಜ ಕಲ್ಯಾಣ ಇಲಾಖೆ ಮೇಲೆ ಚರ್ಚೆ ಬಂದಕಾಲದಲ್ಲಿ ಅಥವಾ ವಿರೋಧಪಕ್ಷದ ನಾಯಕರು ಈ ಸದನದಲ್ಲಿ ವೆಂಕಟಸ್ವಾಮಿ ಆಯೋಗದ ಬಗ್ಗೆ ಚರ್ಚೆ ಮಾಡಬೇಕೆಂದು ಇಚ್ಛೆಪಡುವುದಾದರೆ ಆ ಚರ್ಚೆಯಲ್ಲಿ ನಾನೂ ಭಾಗವಹಿಸುತ್ತೇನೆ. ಇಷ್ಟನ್ನು ಹೇಳಿ ಒಂದು ಮಾತನ್ನು ಹೇಳುವುದಕ್ಕೆ ಇಚ್ಛೆಪಡುತ್ತೇನೆ ಉಪ್ಪಾರರ ಸಮ್ಮೇಳನದಲ್ಲಿ ನಾನೂ ಹೋಮ್ ಮಿನಿಸ್ಟರು, ಮಾನ್ಯ ವೀರಪ್ಪ ಮೊಯ್ಲಿಯವರೂ ಇದ್ದರು. ಇದರಲ್ಲಿ ವೆಂಕಟಸ್ವಾಮಿ ಆಯೋಗದವರ ವಿಚಾರ ಇಲ್ಲ. ಉಪ್ಪಾರ ಸಮಾಜದವರು ಒಂದು ಮಾತು ಹೇಳಿದರು. ನಮಗೆ, ಈ ಸರ್ಕಾರದಲ್ಲಿ ಹಿಂದೆ ಆದ ಅನ್ಯಾಯವನ್ನು ಸರಿಪಡಿಸಿಕೊಡಿ ಎಂದು ಹೇಳಿದರು. ನೀವು ಮಾಡಲಿಲ್ಲ ಎಂದು ಒಂದು ಮೆಮೋರ್ಯಾಂಡಂ ಕೂಡ ಕೊಟ್ಟರು ಒಂದು ಮಾತು ಹೇಳಿದೆ. ದಿವಂಗತ ದೇವರಾಜ ಅರಸು ಅವರ ಕಾಲದಲ್ಲಿ ಹಿಂದುಳಿದ ವರ್ಗದವರಿಗೆ ಏನೇನು ಸೌಲಭ್ಯಗಳನ್ನು ಕೊಟ್ಟಿದ್ದಾರೆ ಆ ಸೌಲಭ್ಯಗಳನ್ನು ಈ ಸರ್ಕಾರ ಏನಾದರೂ ಮೊಟಕುಗೊಳಿಸಿದರೆ ನಾನಾಗಲೀ, ಮಾನ್ಯ ರಾಚಯ್ಯನವ ರಾಗಲೀ ಈ ಸರ್ಕಾರದಲ್ಲಿ ಉಳಿಯಬಾರದು. ಈ ಮಾತನ್ನು ಬಹಿರಂಗವಾಗಿ ಘೋಷಣೆ ಮಾಡುತ್ತೇನೆ. ದೇವರಾಜ ಅರಸರು ಕೊಟ್ಟಿದ್ದಂಥ ಯಾವುದೇ ಸವಲತ್ತನ್ನು ಈ ಸರ್ಕಾರ ಕಿತ್ತುಕೊಂಡಿದೆ ಎಂದು ಆ ಸಭೆಯಲ್ಲಿ ನಾನು ಹೇಳಿದೆ ಎಂಬುದನ್ನು ಮಾನ್ಯ ವೀರಪ್ಪ ಮೊಯ್ಲಿಯವರು ಪ್ರೂವ್ ಮಾಡುವುದಾದರೆ ವೆಂಕಟಸ್ವಾಮಿ ಆಯೋಗದ ಬಗ್ಗೆ ಆಮೇಲೆ ಚರ್ಚೆ ಮಾಡೋಣ. ಇವತ್ತು ಆ ಬಗ್ಗೆ ವ್ಯಾಖ್ಯಾನ ಮಾಡುವುದಕ್ಕೆ ಹೋಗುವುದಿಲ್ಲ. ಅವತ್ತೂ ನಾನು ಹೇಳಿದ್ದೇನೆ, ಇದನ್ನು ಪ್ರೂವ್ ಮಾಡುವುದಾದರೆ, ಆ ಮಾತಿಗೆ ನಾನು ತಲೆಬಾಗುತ್ತೇನೆ. ಏಕೆಂದರೆ ಅಲ್ಲಿ ಕೂತಾಗ ಒಂದು ಹೇಳಬೇಕು, ಇಲ್ಲಿ ಕೂತಾಗ ಒಂದು ಹೇಳಬೇಕೆಂಬ ಸ್ವಭಾವ ನನಗಿಲ್ಲ. ಆದರಿಂದ ನಾನು ತುಂಬಾ ನೋವನ್ನು ಅನುಭವಿಸಿದ್ದೇನೆ. ಎಲ್ಲೇ ಇರಲಿ ನನ್ನ ಅಭಿಪ್ರಾಯವನ್ನು ಹೇಳುವಾಗ ಯಾವುದೇ ವಕ್ರ ಅಥವಾ ವಿರೂಪಗೊಳಿಸಿ ಹೇಳ ತಕ್ಕಂಥ ಸ್ವಭಾವ ನನ್ನಲ್ಲಿ ಇಲ್ಲ. ಇಷ್ಟಕ್ಕೆ ಸೀಮಿತಗೊಳಿಸಿ ಈ ವಿಷಯವನ್ನು ನಿಲ್ಲಿಸುತ್ತೇನೆ. ಒಂದು ಮಾತ್ರ ಹೇಳಬೇಕಾಗುತ್ತದೆ, ಮಾನ್ಯ ಮೊಯ್ಲಿಯವರೂ ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲ, ನಾನೂ ಬ್ಯಾಕ್‌ವರ್ಡ್ ಕ್ಲಾಸ್ ಅಲ್ಲ ಅದನ್ನಾದರೂ ಒಪ್ಪಿಕೊಳ್ಳುವ. ಮುಂದೆ ಸಮಾಜ ಕಲ್ಯಾಣ ಇಲಾಖೆ ಮೇಲೆ ಚರ್ಚೆ ಬಂದಾಗ ಮಾತನಾಡೋಣ. ಡಾಕ್ಟರ್ ತಿಪ್ಪೇಸ್ವಾಮಿಯವರದು ಒಂದು ನಾನ್ ಅಫಿಷಿಯಲ್ ರೆಸೊಲ್ಯೂಷನ್ ಇದೆ. ಅದರ ಬಗ್ಗೆ ಆ ಮೇಲೆ ಚರ್ಚೆ ಮಾಡೋಣ. ಈಗ ಮಾತ ನಾಡುವುದಕ್ಕೆ ಹೋಗುವುದಿಲ್ಲ. ಅವರು ಅತ್ಯಂತ ಪ್ರಗತಿಪರವಾದ ಖಾಸಗಿ ನಿರ್ಣಯವನ್ನು ಮಂಡನೆ

ಮಾಡಿದರು. ಅದರ ಬಗ್ಗೆ ಈಗ ಚರ್ಚೆ ಮಾಡುವುದಕ್ಕೆ ಹೋಗುವುದಿಲ್ಲ. ಏಕೆಂದರೆ ಕಾಲಾವಕಾಶ ಕಡಿಮೆ ಇದೆ.

ನೀರಾವರಿ ಬಗ್ಗೆ ಮಾತನಾಡುವಾಗ, ನೀರಾವರಿಗೆ ಆದ್ಯತೆ ಕೊಡುತ್ತೇವೆಂದು ಹೇಳಿದಿರಿ ಎಂದು ಹೇಳಿದರು. ಈ ಸದನಕ್ಕೆ ಆ ಕ್ಷೇತ್ರದ ಜನ ಕಳುಹಿಸಿಕೊಟ್ಟರು ಎಂದರು ೧೯೭೨ ರಿಂದ ಜನ ಕಳುಹಿಸಿ ಕೊಟ್ಟಿದ್ದಾರೆ. ಈ ಸದನದಲ್ಲಿ ಬಹಳ ಹಳೆಯ ಸದಸ್ಯರೂ ಇರಬಹುದು, ಶ್ರೀಮತಿ ನಾಗರತ್ನಮ್ಮ ನವರೂ ಇರಬಹುದು, ಅಲ್ಲಿಂದ ಇವತ್ತು ನಾನು ಈ ಸ್ಥಾನದಲ್ಲಿ ನಿಂತಿದ್ದೇನೆ. ಇಲ್ಲಿಯವರೆಗೂ ನನ್ನ ನಂಬಿಕೆ ಈ ರಾಜ್ಯದ ಗ್ರಾಮೀಣ ಜನತೆಯ ಜೀವನ ಹಸನಾಗಬೇಕೆಂದು ಇದ್ದರೆ, ಅದಕ್ಕೆ ನೀರಾವರಿಗೆ ಮೊದಲ ಆದ್ಯತೆ ಇರಬೇಕು ಎಂಬ ಮಾತನ್ನು ಹೇಳಿದ್ದೇನೆ. ನಾನು ಸಿದ್ಧಾಂತದ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಅಲ್ಲಿಂದ ನಡೆದಂಥ ಎಲ್ಲಾ ನಡವಳಿಕೆಗಳ ಪುಸ್ತಕ ತರಿಸಿ ಇಟ್ಟಿದ್ದೇನೆ. ೧೯೭೨ ರಿಂದ ಇಲ್ಲಿಯವರೆಗೆ ನನ್ನ ಕೂಗು ಒಂದೇ ಆಗಿದೆ. ಇಂದು ಮಾನ್ಯ ರಾಮಕೃಷ್ಣ ಹೆಗಡೆಯವರು ಇವತ್ತು ಮುಖ್ಯಮಂತ್ರಿಗಳಾಗಿದ್ದಾರೆ, ಆವತ್ತು ಅರ್ಥ ಸಚಿವರಾಗಿದ್ದರು ಇಲ್ಲಿ ಪ್ರಶ್ನೆ ಅದಲ್ಲ. ಈ ಸದನದಲ್ಲಿ ಯಾವ್ಯಾದೇ ದಿಕ್ಕಿನಲ್ಲಿ ಕುಳಿತಿದ್ದರೂ ನನ್ನ ಕೂಗು ಈ ರಾಜ್ಯದ ಹಳ್ಳಿಯ ಜೀವನ ಸುಖಮಯ ಆಗಬೇಕೆಂದು ಇದ್ದರೆ, ಮೊದಲು ನೀರಾವರಿ ಆಗಬೇಕು. ಇದು ನನ್ನ ಕೂಗು. ಇದನ್ನು ಯಾರೂ ಅಲ್ಲಗಳೆಯುವುದಕ್ಕೆ ಸಾಧ್ಯವಿಲ್ಲ. ಅದಕ್ಕೋಸ್ಕರವೇ ಪ್ರೊಸೀಡಿಂಗ್ಸ್ ಸ್ವಲ್ಪ ತೆಗೆದು ಓದಬೇಕು ಎಂದು ನಾನು ಹೇಳಿದ್ದು ೧೯೭೩ರಲ್ಲಿ ಏನು ಮಾಡಬೇಕೆಂದು ಹೇಳಿದ್ದೇನೆ, ೧೯೭೪ರಲ್ಲಿ ಖಾಸಗಿ ನಿರ್ಣಯ ಮಂಡನೆ ಮಾಡಿದಾಗ ಏನು ಹೇಳಿದ್ದೇನೆ, ೧೯೭೬ರಲ್ಲಿ ಖಾಸಗಿ ನಿರ್ಣಯ ಮಂಡನೆ ಮಾಡಿದಾಗ, ಈ ಸಭೆ ಅದಕ್ಕೆ ಅವಿರೋಧವಾಗಿ ಒಪ್ಪಿಗೆ ಕೊಟ್ಟಾಗ, ಏನು ಹೇಳಿದ್ದೇನೆ, ಅಲ್ಲಿಂದ ತಾವು ಸ್ವಲ್ಪ ಹಳೆಯ ಪುಟಗಳನ್ನು ತಿರುವಿ ಹಾಕಿ ನೋಡಿದರೆ ನನ್ನ ನಂಬಿಕೆ, ಸಿದ್ಧಾಂತ, ಐಡಿಯಾಲಾಜಿಕಲ್ ಕಮಿಟ್‌ಮೆಂಟ್ ಏನು ಇದೆ ಎಂದು ನೋಡಬಹುದು. ನನ್ನ ಮೇಲೆ ವಿಶ್ವಾಸ ಇಡಿ ಸ್ವಾಮಿ, ಇವತ್ತು ನಮ್ಮ ರಾಜ್ಯದ ನೀರಾವರಿಯ ಬಗ್ಗೆ ಪಕ್ಷಗಳ ಭೇದವಿಲ್ಲದೆ ಎಲ್ಲರೂ ಹೇಳತಕ್ಕದ್ದು, ಎಲ್ಲರ ಒಂದು ಕೂಗು ಏನಿದೆ ಎಂದರೆ, ನೀರಾವರಿ ಸಂಪನ್ಮೂಲ ಏನಿದೆ ಅದನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕು. ಇದು ನಮ್ಮ ರಾಜ್ಯದ ಎಲ್ಲಾ ಪಕ್ಷಗಳ ಕೂಗು, ಎಲ್ಲಾ ಜನತೆಯ ಕೂಗು. ಇದರಲ್ಲಿ ಭೇದ ಇಲ್ಲ. ಇದರಲ್ಲಿ ನಾನು ಭೇದವನ್ನು ಕಾಣುವುದಕ್ಕೆ ಹೋಗುವುದಿಲ್ಲ. ಅದರ ಅವಶ್ಯಕತೆ ನನಗೆ ಇಲ್ಲ. ಇದಕ್ಕೆ ರಾಜಕೀಯ ಬೆರೆಸತಕ್ಕಂಥಾದ್ದಕ್ಕೆ ಹೋಗಬಾರದು. ನಮ್ಮ ರಾಜ್ಯದ ಎರಡು ಪ್ರಮುಖ ನದಿಗಳು, ಅಂತರರಾಜ್ಯ ವ್ಯಾಪ್ತಿಯಲ್ಲಿ ಬರತಕ್ಕಂಥ ನದಿಗಳು ಸಮಸ್ಯೆಯನ್ನು ನಾವು ಬಗೆಹರಿಸಿಕೊಳ್ಳುವಾಗ ನಾವೆಲ್ಲರೂ ಒಂದೇ ಎಂದು ಹೇಳಿ ಇವತ್ತಿನವರೆಗೆ ನಮ್ಮ ಒಗ್ಗಟ್ಟನ್ನು ತೋರಿಸಿಕೊಂಡು ಬಂದಿದ್ದೇವೆ. ಈ ದಿಕ್ಕಿನಲ್ಲಿ ನಾವು ಶ್ರಮಿಸಿದ್ದೇವೆ. ಇವತ್ತು ವೀರಪ್ಪ ಮೊಯಿಲಿಯವರು ಈ ಸಭೆಯಲ್ಲಿ ಇಲ್ಲ ಎಂದು ಹೇಳಿ ನಾನು ಮಾತನಾಡುವುದಕ್ಕೆ ಹೋಗುವುದಿಲ್ಲ. ಅವರೂ ಈ ಸಭೆಯಲ್ಲಿ ಇದ್ದರೆ ಚೆನ್ನಾಗಿತ್ತು, ಏತಕ್ಕೆ ಎಂದು ಹೇಳಿದರೆ, ವಿರೋಧ ಪಕ್ಷ ಎಷ್ಟು ಎಚ್ಚರಿಕೆಯನ್ನು ವಹಿಸುತ್ತದೆ, ಅಷ್ಟೂ ಆಳುವ ಪಕ್ಷಕ್ಕೆ ತನ್ನ ಕರ್ತವ್ಯದ ಕಡೆ ಗಮನಹರಿಸಲಿಕ್ಕೆ ಸಾಧ್ಯವಾಗುತ್ತದೆ. ನಾವು ಎಲ್ಲಿ ದಾರಿತಪ್ಪಿದರೆ ಅದನ್ನು ಸರಿಪಡಿಸುವುದಕ್ಕೆ ಶಕ್ತಿ ಅವರ ಕೈಯಲ್ಲಿದೆ ಅದು ಕಡಿಮೆ ಶಕ್ತಿ ಎಂದು ಹೇಳಿ ನಾನು ಭಾವಿಸಿಕೊಳ್ಳುವುದಿಲ್ಲ. ವಿರೋಧ ಪಕ್ಷದಿಂದ ಬರತಕ್ಕ ಪ್ರತಿಯೊಂದು ಮಾತನ್ನೂ ನಾನು ಕಣ್ಣಲ್ಲಿ ಕಣ್ಣಿಟ್ಟು ನೋಡುತ್ತೇನೆ. ಆದುದರಿಂದ ಈ ಮಾತನ್ನು ನಾನು ಹೇಳುತ್ತಿದ್ದೇನೆ, ಅವರು ಕೊಟ್ಟಂಥ ಸಲಹೆಗಳನ್ನು ನಾನು ಸ್ವಾಗತ ಮಾಡುತ್ತೇನೆ, ಸ್ವೀಕಾರ ಮಾಡುತ್ತೇನೆ ಎಂಬ ಮಾತನ್ನು ಹೇಳಿದ್ದೇನೆ. ಹಾಗೆ ಅವರು ಹೇಳುವಾಗ ಒಂದು ಮಾತನ್ನು ಹೇಳಿದರು, ಸನ್ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯ ಪತ್ರದಲ್ಲಿ ಸಂಪನ್ಮೂಲ ದೊರಕಿದರೆ ಮಾತ್ರ ನಾನು ನೀರಾವರಿಗೆ ೩೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡುತ್ತೇನೆ ಎಂದು ಹೇಳಿದ್ದಾರೆ, ದೊರೆಯದೇ ಹೋದರೆ ಅದು ಕಡಿತವಾಗುತ್ತದೆ ಎಂದು ಹೇಳಿದರು. ಈ ಸಂದರ್ಭದಲ್ಲಿ ಎರಡು ದೃಷ್ಟಿಯಿಂದ ನಾವು ಮುಖ್ಯಮಂತ್ರಿಗಳನ್ನು ಅಭಿನಂದಿಸಬೇಕಾಗುತ್ತದೆ. ಸಂಪನ್ಮೂಲ ರೂಢಿಸತಕ್ಕ ಜವಾಬ್ದಾರಿ ಕೇವಲ ಸಭಾನಾಯಕರೊಬ್ಬರಿಗೇ ಇಲ್ಲ. ಸಂಪನ್ಮೂಲ ರೂಢಿಸತಕ್ಕ ಜವಾಬ್ದಾರಿ ಕೇವಲ ಒಂದು ರಾಜಕೀಯ ಪಕ್ಷಕ್ಕೆ ಇಲ್ಲ ಸಂಪನ್ಮೂಲ ರೂಢಿಸತಕ್ಕ ಜವಾಬ್ದಾರಿ ಈ ಸದನದ ಎಲ್ಲ ಸದಸ್ಯರಿಗೂ ಇದೆ. ಎಲ್ಲರಿಗೂ ಇದರ ಜವಾಬ್ದಾರಿ ಇದೆ. ಈ ನಾಡಿನ ಆರ್ಥಿಕ ಭದ್ರತೆಯ ಬುನಾದಿಯ ಮೇಲೆ ಯಾವ ಪ್ರಾಮಾಣಿಕ ನಾಗರೀಕ ಇದ್ದಾನೆ, ಅವರೆಲ್ಲರಿಗೂ ಕೂಡ ಈ ಜವಾಬ್ದಾರಿ ಇದೆ. ಅವರು ಕೊಡತಕ್ಕ ತೆರಿಗೆಯ ಹಣವನ್ನು ಅಪವ್ಯಯ ಮಾಡಿದಾಗ, ಅದಕ್ಕೆ ಶಿಕ್ಷೆ ಕೊಡತಕ್ಕ ಅಧಿಕಾರ ಅವರಿಗೆ ಇದೆ, ಅದನ್ನು ಈ ಸದನದ ಮುಖಾಂತರ ಜನತೆಗೆ ತಿಳಿಸತಕ್ಕ ಅಧಿಕಾರ

ನಿಮಗೆ ಇದೆ. ಇದನ್ನು ನಾನು ಒಪ್ಪಿಕೊಂಡು ಮುಂದೆ ಹೋಗುತ್ತೇನೆ. ಮುಖ್ಯ ಮಂತ್ರಿಗಳು ಈ ಸದನದಲ್ಲಿ ಯಾವುದೇ ವಿಷಯವನ್ನು ಮರೆಮಾಚದೆ ಇವತ್ತು ರಾಜ್ಯದಲ್ಲಿ ಜಲಸಂಪತ್ತನ್ನು ಸಂಪೂರ್ಣವಾಗಿ ಬಳಕೆ ಮಾಡಿಕೊಳ್ಳಬೇಕಾಗಿದ್ದರೆ ಸಂಪನ್ಮೂಲವನ್ನು ರೂಢಿಸಿಕೊಳ್ಳತಕ್ಕಂಥಾ ವಿಚಾರವನ್ನು ನಿಮ್ಮಗಳ ಮುಂದೆ ಹೇಳಿದ್ದಾರೆ.

ಇದರಲ್ಲಿ ವಂಚನೆ ಮಾಡಿದಂತೆ ಆಗಲಿಲ್ಲ. ಸನ್ಮಾನ್ಯ ವೀರಪ್ಪ ಮೊಯ್ಲಿಯವರ ಗಮನಕ್ಕೆ ಒಂದು ವಿಚಾರವನ್ನು ತರಬಯಸುವುದೇನೆಂದರೆ ೧೯೮೧–೮೨ನೇ ಸಾಲಿನಲ್ಲಿ ಆಯವ್ಯಯ ಪತ್ರವನ್ನು ಈ ಸದನದಲ್ಲಿ ಮಂಡಿಸತಕ್ಕಂಥ ಕಾಲದಲ್ಲಿ ೩೯೨.೫೫ ಕೋಟಿ ರೂಪಾಯಿಗಳನ್ನು ಒದಗಿಸಿಕೊಡಬೇಕಾಗಿತ್ತು. ಆದರೂ ನಾವು ನಿರೀಕ್ಷಿತ ಸಂಪನ್ಮೂಲಗಳು ದೊರಕದೆ ಹೋದ ಕಾರಣ ೩೬೭ ಕೋಟಿ ರೂಪಾಯಿಗಳನ್ನು ಕಡಿತ ಮಾಡಬೇಕಾಗಿ ಬಂತು ಎನ್ನುವ ಮಾತನ್ನು ಅವರೇ ಹೇಳಿದ್ದಾರೆ. ೩೯೨.೫೫ ಕೋಟಿ ರೂಪಾಯಿಗಳ ಅನ್ಯುಯಲ್ ಪ್ಲಾನ್ ಎನಿದೆ ಅದರಲ್ಲಿ ೩೬೭ ಕೋಟಿ ರೂಪಾಯಿಗಳನ್ನು ಕಡಿತ ಮಾಡಬೇಕಾಗಿ ಬಂತು ಎಂದು ಹೇಳಿದ್ದಾರೆ. ಆದರೆ ಸನ್ಮಾನ್ಯ ಮುಖ್ಯಮಂತ್ರಿಗಳು ತಮ್ಮ ಬಡ್ಜೆಟ್ ಭಾಷಣದಲ್ಲಿ ಏನು ಹೇಳಿದ್ದಾರೆಂದರೆ ಪ್ಲಾನಿಂಗ್ ಕಮಿಷನ್‌ನವರು ೮೭೦ ಕೋಟಿ ರೂಪಾಯಿಗಳಿಗೆ ತಮ್ಮ ಒಪ್ಪಿಗೆಯನ್ನು ಕೊಟ್ಟಿದ್ದಾರೆ. ಆದ್ದರಿಂದ ನೀರಾವರಿಗೆ ಹೆಚ್ಚು ಹಣವನ್ನು ಕೊಡಬೇಕು ಎನ್ನುವ ಸದುದ್ದೇಶವನ್ನು ಇಟ್ಟುಕೊಂಡು ಈ ಮಾತನ್ನು ಹೇಳಿದ್ದಾರೆ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಹೇಳುವುದಾದರೆ ಸಂಪನ್ಮೂಲಗಳನ್ನು ರೂಢಿಸಿಕೊಳ್ಳತಕ್ಕಂಥದ್ದರಲ್ಲಿ ಈ ನಾಡಿನ ಜನತೆಯ ಸಹಕಾರ, ಈ ಸದನದ ಸಹಾಕರ ಎಲ್ಲಾ ಪಕ್ಷಗಳ ಸಹಕಾರ ದೊರೆಯುತ್ತದೆ ಎನ್ನುವ ಆಸೆಯನ್ನು ಇಟ್ಟುಕೊಂಡೇ ಅವರು ತಮ್ಮ ಪ್ರಾಮಾಣಿಕ ಕಳಕಳಿಯನ್ನು ಸದನದಲ್ಲಿ ವ್ಯಕ್ತಪಡಿಸಿದ್ದಾರೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ತಾವು ಇಂಜಿನೀಯರ್ ಆಗಿದ್ದೀರಿ. ಆದರೆ ವಕೀಲರಾಗಬೇಕಾಗಿತ್ತು.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ತಮ್ಮ ಆತ್ಮವಂಚನೆ ಮಾಡಿಕೊಂಡಿಲ್ಲ. ಆದ್ದರಿಂದಲೇ ಅವರು ಈ ಮಾತನ್ನು ಹೇಳಿದ್ದಾರೆ. ಅದಕ್ಕೆ ಅವರು ೩೦೦ ಕೋಟಿ ರೂಪಾಯಿಗಳನ್ನು ಕೊಡುತ್ತೇನೆಂದು ಹೇಳಿದರು. ಇನ್ನು ಒಂದು ಹೆಜ್ಜೆ ಮುಂದೆ ಹೋಗಿ ನಾನು ಒಂದು ಮಾತನ್ನು ಈ ಸಂದರ್ಭದಲ್ಲಿ ಹೇಳುವುದಾದರೆ ಅವರನ್ನು ಈ ಸದನದಲ್ಲಿ ಕಟ್ಟುಪಾಡಿಗೆ ಸಿಕ್ಕಿಸಿ ಈ ಕೃಷ್ಣಾ ಮತ್ತು ಕಾವೇರಿ ಯೋಜನೆಗಳಿಗೆ ೩೦೦ ಕೋಟಿ ರೂಪಾಯಿಗಳು ದೊರಕಿಸಿಕೊಳ್ಳಲು ಪ್ರಯತ್ನ ಮಾಡಿದೆ. ಆದರೆ ಅವರು ಈ ಜವಾಬ್ದಾರಿಯಿಂದ ನುಣಿಚಿಕೊಳ್ಳುತ್ತಾರೆಂದಲ್ಲ. ಅವರು ಈ ಯೋಜನೆಗಳ ಬಗ್ಗೆ ಇಟ್ಟಿರುವ ಕಳಕಳಿಯನ್ನು ಸದಸ್ಯರು ಅರ್ಥ ಮಾಡಿಕೊಳ್ಳಲಿ ಎಂದು. ಆದರೆ ಅದು ನಾನಾ ಕಾರಣಗಳಿಂದ ಆಗಲಿಲ್ಲ. ನಾನು ಈ ಸದನದಲ್ಲಿ ಬೈಂಡ್ ಮಾಡದಿದ್ದರೂ ಸಹ ನಮ್ಮ ಪಕ್ಷದ ಸಭೆಯಲ್ಲಿ ಹೇಳಿದ್ದೇನೆ. ಇವತ್ತು ಈ ನಮ್ಮ ಕರ್ನಾಟಕ ರಾಜ್ಯದ ಜನತೆಯ ಶಕ್ತಿಯನ್ನು ಅರ್ಥಮಾಡಿಕೊಂಡು ಸಂಪನ್ಮೂಲಗಳನ್ನು. ರೂಢಿಸಿಕೊಂಡು ಯೋಜನಾ ಆಯೋಗದವರ ಒಪ್ಪಿಗೆಯನ್ನು ನಿರೀಕ್ಷೆಯಲ್ಲಿಟ್ಟುಕೊಂಡು ಈ ಎರಡೂ ಯೋಜನೆಗಳಿಗೆ ೩೦೦ ಕೋಟಿ ರೂಪಾಯಿಗಳನ್ನು ಕೊಡತಕ್ಕಂಥ ನಿಲುವನ್ನು ತೆಗೆದುಕೊಂಡಿದ್ದಾರೆ. ಅದಕ್ಕಾಗಿ ನಾನು ಅವರನ್ನು ಅಭಿನಂದಿಸಲೇಬೇಕು. ಅವರು ಪ್ರಾಮಾಣಿಕವಾಗಿ ಈ ಸದನದಲ್ಲಿ ಹೇಳಿದ್ದಾರೆ. ಸ್ವಾಮಿ, ಮಾನ್ಯ ಮಲ್ಲಿಕಾರ್ಜುನ ಎಂ. ಖರ್ಗೆಯವರು ನನ್ನ ಹಳೆಯ ಸ್ನೇಹಿತರು. ನಾನು ಅವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಅವರು ನನ್ನನ್ನು ಎಷ್ಟೇ ದಾರಿ ತಪ್ಪಿಸುವುದಕ್ಕೆ ಪ್ರಯತ್ನ ಪಟ್ಟರೂ ಆಗುವುದಿಲ್ಲ. ನಾನು ಈ ಸದನಕ್ಕೆ ಹೊಸಬನೇನು ಅಲ್ಲ. ಎಷ್ಟೋ ವಿಷಯಗಳ ಮೇಲೆ ಚರ್ಚೆ ಮಾಡಿದ್ದೇವೆ. ಆದ್ದರಿಂದ ನನ್ನನ್ನು ದಾರಿತಪ್ಪಿಸುವುದಕ್ಕೆ ಆಗುವುದಿಲ್ಲ. "ನೀರಾವರಿ ಯೋಜನೆಗಳ ಚುರುಕಿಗೆ ಕ್ರಮ ಇಂದಿರಾಗಾಂಧಿಯವರ ಅಭಯ ಫಲ" ಎಂದು ಪತ್ರಿಕೆಗಳಲ್ಲಿ ೧೯೮೨ನೇ ಇಸವಿ ಜನವರಿ ೫ನೇ ತಾರೀಖು ಬಂದಿದೆ. ಈ ರಾಷ್ಟ್ರದ ಇತಿಹಾಸದಲ್ಲಿ ಒಬ್ಬ ಪ್ರಧಾನ ಮಂತ್ರಿಗಳು ರಾಜ್ಯದ ಯೋಜನೆಗಳನ್ನು ಪರಿಶೀಲನೆ ಮಾಡಿರತಕ್ಕಂಥಾದ್ದು ಒಂದು ಹೊಸ ಪದ್ಧತಿ. ಇಡೀ ಹಿಂದೂಸ್ತಾನದಲ್ಲಿಯೇ ಮೊದಲನೆಯ ಬಾರಿಗೆ ಈ ಪರಿಶೀಲನೆ ನಡೆಯಿತು. ಅವರು ಮಾಡಿದ್ದನ್ನು ನಾನು ಸರ್ವಥಾ ತಪ್ಪು ಎಂದು ವಾದ ಮಾಡುವುದಕ್ಕೆ ಹೋಗುವುದಿಲ್ಲ. ಆ ಪ್ರಶ್ನೆ ಈಗ ಬೇಡ. ಅವರು ಒಳ್ಳೆಯ ಉದ್ದೇಶದಿಂದ ಮಾಡಿರಬಹುದೆಂದು ನಾನು ಭಾವಿಸುತ್ತೇನೆ. ಸ್ವಾಮಿ, ಅದಾದ ಮೇಲೆ ಇವರು ಬಡ್ಜೆಟ್ ಮಂಡನೆ ಮಾಡಿದರು. ಯಾವಾಗ ಎಂದರೆ ೧೯೮೨–೮೩ನೇ ಸಾಲಿನ ಆಯವ್ಯಯ ಪತ್ರವನ್ನು ಮಾರ್ಚಿ ೧೭ರಂದು ಮಂಡಿಸಿದ್ದಾರೆ.

೪-೩೦ ಪಿ. ಎಂ.

ದೇವೇಗೌಡರಲ್ಲಿ ನೀರಾವರಿ ಯೋಜನೆ ಬಗ್ಗೆ ಇರತಕ್ಕಂಥ ಕಳಕಳಿಯನ್ನು ಏನಾದರೂ ಮಾಡಿ ತಿರುಚಿ ಜನತೆಯನ್ನು ಅವರ ವಿರುದ್ಧ ಎತ್ತಿ ಕಟ್ಟಬೇಕೆಂಬ ಒಂದು ಪ್ರಯತ್ನವನ್ನು ಸಹ ಕೆಲವರು ಮಾಡಿದರು. ಈಗ ಅದು ಬೇಡ. ಸ್ವಾಮಿ, ಅವರು ಹೇಳಿದರು, ಭಾರಿ ನೀರಾವರಿ ಯೋಜನೆಗಳ ಕಾಮಗಾರಿಗಳನ್ನು ತ್ವರಿತಗೊಳಿಸಲು ೧೯೮೨-೮೩ರ ಸಾಲಿಗೆ ಘಟಪ್ರಭಾ ಯೋಜನೆಗೆ ೬ ಕೋಟಿ ರೂಪಾಯಿಗಳನ್ನು ಕೊಡಲಾಗಿದೆ ಎಂದು ಹೇಳಲಾಗಿತ್ತು. ಶ್ರೀಮತಿ ಇಂದಿರಾ ಗಾಂಧಿಯವರು ಒಂದು ಸಾರಿ ಬೆಂಗಳೂರಿಗೆ ಬಂದಾಗ ಇದೇ ವಿಧಾನಸೌಧದ ಮೂರನೇ ಮಹಡಿಯಲ್ಲಿ ಕುಳಿತು, ರಾಜ್ಯದ ನೀರಾವರಿ ಯೋಜನೆಗಳನ್ನು ವೇಗವಾಗಿ ಮಾಡಬೇಕೆಂದು ವಿಶ್ಲೇಷಣೆ ಮಾಡಿದ ಮೇಲೆ, ಮಾನ್ಯ ವೀರಪ್ಪ ಮೊಯಿಲಿಯವರೇ ಮುಂದಿನ ಬಜೆಟ್‌ನಲ್ಲಿ ೬ ಕೋಟಿ ರೂಪಾಯಿಗಳನ್ನು ಘಟಪ್ರಭಾ ಯೋಜನೆಗೆ ಕೊಟ್ಟಿದ್ದರು ಈ ಘಟಪ್ರಭಾ ಯೋಜನೆಯು ನಮ್ಮ ರಾಜ್ಯ ಪುನರ್ ವಿಂಗಡಣೆ ಆಗುವುದಕ್ಕಿಂತ ಮುಂಚೆಯೇ ಪ್ರಾರಂಭವಾಯಿತು. ಅಷ್ಟು ಹಿಂದೆ ಪ್ರಾರಂಭವಾದ ಈ ಯೋಜನೆಗೆ ಅವರು ಕೊಟ್ಟಿದ್ದುದು ಕೇವಲ ೬ ಕೋಟಿ ರೂಪಾಯಿಗಳನ್ನು ಮಾತ್ರ

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಹಳೇ ಪುಸ್ತಕಗಳನ್ನೆಲ್ಲಾ ಎತ್ತಿಕೊಂಡು ಬರುತ್ತೀರಿ ಎಂದು ನಾನು ನನ್ನ ಭಾಷಣದಲ್ಲೇ ಹೇಳಿದ್ದೆ. ಅದೇ ರೀತಿ ನೀವು ಹಳೇ ಪುಸ್ತಕಗಳನ್ನೆಲ್ಲಾ ತೆಗೆದುಕೊಂಡು ಒಂದು ಕನ್ಫ್ಯೂಷನ್ ಮಾಡುತ್ತಿದ್ದೀರಿ. ಅದರಲ್ಲಿರುವ ವಿಷಯಗಳನ್ನೆಲ್ಲಾ ಉರು ಹಚ್ಚಿ ಇಲ್ಲಿ ಬಂದು ಹೇಳುತ್ತೀರೆಂದು ನಾನು ಮೊದಲೇ ಹೇಳಲಿಲ್ಲವೇ ? ಅದೇ ರೀತಿ ನೀವು ಮಾಡುತ್ತಿದ್ದೀರಿ.

ಶ್ರೀ ಹೆಚ್. ಡಿ. ದೇವೇಗೌಡ.—ಅವರು ಯಾವ ಆಧಾರದ ಮೇಲೆ ಈ ಯೋಜನೆಗೆ ಇಷ್ಟು ಕಡಿಮೆ ಹಣವನ್ನು ಇಟ್ಟರು ಎಂಬ ಬಗ್ಗೆ ನಾನು ಹೇಳುತ್ತಿದ್ದೇನೆ. ೧೯೮೨ರಲ್ಲಿ ಆ ಯೋಜನೆಗೆ ಎಷ್ಟು ಹಣ ಕೊಡಬೇಕಾಗಿತ್ತೋ ಅಷ್ಟು ಹಣವನ್ನು ಅವರು ರಿಲೀಸ್ ಮಾಡಿರಲಿಲ್ಲ ನಾನು ಈ ವಿಷಯಗಳನ್ನು ಅಂಕಿ ಅಂಶಗಳ ಮೂಲಕ ಹೇಳುತ್ತಿದ್ದೇನೆ. ೧೯೮೨ರಲ್ಲಿ ಇವರು ಮಾಡಿರುವ ಬಜೆಟ್ ಭಾಷಣದ ಪ್ರಿಂಟಿಂಗ್ ಪ್ರತಿಯನ್ನೇ ಇಟ್ಟುಕೊಂಡು ಹೇಳುತ್ತಿದ್ದೇನೆ. ಅವರೇ ಈ ಸದನದಲ್ಲಿ ಹೇಳಿದ್ದರು. ಶ್ರೀಮತಿ ಇಂದಿರಾ ಗಾಂಧಿಯವರು ಬಂದು ನೀರಾವರಿ ಯೋಜನೆಗಳ ವೇಗವನ್ನು ಹೆಚ್ಚು ಮಾಡಬೇಕು ಎಂದು ಹೇಳಿದ್ದು ಸುಳ್ಳೇನಲ್ಲ. ನೀರಾವರಿ ಯೋಜನೆಗಳಿಗೆ ಹೆಚ್ಚು ಮಹತ್ವ ಕೊಡಬೇಕು ಎನ್ನತಕ್ಕ ಸ್ವಲ್ಪಮಟ್ಟಿನ ಅರಿವು ಉಂಟಾದದ್ದು ಐದನೇ ಪಂಚ ವಾರ್ಷಿಕ ಯೋಜನೆಯಿಂದೀಚೆಗೆ. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಿದರೆ ತಪ್ಪಾಗಲಿಕ್ಕಿಲ್ಲ. ಶ್ರೀಮಾನ್ ದೇವರಾಜ್ ಅರಸ್‌ರವರು, ೧೯೭೭-೭೮ನೇ ಇಸವಿ ಇರಬಹುದು, ಅಲ್ಲಿಂದೀಚೆಗೆ ಅವರು ನೀರಾವರಿ ಯೋಜನೆಗಳಿಗೆ ಹೆಚ್ಚು ಚಾಲನೆಯನ್ನು ಕೊಟ್ಟರೆಂದು ನಾನು ಹೇಳಬೇಕಾಗುತ್ತದೆ. ಅದಕ್ಕಿಂತ ಪೂರ್ವದಲ್ಲಿ ನಮ್ಮ ನೀರಾವರಿ ಯೋಜನೆಗಳು ಅಷ್ಟೊಂದು ಸಮರ್ಪಕವಾಗಿರಲಿಲ್ಲವೆಂದು ಹೇಳಬೇಕಾಗುತ್ತದೆ. ಆ ವಿಷಯವನ್ನು ನಾವು ಪ್ರತಿ ವರ್ಷ ಅನುದಾನ ಕೊಟ್ಟಿರುವುದನ್ನು ನೋಡಿದರೆ ಗೊತ್ತಾಗುತ್ತದೆ. ಈ ಸದನದಲ್ಲಿರುವ ಎಲ್ಲಾ ಸನ್ಮಿತ್ರರಲ್ಲಿ ಕೈ ಮುಗಿದು ಕೇಳಿಕೊಳ್ಳುವುದೇನೆಂದರೆ ಒಂದು ಗಹನವಾದ ವಿಷಯವನ್ನು ಚರ್ಚೆ ಮಾಡುವಂಥ ಸಂದರ್ಭದಲ್ಲಿ ಈ ಭಾಗ, ಆ ಭಾಗ ಎಂದು ಚರ್ಚೆ ಮಾಡುವುದು ಬೇಡ. ಯೋಜನೆಗಳಿಗೆ ಇನ್ನೂ ಹೆಚ್ಚು ಹಣ ಕೊಡಬೇಕು ಎಂದು ಹೇಳಿರುವ ನಿಮ್ಮ ಮನಸ್ಸಿನ ತೀಕ್ಷ್ಣತೆಗೆ ನನ್ನ ವಿರೋಧ ಇಲ್ಲ, ಆಕ್ಷೇಪ ಇಲ್ಲ. ಹಿಂದೆ ಮಾನ್ಯ ದೇವರಾಜ್ ಅರಸರವರು ಈ ಕಡೆಯ ಮೊದಲ ಸೀಟ್‌ನಲ್ಲಿ ಕುಳಿತುಕೊಳ್ಳುತ್ತಿದ್ದರು, ನಾನು ಆ ಕಡೆ ಮಾನ್ಯ ನಾಗರತ್ನಮ್ಮನವರು ಕುಳಿತುಕೊಳ್ಳುತ್ತಿದ್ದ ಕಡೆ ಕುಳಿತುಕೊಳ್ಳುತ್ತಿದ್ದೆ. ೧೯೭೮ನೇ ಇಸವಿ ಇರಬಹುದೆಂದು ಕಾಣುತ್ತದೆ ಆಗ ನೀರಾವರಿ ಯೋಜನೆಗಳ ಬಗ್ಗೆ ಒಂದು ಟ್ರಿಬ್ಯೂನಲ್ ಅವಾರ್ಡ್ ಹೊರಬರುತ್ತದೆಂದು ಗೊತ್ತಾಯಿತು. ಇದು ಬಂದರೆ ಬಹಳ ಅನ್ಯಾಯವಾಗುತ್ತದೆಂದು ಅವರು ಹೇಳಿದರು. ಅವರು ಮಾತನಾಡುವಾಗ ಆ ಭಾಗ, ಈ ಭಾಗ ಎಂದು ಹೇಳಲಿಲ್ಲ. ಬಹುಶಃ ಈ ಮಾತನ್ನು ಬೇರೆ ಯಾರೂ ಹೇಳಿಲ್ಲ. ನಾನು ಸಹ ಆ ಚರ್ಚೆಯಲ್ಲಿ ಭಾಗವಹಿಸಿದ್ದೆ. ಆರ್ಥಿಕ ಸಾಂದ್ರತೆಯ ತಳಹದಿಯ ಮೇಲೆ ಬದಲಿಸಬೇಕೆಂದು ಇದ್ದರೆ ಈ ಒಂದು ಔಟ್‌ಲುಕ್ ಇರಕೂಡದು. ನಾನು ಇದರ ಬಗ್ಗೆ ಏನು ಮಾತನಾಡಿದ್ದೇನೆ ಎಂಬ ಬಗ್ಗೆ ಆಗಿನ ಪ್ರೊಸೀಡಿಂಗ್ಸ್‌ನ್ನು ತಾವು ನೋಡ

ಬಹುದು. ನಾನು ಇಲ್ಲಿ ಬಂದು ದ್ರೋಹ ಬಗೆಯಲಿಕ್ಕೆ ಸಿದ್ಧನಿಲ್ಲ. ಈಗ ಮುಂದಿನ ವಿಷಯಕ್ಕೆ ಹೋಗೋಣ. ಈ ರಾಜ್ಯದಲ್ಲಿ ನೀರಾವರಿ ಬಳಕೆಯ ಬಗ್ಗೆ ಹೇಳಿದೆ, ಐದನೇ ಪಂಚವಾರ್ಷಿಕ ಯೋಜನೆಯಿಂದ ಸ್ವಲ್ಪ ಮಟ್ಟಿಗೆ ಇದಕ್ಕೆ ಒಂದು ಹೊಸ ಆಯಾಮ ಸಿಕ್ಕಿದೆ. ಈ ಮಾತನ್ನು ಅಂಕಿಅಂಶಗಳ ಆಧಾರದ ಮೇಲೆ ಹೇಳಬೇಕಾಗುತ್ತದೆ. ಏಳನೆ ಪಂಚವಾರ್ಷಿಕ ಯೋಜನೆಯಲ್ಲಿ ನಮಗೆ ೧೭.೮ ಪರ್ಸೆಂಟ್ ಕೇಂದ್ರ ಸರಕಾರದಿಂದ ದೊರೆಯಿತು. ಈ ಮಾತನ್ನು ನಾನು ಹೇಳಿದರೆ ಮನಸ್ಸಿಗೆ ನೋವು ಆಗುತ್ತದೆ. ೯.೮ ಪರ್ಸೆಂಟ್ is the plan allocation for Irrigation by Government of India. ಆರನೇ ಪಂಚವಾರ್ಷಿಕ ಯೋಜನೆಯಲ್ಲಿ ಹೋದರೆ, ೧೦.೦ ಪರ್ಸೆಂಟ್ is allocation. ಏಳನೇ ಪಂಚವಾರ್ಷಿಕ ಯೋಜನೆಯಲ್ಲಿ ೮.೨ ಪರ್ಸೆಂಟ್ ಔಟ್ ಆಫ್ ಒಂದು ಲಕ್ಷದ ೮೦ ಸಾವಿರ ಪ್ಲಾನ್ ಸೈಜ್‌ನಲ್ಲಿ. ನಮ್ಮದು, ೨೦.೭ ಪರ್ಸೆಂಟ್. ರಾಜ್ಯಸರಕಾರದ್ದು, ಇದೆ, ಆರನೇ ಪ್ಲಾನ್‌ನಲ್ಲಿ ೧೯.೩ ಪರ್ಸೆಂಟ್ ನಮ್ಮದು ಇದ್ದರೆ, ಕೇಂದ್ರದ್ದು ೧೦ ಪರ್ಸೆಂಟ್, ಅಲೋಕೇಷನ್ ಇದು ನೀರಾವರಿಯದ್ದು. ಐದನೇ ಪಂಚವಾರ್ಷಿಕ ಯೋಜನೆಯಿಂದ ಸ್ವಲ್ಪಮಟ್ಟಿಗೆ ಈ ದಿಕ್ಕಿನಲ್ಲಿ ಒಂದು ಹೊಸ ಆಯಾಮವನ್ನು ಪ್ರಾರಂಭಿಸಲಾಯಿತು. ಅದೂ ಸಮರ್ಪಕವಲ್ಲ. ನಾವು ಇನ್ನೂ ಮುಂದೆ ಹೋಗಬೇಕೆನ್ನುವ ಮಾತನ್ನು ಹೇಳುತ್ತೇನೆ. ಹಾಗೆ ಹೇಳಲಿಕ್ಕೆ ಕಾರಣ, ನಮ್ಮ ರಾಜ್ಯದಲ್ಲಿರತಕ್ಕಂಥ, ಭೂಗರ್ಭದಲ್ಲಿ ಸಿಕ್ಕತಕ್ಕಂತಹ ನೀರು ಅಥವಾ surface water ಎಂದು ನಾವು ಏನು ಕರೆಯುತ್ತೇವೆ. ಇವೊತ್ತು ಅದರ ಪೂರ್ಣ ಬಳಕೆ ಆಗ ಬೇಕೆಂದು ಹೇಳಿದರೆ, ಒಂಭತ್ತೂವರೆ ಸಾವಿರ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗಬಹುದು ಎಂದು ಹೇಳುತ್ತಾರೆ. ಅದು ಈಸ್ಟ್ flowing or west flowing river ಇರಬಹುದು, ಭೂಗರ್ಭ ದಲ್ಲಿ ಸಿಕ್ಕತಕ್ಕಂತಹ ಜಲ ಇರಬಹುದು. ಯಾವುದೇ ಇದ್ದರೂ, ಅದರ ಸಂಪೂರ್ಣವಾಗಿ ಬಳಕೆ ಮಾಡಿ ಕೊಳ್ಳಬೇಕೆಂದಿದ್ದರೆ, ಇವೊತ್ತು ನಮ್ಮಲ್ಲಿ ಸಿಕ್ಕತಕ್ಕಂಥ ನೀರು ರಾಜ್ಯದಲ್ಲಿ ೪.೫ ಮಿಲಿಯನ್ ಹೆಕ್ಟೇರ್ ಗಳಿಗೆ ನೀರು ಸಿಗುತ್ತದೆ. ಆದರೆ ಇರಿಗೇಶನ್ ನಾವು ಮಾಡುತ್ತಾ ಇರುವುದು ೨.೧ ಮಿಲಿಯನ್ ಹೆಕ್ಟೇರ್ಸ್. ಈಗ ನಾವು ಮಾಡಿರತಕ್ಕಂಥಾದ್ದು ೫೦ ಪರ್ಸೆಂಟ್ ಎಂದು ಇಟ್ಟುಕೊಳ್ಳೋಣ. ಆಲ್ ಇಂಡಿಯಾ ಮಟ್ಟದಲ್ಲಿ ಹೇಳುವುದಾದರೆ, ನಾನು ಈಗಾಗಲೇ ಮಾನ್ಯ ಸಭೆಯಲ್ಲಿ ಹೇಳಿದ್ದೇನೆ, ಉದಾಹರಣೆಗಳನ್ನು ಕೊಟ್ಟಿದ್ದೇನೆ ಅದಕ್ಕೆ ೧,೬೦.೦೦೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗುತ್ತದೆ. Economicaly usable waterನ್ನು ಈ ದೇಶದಲ್ಲಿ ನಾವು ಬಳಕೆ ಮಾಡಿಕೊಳ್ಳಬೇಕಾಗಿದ್ದರೆ ಗ್ರ್ಯಾಂಟ್‌ಕ್ಯಾನಲ್ ಬಗ್ಗೆ ಮಾತ ನಾಡಿದರು. ಕೆ. ಎಲ್. ರಾವ್‌ರವರು, ಬೇರೆ ಬೇರೆ ತಜ್ಞರು ಮಹಾನದಿ ಡೈವರ್‌ಶನ್ ಬಗ್ಗೆ ಹೇಳಿ ದ್ದಾರೆ. ಚರ್ಚೆ ನಡೆಯುತ್ತಾ ಇದೆ. ಅದನ್ನು ಮಾಡುವುದರಿಂದ, ಕರ್ನಾಟಕ ರಾಜ್ಯಕ್ಕೆ ಕೂಡ ೧೯೦ ಟಿ. ಎಂ. ಸಿ. ನೀರು ಬರುತ್ತದೆ. ಒಂದು ಕಡೆ ರಾಷ್ಟ್ರದ ಜಲಸಂಪನ್ಮೂಲಗಳನ್ನು ಬಳಕೆ ಮಾಡು ವುದರಲ್ಲಿ ನಮ್ಮ ವೈಫಲ್ಯತೆ ಏನು ಎದ್ದು ಕಾಣುತ್ತದೆಯೋ ಮತ್ತೊಂದು ಕಡೆ ನಾವು ದೇಶಕ್ಕೆ ನೀರು ಕೊಡುತ್ತೇವೆ, ಎನ್ನತಕ್ಕಂಥ ಉದಾತ್ತವಾದ ಮಾತುಗಳನ್ನು ಆಡುತ್ತೇವೆ. But the priority that has been given by the so called Government of India is hardly 9.2% out of 1,80,000 plan size.

ಸ್ವಾಮಿ, ನಾನು ಪ್ರಧಾನ ಮಂತ್ರಿಯವರ ಕಳಕಳಿಯ ಬಗ್ಗೆ ಮಾತನಾಡಲಿಕ್ಕೆ ಹೋಗುವುದಿಲ್ಲ. ಅವರಿಗೆ ಬೇಕಾದಷ್ಟು ತೊಂದರೆಗಳು ಇವೆ. ಹಾಗೆಯೇ ಲಘುವಾದಂತಹ ಭಾಷೆಯನ್ನು ಪ್ರಯೋಗ ಮಾಡ ಲಿಕ್ಕೂ ಸಿದ್ಧನಿಲ್ಲ. ಇವೊತ್ತು ೨೦ ಅಂಶಗಳ ಕಾರ್ಯಕ್ರಮವನ್ನು ಮಾಡಿದರು. ಸಾಪ್ತಗಳು ಒಳಗಡೆ ಇರು ವಾಗ ಮಾಡಿದ ಕಾರ್ಯಕ್ರಮ. First priority was given for irrigation under the first 20 point programme. Increase irrigation potential and development descriminate techonology and inputs for dry land agriculture ಅಧ್ಯಕ್ಷರೇ, ಇದನ್ನು ನಮ್ಮ ಮುಖ್ಯ ಮಂತ್ರಿಯವರು ಗಮನಿಸಬೇಕು. ಏಕೆಂದರೆ, ಇದು ೨೦ ಅಂಶ ಗಳ ಕಾರ್ಯಕ್ರಮದಲ್ಲಿ ಮೊದಲನೇ ಆದ್ಯತೆಯನ್ನು ಕೊಟ್ಟಿದ್ದರೂ ಇವೊತ್ತು ೧೯೮೭ರಲ್ಲಿ ಏನಾಗಿದೆ ಅಂದರೆ, ರಿವೈಸ್ಡ್ ೨೦ ಅಂಶಗಳ ಕಾರ್ಯಕ್ರಮದಲ್ಲಿ, ಇರಿಗೇಶನ್ ಮೂರನೇ ಸ್ಥಾನಕ್ಕೆ ಹೋಗಿದೆ. ಇದೇ ರಿವೈಸ್ಡ್ ಕಾರ್ಯಕ್ರಮ...... Irrigation will go to the third place, this is the 20 point programme revised by the Government of

India. ಕುಡಿಯುವ ನೀರಿನದು ಏಳನೇ ಸ್ಥಾನಕ್ಕೆ ಹೋಗುತ್ತದೆ. ಜನತಾ ಸರ್ಕಾರದಲ್ಲಿ ಅದು ಮೊದಲನೇ ಪ್ಲೇಸ್‌ಗೆ ಬರುತ್ತದೆ. ಇದನ್ನು ಟೀಕೆಗೋಸ್ಕರ ಹೇಳುತ್ತಿಲ್ಲ. ಕೃಷಿ ಪ್ರಧಾನ ದೇಶವೆಂದು ಏನು ಹೇಳುತ್ತೇವೆ, ಶೇಕಡ ೭೦ರಷ್ಟು ಜನ ಹಳ್ಳಿಗಳಲ್ಲಿ ವಾಸ ಮಾಡುವ ಈ ರಾಷ್ಟ್ರದಲ್ಲಿ ನಮ್ಮ ಆದ್ಯತೆ ಯಾವ ದಿಕ್ಕಿನಲ್ಲಿ ಹೋಗುತ್ತದೆ ಎಂಬುದನ್ನು ನಾವೆಲ್ಲರೂ ಅರ್ಥಮಾಡಿಕೊಳ್ಳಬೇಕೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾವು ನಮ್ಮಲ್ಲಿರುವ ಸಂಪನ್ಮೂಲವನ್ನು ಹೇಗೆ ಬಳಕೆ ಮಾಡಿಕೊಳ್ಳುತ್ತೇವೆ ? ಅವರು ಬಂದರು. ತಮ್ಮ ಕಳಕಳಿ ವ್ಯಕ್ತಪಡಿಸಿದರು, ಕರ್ನಾಟಕದಲ್ಲಿ ಎಷ್ಟೊಂದು ಯೋಜನೆಗಳು ನೆನೆಗುದಿಗೆ ಬಿದ್ದಿವೆ, ಏನಾದರೂ ಮಾಡಿ ತೀವ್ರಗೊಳಿಸಬೇಕೆಂದರು. ಅವರು ಒಂದು ಮಾತನ್ನು ಹೇಳಿದ್ದಾರೆ. No new schemes are to be taken up until the on going projects make substantial progress. ಇದು ನಾನು ಹೇಳಿರುವುದಲ್ಲ, ಅವರು ಹೇಳಿರುವುದು. ನಾವು ಅಧಿಕಾರಕ್ಕೆ ಬಂದಮೇಲೆ ಮಾಡಿದ ಮೊದಲನೆಯ ಕೆಲಸ ೧೯೮೩ರ ಏಪ್ರಿಲ್ ೨೩ ರಂದು ನಮಗೆ ಸ್ಪೆಷಲ್ ಅಸಿಸ್ಟೆನ್ಸ್ ಎಂದು ೭೫ ಕೋಟಿ ಕೊಡಬೇಕೆಂದು ಪತ್ರ ಬರೆದೆವು. ಅದು ಕೃಷ್ಣಾ ಬೇಸಿನ್‌ಗಾಗಿ. ನಮಗೆ ಬಂದ ಉತ್ತರ. It was not possible to provide any additional financial assistance for the irrigation projects. This is the reply given by Sri S. B. Chavan, the then Minister, ಆಯಿತಾ ಸ್ವಾಮಿ. ಅದಾದ ಮೇಲೆ ಕೆ. ಹೆಚ್. ಪಾಟೀಲರು ಇವತ್ತು ಸಭೆಯಲ್ಲಿ ಇಲ್ಲ, ಆಯಿಲ್ ಸೀಡ್ಸ್‌ಗೆ ಎಷ್ಟು ಬೇಕಾದರೂ ಹಣ ಸಿಗುತ್ತದೆ, ನೀವು ಕೇಳುವುದಿಲ್ಲ ಎಂದು ಬಸವರಾಜ ಪಾಟೀಲ್ ಅನ್ವರಿಯವರಿಗೆ ಹೇಳಿದರು. ಸ್ವಾಮಿ, ಈ ದೇಶದಲ್ಲಿ ೧೫೦೦ ಕೋಟಿಗಳಷ್ಟು ವಿದೇಶಿ ವಿನಿಮಯ ವೆಚ್ಚ ಮಾಡುತ್ತೇವೆ. ಅದರಿಂದ ಹೊರದೇಶಗಳಿಂದ ಎಣ್ಣೆಕಾಳುಗಳನ್ನು ತರಿಸಿಕೊಳ್ಳುತ್ತಿದ್ದೇವೆ. When I asked assistance, and assured them that in kind we are going to return the money that is going to be advanced for oil seeds. ಈ ದೃಷ್ಟಿಯಿಂದ ನಾವು ಕೇವಲ ಸಾಲಕೇಳಿದೆವು ಅಷ್ಟೇ. ಪುಕ್ಕಟೆಯಾಗಿ ಕೊಡಿ ಎನ್ನಲಿಲ್ಲ. ನಾನು ಈಗ ಕೇಂದ್ರವನ್ನು ದೂಷಣೆ ಮಾಡುತ್ತಿಲ್ಲ. ಗ್ರಾಮೀಣ ಪ್ರದೇಶಗಳ ಬಗ್ಗೆ ಕೇಂದ್ರದ ಕಳಕಳಿ ಎಷ್ಟರ ಮಟ್ಟಿಗಿದೆ ಎಂಬುದು ಈ ಮನೆಗೆ ತಿಳಿದಿರಲಿ ಎಂದು ಹೇಳುತ್ತಿದ್ದೇನೆ. ಅಲ್ಲದೆ ಅದನ್ನು ಬೇರೆ ಕಾರಣಗಳಿಗೆ ಯೂಸ್ ಮಾಡುತ್ತೇವೆಂದೂ ಹೇಳಲಿಲ್ಲ. ಬರೀ ಕೃಷ್ಣಾ ಬೇಸಿನ್‌ಗೆ ಯೂಸ್ ಮಾಡುತ್ತೇವೆಂದೆವು. ಅದಕ್ಕೆ ಬಂದಂಥ ಉತ್ತರ ನಕಾರಾತ್ಮಕ. ಇನ್ನೂ ಏನೋ ಪರಿಶೀಲನೆ ಮಾಡುತ್ತಿದ್ದೇವೆ ಎಂದೇನೋ ಹೇಳುತ್ತಿದ್ದಾರೆ. ಮಾನ್ಯ ಮುಖ್ಯಮಂತ್ರಿಗಳ ಪ್ರಭಾವ ಈ ಕಡೆ ಸಫಲತೆ ತಂದುಕೊಟ್ಟರೆ ಈ ಸಭೆಯಲ್ಲಿ ಅವರಿಗೂ ವಂದಿಸುತ್ತೇನೆ. ಅವರಿಗಿರುವ ಕಳಕಳಿ ನಮಗೆಲ್ಲಾ ಅರ್ಥವಾಗಿದೆ. What they say is.

> " would not permit heavy investment on the basic infrastructure. However, it should be possible for the State Government to draw limited funds for the projects to strengthen water management in the command area. Such an investment should be marginal to the basic allotment ".

ನಿಮ್ಮ ಇಂಟರ್ನಲ್ ಸಿಚುಯೇಷನನ್ನು, ಸಾಮರ್ಥ್ಯವನ್ನು ಜಾಸ್ತಿ ಮಾಡಿಕೊಳ್ಳಿ ಎಂದು ಹೇಳಿದ್ದಾರೆ. ಇದು ಆಯಿತಾ ಸ್ವಾಮಿ.

ಸ್ವಾಮಿ, ಎನ್‌ಆರ್‌ಇಪಿ ಬಗ್ಗೆ ನಾವು ಸಾಕಷ್ಟು ಪ್ರಯತ್ನ ಮಾಡುತ್ತೇವೆ. ಜನ ನಮ್ಮನ್ನು ಕೂರಿಸಿರುವುದು ಮೋಜುಮಾನಿ ಮಾಡುವುದಕ್ಕಲ್ಲ. ಎನ್‌ಆರ್‌ಇಪಿ ಎಂದರೆ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಯೋಜನೆ ಎಂದು. ನಾನು ಒಂದು ಪಟ್ಟಿ ಮಾಡಿದ್ದೇನೆ. ಈ ದೇಶದಲ್ಲಿ ಬಡತನ ನಿರ್ಮೂಲನ ಮಾಡತಕ್ಕಂತಹ ೩೬ ಪ್ರೋಗ್ರಾಂಗಳನ್ನು ಅನೌನ್ಸ್ ಮಾಡಿದ್ದಾರೆ. ಎಂಪ್ಲಾಯಿಮೆಂಟ್ ಗ್ಯಾರಂಟಿ ಸ್ಕೀಮ್, ಅಫರ್ಮೇಷನ್ ಸ್ಕೀಮ್ ಹಾಗೂ ಇನ್ನೂ ಮುಂತಾದ ಯೋಜನೆಗಳು ಇವೆ. ಅದರಲ್ಲಿ ಅರ್ಧ ಭಾಗ ಕೇಂದ್ರ ಸರಕಾರ ಕೊಡುತ್ತದೆ. ಇನ್ನು ಅರ್ಧ ಭಾಗವನ್ನು ರಾಜ್ಯ ಸರಕಾರದವರು ಮೀಟ್ ಮಾಡಬೇಕು ನ್ಯಾಷನಲ್ ರೂರಲ್ ಎಂಪ್ಲಾಯಿಮೆಂಟ್ ಪ್ರೋಗ್ರಾಂ ಬಗ್ಗೆ ನಾನು ಪತ್ರ ಬರೆದೆ. ಪ್ರತಿಯೊಂದು ಜಿಲ್ಲೆಯಲ್ಲೂ

ನೀರಾವರಿ ಕಾಮಗಾರಿಗಳು ಇವೆ. ಪ್ರತಿಯೊಂದು ತಾಲ್ಲೂಕಿನಲ್ಲೂ ಇವೆ. ಮೈನರ್ ಇರಿಗೇಷನ್ ಇರಬಹುದು, ಮೀಡಿಯಂ ಇರಿಗೇಷನ್ ಇರಬಹುದು, ಮೇಜರ್ ಇರಿಗೇಷನ್ ಇರಬಹುದು. ಇವತ್ತು ಎಂಪ್ಲಾಯ್‌ಮೆಂಟ್ ಓರಿಯೆಂಟೇಷನ್ ಇರತಕ್ಕಂತಹ ವರ್ಕ್ಸ್ ಅನ್ನೇ ಇಟ್ಟುಕೊಳ್ಳೋಣ, ಫೀಲ್ಡ್ ಕ್ಯಾನಲ್ ಅನ್ನೇ ಇಟ್ಟುಕೊಳ್ಳೋಣ, ಗುದ್ದಲಿ ಹಾರೆ ಹಿಡಿಯುವುದನ್ನು ನಾವು ಅವರಿಗೆ ಕಲಿಸಿ ಕೊಡಬೇಕಾಗಿಲ್ಲ. ಅದನ್ನು ಇದಕ್ಕೇ ಉಪಯೋಗ ಮಾಡಬೇಕು. ಕಾಂಕ್ರೀಟ್ ಡ್ಯಾಂ ಕಟ್ಟುವುದಕ್ಕೆ, ಮೇಸನರಿ ಡ್ಯಾಂ ಕಟ್ಟುವುದಕ್ಕೆ ಆಗಲಿ ಇದನ್ನು ಉಪಯೋಗ ಮಾಡುವುದಿಲ್ಲ. ಎನ್ ಆರ್.ಇ.ಪಿ. ಫಂಡ್ಸ್‌ಗೇ ಮೊದಲ ಆದ್ಯತೆ ಕೊಡಬೇಕೆಂದು ಪತ್ರ ಬರೆದೆ. ಪೊಟೆನ್‌ಷಿಯಲ್ ಯುಟಿಲೈಸ್ ಕಡಿಮೆ ಇದೆ ಎಂದು ಹೇಳಿದ್ದಾರೆ. ಇವತ್ತು ಪತ್ರಿಕೆಯಲ್ಲಿ ಹೈ–ಲೈಟ್ ಮಾಡಿದ್ದಾರೆ. ಇದರ ಬಗ್ಗೆ ಅಂಕಿ ಅಂಶಗಳು ಸರಿಯಾಗಿ ಸಿಕ್ಕಲಿಲ್ಲ. ಫೀಲ್ಡ್ ಕ್ಯಾನಲ್ ತೆಗೆಯಬೇಕು, ಪೊಟೆನ್‌ಷಿಯಲ್ ಅನ್ನು ಹೆಚ್ಚು ಮಾಡಬೇಕು, ಇದಕ್ಕೆ ದುಡ್ಡು ಕೊಡಬೇಕಾಗುತ್ತದೆ. ಕಾಡಾ ಪ್ಲಾನಿಂಗ್‌ನಲ್ಲಿ ಇತ್ತು ಮಾನ್ಯ ಮುಖ್ಯ ಮಂತ್ರಿಗಳು ಇದಕ್ಕೆ ಸರಿಯಾದಂತಹ ಕೋ–ಆರ್ಡಿನೇಷನ್ ಆಗಲಿ ಎಂದು ಇರಿಗೇಷನ್ ಇಲಾಖೆಗೆ ವಹಿಸಿ ಕೊಟ್ಟರು. ಇದರಲ್ಲಿ ಏನು ತೊಂದರೆ ಇದೆ. ನಮಗೆ ಕೊಡುವ ಹಣ ಏನಿದೆ ಅದನ್ನು ಕೊಟ್ಟಿಲ್ಲ ನಮ್ಮ ಗುರಿ ಏನಿದೆ ಎಂದರೆ ನ್ಯಾಷನಲ್ ರೂರಲ್ ಎಂಪ್ಲಾಯ್‌ಮೆಂಟ್ ಪ್ರೋಗ್ರಾಮ್‌ನಿಂದ ಹಳ್ಳಿಯವರಿಗೆ ಕೆಲಸ ಕೊಡತಕ್ಕಂಥದ್ದು ಇದೆ, ಅವರಿಗೇ ಈ ಕೆಲಸವನ್ನು ಕೊಡುತ್ತೇವೆ, ೩೦–೪೦ ಕೋಟಿ ಸಿಕ್ಕಿದರೆ ಉಪಯೋಗ ಮಾಡುತ್ತೇವೆ ಎಂದು ಹೇಳಿದ್ದೇವೆ, ಅದರ ಬಗ್ಗೆ ಇವತ್ತಿನ ವರೆಗೂ ಉತ್ತರವಿಲ್ಲ. ನಾವು ವಿಶ್ವಬ್ಯಾಂಕ್‌ನಿಂದ ದುಡ್ಡನ್ನು ತೆಗೆದುಕೊಳ್ಳುತ್ತೇವೆ. ಅವರು ಹೇಗೆ ಕೊಡುತ್ತಾರೆಂದರೆ ೧೦೦ ಕೋಟಿ ರೂಪಾಯಿ ಖರ್ಚು ಮಾಡಿದರೆ ೨೦ ಕೋಟಿ ಅವರು ಕೊಡುತ್ತಾರೆ. ಅದರಲ್ಲಿ ೫೦ ಪರ್ಸೆಂಟ್ ಕೇಂದ್ರ ಸರಕಾರದವರು ನಮಗೆ ಕೊಡುವುದು. ನಾವು ಕೇಂದ್ರ ಸರಕಾರವನ್ನು ವಿನಂತಿ ಮಾಡಿದ್ದೇನೆಂದರೆ ಯಾವ ಪ್ರಾಜೆಕ್ಟ್‌ಗೆ ವಿಶ್ವಬ್ಯಾಂಕ್ ಹಣ ಕೊಡುತ್ತದೆ, ಅದನ್ನು ಪೂರ್ತಿಯಾಗಿ ರಿಲೀಸ್ ಮಾಡಿಕೊಡಿ ಎಂದು, ಅದಕ್ಕೆ ಅವರು ಒಪ್ಪಲಿಲ್ಲ. ನಾನು ಅವರನ್ನು ಆರೋಪಣೆ ಮಾಡುವುದಕ್ಕೋಸ್ಕರ ಹೇಳುವುದಿಲ್ಲ. ದಯವಿಟ್ಟು ಕ್ಷಮೆ ಕೇಳುತ್ತೇನೆ. ನಾವು ಏನು ಈ ದಿವಸ ಮಾಡಿದ್ದೇವೆ ಎಂಬುದರ ಬಗ್ಗೆ ಈ ಸಭೆಗೆ ಹೇಳಬೇಕಾದುದರಿಂದ ಹೇಳುತ್ತಿದ್ದೇನೆ. ಅದಕ್ಕೆ ಕೂಡ ಕೇಂದ್ರ ಸರಕಾರ ಒಪ್ಪುತ್ತಿಲ್ಲ, ಇದು ಒಂದು ಕಡೆಯಾದರೆ ಮತ್ತೊಂದು ಕಡೆ ನಮ್ಮ ಪ್ರಧಾನ ಮಂತ್ರಿಗಳನ್ನು ಈ ಸಂದರ್ಭದಲ್ಲಿ ಒಂದು ವಿಷಯಕ್ಕೆ ನಾನು ಅಭಿನಂದಿಸುತ್ತೇನೆ, ಹೌಸಿಂಗ್ ಪ್ರಾಬ್ಲಂ ಸಾಲ್ವ್ ಮಾಡಲಿಕ್ಕೋಸ್ಕರವಾಗಿ ತನ್ನದೇ ಆದ ಅಪೆಕ್ಸ್ ಫೈನಾನ್‌ಷಿಯಲ್ ಇನ್‌ಸ್ಟಿಟ್ಯೂಷನ್ ಅನ್ನು ಮಾಡಿ ರಾಷ್ಟ್ರ ಮಟ್ಟದಲ್ಲಿ ಸ್ಥಾಪನೆ ಮಾಡಲಿಕ್ಕೆ ನಿರ್ಣಯ ತೆಗೆದುಕೊಂಡಿದ್ದಾರೆ. ಅದೇ ರೀತಿಯಾಗಿ ಇರಿಗೇಷನ್‌ಗೋಸ್ಕರ ಅಪೆಕ್ಸ್ ಇನ್‌ಸ್ಟಿಟ್ಯೂಷನ್ ಮಾಡಿ ಎಂದು ನಾವು ಒತ್ತಾಯ ಮಾಡಿದೆವು, ಸಾಧ್ಯವಿಲ್ಲವೆಂದರು. ೨೦ ಅಂಶಗಳ ಕಾರ್ಯಕ್ರಮದಲ್ಲಿ ಮೊದಲನೇ ಪಟ್ಟಿಯಲ್ಲಿ ಇದ್ದುದು ಮೂರನೇ ಪಂಕ್ತಿಯಲ್ಲಿ ಬಂದಿದೆ, ನಮ್ಮ ರೈತನ ಸಮಸ್ಯೆಯನ್ನು ಅರ್ಥ ಮಾಡಿಕೊಂಡು, ಜಲ ಸಂಪತ್ತನ್ನು ಉಪಯೋಗಿಸಿಕೊಂಡು ಹಸನು ಮಾಡತಕ್ಕಂಥಾದ್ದರಲ್ಲಿ ಎಷ್ಟು ಕಾಳಜಿ ಇದೆ ಎಂದು ಇದರಲ್ಲಿ ಅರ್ಥವಾಗುತ್ತದೆ. ಈ ಮಾತನ್ನು ಹೇಳುವಾಗ ನನಗೆ ಮತ್ತು ಮಾನ್ಯ ಮುಖ್ಯ ಮಂತ್ರಿಗಳಿಗೆ ಸ್ವಲ್ಪ ಘರ್ಷಣೆ ಇತ್ತು. ಅವರು ಒಂದೊಂದು ಸಾರಿ ತುಂಬಾ ಔದಾರ್ಯದಿಂದ ಮಾತನಾಡಿದರೆ ಒಂದೊಂದು ಸಾರಿ ರೇಗುತ್ತಾರೆ, ಅವರಿಂದ ರೇಗಿಸಿಕೊಳ್ಳುವುದಕ್ಕೆ ನಾನು ಸಿದ್ಧನಿದ್ದೇನೆ. ೧೯೭೪–೭೫ ರಲ್ಲಿ ಮಾನ್ಯ ದೇವರಾಜ ಅರಸ್‌ರವರು ಬೆಟರ್‌ಮೆಂಟ್ ಲೆವಿಯನ್ನು ೫೦೦ ರಿಂದ ೧೫೦೦ ರೂಪಾಯಿಗೆ ಏರಿಸಲಿಕ್ಕೆ ಪ್ರಯತ್ನ ಮಾಡಿದರು. ಆಗ ನಾನು ಅಪೋಜಿಷನ್ ಲೀಡರ್. I never opposed. I opposed the principles of calculating the betterment levy. ಇಲ್ಲಿ ಇದೆ ಓದಿ. ಅಲ್ಲೊಂದು ಕೂತು, ಇಲ್ಲೊಂದು ಕೂತು ಮಾತನಾಡುವುದಕ್ಕೆ ಸಾಧ್ಯ ಇಲ್ಲ. ಈ ಸದನದಲ್ಲಿ ರೈತರ ಬಗ್ಗೆ ಚರ್ಚೆ ಆದ ದಿನ ಪತ್ರಿಕೆಯಲ್ಲಿ ಬರೆದರು ನನ್ನ ಮೇಲೆ ಗುಂಡೂರಾಯರು ಮತ್ತು ದೇವೇಗೌಡರು ಇಬ್ಬರೂ ಶಾಮೀಲಾಗಿದ್ದಾರೆ ಎಂದು ಹೇಳಿದರು. ೧೯೭೮ರಲ್ಲಿ ಈ ಕರ್ನಾಟಕ ರಾಜ್ಯದ ಪಕ್ಷದ ಅಧ್ಯಕ್ಷನಾದಂಥ ಕಾಲದಲ್ಲಿ ಪಕ್ಷ ಅಧಿಕಾರಕ್ಕೆ ಬರತಕ್ಕಂಥದ್ದನ್ನು ತಿರಸ್ಕಾರ ಮಾಡಿದರು. It is the people's mandate and I bow my head. ನನಗೆ ನಾಲ್ಕನೇ ಸೀಟನ್ನು ಗೊತ್ತು ಮಾಡಿದರು. ಅಲ್ಲಿ ಡೆಪ್ಯುಟಿ ಸ್ಪೀಕರ್, ಅಪೋಜಿಷನ್ ಲೀಡರ್, ಡೆಪ್ಯುಟಿ ಲೀಡರ್, ಪಕ್ಕದಲ್ಲಿ ನಾನು ಪಾರ್ಟಿ ಪ್ರೆಸಿಡೆಂಟ್ ಎಂದು ಜಾಗ ಕೊಟ್ಟರು. ಅವತ್ತು ನಾನು ಸದನದಲ್ಲಿ ಏನು ಹೇಳಿದೆ ಎಂದರೆ ನನ್ನ ಮುಖಂಡತ್ವವನ್ನು ತಿರಸ್ಕಾರ ಮಾಡಿದ್ದಾರೆ ಎಂದು. ಈಗ ಮಲ್ಲಾರಿಗೌಡ ಎಸ್. ಪಾಟೀಲ್

ಕುಳಿತಿರುವ ಜಾಗದಲ್ಲಿ ಹೋಗಿ ಕುಳಿತುಕೊಂಡೆ. ಭ್ರಷ್ಟಾಚಾರದ ಬಗ್ಗೆ ನನ್ನ ಮೇಲೆ ಏನು ಆಪಾದನೆ ಮಾಡಿದಿರಿ, ಗ್ರೋವರ್ ಕಮಿಷನ್ ಕೊಟ್ಟ ತೀರ್ಮಾನ ಏನು ಇದೆಯೋ ಅದನ್ನು ಕೂಡಾ ಜನತೆಯು ನಿಮ್ಮನ್ನು ಮತ್ತು ನಿಮ್ಮ ಆಪಾದನೆಯನ್ನು ತಿರಸ್ಕಾರ ಮಾಡಿತು ಎಂದು ದೇವರಾಜ ಅರಸ್ ಹೇಳಿದರು.

People's verdict is there in my favour. Yes, as a democrat, I had accepted that verdict. ಹೊಳೇನರಸೀಪುರದ ಜನ ಈ ಸದನದಲ್ಲಿ ಕುಳಿತುಕೊಳ್ಳಲಿಕ್ಕೆ ಅವಕಾಶ ಕೊಟ್ಟಿದ್ದಾರೆ ಎಂದು ಹೇಳಬಹುದು. ಆದರೆ ಮುಂದೆ ಕುಳಿತುಕೊಳ್ಳಲಿಕ್ಕೆ ನನಗೆ ಯೋಗ್ಯತೆ ಇಲ್ಲ ಎಂದು ನಾನೇ ಹೇಳಿದ್ದೇನೆ. ೧೯೭೮-೮೦ ರವರೆಗೂ ನಾನು ಈ ಸದನದಲ್ಲಿ ಮಾತನಾಡಲಿಲ್ಲ. ಅವತ್ತು ನನಗೆ ದೇವೇಗೌಡ, ದೇವರಾಜ ಅರಸ್ ಸಾಮಿಲಾಗಿದ್ದಾರೆ ಎಂದು ಯಾರೂ ಹೇಳಲಿಲ್ಲ. ಅವತ್ತು ಪತ್ರಿಕೆಯವರೂ ಬರೆಯಲಿಲ್ಲ. ೧೯೮೦ ರಿಂದ ೮೩ ರವರೆಗೂ ಮಾತನಾಡಲಿಲ್ಲ ಆಗ ಬರೆದರು ಪತ್ರಿಕೆಯವರು. ಬೆಟರ್‌ಮೆಂಟ್ ಲೆವಿ ವಿಷಯ ಬಂದಾಗ ರೈತರ ಸಮಸ್ಯೆ ಬಂದಾಗ ದೇವೇಗೌಡ ಕೂಡಾ ರೈತರ ಮಗನೇ. ನಾವು ದೊಡ್ಡ ಫ್ಯಾಮಿಲಿಯಿಂದ ಬಂದವರೇ. ಸಾಮಾನ್ಯ ಜೀವನವನ್ನು ನಾವು ನಡೆಸಿಕೊಂಡು ಬಂದಿದ್ದೇವೆ. ಆದರೆ ನಾನು ಒಂದು ಮಾತನ್ನು ಹೇಳಿದ್ದೆ. ರೈತನ ಆರ್ಥಿಕ ಸ್ಥಿತಿಯನ್ನು ಹೆಚ್ಚು ಮಾಡತಕ್ಕಂಥ, ರೂಢಿಸತಕ್ಕಂಥ ಕಾರ್ಯ ಕ್ರಮದಲ್ಲಿ ಯಾರೂ ಹಿಂದೆ ಬೀಳುವುದಿಲ್ಲ. ಆದರೆ ಕೊಟ್ಟಂಥ ಸಾಲವನ್ನು ಮನ್ನಾ ಮಾಡಿದರೆ ಅವನು ಮುಂದಕ್ಕೆ ಬರುತ್ತಾನೆ ಎಂದು ಯಾರಾದರೂ ಹೇಳಿದರೆ ಅದು ದೊಡ್ಡ ಅವಿವೇಕದ ಪರಮಾವಧಿಯಾಗುತ್ತದೆ. In 1974 ನಾನು Opposition Leader ಆಗಿದ್ದಾಗ ೫೦೦ ರಿಂದ ೧೫೦೦ ಹೆಚ್ಚು ಮಾಡುವುದು ಸರಿಯಲ್ಲ. ಏನು ಗೈಡ್‌ಲೈನ್ಸ್ ತೆಗೆದುಕೊಂಡಿದ್ದೀರಿ, ಅದು ಸರಿಯಾದ್ದಲ್ಲ. I opposed the principle of enhancing the betterment levy from Rs. 500 to Rs. 1500. ಸ್ವಾಮಿ, ಮಾನ್ಯ ಮುಖ್ಯ ಮಂತ್ರಿಗಳು ಬಂದ ತಕ್ಷಣ ಅವರು ಒಂದು ಸರಿಯಾದ ನಿರ್ಣಯವನ್ನು ಮಾಡುತ್ತಾರೆ ಸಂತೋಷ. ಆ ರೀತಿಯಲ್ಲಿ ಮಾಡಲಿಕ್ಕೆ ನಾನು ಅವರಿಗೆ ಕೈಮುಗಿದು ಕೇಳಿಕೊಳ್ಳುತ್ತೇನೆ. ಈ ಸಂಪನ್ಮೂಲವನ್ನು ರೂಢಿಸತಕ್ಕಂಥ ಕಾಲದಲ್ಲಿ ಈಗಲಾದರೂ ಸ್ವಲ್ಪ ನಮ್ಮನ್ನು ವಿಶ್ವಾಸಕ್ಕೆ ಇಟ್ಟುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ. ಐದು ವರ್ಷ ಆಯಿತು ವಾಟರ್ ರೇಟ್ ಇಲ್ಲ. ಕೋಲಾರದಲ್ಲಿ ಬೈರೇಗೌಡರು ಬಾವಿ ತೆಗೆಸಿದರು, ಬಾವಿ ತೆಗೆದು ಪಂಪ್‌ಸೆಟ್ ಹಾಕಿದ ತಕ್ಷಣ.........

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ವಿಶ್ವಾಸಕ್ಕೆ ತೆಗೆದುಕೊಳ್ಳಿ ಎಂದು ಹೇಳಿದರೆ ಈ ಸದನದಲ್ಲಿ ನಮ್ಮನ್ನು....................

ಶ್ರೀ ಹೆಚ್.ಡಿ. ದೇವೇಗೌಡ.—ನಿಮ್ಮನ್ನು ಏತಕ್ಕೆ ಬಿಡಬೇಕು.

ನಮ್ಮನ್ನೂ ನಿಮ್ಮನ್ನೂ ಎಲ್ಲರನ್ನೂ ಸೇರಿಸಿಕೊಂಡು ನಾನು ಹೇಳುತ್ತಿದ್ದೇನೆ. Through, you, I request the Hon'ble Chief Minister who is our Leader let him not be so generous. ಈ ಸಮಾಜ ಏನಾದರೂ ಉದ್ಧಾರವಾಗಬೇಕು ಅನ್ನುವುದಾದರೆ ನಮ್ಮ ಶಾಸಕರೂ ಸಹ ನನ್ನ ಜೊತೆಗೆ ಬರಬೇಕು. ಕೆಲವು ಶಾಸಕರು ಬಂದು ಪೈರು ಬೆಳೆದು ನಿಂತಿದೆ, ಕರೆಂಟ್ ಛಾರ್ಜ್ ಕಟ್ಟಿಲ್ಲ, ದಯಮಾಡಿ ಕರೆಂಟ್ ಅನ್ನು ಕೊಡಿಸಿಕೊಡಿ ಎಂದು ಬಂದು ಹೇಳುತ್ತಾರೆ, ಸಂತೋಷ. ಇದೇ ರೀತಿಯಲ್ಲಿ ನಾವು ಆಡಳಿತ ನಡೆಸುವುದಾದರೆ ನಾವು ಹಾಗೆಯೇ ಕೂತುಕೊಂಡು ಹೋಗುತ್ತೇವೆ. ಅವರು ತೆಲುಗು – ಗಂಗಾ ಯೋಜನೆಯನ್ನು ಮಾಡಿಕೊಂಡು ಹೋಗಲಿ. ಕರ್ನಾಟಕದ ಜನತೆಗೆ ಈ ರೀತಿಯಾಗಿ ವಂಚನೆ ಮಾಡುವುದಾದರೆ ನಾವೆಲ್ಲಾ ೧೯೯೦ಕ್ಕೆ ಮನೆಗೆ ಹೋಗಬೇಕು ಎನ್ನುವುದಾದರೆ ಈ ಕೆಲಸ ಮಾಡೋಣ. ಇದಕ್ಕೆ ನನ್ನದೇನೂ ತಕರಾರು ಇಲ್ಲ. ನಾನು ತಮಗೆ ಇನ್ನೊಂದು ಮಾತು ಹೇಳುತ್ತೇನೆ. ೧೯೯೦ ಆದಮೇಲೆ ಶ್ರೀಮಾನ್ ಮಲ್ಲಿಕಾರ್ಜುನ ಖರ್ಗೆಯವರು ಮುಖ್ಯಮಂತ್ರಿಗಳಾಗಿ ಬರುತ್ತಾರೋ ಅಥವಾ ಬೋರಪ್ಪನವರು ಮುಖ್ಯಮಂತ್ರಿಗಳಾಗುತ್ತಾರೋ ಗೊತ್ತಿಲ್ಲ. ಆದಕ್ಕೂ ನನಗೂ ಸಂಬಂಧವಿಲ್ಲ. Karnataka people have given the mandate to administer for five years ಈ ಮೂರು ವರ್ಷದಲ್ಲಿ ವಾಟರ್ ರೇಟ್ ಮುಂದಕ್ಕೆ ಹೋಗುತ್ತದೆ. ಇವತ್ತು ೭೦ ಕೋಟಿ ರೂಪಾಯಿ ಬಾಕಿ ಇದೆ. ಮಾತನಾಡುವುದು ಹೀಗೆ. ಈವೊತ್ತು ಹಗ್ಗ ಕಟ್ಟಿ ಹಿಂದಕ್ಕೂ ಮುಂದಕ್ಕೂ ಪೆಟ್ರೋಲ್ ಇಟ್ಟುಕೊಂಡು ನಮ್ಮನ್ನು ಬಂದು ನೀರು ಬಿಡಿ ಎಂದು ಕೇಳುತ್ತಾರೆ. ಆ ಅಧಿಕಾರಿಗಳನ್ನು ನೀರು ಬಿಡುವುದಿಲ್ಲ ಎಂದರೆ ಅಧಿಕಾರಿಯನ್ನು ಹೊಡೆಯುವುದಕ್ಕೆ ಹೋಗುತ್ತಾರೆ. ಹೀಗಾದರೆ ಯಾವ ಅಧಿಕಾರಿ ಕೆಲಸ ಮಾಡುವುದಕ್ಕೆ

ಸಾಧ್ಯ ಸ್ವಾಮಿ ? ಶ್ರೀವಗಾಸ್ ತುಂಗಳ್‌ರವರು ಬಂದು ನಮಗೆ ನೀರು ಬಿಡಿ ಇಲ್ಲದೇ ಹೋದರೆ ೨ ಕೋಟಿ ರೂಪಾಯಿಯಷ್ಟು ಬೆಳೆ ಇರುವುದು ಒಣಗಿ ಹೋಗುತ್ತದೆ ಎಂದು ಹೇಳುತ್ತಾರೆ. ಹಾಗೆಯೇ ರೇವಣಸಿದ್ದಪ್ಪನವರು ಬಂದು ತುಂಗಭದ್ರ ಹೈಲೆವಲ್ ಕೆನಾಲ್‌ನಲ್ಲಿ ಸೆಕೆಂಡ್ ಕ್ರಾಪ್‌ಗೆ ನೀರು ಕೊಡಿಸಿ, ಇಲ್ಲದೇ ಹೋದರೆ ಬೆಳೆಯೆಲ್ಲಾ ಒಣಗಿ ಹೋಗುತ್ತದೆ. ನಾವು ಇಂಟರ್‌ಸ್ಟೇಟ್ ಅಗ್ರಿಮೆಂಟ್ ವ್ಯಾಪ್ತಿಯಿಂದ ಹೊರಗೆ ಹೋದರೂ ಪರವಾಗಿಲ್ಲ ನೀರು ಕೊಡಿಸಿಕೊಡಿ ಎಂದು ಹೇಳುತ್ತಾರೆ. ನಾವು ಅವರ ಮಾತಿಗೆ ತಲೆಬಾಗಬೇಕಾಗುತ್ತದೆ. ಇದರಿಂದ ಅವರಿಗೆ ಎರಡು ಕೋಟಿ ರೂಪಾಯಿ ಉಳಿಯುತ್ತದೆ ಅಂಥಾದ್ದರಲ್ಲಿ ನಮ್ಮ ಅಧಿಕಾರಿಗಳು ೧೦೦ ರೂಪಾಯಿ ಕೊಡಬೇಕು ಇಲ್ಲದೇ ಹೋದರೆ ನಿಮ್ಮ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆ ಎಂದರೆ ಆ ಅಧಿಕಾರಿಗಳು ಇದರಿಂದ ಏಟು ತಿನ್ನಬೇಕಾಗುತ್ತದೆ. ಇದಕ್ಕೆ ಏನು ಮಾಡಬೇಕು ಸ್ವಾಮಿ ? ಈವೊತ್ತು ಅವರಿಗೆ ಎರಡು ಕೋಟಿ ರೂಪಾಯಿ ಬೆಳೆ ಉಳಿಸಿರುವಾಗ ೧೦೦ ರೂಪಾಯಿ ಕೊಡುವುದಕ್ಕಾಗುವುದಿಲ್ಲ ಎಂದರೆ ಹೇಗೆ ? ತುಂಗಭದ್ರ ಹೈಲೆವೆಲ್ ಕೆನಾಲ್‌ನಲ್ಲಿ ಇಂತಹಕ್ಕಂಥಾ ಒಬ್ಬ ಇಂಜಿನಿಯರ್ ಅವರನ್ನು ಹೊಡೆದಿದ್ದಾರೆ. ಅವರನ್ನು ಹೊಡೆದರು ಎಂದು ಅಲ್ಲಿದ್ದವರೆಲ್ಲಾ ಮಾಸ್‌ಲೀವ್ ಹಾಕಿ ಪ್ರೊಟೆಸ್ಟ್ ಮಾಡಿದರು. ಹೀಗಾದರೆ ನಮ್ಮ ಅಪ್ರೋಚ್‌ನಿಂದ, ನಮ್ಮ ಥಿಂಕಿಂಗ್‌ನಿಂದ ರೀಸೋರ್ಸಸ್ ಮೊಬಲೈಸೇಷನ್ ಮಾಡುವುದು ಹೇಗೆ ? ಇದು ಒಂದೇ ಅಲ್ಲ. ಇನ್ನೂ ಇದೆ. ಇದರ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಸ್ವಲ್ಪ ಗಡಸು ನಿಲುವನ್ನು ತೆಗೆದುಕೊಳ್ಳಬೇಕು ಎಂದು ಹೇಳುತ್ತೇನೆ. ಇದರಲ್ಲಿ ಕಾಂಪ್ರಮೈಸ್ ಮಾಡಿಕೊಳ್ಳುವುದಕ್ಕೆ ಸಾಧ್ಯವೇ ಇಲ್ಲ. ಇವತ್ತು ನಾವು ಸಂಪನ್ಮೂಲಗಳನ್ನು ರೂಢಿಸಿಕೊಳ್ಳಬೇಕಾಗಿದೆ. ನಾವು ವೀರಪ್ಪಮೊಯ್ಲಿ ಅವರಿಂದ ಕಲಿತುಕೊಂಡು ಕೆಲಸ ಮಾಡಬೇಕಾದ್ದಿಲ್ಲ. We want to spend Rs. 300 crores and more on the irrigation projects. If I cannot achieve the target, let him relieve me, I have no objection. ನಾನು ಬಹಳ ಪ್ರಾಮಾಣಿಕವಾಗಿ ಈ ಸಂದರ್ಭದಲ್ಲಿ ಹೇಳುತ್ತೇನೆ. I am not willing to continue as Irrigation Minister and I don't want to do that. play a hypocratic role. ಮಾನ್ಯ ವೀರಪ್ಪಮೊಯ್ಲಿ ಅವರು ನನಗೇನೂ ಸರ್ಟಿಫಿಕೇಟ್ ಕೊಡಬೇಕಾಗಿಲ್ಲ. I don't want to do that. ಇವತ್ತು ಕರ್ನಾಟಕದ ೬-೭ ಕೋಟಿ ಜನರಿಗೆ ಆಗತಕ್ಕಂಥ ಅನ್ಯಾಯವನ್ನು ತಪ್ಪಿಸಬೇಕೆನ್ನುವುದೇ ನನ್ನ ಉದ್ದೇಶ. ಅದಕ್ಕೋಸ್ಕರವಾಗಿ ಹೇಳುತ್ತೇನೆ. The challenges have to be met not on political considerations but it is the economic consideration that is paramount here.

SRI M. MALLIKARJUNA KHARGE.—We are expecting that only.

ಶ್ರೀ ಹೆಚ್. ಡಿ. ದೇವೇಗೌಡ.——ಅದಕ್ಕೋಸ್ಕರವಾಗಿ ನಾನು ಡ್ಯೂಯಲ್ ರೋಲ್ ಮಾಡಿ ಅನ್ನುವುದಿಲ್ಲ. ಪಾಪ ಅವರು ಏನೇನೋ ಕೋಟ್ ಮಾಡುತ್ತಾರೆ. ನಾನು ಇದರ ಬಗ್ಗೆ ಒಂದು ಆರ್ಟಿಕಲ್‌ನ್ನು ಓದುತ್ತೇನೆ. ದಯವಿಟ್ಟು ಕೇಳಿ. "How the Government Waste 20,000 crores" you have got every right to criticise. ನಾನು ಇದನ್ನು ಯಾವ ಮಟ್ಟಕ್ಕೆ ತೆಗೆದುಕೊಳ್ಳುತ್ತಿದ್ದೇವೆಂಬುದನ್ನು ತಾವೇ ಹೇಳಬೇಕು. ಇನ್ನೂ ಮುಂದಕ್ಕೆ ಹೋಗಿ ಹೇಳುತ್ತೇನೆ. ಪಂಡಿತ್ ಜವಹರ್‌ಲಾಲ್ ನೆಹರೂರವರು ಫಿರೋಜ್ ಗಾಂಧಿ ಬಗ್ಗೆ ಏನು ಹೇಳಿದರು ಅನ್ನುವುದನ್ನೂ ಸಹ ಹೇಳುತ್ತೇನೆ. If you want to expose me, I welcome it. ಆದರೆ ನಾನು ಹೋಗತಕ್ಕಂಥ ಧಾಟಿಯಲ್ಲಿ ತೊಂದರೆ ಮಾಡುವುದು ಬೇಡ.

೫-೦೦ ಪಿ. ಎಂ.

ಇದಕ್ಕೆ ಒಂದು ಉದಾಹರಣೆಯನ್ನು ಕೋಟ್ ಮಾಡಿ ತಮಗೆ ಹೇಳುತ್ತೇನೆ.

"Irregular bank loans are now said to total Rs. 5,000 crore, but any information sought on the subject comes up against the standard response that a bank's relationship with its customers is confidential and that details cannot be disclosed. In another classic example, no final figure is

available even today on how much was spent on the 1982 Asian Games and related activity indeed, unsold tickets to the various sporting arenas were destroyed before a tally could be taken of how many tickets were in fact unsold ''

This is how the tax payers money is being spent. With all sincerity I want to say onething. ಇದು ನಮ್ಮ ದೇಶದ ಅರ್ಥ ವ್ಯವಸ್ಥೆ. ನಮ್ಮ ದೇಶದಲ್ಲಿ ಜನ ಸಾಮಾನ್ಯರ ಹೆಸರಿನಲ್ಲಿ ಅಧಿಕಾರಕ್ಕೆ ಬಂದಿರುವವರು ಅದೇ ಜನಸಾಮಾನ್ಯರು ಕೊಟ್ಟಿರುವ ತೆರಿಗೆ ಹಣವನ್ನು ಯಾವ ರೀತಿ ವಿನಿಯೋಗ ಮಾಡುತ್ತಾರೆ ಎಂಬುದಕ್ಕೆ ಇದು ಒಂದು ಉದಾಹರಣೆ ಕೊಟ್ಟು ಹೇಳಿದೆ. ಈ ಬಗ್ಗೆ ಈ ಸದನದ ಯಾವ ಭಾಗದ ಸದಸ್ಯರೇ ಆಗಲಿ, ನನ್ನ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡುವುದು ಬೇಡ. ಯಾರಾದರೂ ನನ್ನ ಪ್ರಾಮಾಣಿಕತೆಯನ್ನು ಪ್ರಶ್ನೆ ಮಾಡಿದರೆ ನನಗೆ ದುಃಖ ವಾಗುತ್ತದೆ. ಆಗ ನನ್ನ ಮನಸ್ಸಿನಲ್ಲಿರುವ ನೋವನ್ನು ತೋಡಿಕೊಳ್ಳುತ್ತೇನೆ. ಯಾರೇ ಆಗಲಿ, ಇಲ್ಲಿ ಇಂತಹ ಮಾತುಗಳನ್ನು ಆಡುವುದರ ಮೂಲಕ ಛಾಲೆಂಜ್ ಸ್ವೀಕಾರ ಮಾಡುವುದು ಬೇಡ. ಇದೇ ವಿಚಾರದಲ್ಲಿ ನಾನು ಮೇಲ್ಮನೆಯಲ್ಲಿ ಸಹ ಒಂದು ಮಾತನ್ನು ಹೇಳಿದೆ. ಏನೆಂದರೆ, ಕೇಂದ್ರ ಸರ್ಕಾರ ನಮ್ಮ ಕೂಗಿಗೆ ಕಿವಿ ಕೊಡದೆ ಕಿವುಡಾದರೆ ನಾವು ನಮ್ಮ ಜವಾಬ್ದಾರಿಯಿಂದ ನುಣುಚಿಕೊಳ್ಳುವುದಕ್ಕೆ ಸಾಧ್ಯವಿಲ್ಲ. ನಮ್ಮ ಜನರ ಕಷ್ಟವನ್ನು ನಾವು ನಿವಾರಣೆ ಮಾಡಲೇಬೇಕಾಗುತ್ತದೆ. ನಮ್ಮ ಜನರು ಸಹ ಬೇರೆಯವರಂತೆ ತಲೆ ಎತ್ತಿ ನಿಲ್ಲಬೇಕಾದರೆ ಮತ್ತು ನಾಗರೀಕರಂತೆ ಬಾಳಬೇಕಾದರೆ ನಾವು ನಮ್ಮ ಯೋಜನೆಗಳ ಕೆಲಸವನ್ನು ಮುಗಿಸಬೇಕಾಗುತ್ತದೆ. ಇದಕ್ಕಾಗಿ ಬಡವರ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸಿ ಎಂದು ನಾನು ಮುಖ್ಯಮಂತ್ರಿಗಳಿಗೆ ಹೇಳುತ್ತಿಲ್ಲ. ಬಡವರಿಗೆ ನಾವು ಹೆಚ್ಚಿನ ಶಕ್ತಿಯನ್ನು ತುಂಬಿ ಕೊಡಬೇಕಾದರೆ ಈಗ ಯಾರು ಯಾರು ನಮ್ಮ ಯೋಜನೆಗಳ ಲಾಭವನ್ನು ಪಡೆದುಕೊಂಡಿದ್ದಾರೆ, ಅಂತಹವರ ಮೇಲೆ ಹೆಚ್ಚಿನ ಹೊರೆಯನ್ನು ಹೊರಿಸಿ ಎಂದು ನಾನು ಮುಖ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ. ಯೋಜನೆಗಳ ಲಾಭವನ್ನು ಪಡೆದುಕೊಂಡವರ ಬಗ್ಗೆ ಸ್ವಲ್ಪ ಕಾಠಿಣ್ಯದ ನಿಲುವನ್ನು ನಾವು ತೆಗೆದುಕೊಳ್ಳಬೇಕಾಗುತ್ತದೆ.

ಇನ್ನು ತೆಲುಗುಗಂಗಾ ಯೋಜನೆಯ ಬಗ್ಗೆ ಆಂಧ್ರದ ನೀರಾವರಿ ಸಚಿವರು ಏನು ಹೇಳಿದ್ದಾರೆಂದರೆ

'' The Revenue Minister, Shri Srinivasulu Reddy said We are prepared to face any consequences including arrest of the Cabinet. We are not breaking any law but only exercising our right in utilising the surplus water. ''

ಎಂದು. ಇದರ ಬಗ್ಗೆ ನಾನು ಇಷ್ಟು ಮಾತ್ರ ಹೇಳುವುದಕ್ಕೆ ಇಷ್ಟಪಡುತ್ತೇನೆ ಏನೆಂದರೆ, ಅವರು ಉದ್ಧಟತನದ ಮಾತನ್ನು ಏನು ಬಳಸಿದ್ದಾರೆ, ಅದಕ್ಕೆ ಇಷ್ಟೇ ನನ್ನ ಉತ್ತರ. law of the land respect ಮಾಡುವುದರಲ್ಲಿ ಸ್ವಲ್ಪಮಟ್ಟಿಗೆ ಅವರಿಗೆ ತಿಳಿವಳಿಕೆ ಬರಬಹುದೆಂದು ನಾನು ಆಶಿಸುತ್ತೇನೆ. "exercising their right to utilise the surplus water" ಎಂದು ಅವರು ಏನು ಹೇಳಿದ್ದಾರೆ, ಆ ಬಗ್ಗೆ ನಾನು ಈಗ ಉದ್ಧಟತನದ ಮಾತನ್ನು ಹೇಳುವುದಕ್ಕೆ ಹೋಗುವುದಿಲ್ಲ. Tribunal Award is binding on all the concerned States. ಇದರ ಬಗ್ಗೆ ಅವರಿಗೆ ಸ್ವಲ್ಪಮಟ್ಟಿಗಾದರೂ ಅರಿವು ಇದೆ ಎಂದು ನಾನು ಭಾವಿಸುತ್ತೇನೆ. ಇದಕ್ಕಿಂತ ನಾನು ಮುಂದೆ ಹೋಗುವುದಿಲ್ಲ. ಈಗ ನಮ್ಮ ಮುಖ್ಯಮಂತ್ರಿಗಳಿಗೂ ಮತ್ತು ಆಂಧ್ರದ ಮುಖ್ಯಮಂತ್ರಿಗಳಿಗೂ ಸಂಬಂಧ ಚೆನ್ನಾಗಿದೆ. ಇದೇ ಕಾರಣದಿಂದ ಪ್ರಧಾನ ಮಂತ್ರಿಗಳು ಇಬ್ಬರನ್ನೂ ಕರೆಸಿ ಮಾತನಾಡುತ್ತೇನೆಂದು ಹೇಳಿದ್ದಾರೆ Even now it is not too late. ನಾವು ಕಾನೂನಿಗೆ ಗೌರವ ಕೊಡೋಣ. ಮರ್ಯಾದೆ ಕೊಡೋಣ. ಸಂಸದೀಯ ವ್ಯವಹಾರದಲ್ಲಿ ವಿಶ್ವಾಸವಿರುವವರು ಕಾನೂನನ್ನು ಬ್ರೇಕ್ ಮಾಡುವಂತಹ ಕೆಳಮಟ್ಟಕ್ಕೆ ಇಳಿಯಬಾರದು. ಇಂತಹ ವಿಚಾರದಲ್ಲಿ ಕೇಂದ್ರ ಸರ್ಕಾರ ಸಹ ತನ್ನ ಅಬಲತೆಯನ್ನು ತೋರಿಸಬಾರದು. ಅಷ್ಟೇ ಅಲ್ಲ, ಅವರು ಇದರಲ್ಲಿ ರಾಜಕೀಯ ಬೆರೆಸಬಾರದು, ಟ್ರಿಬ್ಯುನಲ್ ಅವಾರ್ಡ್‌ಗೆ ಎಲ್ಲರೂ ಬದ್ಧರಾಗಬೇಕಾಗುತ್ತದೆ. ಈ ಬಗ್ಗೆ ಒಂದು ಮಾತನ್ನು ಹೇಳಬೇಕೆಂದರೆ, ಅವರ ಕಷ್ಟಕಾಲದಲ್ಲಿ ನಮ್ಮ ಕರ್ನಾಟಕದ ಜನರು ಅವರ ಕೈಹಿಡಿದು ಸಹಾಯ ಮಾಡಿದ್ದಾರೆ. ಆದರೂ ಅವರು ಈ ರೀತಿ ಹೇಳಿದ್ದಾರೆಂಬ ಬಗ್ಗೆ ನನಗೆ ಅಸಂತೋಷವೇನೂ ಇಲ್ಲ.

ಇವತ್ತು ಜನತಾ ಪಕ್ಷ ಅಧಿಕಾರಕ್ಕೆ ಬರುತ್ತದೆ, ನಾವು ಅಧಿಕಾರದಲ್ಲಿ ಬರುತ್ತೇವೆ ಎಂದು ಕನಸು ಕಾಣುತ್ತಿದ್ದೆವು ಎಂದು ಅಲ್ಲ. ನಾನೂ ಈ ಸದನದಲ್ಲಿ ೨೦ ವರ್ಷ ಕೆಲಸ ಮಾಡಿದ್ದೇನೆ. ಆದರೆ ಆ ರಾಜ್ಯದವರು ಕಷ್ಟದಲ್ಲಿದ್ದಂಥ ಕಾಲದಲ್ಲಿ ಅವರನ್ನು ನಾವು ಕೈಬಿಟ್ಟಿಲ್ಲ. ಕೇಂದ್ರ ಸರ್ಕಾರದಿಂದ ಅಪೇಕ್ಷೆ ಮಾಡತಕ್ಕಂಥಾದ್ದು ಏನೆಂದರೆ, ಆಂಧ್ರ ಇರಲಿ, ಕರ್ನಾಟಕ ಇರಲಿ, ಮಹಾರಾಷ್ಟ್ರ ಇರಲಿ, ಅವರು ಇವತ್ತು ಈ ಪಂಚಾಯಿತಿ ತೀರ್ಪನ್ನು ಮಾನ್ಯತೆ ಮಾಡುವುದಿಲ್ಲ ಎನ್ನುವುದಾದರೆ, They only course left to the Government of India is to enforce by means of a legislation. ಅದಕ್ಕಿಂತ ನಾನು ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಇಷ್ಟು ಮಾತ್ರ ಈ ಸಂದರ್ಭದಲ್ಲಿ ಹೇಳಿದ್ದೇನೆ. ಇನ್ನು ಸ್ವಾಮಿ, ಹಣ ರೂಢಿಸಿಕೊಳ್ಳುವ ವಿಷಯ. ನಾವು ಇರಿಗೇಷನ್ ಬ್ಯಾಂಕ್ಸ್ ಮಾಡುತ್ತೇವೆ ಅಂದರೆ ನಮಗೆ ಅವಕಾಶ ಇಲ್ಲ. Again Reserve Bank will come in the way. ಬೇರೆ ದೇಶಗಳಿಂದ ಏನಾದರೂ ಸಾಲ ತೆಗೆದುಕೊಳ್ಳುತ್ತೇವೆ ಅಂದರೆ ಅದಕ್ಕೆ ಅವಕಾಶ ಇಲ್ಲ. Government will come into the picture. Reserve Bank will come into the picture. Unless they clear it, we have no voice. ಏನು ಮಾಡಬೇಕು ಹೇಳಿ. ಇದರ ಜೊತೆಗೆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಬಗ್ಗೆ ಮಾನ್ಯ ಸದಸ್ಯರು ತಮ್ಮ ಮನಸ್ಸಿನ ನೋವನ್ನು ವ್ಯಕ್ತಪಡಿಸಿದರು. ಮಾನ್ಯ ಕಡಪಟ್ಟಿಯವರು ಇರಲಿ ಮಾನ್ಯ ತುಂಗಳ್‌ರವರು ಇರಲಿ ಅವರು ತಮ್ಮ ಮನಸ್ಸಿನ ನೋವನ್ನು ವ್ಯಕ್ತಪಡಿಸಿದರು. ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿದೆ. ಸ್ವಾಮಿ, ನಮ್ಮ ದೇಶದ ವ್ಯವಹಾರ ಹೇಗಿದೆ ಅಂದರೆ ನಮ್ಮ ನಾಯಕರೇ ಅಂದು ಅರ್ಥ ಸಚಿವರಾಗಿದ್ದಾಗ ಕರ್ನಾಟಕ ಪವರ್ ಕಾರ್ಪೊರೇಷನ್‌ನ್ನು ಮಾಡಿದರು ಕೆ. ಇ. ಬಿ. ಯಿಂದ ಬೈಫರ್‌ಕೇಟ್ ಮಾಡಿ. ಆಮೇಲೆ ಹೈಡಲ್ ಪ್ರಾಜೆಕ್ಟ್‌ಗಳಿಗೆ ಹೆಚ್ಚು ಹಣ ಕೂಡಿಸಿಕೊಳ್ಳಬೇಕು. ಇನ್ನು ರಿಜಿಸ್ಟ್ರೇಷನ್‌ಗೆ ಎಷ್ಟು ಟೈಂ ತೆಗೆದುಕೊಂಡಿದೆ ಎಂದರೆ ೧೧ ತಿಂಗಳು ತೆಗೆದುಕೊಂಡಿದೆ, ನಾನು ಫೈಲ್ ಹಿಂದೆ ಓಡಾಡುತ್ತೇನೆ. ಅಂದರೆ ಆಫೀಸರನ್ನು ಗೋಳು ಹುಯ್ದುಕೊಳ್ಳುತ್ತೇನೆ. ಆದರೆ ಏನು ಮಾಡುವುದು, ಅಲ್ಲಿ ನಾನಾತರಹ ವ್ಯವಸ್ಥೆ ಇದೆ. ಗವರ್ನಮೆಂಟ್ ಆಫ್ ಇಂಡಿಯಾಗೆ ಹೋಗಬೇಕು. ಪ್ಲಾನಿಂಗ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು, ಫೈನಾನ್ಸ್ ಡಿಪಾರ್ಟ್‌ಮೆಂಟ್‌ಗೆ ಹೋಗಬೇಕು ಹೀಗೆ ನಮ್ಮ ದೇಶದ ವ್ಯವಸ್ಥೆ ಇದೆಯಲ್ಲ ಇದನ್ನು ಸರಿಪಡಿಸಿಕೊಳ್ಳಬೇಕು. ತಿದ್ದುವುದಕ್ಕಾದರೆ ತಿದ್ದೋಣ ಪ್ರಾಮಾಣಿಕವಾದ ಪ್ರಯತ್ನ ಮಾಡುತ್ತೇನೆ. ಆಮೇಲೆ ರಿಜಿಸ್ಟ್ರೇಷನ್ ಆಗತಕ್ಕಂಥಾದ್ದು ಇದೆ. ಮಾನ್ಯ ಮುಖ್ಯ ಮಂತ್ರಿಗಳು ಸೂಚನೆ ಕೊಟ್ಟು ಒಂದು ಕೋಟಿ ರಿಲೀಸ್ ಮಾಡಿ ಎಂದು ಹೇಳಿದ್ದಾರೆ. ಸಂಪನ್ಮೂಲದ ಬಗ್ಗೆ ನಾನು ಕಳಕಳಿಯಿಂದ ಕೈಜೋಡಿಸಿ ಕೇಳಿಕೊಳ್ಳುತ್ತೇನೆ. ನಾವು ಎಷ್ಟು ದಿನ ಇಲ್ಲಿರುತ್ತೇವೆ ಎನ್ನುವುದು ಮುಖ್ಯವಲ್ಲ, ನಾವು ಏನು ಮಾಡುತ್ತೇವೆ ಎನ್ನುವುದು ಮುಖ್ಯ. ಇವತ್ತಿನ ದಿವಸ ಸಂಪನ್ಮೂಲವನ್ನು ರೂಢಿಸಿಕೊಳ್ಳುವುದಕ್ಕೆ ನಾವೆಲ್ಲರೂ ಶಕ್ತಿಮೀರಿ ಪ್ರಯತ್ನ ಮಾಡೋಣ. ಈ ವರ್ಷ ೩೦೦ ಕೋಟಿ ಇದ್ದರೆ ಮುಂದಿನ ವರ್ಷ ೪೦೦ ಕೋಟಿ ಮಾಡುತ್ತೇವೆ ಎನ್ನುವ ಧೈರ್ಯ ತೆಗೆದುಕೊಳ್ಳಬೇಕು. ಆ ದಿಕ್ಕಿನಲ್ಲಿ ಹೋಗಬೇಕು. ಆಗಸ್ಟ್ ೧೯೮೦ರಲ್ಲಿ ಮುಗಿಸುತ್ತೇವೆ ಎಂದು ಕುಡಿಯುವ ನೀರಿನ ಬಗ್ಗೆ ಆಗ ಮುಖ್ಯ ಮಂತ್ರಿಗಳಾಗಿದ್ದ ಶ್ರೀಮಾನ್ ದೇವರಾಜ ಅರಸ್‌ರವರು ಸಮ್ಮತಿ ಕೊಟ್ಟರು ಎಂದು ಮಂತ್ರಿಗಳು ಹೇಳಿದರು, ಇದರ ಬಗ್ಗೆ ಎಷ್ಟು ದೂರ ಹೋಗುತ್ತೀರಿ ಎಂದು ಹೇಳಿದರೆ ಅದನ್ನು ಎದುರಿಸಲಿಕ್ಕೆ ಕರ್ನಾಟಕ ಕೂಡ ಸಮರ್ಥವಾಗಿದೆ ಎನ್ನುವುದನ್ನು ತೋರಿಸಿ ಕೊಡಬೇಕಾಗುತ್ತದೆ, ಇಷ್ಟನ್ನು ಈ ಸಂದರ್ಭದಲ್ಲಿ ಹೇಳಿ, ತುಂಬಾ ವಿಷಯಗಳನ್ನು ಪ್ರಸ್ತಾಪ ಮಾಡಬೇಕಾಗಿರುವುದರಿಂದ ಅನಿವಾರ್ಯವಾಗಿ ಮುಂದೆ ಹೋಗಬೇಕಾಗಿದೆ. ಇನ್ನು ವಾಟರ್ ರೇಟ್ ವಿಚಾರವನ್ನು ಮಾನ್ಯ ಮುಖ್ಯ ಮಂತ್ರಿಗಳ ಗಮನಕ್ಕೆ ತಮ್ಮ ಮುಖಾಂತರ ತರುತ್ತಾ ಇದ್ದೇನೆ ನಾನು ಸಿಪಿಐ-ಸಿಪಿಎಂ ಸರ್ಕಾರ ಇರುವಂಥ ಪಶ್ಚಿಮ ಬಂಗಾಳದ ಮಾಹಿತಿ ತರಿಸಿದ್ದೇನೆ. ಅಲ್ಲಿ ವಾಟರ್ ರೇಟ್ ಲೋಯಸ್ಟ್ ಇದೆ.

ಶ್ರೀ ಆರ್ ವೆಂಕಟರಾಮಯ್ಯ.—ನಾನು ಹೇಳುವುದೇನೆಂದರೆ, ಉಳ್ಳವರ ಮೇಲೆ ಹಾಕಿ, ಬೇಡ ಎಂದು ಹೇಳುವುದಿಲ್ಲ. ಆದರೆ ಬಯಲು ಸೀಮೆಯಲ್ಲಿ ಮಾನ್ಯ ಬೈರೇಗೌಡರು ಹೇಳಿದಹಾಗೆ ವಾಟರ್ ರೇಟನ್ನು ದಯಮಾಡಿ ಹಾಕಬೇಡಿ.

ಶ್ರೀ ಹೆಚ್. ಡಿ. ದೇವೇಗೌಡ.—Subject to correction, ನಾನು ಹೇಳುವಾಗ ತಪ್ಪು ಹೇಳಿದೆ. ಅಲ್ಲಿ ನಮಗಿಂತ ಹೈಯಸ್ಟ್ ಇದೆ, ನಾನು ಲೋಯಸ್ಟ್ ಇದೆ ಎಂದು ಹೇಳಿದೆ. ಸಿಪಿಐ–ಸಿಪಿಎಂ. ಗವರ್ನಮೆಂಟ್ ಇರುವ ಕಡೆ ಹೈಯಸ್ಟ್ ಇದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ,—ಇಬ್ಬರೂ ಮಾತನಾಡಿಕೊಂಡು ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟನ್ನು ಎನ್‌ಹ್ಯಾನ್ಸ್ ಮಾಡಿದಿರಿ, ಮತ್ತೆ ಕೇಳತಕ್ಕ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಬೆಟರ್‌ಮೆಂಟ್ ಲೆವಿಯನ್ನು ಯಾರೂ ವಜಾ ಮಾಡಲಿಲ್ಲ. ನನ್ನ ಹತ್ತಿರ ಫೈಲು ಇದೆ ಅದನ್ನು ಹಾಗೆ ಮೂಲೆಯಲ್ಲಿಟ್ಟಿದ್ದೇನೆ. ನಾವು ವಿರೋಧ ಪಕ್ಷದಲ್ಲಿದ್ದಾಗ ಏನು ಮಾಡುತ್ತಿದ್ದೆವು, ಯಾವ ಕಡೆ ಸಿಕ್ಕಿದರೂ ಹಿಡಿದುಕೊಂಡು ಹೊಡೆಯುತ್ತಿದ್ದೆವು. ಇವತ್ತು ಅದು ನಮಗೆ ತಿರುಗುಬಾಣವಾಗಿದೆ. ಪೊಟೆನ್‌ಷಿಯಲಿಟಿ ಕ್ರಿಯೇಷನ್ ಮತ್ತು ಯುಟಿಲೈಜೇಷನ್ ವಿಚಾರದಲ್ಲಿ ಒಂದು ಮಾತು ಹೇಳಬೇಕಾಗಿದೆ. ಇವತ್ತು ರಾಜ್ಯದಲ್ಲಿ ೭ ಮಿಲಿಯನ್ ಹೆಕ್ಟೇರ್‌ನಷ್ಟು ಯುಟಿಲೈಜೇಷನ್ ಗ್ಯಾಪ್ ಇದೆ. ಮಾನ್ಯ ಮೊಯ್ಲಿಯವರಿಗೆ ಈ ಇನ್‌ಫಾರ್ಮೇಷನ್ ಎಲ್ಲಿ ಸಿಕ್ಕಿತೋ ಗೊತ್ತಿಲ್ಲ. ಫಿಗರ್ಸ್ ಹೇಳುವಾಗ ಮಿಸ್‌ಲೀಡಿಂಗ್ ಆಗಿರಬಹುದೆಂದು ಕಾಣುತ್ತದೆ. ಪೊಟೆನ್‌ಷಿಯಲಿಟಿ ಕ್ರಿಯೇಟೆಡ್ ಇನ್ ಕರ್ನಾಟಕ ೪.೧೩ ಲಕ್ಷ ಹೇಕ್ಟೆರ್ಸ್ ಅಂಡರ್ ಕಂಪ್ಲೀಟೆಡ್ ಪ್ರಾಜೆಕ್ಟ್ ಆನ್‌ಗೋಯಿಂಗ್ ಪ್ರಾಜೆಕ್ಟ್‌ನಲ್ಲಿ ಪೊಟೆನ್‌ಷಿಯಲಿಟಿ ಕ್ರಿಯೇಟೆಡ್ ೮,೧೧ ಲಕ್ಷ ಹೇಕ್ಟೇರ್ಸ್, ಪೊಟೆನ್‌ಷಿಯಲಿಟಿ ಯುಟಿಲೈಸ್ಡ್ ೬.೧೫ ಲಕ್ಷ ಹೆಕ್ಟೇರ್ಸ್ ಒಟ್ಟು ೧೨.೨೪ ಲಕ್ಷ ಹೆಕ್ಟೇರ್ಸ್ ಪೊಟೆನ್‌ಷಿಯಲಿಟಿ ಕ್ರಿಯೇಟ್ ಆಗುತ್ತದೆ. ಪೊಟೆನ್‌ಷಿಯಲಿಟಿ ಯುಟಿಲೈಸ್ಡ್ ೧೦.೨೮ ಲಕ್ಷ ಹೆಕ್ಟೇರ್ ಆಗುತ್ತದೆ. ಗ್ಯಾಪ್ ಇರತಕ್ಕಂಥಾದ್ದು ೨ ಲಕ್ಷ ಹೆಕ್ಟೇರ್ಸ್ ಮಾತ್ರ. ಸ್ವಾಮಿ, ಕಾಡಾ ಪ್ರಾರಂಭ ಮಾಡಿದ ಉದ್ದೇಶ ಇದು.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಬಜೆಟ್ ಭಾಷಣದಲ್ಲಿ ೯೦,೦೦೦ ಹೆಕ್ಟೇರ್ಸ್ ಎಂದು ಹೇಳಿದ್ದೀರಿ. ತಾವು ಇಲ್ಲಿ ೨ ಲಕ್ಷ ಹೆಕ್ಟೇರ್ಸ್ ಎಂದು ಹೇಳುತ್ತಿದ್ದೀರಿ,

ಶ್ರೀ ಹೆಚ್. ಡಿ. ದೇವೇಗೌಡ.—೧೯೮೦–೮೧ರಲ್ಲಿ ಕಾಡಾಕ್ಕೆ ೮೮ ಲಕ್ಷ ಕೊಡುತ್ತಿದ್ದರು. ಒಟ್ಟು ೨೯೮ ಲಕ್ಷ ಕೊಟ್ಟಿದ್ದಾರೆ. ಇವತ್ತು ನಾವು ಬಂದ ಮೇಲೆ ಕೊಟ್ಟಿರುವುದು ೨೮೯೦ ಲಕ್ಷ ಕೊಟ್ಟಿದ್ದೇವೆ. ಲ್ಯಾಂಡ್ ಲೆವೆಲಿಂಗ್‌ನಿಂದ ಹಿಡಿದು ರೈತರಿಗೆ ನೀರಾವರಿ ಪೊಟೆನ್‌ಷಿಯಲ್ ಯುಟಿಲೈಸ್ ಮಾಡುವ ತನಕ ಇದೆ. ಈ ಸಂಸ್ಥೆಯು ಬಹಳ ಪ್ರಮುಖವಾದ ಪಾತ್ರವನ್ನು ವಹಿಸಬೇಕಾಗುತ್ತದೆ. ಸೂಪರ್–ಟೈಂ–ಸ್ಕೇಲ್ ಅಧಿಕಾರಿಗಳು ಎಲ್ಲಾ ಕಡೆ ಇದ್ದಾರೆ. ಬ್ಲಾಕ್ ಷೀಪ್‌ಗಳು ಇದ್ದಾರೆ. ಇಲ್ಲಿ ಐ.ಎ.ಎಸ್. ಮತ್ತು ನಾನ್ ಐ ಎ ಎಸ್. ಪ್ರಶ್ನೆ ಇಲ್ಲ ಚೀಫ್ ಇಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದವನು ಅಲ್ಲಿಗೆ ಹೋದರೆ ಬೇರೆ ತರಹದ ಕೆಲಸ ಮಾಡಬೇಕಾಗುತ್ತದೆ. ಕೋ–ಆಪರೇಟೀವ್ ಡಿಪಾರ್ಟ್‌ಮೆಂಟ್ ಜೊತೆಗೆ ಆಗ್ರಿಕಲ್ಚರಲ್ ಡಿಪಾರ್ಟ್‌ಮೆಂಟ್ ಜೊತೆಗೆ ಹೊಂದಾಣಿಕೆ ಇಟ್ಟುಕೊಳ್ಳಬೇಕಾಗುತ್ತದೆ. ಇವರಿಗೆ ಇಲ್ಲಿ ಮೈ ಬಗ್ಗಿಸುವುದಕ್ಕಾಗುವುದಿಲ್ಲ. ನಮಗೆ ಇಲ್ಲಿ ಏನೂ ಕೆಲಸ ಇಲ್ಲ ಎಂದು ಹೇಳಿಕೊಂಡು ಇರುತ್ತಾರೆ. ಇವರ ಕೈಲಿ ಮೈ ಬಗ್ಗಿಸುವುದಕ್ಕಾಗುವುದಿಲ್ಲ, ನಾವು ಕೊಟ್ಟಂಥ ೨೮ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದು ಅಷ್ಟೇ ಇವರ ಕೆಲಸ ಅಲ್ಲ. ಫೈನಾನ್ಸಿಯಲ್ ಇನ್ಸ್‌ಟಿಟ್ಯೂಷನ್‌ಗಳ ಮೂಲಕ ಹಣ ಹುಡುಕತಕ್ಕಂಥ ಜವಾಬ್ದಾರಿ ಕೂಡ ಇದೆ. ಆ ಕಡೆ ಅವನ ಗಮನಹರಿಸಬೇಕು. ಈ ವಿಚಾರದಲ್ಲಿ ಕೂಡ ಸರ್ಕಾರ ತೀವ್ರ ಗಮನ ಕೊಡುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಒಂದು ಸಹಕಾರವನ್ನು ನಿಮ್ಮಿಂದ ಅಪೇಕ್ಷೆ ಮಾಡುತ್ತೇನೆ ಇನ್ನು ಕ್ರಾಪಿಂಗ್ ಪ್ಯಾಟ್ರನ್ ಬಗ್ಗೆ ಮಾನ್ಯ ಮೊಯಿಲಿಯವರು ಬಹಳ ಬುದ್ಧಿವಂತಿಕೆಯಿಂದ ಮಾತನಾಡಿದರು. ಅವರು ಹೇಮಾವತಿ ಕ್ರಾಪಿಂಗ್ ಪ್ಯಾಟ್ರನ್ನೇ ಹುಡುಕಿದ್ದಾರೆ, ನಾನು ಟೀಕೆ ಮಾಡುತ್ತಿಲ್ಲ. ಅಪೋಜಿಷನ್‌ನಲ್ಲಿದ್ದು ಹೊಡೆಯುವಾಗ ಯಾವುದು ನಿಮಗೆ ಅನುಕೂಲವಾಗುತ್ತದೋ ಅದರಲ್ಲಿ ಹೊಡೆಯುತ್ತೀರಿ. ನಾವು ಉತ್ತರ ಕೊಡುವಾಗ ನಮಗೆ ಏನು ಅನುಕೂಲವಾಗುತ್ತದೋ ಅದನ್ನು ಹೇಳುತ್ತೇನೆ.

ಶ್ರೀ ಜಿ. ಎನ್. ಶಿವನಂಜಪ್ಪ.—ಅದರಿಂದ ನಮಗೆ ಹೊಟ್ಟೆ ತುಂಬುವುದಿಲ್ಲ......

ಶ್ರೀ ಹೆಚ್. ಡಿ. ದೇವೇಗೌಡ.—ಕೂತುಕೊಳ್ಳಿ ಸ್ವಾಮಿ, ಕ್ರಾಪಿಂಗ್ ಪ್ಯಾಟ್ರನ್ ವೈಯಲೇಟ್ ಆಗಿರತಕ್ಕಂಥಾದ್ದು ಹೇಮಾವತಿಯಲ್ಲಿ ಅಲ್ಲ. ಕ್ರಾಪಿಂಗ್ ಪ್ಯಾಟ್ರನ್ ಫಸ್ಟ್ ವೈಯಲೇಟ್ ಆಗಿರತಕ್ಕಂಥಾದ್ದು

ನಮ್ಮ ತುಂಗಭದ್ರಾ ಅಣೆಕಟ್ಟಿನ ಹಿಂಭಾಗದಲ್ಲಿ ನೀರಾವರಿ ಬಗ್ಗೆ ಸಾಕಷ್ಟು ಪರಿಶ್ರಮ ಇದ್ದಂತಹ ಸಂದರ್ಭದಲ್ಲಿ, ಆಂಧ್ರದಿಂದ ಹಲವಾರು ಮಂದಿ ರೆಡ್ಡಿಗಳು ಬಂದು ನಮ್ಮ ರೈತರುಗಳ ಭೂಮಿಗಳನ್ನು ಕೊಂಡದ್ದು ಆಯಿತು. ಯಾವತ್ತು ಪೊಟೆನ್‌ಷಿಯಲಿಟಿ ಕ್ರಿಯೇಟ್ ಮಾಡಲಿಕ್ಕೆ ಯೂಸ್ ಮಾಡಲಿಕ್ಕೆ ಸಾಧ್ಯವಿತ್ತೋ ಆ ಕಾಲದಲ್ಲಿ ಸರ್ಕಾರದ ವತಿಯಿಂದ ಮೊದಲು ರಿಯಾಯಿತಿ ತೋರಿಸಲಾಯಿತು. ಇದು ಇರತಕ್ಕ ವಾಸ್ತವಾಂಶ.

ಏನೋ ನಾನು ಆಕಸ್ಮಿಕವಾಗಿ ನೀರಾವರಿ ಮಂತ್ರಿಯಾದೆ ಎಂದು ಇದರಲ್ಲಿ ವಾಸ್ತವಾಂಶ ಮುಚ್ಚಿಡ ಬೇಕಾದುದು ಏನೂ ಇಲ್ಲ. ಈ ಸನ್ನಿವೇಶದಲ್ಲಿ ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಇದಕ್ಕೆ ಎರಡು ಕಾರಣಗಳು ಇವೆ, ಒಂದು ಈ ಡಿಫೆಕ್ಟೀವ್ ಸಿಸ್ಟಮ್ ಆಫ್ ಪ್ಲಾನಿಂಗ್. ಒಂದೇ ಡಿಸ್ಟ್ರಿಕ್ಟ್‌ನಲ್ಲಿ ಒಬ್ಬನಿಗೆ ಹತ್ತು ಎಕರೆ ಇದ್ದರೆ, ಎರಡೂ ಎಕರೆ ಖಾರೀಫ್, ಎರಡು ಎಕರೆ ರಬಿ ಇರುತ್ತದೆ. ಈ ತರಹ ಇರತಕ್ಕ ಡಿಫೆಕ್ಟೀವ್ ಸಿಸ್ಟಮ್ ಆಫ್ ಪ್ಲಾನ್. ಮತ್ತೊಂದು ಅಂದರೆ ನಾವು ರಿಸರ್‌ವಾಯರ್ ಕಟ್ಟಿ ಆದಮೇಲೆ ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ಗೆ ನಮ್ಮಲ್ಲಿ ಹಣ ಇಲ್ಲದೆ, ಹತ್ತಾರು ವರ್ಷ ನೆನೆಗುದಿಗೆ ಬೀಳುವುದು. ಕೆರೆ ಮುಗಿದಿರುತ್ತದೆ, ನಾಲೆ ತೆಗೆದಿರುವುದಿಲ್ಲ ೧೯೭೫ರಲ್ಲಿಯೇ ಕಂಪ್ಲೀಷನ್ ರಿಪೋರ್ಟ್ ಕೊಟ್ಟಿದ್ದಾರೆ, ಇಂಥಾದ್ದು ಹತ್ತಾರು ಘಟನೆಗಳು ಇವೆ. ಈ ಡಿಫೆಕ್ಟೀವ್ ಸಿಸ್ಟಮ್‌ನಿಂದ ಇರತಕ್ಕಂಥ ನೀರನ್ನು ನಮ್ಮ ರೈತರು ಸ್ವಾಭಾವಿಕವಾಗಿ ಉಪಯೋಗ ಮಾಡಿಕೊಳ್ಳಲಿಕ್ಕೆ ಪ್ರಯತ್ನ ಮಾಡುತ್ತಾರೆ ಇದನ್ನು ರೆಗ್ಯುಲೇಟ್ ಮಾಡಬೇಕಾದರೆ ಬಹಳ ಕಷ್ಟ. ರೆಗ್ಯುಲೇಟ್ ಮಾಡಲೇಬೇಕು ಇದು ಅನಿವಾರ್ಯ. The need of the hour is regulation. to-day I am the Irrigation Minister, tomorrow you may become the Irrigation Minister. ಆ ಪ್ರಶ್ನೆ ಇಲ್ಲ. ಈ ಸಂಪತ್ತು ಏನಿದೆ ಇದು ಬಹು ಜನತೆಗೆ ಉಪಯೋಗ ಆಗಬೇಕು. ಇದರ ಜೊತೆಗೆ ನಮ್ಮ ಕ್ರಾಪಿಂಗ್ ಪ್ಯಾಟರ್ನ್ ಬದಲಾವಣೆ ಏನು ಮಾಡುತ್ತೇವೆ. ಎನ್‌ಫೋರ್ ಏನು ಮಾಡುತ್ತೇವೆ ಆ ರೀತಿ ಅವನಿಗೆ ಆಧುನಿಕವಾಗಿ ವ್ಯವಸಾಯ ಅಭಿವೃದ್ಧಿಯಲ್ಲಿ ವಿಶ್ವಾಸ ಮೂಡತಕ್ಕ ಪದ್ಧತಿಯಲ್ಲಿ ಮನಸ್ಸು ಒಲಿಸಬೇಕು. ಅದು ಒಂದೇ ಅಲ್ಲ, ವಾಟರ್ ಅಂಡ್ ಲ್ಯಾಂಡ್ ಮ್ಯಾನೇಜ್‌ಮೆಂಟ್ ಸಂಸ್ಥೆಯನ್ನು ಧಾರವಾಡದಲ್ಲಿ ೧೨ ಕೋಟಿ ರೂಪಾಯಿ ಖರ್ಚು ಮಾಡಿ ತೆರೆಯಬೇಕು ಮಾನ್ಯ ಮುಖ್ಯಮಂತ್ರಿಗಳು, ಮಾನ್ಯ ಶಂಕರಾನಂದ್ ಅವರು ಬೆಳಗಾಂನಲ್ಲಿ ಮಾಡಿ ಎಂದು ಹೇಳಿದರೂ ಅದು ಎಲ್ಲೋ ಒಂದು ಕಡೆ ಆಗುತ್ತದೆ. ಅದರ ಬಗ್ಗೆ ಆ ಕಡೆ, ಈ ಕಡೆ ಸೆಳೆತ ಏನೂ ಬೇಕಾಗಿಲ್ಲ. ಈ ೧೨ ಕೋಟಿ ರೂಪಾಯಿ ಖರ್ಚು ಮಾಡುವ ಉದ್ದೇಶ ಏನೆಂದರೆ, ಲ್ಯಾಂಡ್ ಮ್ಯಾನೇಜ್‌ಮೆಂಟ್ ಮತ್ತು ವಾಟರ್ ಮ್ಯಾನೇಜ್‌ಮೆಂಟ್ ಎರಡಕ್ಕೂ ಸಂಬಂಧಪಟ್ಟಂತೆ ಏಷ್ಯಾದಲ್ಲಿಯೇ ಅತ್ಯಂತ ದೊಡ್ಡ ಪ್ರಮಾಣದಲ್ಲಿ ಎಲ್ಲಾ ರಿಯಾಯಿತಿಯನ್ನು ರೈತರಿಗೆ ಮತ್ತು ಅಧಿಕಾರಿಗಳಿಗೆ ತರಬೇತಿ ಕೊಡತಕ್ಕದ್ದು ಮಾಡುತ್ತಿದ್ದೇವೆ. ಒಂದು ಕೋಟಿ ರೂಪಾಯಿ ಹಣ ಅದಕ್ಕೆ ಇಟ್ಟಿದ್ದೇವೆ. ಇದರ ಜೊತೆಗೆ ಇರತಕ್ಕ ಲೆಜಿಸ್ಲೇಷನ್ ನ್ಯೂನತೆ ಏನಿದೆ ಅದನ್ನು ಬದಲಾಯಿಸಲೇಬೇಕಾಗುತ್ತದೆ. ಅನಿವಾರ್ಯವಾಗಿ ಅದಕ್ಕೆ ರೈತರಿಂದ ಪ್ರತಿಭಟನೆ ಬರಬಹುದು. ಅದು ತುಮಕೂರು ಆಗಬಹುದು, ಹೊಳೇನರಸೀಪುರ ಆಗಬಹುದು ನರಗುಂದ ಆಗುಬಹದು, ಪ್ರತಿಭಟನೆ ಬಂದೇ ಬರುತ್ತದೆ ಆ ಪ್ರತಿಭಟನೆ ಎಲ್ಲಿಯೇ ಇರಲಿ. ಈ ನೀರನ್ನು ನಾವು ದೌರ್ಜನ್ಯಕ್ಕೆ ಒಳಕೆ ಮಾಡಿ ಕೊಂಡಿದರೆ, ಅದರ ಉಪಯುಕ್ತತೆ ಹೆಚ್ಚು ಜನರಿಗೆ ಹೋಗಬೇಕೆಂದರೆ ಮಾಡಲೇ ಬೇಕಾಗುತ್ತದೆ. ಇವೊತ್ತು ನಮ್ಮ ಚೌಡಯ್ಯನವರು ಇದ್ದಾರೆ, ನಮ್ಮ ಕೃಷ್ಣಪ್ಪನವರು ಇದ್ದಾರೆ, ಇವೊತ್ತು ಎಲ್ಲರೂ ನಮಗೆ ನೀರು ಕೊಡಬೇಕು ಎಂದು ಹೇಳುತ್ತಾರೆ. ಇವೊತ್ತು ಕೃಷ್ಣರಾಜಪೇಟೆಗೆ ಎರಡೂವರೆ ಲಕ್ಷ ಎಕರೆಗೆ ನೀರು ಕೊಡಬೇಕೆಂದರೆ ಕೊಡಬೇಕಾಗುತ್ತದೆ. ಈ ವಿಷಯದಲ್ಲಿ ನಾನು ತಮಗೆಲ್ಲಾ ಕೈ ಮುಗಿದು ಕೇಳಿಕೊಳ್ಳುತ್ತೇನೆ. ಈ ಕಾನೂನಿಗೆ ತಿದ್ದುಪಡಿ ಮಾಡುತ್ತಿದ್ದೇವೆ. ಇದು ಎನ್‌ಫೋರ್ಸ್ ಮಾಡಲಿಕ್ಕೆ ಶಕ್ತಿಮೀರಿ ಪ್ರಯತ್ನ ಮಾಡುತ್ತೇವೆ. ಇನ್ನು ಯುಟಿಲೈಸೇಷನ್ ಮತ್ತು ಪೊಟೆನ್‌ಷಿಯಲ್ ಗ್ಯಾಪ್ ಇದು ಒಂದು ಕಾರಣ. ಇವೊತ್ತು ಏನಾಗಿದೆ ಎಂದರೆ ತುಂಗಭದ್ರ ಲೆಫ್ಟ್ ಬ್ಯಾಂಕ್ ಕೆನಾಲ್‌ನ ಟೈಲ್ ಎಂಡ್ ನೀರು ಸಿಕ್ಕುತ್ತಿಲ್ಲ ; ಇದನ್ನು ಈ ಸಂದರ್ಭದಲ್ಲಿ ನಾನು ತಮಗೆ ಹೇಳಲೇಬೇಕಾಗುತ್ತದೆ.

ಇನ್ನು ಯು. ಕೆ. ಪಿ. ಅಂದರೆ ದೇವೇಗೌಡರು ಅಂತ ಟೀಕೆ ಬರಲೇಬೇಕು. ಬರಲಿ, ಸಂತೋಷ. ೧೯೮೩ನೇ ಜನವರಿ ೧೦ನೇ ತಾರೀಖು ನೀವು ನಿಮ್ಮ ಕೈಗೆ ಅಧಿಕಾರವನ್ನು ಕೊಟ್ಟಿರಿ. ನೀವು ನಿಮ್ಮ ಹಿಂದಿನ ಬಜೆಟ್ ಭಾಷಣದಲ್ಲಿ ಏನು ಹೇಳಿದ್ದೀರಿ ಅಂದರೆ "ನಮ್ಮ ಹೆಮ್ಮೆಯ ಕೃಷ್ಣಾ ಮೇಲ್ದಂಡೆ

ಯೋಜನೆ ೧೯೮೦ರ ಜೂನ್ ವೇಳೆಗೆ ಪೂರ್ಣಗೊಂಡು''... ಸ್ವಾಮಿ ಇನ್ನೂ ಮುಂದಕ್ಕೆ ಓದು ಎಂದರೆ ನಾನು ಓದುತ್ತೇನೆ.

(ಗೊಂದಲ)

ಸ್ವಾಮಿ, ಇದು ಯಾವ ರೀತಿ ಆಗುತ್ತದೆಂದರೆ, ನಡೆಯುದೇ ಇರತಕ ಕಾಲು ಎಡವುವುದಿಲ್ಲ ಎಂದು ನಮ್ಮ ಪೂರ್ವಿಕರು ಒಂದು ಗಾದೆಯ ಮಾತನ್ನು ಹೇಳುತ್ತಾರೆ. ನಡೆಯದೇ ಇರುವವರು ಯಾರು ಎಡವುವುದಿಲ್ಲ. ಆದರೆ ಈಗ ನಾವು ನಡೆಯುವುದಕ್ಕೆ ಶುರು ಮಾಡಿದ್ದೇವೆ. ಆದ್ದರಿಂದ ಎಡವುತ್ತಿದ್ದೇವೆ. ಏನು ಮಾಡೋಣ. ನಾನು ಅಧಿಕಾರವನ್ನು ವಹಿಸಿಕೊಂಡಮೇಲೆ ಉತ್ತಮ ಕೆಲಸ ಮಾಡುವುದಕ್ಕೆ ಮಿತಿಮೀರಿ ಪ್ರಯತ್ನ ಪಡುತ್ತಿದ್ದೇನೆ. ಆರ್ಬಿಟ್ರೇಷನ್ ಕ್ಲಾಸ್‌ನ್ನು ನಾನು ಶುರು ಮಾಡಿದ್ದಲ್ಲ. ಎಲ್ಲಾ ಕಂಟ್ರ್ಯಾಕ್ಟರ್‌ಗಳೂ ಕೆಲಸವನ್ನು ಶುರುಮಾಡಿ ಅಲ್ಲಿ ಓಡಿ ಹೋಗಿದ್ದಾರೆ. ಇದು ತಮಗೂ ಕೂಡ ಗೊತ್ತಿರತಕ್ಕದು. ನಾನು ಮತ್ತೊಂದು ಸಾರಿ ಆ ವಿಷಯವನ್ನು ಇಲ್ಲಿ ಹೇಳುತ್ತೇನೆ. ನಮ್ಮ ಮಾನ್ಯ ಸದಸ್ಯರಾದ ಶಿವಣ್ಣನವರು ಮಾತನಾಡುವಾಗ ನೀರಾವರಿಯ ಬಗ್ಗೆ ಒಂದು ಮಾತನ್ನು ಹೇಳಿದರು. ಅದೇನೆಂದರೆ ''ದೇವೇಗೌಡರು ಎಂದರೆ ನೀರಾವರಿ ಇಲಾಖೆ'' ಎಂದು ವ್ಯಂಗ್ಯವಾಗಿ ಹೇಳಿದರು. ಸಂತೋಷ. ಅವರು ಇನ್ನೂ ಇಲ್ಲಿಗೆ ಹೊಸದಾಗಿ ಬಂದಿದ್ದಾರೆ. ಈ ಇಲಾಖೆಯಲ್ಲಿ ನುಂಗಿ ನೀರು ಕುಡಿದ ಕೆಲಸ ಹಿಂದೆ ನಡೆಯಿತು. ನುಂಗಿ ನೀರು ಕುಡಿದು ಎಲ್ಲವನ್ನೂ ಹಾಳು ಮಾಡಿದರು. ಇದು ಕೆಲವರಿಗೆ ಒಂದು ಹುಲ್ಲುಗಾವಲು. ಇದರಲ್ಲಿ ಏನೇನು ನಡೆಯಿತು ಎಂದು ಕೆಲವರಿಗೆ ಗೊತ್ತಿಲ್ಲ. ಇದು ಕೇವಲ ಹುಲ್ಲುಗಾವಲಲ್ಲ. ಭಾರೀ ಹುಲ್ಲುಗಾವಲು ಇವತ್ತು ಈ ರಾಜ್ಯದಲ್ಲಿ ಯಾರು ಬೇಕಾದರೂ ಹೇಳಲಿ. I will give a open call to this august House- ಪ್ರೊಮೋಷನ್‌ನಿಂದ ಹಿಡಿದು, ಪೋಸ್ಟಿಂಗ್ಸ್ ಮಾಡುವುದರಿಂದ ಹಿಡಿದು, ಕಾಂಟ್ರ್ಯಾಕ್ಟ್ ಅವಾರ್ಡ್ ಮಾಡುವುದರಿಂದ ಹಿಡಿದು, ಕ್ಲೇಮ್ಸ್ ಸೆಟಲ್‌ಮೆಂಟ್ ಮಾಡುವವರೆಗೂ ಈ ರಾಜ್ಯದಲ್ಲಿ ಏನೇನು ನಡೆಯಬಾರದೋ ಅದೆಲ್ಲಾ ನಡೆಯಿತು. ನಾನು ಈ ಸಭೆಯಲ್ಲಿ ಇವತ್ತು ಕಾಲ್ ಕೊಡುತ್ತೇನೆ. ಯಾರಾದರೂ ನನ್ನ ವ್ಯಕ್ತಿತ್ವದ ಬಗ್ಗೆ, ಅಸ್ತಿತ್ವದ ಬಗ್ಗೆ ಪ್ರಶ್ನೆ ಮಾಡುವುದಾದರೆ, ನಾನು ಇಲ್ಲಿ ಕುಳಿತುಕೊಳ್ಳುವುದಕ್ಕೆ ಯೋಗ್ಯತೆ ಇಲ್ಲ. ಈ ಸಂದರ್ಭದಲ್ಲಿ ನಾನು ಒಂದು ಮಾತನ್ನು ಮಾತ್ರ ಹೇಳುತ್ತೇನೆ. ೧೯೬೨ ರಲ್ಲಿ ಚುನಾವಣೆ ನಡೆಯಿತು. ನಮ್ಮ ಮಾನ್ಯ ಅನಂತರಾಮನ್‌ರವರು ಇನ್ನೂ ಬದುಕಿದ್ದಾರೆ ; ಅವರೇನೂ ಸತ್ತಿಲ್ಲ. ಅವರನ್ನೇ ತಾವು ಯಾರಾದರೂ ಕೇಳಿನೋಡಿ. ೧೯೬೨ರಲ್ಲಿ ಮತ್ತು ೧೯೬೭ರಲ್ಲಿ ನಡೆದ ಚುನಾವಣೆಗಳಲ್ಲಿ ನಾನು ಸ್ವತಂತ್ರ ಅಭ್ಯರ್ಥಿಯಾಗಿ ನಿಂತು ಗೆದ್ದಿದ್ದೇನೆ. ಯಾರಿಂದಲ್ಲೂ ನಾನು ಒಂದು ಪೈಸೆಯನ್ನು ತೆಗೆದುಕೊಳ್ಳಲಿಲ್ಲ. ಬೇರೆಯವರ ದುಡ್ಡಿನಲ್ಲಿ ನಾನು ರಾಜಕೀಯವನ್ನು ಮಾಡಲಿಲ್ಲ. ನಂತರ ೧೯೭೨ನೇ ಇಸವಿಯಲ್ಲಿ ನಾನು ಒಂದು ಪಕ್ಷದ ಅಭ್ಯರ್ಥಿಯಾಗಿ ನಿಂತೆ. ೧೯೭೨ರಲ್ಲಿ ನಾನು ಒಂದು ಪಕ್ಷದ ಅಧೀನದಲ್ಲಿ ನಿಂತುಕೊಂಡಾಗ ಏನಾಯಿತೆಂಬುದನ್ನು ಹೇಳುತ್ತೇನೆ. ನಾನು ಆತ್ಮವಂಚಕನಲ್ಲ. ಮೊದಲು ಟೆಕ್ನಿಕಲ್ ಕ್ಲಿಯರೆನ್ಸ್ ಕಮಿಟಿಯಿಂದ ಬಂದಂಥ ಫೈಲನ್ನು ಅಪ್ರೂವ್ ಮಾಡಿ ವಾಪಸು ಕಳುಹಿಸುವುದಕ್ಕೆ ೩ ತಿಂಗಳು, ೬ ತಿಂಗಳುಗಳ ಕಾಲ ಬೇಕಾಗುತ್ತಿತ್ತು. ಆದರೆ ನಾನು ಅಧಿಕಾರಕ್ಕೆ ಬಂದಮೇಲೆ ಟೆಕ್ನಿಕಲ್ ಕ್ಲಿಯರೆನ್ಸ್ ಕಮಿಟಿಯಿಂದ ಬಂದಂಥ ಯಾವುದೇ ಫೈಲನ್ನಾಗಲಿ ನನಗೆ ಬಂದ ಕೇವಲ ಒಂದೆರಡು ಗಂಟೆಗಳಲ್ಲಿ ಸಹಿ ಹಾಕಿ ವಾಪಸು ಕಳುಹಿಸಿಕೊಡುತ್ತಿದ್ದೇನೆ....

ಶ್ರೀ ಎಂ. ಶಿವಣ್ಣ.—ಹಾಗಾದರೆ ಇಷ್ಟೊಂದು ತಡವಾಗುವುದಕ್ಕೆ ಕಾರಣ ಏನು?

ಶ್ರೀ ಹೆಚ್. ಡಿ. ದೇವೇಗೌಡ.—ಯಾರೇ ಕಂಟ್ರಾಕ್ಟರ್ಸ್ ಇರಲಿ (ಯಾರೇ ಇಂಡಸ್ಟ್ರೀಯ ಲಿಸ್ಟ್ ಇರಲಿ ಅವರಿಗೆ ಖುಷಿ ಬಂದಂತೆ ಸಹಾಯ ಮಾಡಿರಬಹುದು, ಕಾಂಗ್ರೆಸ್‌ಗೆ ಕೊಟ್ಟಿರಬಹುದು, ಜನತಾದವರಿಗೇ ಕೊಟ್ಟಿರಬಹುದು. ನಾನು ತಮಗೆ ಒಂದು ಮಾತನ್ನು ಬಹಿರಂಗವಾಗಿ ಹೇಳಿ ನಂತರ ಮುಂದೆ ಹೋಗುತ್ತೇನೆ. ಸ್ವಾಮಿ, ನಾನು ಆ ಭಾಗದ ಎಲ್ಲ ಶಾಸಕರನ್ನೂ ಕರೆಸುತ್ತೇನೆ. ನಾನು ಈ ಮಾತನ್ನು ಪ್ರಾಮಾಣಿಕವಾಗಿ ಹೇಳುತ್ತೇನೆ. I don't want to become a scope-goat. Hon'ble Member Sri M. Veerappa Moily said that I am dodging to solve the problem of the arbitrators. ಮಾನ್ಯ ವೀರಪ್ಪಮೊಯ್ಲಿಯವರು ಈ ಸಭೆಯಲ್ಲಿ ತುಂಬಾ ಬುದ್ಧಿವಂತಿಕೆಯಿಂದ ಮಾತನಾಡಿ ಏನು ಹೇಳಿದರು ಎಂದರೆ, ಈ ದುಡ್ಡನ್ನು ಉಳಿಸಿ ಹೇಮಾವತಿ ನೀರನ್ನು ತೆಗೆದುಕೊಂಡು ಹೋಗುವುದಕ್ಕೆ ಮಾಡುತ್ತಿದ್ದಾರೆಂದು ಹೇಳಿದ್ದಾರೆ.

ಆದರೆ ಪ್ಲಾನಿಂಗ್‌ನ್ನು ನಾನ್ ಪ್ಲಾನಿಂಗ್ ಮಾಡಲಿಕ್ಕೆ ಬರುವುದಿಲ್ಲ. ಅದು ಆದ ಮೇಲೆ ಹೇಳುತ್ತೇನೆ. ಅವರು ಫೈನಾನ್ಸ್ ಮಿನಿಸ್ಟರಾಗಿದ್ದು ಅವರಿಗೆ ಗೊತ್ತಿರುತ್ತದೆ. ಚೀಫ್ ಇಂಜಿನೀಯರ್ ಲೆವಲ್‌ನಲ್ಲಿ ಒಂದು ವರ್ಕ್‌ಅಪ್ ಮಾಡಬೇಕೆಂದು ಹೇಳಿ ಅಫಿಷಿಯಲ್ ಕಮಿಟಿ ಮಾಡಿ ಕಂಟ್ರಾಕ್ಟರ್ಸ್ ಆ ನಾರಮ್ಸ್‌ಗೆ ಯಾರು ಬರುತ್ತಾರೋ ಅವರಿಗೆ ಕೊಡಿ ಎಂದು ಹೇಳಿದೆ. ಪುನ: ಬರೆ ಆರ್‌ಬಿಟ್ರೇಷನ್ ಮೂಲಕ ಸೆಟಲ್ ಮಾಡಿಕೊಳ್ಳುತ್ತೇವೆಂದರೆ what may come fight out legally ಎಂದು ಹೇಳಿದ್ದೆ. ಅವರು ಒಂದು ಮಾತನ್ನು ಹೇಳಿದರು, ಬಹಳ ದುಃಖಃವಾಗುತ್ತದೆ. Magnificient surrender of Irrigation department ', These are the very words used by Hon'ble Member Sri M. Veerappa Moily. ಅದನ್ನು ನಾನು ಓದಬೇಕಾಗಿಲ್ಲ, ಒಂದೇ ಒಂದು ಕಾಸು ಕೂಡ ಖರ್ಚು ಮಾಡುವಂಥ ಯೋಗ್ಯತೆ ಇಲ್ಲ. ಅಲ್ಲಿ ಎಲ್ಲೋ ಊರೊಳಗೆ ಕುಳಿತುಕೊಂಡು ಮಾನ್ಯ ವೆಂಕಟರಾಮಯ್ಯನವರ ತಲೆಯೊಳಗೆ ಹೇಗೆ ಎಂದರೆ ಬಿ.ಡಿ.ಓ ಆಫೀಸಿನವರು ಮಣ್ಣು ಕೆರೆಯುತ್ತಾರೆ ಎಂದು ಹೇಳಿದರೆ ಎಲ್ಲ ಕೊಚ್ಚಿ ಹೋಗುತ್ತದೆ. ಡ್ಯಾಮ್ ಉಳಿಯುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ನಾನು ದೊಡ್ಡ ದೊಡ್ಡ ತಿಮಿಂಗಿಲಗಳು ಇವೆ ಎಂದು ಹೇಳಿದೆ.

ಶ್ರೀ ಎಚ್.ಡಿ. ದೇವೇಗೌಡ.—ತಿಮಿಂಗಿಲಗಳು ಎಲ್ಲಿ ಇಲ್ಲ ಒಂದು ಕಾಲದಲ್ಲಿ ನಿಮಗೆ ಚೆನ್ನಾಗಿ ಗೊತ್ತು ಮನಾಪಲಿಯನ್ನು ಬ್ರೇಕ್ ಮಾಡುತ್ತೇವೆಂದು ಹೇಳಿದ ಸಿ.ಪಿ.ಎಂ. ಸರ್ಕಾರ ಈಗ ಮನಾಪಲಿ ಕಡೆ ಓಡುತ್ತಿದೆ. ಏತಕ್ಕೋ ಗೊತ್ತಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಸರ್ಕಾರವನ್ನು ನಡೆಸುವಾಗ ಇಲ್ಲಿ ಚರ್ಚೆ ಮಾಡಬೇಕೆಂದರೆ ಚರ್ಚೆ ಮಾಡಲಿಕ್ಕೆ ತಯಾರಾಗಿದ್ದೇನೆ. ಈಗ ಸ್ವಾಮಿ ಈ ಮಾತನ್ನು ಹೇಳತಕ್ಕಂಥ ಉದ್ದೇಶ ಪ್ರತಿಯೊಂದು ಹಂತದಲ್ಲೂ ಎಷ್ಟು ಚೆನ್ನಾಗಿ ಕೆಲಸ ನಿರ್ವಹಿಸಲಿಕ್ಕೆ ಸಾಧ್ಯವೋ ಅಷ್ಟು ಚೆನ್ನಾಗಿ ವಹಿಸಿದ್ದೇವೆ. ಈ ಮಾತನ್ನು ಹೇಳುವಾಗ ಒಂದು ಹೆಜ್ಜೆ ಮುಂದೆ ಹೋಗಿ ಮಾನ್ಯ ಕಡಪಟ್ಟಿಯವರು ಏತಕ್ಕೆ ಹೇಳಿದರೋ, ದುಡ್ಡು ಕೊಟ್ಟಿಲ್ಲವೆಂದು ಹೇಳಿದರೋ ಏನೋ ಗೊತ್ತಿಲ್ಲ.

ಶ್ರೀ ಎಸ್.ಎಸ್. ಕಡಪಟ್ಟಿ.—ಚೆನ್ನಾಗಿ ಕೆಲಸ ಮಾಡಲಿ ಎಂದು ಹೇಳಿದೆ.

ಶ್ರೀ ಎಚ್. ಡಿ. ದೇವೇಗೌಡ.—ಸ್ಪಾಟ್ ಇನ್‌ಸ್ಪೆಕ್ಷನ್‌ಗೆ ಚೀಫ್ ಮಿನಿಸ್ಟರನ್ನು ಕರೆದುಕೊಂಡು ಹೋಗಿದ್ದೆ. ರಾಜನಕಲ್ಲೂರ್ ಟನಲ್‌ಗೆ ಹೋದರೆ ಎಂಟು ಕೋಟಿ ರೂಪಾಯಿಗಳ ಟೆಂಡರ್ ಅನ್ನು ನಿಯಮಗಳಿಗೆ ಹೊರತಾಗಿ ಮಾಡಿದ್ದಾರೆ, ವರ್ಲ್ಡ್ ಬ್ಯಾಂಕ್ ಅಸಿಸ್ಟೆನ್ಸ್‌ನ್ನೇ ಬೇಡುವುದಿಲ್ಲವೆಂದು ತೀರ್ಮಾನ ಮಾಡಿದ್ದಾರೆ. ಅದರ ಮೆರಿಟ್ ಮತ್ತು ಡಿಮೆರಿಟ್ ಬಗ್ಗೆ ಮೋಟಿವೇಟ್ ಮಾಡುವುದಕ್ಕೆ ಹೋಗುವುದಿಲ್ಲ, ಹೀಗೆ ಮಾಡಿದ ಉದ್ದೇಶವೇನೆಂದರೆ ಅಪ್ರೋಚ್ ಕಟ್ಟೆ ಎಕ್ಸಿಸ್ಟ್ ಕಟ್ಟೆಯನ್ನೇ ಮುಗಿದು ಹೋಗಿದೆ ಚಾನಲ್ ಹಾಕಿಲ್ಲ. ಡ್ಯಾಮ್ ಮುಗಿದು ಹೋಗಿದೆ. ನೀರನ್ನು ಮುನ್ನೂರು ಅಡಿಯಿಂದ ಎತ್ತಿ ಹಾಕಬೇಕು. ಸ್ಥಳದಲ್ಲಿ ಹೋಗಿನೋಡಿದೆ. ಈ ಎರಡು ಕಾರಣಗಳಿಂದಾಗಿ ಸುಮಾರು ೪೦ ಸಹಸ್ರ ಎಕರೆಗೆ ನೀರನ್ನು ಕೊಡುವುದಕ್ಕೆ ಸಾಧ್ಯವಿಲ್ಲವೆಂದು ಅಧಿಕಾರಿಗಳು ಹೇಳಿದರು, ಫೈಲ್ ಬೇಕಾದರೆ ತರಿಸಿಕೊಡುತ್ತೇನೆ. ಮಾನ್ಯ ವೀರಪ್ಪಮೊಯಿಲಿಯವರು ಜ್ಯುಡಿಷಿಯಲ್ ಎನ್‌ಕ್ವಯರಿ ಮಾಡಲಿಕ್ಕೆ ತಯಾರಾಗಿಲ್ಲ ಒಟ್ಟಾರೆ ೪೦ ಸಹಸ್ರ ಎಕರೆಗೆ ನೀರನ್ನು ಕೊಡುವಂಥ ಕೆಲಸ ನಿಂತು ಹೋಗಿರುವುದು ನನ್ನ ಗಮನಕ್ಕೆ ಬಂದ ಕಾಲದಲ್ಲಿ ನಾನು ಹೇಳಿದೆ You take the work on piece work system. ಯಾವನು ಕಂಟ್ರಾಕ್ಟರ್ ಇರುತ್ತಾನೆ. ಅವನಿಗೆ ಕೊಡಬೇಕೆಂದು ಹೇಳಿದ್ದೇನೆ. I want to see that the work is completed in June. ನಾವು ನೀರನ್ನು ಕೊಡಬೇಕು, ಅಷ್ಟೇ ನನ್ನ ಕೆಲಸ. ಹೌದು ನಾವು ಮಾಡಿರುವುದು ನಿಯಮಗಳಿಗೆ ವಿರುದ್ಧ ಇದೆ. ಆದರೆ ಜನರಿಗೆ ನೀರನ್ನು ಕೊಡಬೇಕು ಅಷ್ಟು ನಮ್ಮ ಕೆಲಸ.

೫-೩೦ ಪಿ ಎಂ.

ಇಲ್ಲದಿದ್ದರೆ ಆ ಕೆಲಸ ಮಾಡುತ್ತಿರಲಿಲ್ಲ. ೧೯೮೫ರಲ್ಲಿ ಮತ್ತೆ ನೀರಾವರಿ ಮಂತ್ರಿಯಾಗಿ ಬಂದು ಮೇಲೆ ೧೯ ಕೋಟಿ ರೂಪಾಯಿ ರೀಇಂಬರ್ಸ್‌ಮೆಂಟ್ ಆಗಬೇಕೆಂದು ಹೇಳಿದೆ. ನಿಮಗೆ ಗೊತ್ತಿದೆ,

ನೀವು ಸರ್ಕಾರ ನಡೆಸಿದ್ದೀರಿ. ವಿಶ್ವಬ್ಯಾಂಕಿನವರು ರೀಇಂಬರ್ಸ್‌ಮೆಂಟ್ ಹಣವನ್ನು ತೆಗೆದುಕೊಳ್ಳ ಕೂಡದೆಂದು ಹೇಳಿದ್ದರಿಂದ ನಾವು ಬೇರೆ ಬೇರೆ ಎಲ್ಲಾ ರೀತಿಯ ಕೆಲಸಗಳನ್ನು ನಿಲ್ಲಿಸಿ ಹಣ ಉಳಿಸಿ ಕೊಂಡೆವು. ಇದೆಲ್ಲ ಕಡತದಲ್ಲಿದೆ ನೋಡಿ. ನನಗೆ ನೀವು ಹೇಳಿದಾಗ ದುಃಖವಾಗುತ್ತದೆ. ಕಡಪಟ್ಟಿಯವರೆ, I honestly and sincerely tried my best to safeguard.

ಶ್ರೀ ಎಸ್ ಎಸ್ ಕಡಪಟ್ಟಿ.—ಡೆಲ್ಲಿಗೆ ಹೋಗಿ ಪ್ಲಾನಿಂಗ್ ಕಮೀಷನ್‌ನಿಂದ ಅಪ್ರೂವಲ್ ಮಾಡಿಸಿಕೊಂಡು ಬಂದದ್ದು ಗೊತ್ತಿದೆ.

ಶ್ರೀ ಹೆಚ್. ಡಿ. ದೇವೇಗೌಡ.—ಸೆಕೆಂಡ್ ಫೇಸ್ ಪ್ರಾಜೆಕ್ಟ್ ಬಗ್ಗೆ ತೀರ್ಮಾನ ಕೈಗೊಂಡ ದಿವಸ the Chief Minister and the Planning Minister were not in Karnataka Without proper allocation I took that risk. In his absence I took the decision. ಯಾರು ಎಷ್ಟೇ ತಿಕ್ಕಾಡಿದರೂ ಬಿಟ್ಟುಕೊಡುವುದಿಲ್ಲವೆಂದು ಹೇಳಿದೆ. ಆ ಸಂದರ್ಭದಲ್ಲಿ ನಾನು ಮಾಡಿದ ನಿರ್ಣಯವನ್ನು ಯಾವುದೇ ಬದಲಾವಣೆ ಮಾಡಲಿಲ್ಲ. ಅಂದು ಹಣಕಾಸಿನ ಮಂತ್ರಿಗಳೂ ಇರಲಿಲ್ಲ, ಯೋಜನಾ ಮಂತ್ರಿಗಳೂ ಇರಲಿಲ್ಲ. I sent a special messenger to the World Bank. ಪ್ರಾಜೆಕ್ಟ್ ಮಾಡುವುದಕ್ಕೆ ಅಷ್ಟೇ ಅಲ್ಲ. ವರ್ಲ್ಡ್ ಬ್ಯಾಂಕಿನ ಡೆಲಿಗೇಟ್ಸ್ ಅನ್ನು ಕರೆದುಕೊಂಡು ಹೋಗಿ ಡಿನ್ನರ ಹೋಸ್ಟ್ ಮಾಡುವ ಮಟ್ಟಕ್ಕೆ ಹೋದೆ. After all it is accidental to me. ನಾನು ಈ ರಾಜ್ಯದಲ್ಲಿ ೪ ಕೋಟಿ ಜನರಿಗೆ ಪಾಪದ ಕೆಲಸ ಮಾಡುವುದಕ್ಕೆ ಸಿದ್ಧವಿಲ್ಲ ವರ್ಲ್ಡ್ ಬ್ಯಾಂಕ್ ಕ್ಲಿಯರೆನ್ಸ್ ಆಗುವುದಿಲ್ಲವೆಂದು ಹೇಳಿದಾಗ ಮತ್ತೆ ಪ್ರಯತ್ನ ಮಾಡಿದೆ. I sent my Officers telling them. "What may come, you must get the clearance for 550 crores. I am happy to inform the House that with the help of my Officers I was able to get the clearance from the planning commission. ೫೫೦ ಕೋಟಿ ರೂಪಾಯಿಗಳಲ್ಲಿ ಲಿಫ್ಟ್ ಇರಿಗೇಷನ್‌ಗೆ ಇದೇ ಬಿಜಾಪುರಕ್ಕೆ ಏನಾಗಿದೆ ಎಂದರೆ......

(ಗೊಂದಲ)

ಈ ಪಕ್ಷ ಆ ಪಕ್ಷ ಎಂಬುದು ಬೇಡ, ಸದನದ ಎಲ್ಲಾ ಸದಸ್ಯರಿಗೆ ಹೇಳುತ್ತೇನೆ, that is a prestigious project for us. In Sotuh-east Asia it is one of the biggest proj ct ಮೊದಲನೇ ಫೇಸ್‌ನಲ್ಲಿ ೧೯೯ ಟಿ.ಎಂ.ಸಿ. ನೀರು ಬರುತ್ತದೆ. ಈಗ ನಾವು ೭೩೪ ಟಿ ಎಂ.ಸಿ. ಇದ್ದುದನ್ನು ೭೭೩ ಟಿ.ಎಂ.ಸಿ.ವರೆಗೆ ಎಕ್ಸ್‌ಟೆಂಡ್ ಮಾಡಿದ್ದೇವೆ. ಆ ನೀರನ್ನು ಬಿಜಾಪುರಕ್ಕೆ ಕೊಡಬೇಕೆಂದು ತೀರ್ಮಾನಿಸಿದ್ದೇವೆ. ಅದಕ್ಕೆ ಮತ್ತೆ ರಾಜಕೀಯ ಬರುತ್ತದೆ. ಯಾರು ಅಧಿಕಾರದಲ್ಲಿದ್ದರೂ ರಾಜಕೀಯ ಬರುತ್ತದೆ ಕರ್ನಾಟಕದಲ್ಲಿ ಜಾತಿ ತುಂಬಾ ಪ್ಲೇ ಮಾಡುತ್ತದೆ. ಯಾರ ಪ್ರೇರಣೆಯಿಂದ ಅದನ್ನೆಲ್ಲ ಮಾಡುತ್ತಾರೋ ಗೊತ್ತಿಲ್ಲ. ಭಾಗದ ಜನ ಏನು ನೊಂದಿದ್ದಾರೆ. ಅವರ ಬಗ್ಗೆ ಸಹಾನುಭೂತಿ ಇದೆ. ಅವರಿಗೆ ಸಮಾಧಾನಕರವಾಗುವ ಹಾಗೆ ಮಾಡಿದ್ದೇನೆ. I took the decision to re-plan to help Bijapur people. 734 ಟಿ.ಎಂ.ಸಿ.ಯಲ್ಲಿ 190, 150, 173 ಟಿ.ಎಂ.ಸಿ. ನೀರನ್ನು ಒಂದೊಂದು ಹಂತದಲ್ಲಿ ಕೊಡುತ್ತಾ ಬಂದಿದ್ದೇವೆ.

ಶ್ರೀ ಕೆ. ಬಿ.ಶಾಣಪ್ಪ .—ನಮ್ಮದು ಏನು ಮಾಡಿದ್ದೀರಿ?

ಶ್ರೀ ಎಚ್. ಡಿ. ದೇವೇಗೌಡ.—ಇಷ್ಟೇ ಹೇಳುವುದಕ್ಕೆ ಇಷ್ಟಪಡುತ್ತೇನೆ. ನಾನು ಲಿಫ್ಟ್ ಇರಿಗೇಷನ್‌ಗೆ ಮುಖ್ಯಮಂತ್ರಿಗಳನ್ನು ಕರೆದುಕೊಂಡು ಹೋಗಿ ಫೌಂಡೇಷನ್ ಹಾಕಿಸಿದೆ. ಅದೂ ಸೇರಿ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಎಷ್ಟು ಕೋಟಿ ಪ್ರಾವಿಷನ್ ಮಾಡಿದ್ದೀರಿ ?

ಶ್ರೀ ಎಚ್. ಡಿ. ದೇವೇಗೌಡ.— ೩೨ ಕೋಟಿ ರೂಪಾಯಿ. ಸ್ವಲ್ಪ ಸಮಾಧಾನವಾಗಿರಿ. I don't want to cheat the House. ಈ ಸದನವನ್ನು ವಿಶ್ವಾಸಕ್ಕೆ ತೆಗೆದುಕೊಳ್ಳದೆ ಹೇಳುವುದಿಲ್ಲ. ನೀವು ಬರೆದಿರುವ ಕಾಗದವನ್ನು ನೋಟಿಂಗ್‌ಗೆ ಕಳುಹಿಸಿದ್ದೆ. ಅದು ದೊಡ್ಡ ವಿಷಯ ವಲ್ಲ. ೩-೪ ಲಕ್ಷ ರೂಪಾಯಿನ ಪ್ರಾಜೆಕ್ಟನ್ನು ವಿರೋಧಿಪಕ್ಷದ ಉಪನಾಯಕರು ಹೇಳಿದಮೇಲೆ ಕೊಡುವುದಿಲ್ಲ ಎಂದರೆ...

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ.—ಬಜೆಟ್‌ನಲ್ಲಿ ಬಂದಿದ್ದ ಕೆಲಸವೇ ಆಗುತ್ತಿಲ್ಲ. ಮೂರು ವರ್ಷದಿಂದ ನೀವು ಹೇಳುತ್ತಲೇ ಇದ್ದೀರಿ. ನಾನು ಕೇಳುತ್ತಲೇ ಇದ್ದೇನೆ.

ಶ್ರೀ ಹೆಚ್. ಡಿ. ದೇವೇಗೌಡ.— ಸಮಾಧಾನದಿಂದ ಕುಳಿತುಕೊಳ್ಳಿ. ಅದರಲ್ಲಿ ಕ್ರಸ್ಟ್ ಗೇಟ್ ಸಂಪೂರ್ಣವಾಗಿ ಕಟ್ಟುವುದಕ್ಕೆ ಕ್ಲಿಯರೆನ್ಸ್ ತೆಗೆದುಕೊಂಡಿದ್ದೇವೆ. ಆಲ್ಮಟ್ಟಿಯದು, Spill-way crest from EL 500 to 900 with motors without gates, raising of PL height embedded parts non over flow masonry in the earthern section of the dam EL 515 to EL 527.25, power portion of the dam Interstructure and insulation.. Six lift irrigation schemes plus Mudbal Indi branch canal distribution system, This is the technical clearance given by the Central Water Power Commission and the Ec nomic Affairs Ministry has sent a telex to World Bank Authorities and the World Bank authority is going to come within a month and the matter will be thrashed out.

ಸ್ವಾಮಿ, ಇದರಿಂದ ಮಾನ್ಯ ಕಡಪಟ್ಟಿಯವರಿಗೆ ಸಮಾಧಾನವಾಗಿದೆ ಎಂದು ಭಾವಿಸಿಕೊಳ್ಳುತ್ತೇನೆ. ಇನ್ನು ಮಲಪ್ರಭ ಬಗ್ಗೆ House is satisfied at least. ಹೌಸ್ ಎಂದರೆ ನೀವು ಸಿ. ಪಿ, ಎಂ. ನವರು, ಕಾಂಗ್ರೆಸ್‌ನವರು ಎಲ್ಲರೂ ಬರುತ್ತಾರೆ.

ಶ್ರೀ ಆರ್. ವೆಂಕಟರಾಮಯ್ಯ.—ಅವರಿಗೂ ಕೊಡಿ, ನಮಗೂ ಕೊಡಿ.

SRI H. D. DEVEGOWDA.—It comprises of all shades of political...

ಶ್ರೀ ಕೆ. ಬಿ. ಶಾಣಪ್ಪ.—ರೋಡ್ಸ್, ಬಿಲ್ಡಿಂಗ್ಸ್‌ಗೂ ಬರಬೇಕು ತಾವು.

ಶ್ರೀ ಎಚ್. ಡಿ. ದೇವೇಗೌಡ.— ಮಲಪ್ರಭ. ಘಟಪ್ರಭ ಬಗ್ಗೆ ಈ ವರ್ಷ ೪೨ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ಇಲ್ಲಿ ಕೋಟ್ ಮಾಡಿದೆ, ಶ್ರೀಮತಿ ಇಂದಿರಾಗಾಂಧಿಯವರು ಬಂದು ರಿವ್ಯೂ ಮಾಡಿದ ಮೇಲೆ great six crores have been provided Great six crores. We have now decided to spend Rs, 42 crores on Ghataprabha Malaprabha, ನಾವು ಏನೇನು ಖರ್ಚು ಮಾಡಿಕೊಂಡು ಬಂದಿದ್ದೇವೆ ಎಂಬುದನ್ನು ತಮ್ಮ ಗಮನಕ್ಕೆ ತರುತ್ತೇನೆ. ಎಷ್ಟು ಸ್ಟ್ರಗಲ್ ಆಗುತ್ತದೆ ಲೈಫ್‌ನಲ್ಲಿ. ತಮಗೆ ಅನುಭವ ಇಲ್ಲ ಎಂದು ಹೇಳುವುದಿಲ್ಲ. ಕಡಬಗಟ್ಟಿ ಟನಲ್‌ನಿಂದ ಹೊರಗೆ ಹೋಗಬೇಕಾದರೆ ಎಷ್ಟು ಸ್ಟ್ರಗಲ್ ಇಯಿತು ಬಾಳೆಕುಂದರಗಿ ಅವರನ್ನು ಕರೆಸಿ...ಬೊಮ್ಮಾಯಿಯವರು ಪಿ. ಎ. ಸಿ. ಚೇರ್ಮನ್ ಆಗಿ ಅದರ ಬಗ್ಗೆ ಬರೆದಿದ್ದಾರೆ. ನಾನು ರಿಪೋರ್ಟ್ ತರಿಸಿದ್ದೇನೆ. ಷಾ ಎಂದು ಹೇಳಿ ಕಂಟ್ರಾಕ್ಟರ್ ಯಾವುದಾದರೂ ದಾಕ್ಷಿಣ್ಯಕ್ಕೆ ಒಳಗಾಗಿದ್ದೇನಾ ? To drive him out from the spot legally it was a very complicated issue. ಅವನನ್ನು ಸ್ಥಳದಿಂದ ಬಿಡಿಸಬೇಕು, ಕೆಲಸ ಮಾಡಿಸಬೇಕು ಎಂದು ಪ್ರಯತ್ನ ಮಾಡಿದೆ. ಚೀಫ್ ಮಿನಿಸ್ಟರ್ ಹೇಳಿದರು ಯಾಕೆ ಇಷ್ಟು ಬರೆಯುತ್ತೀರಿ ಎಂದು. I wrote six pages. ಅದನ್ನು ಸಭೆಯ ಮುಂದಿಡುತ್ತೇನೆ. ನನ್ನ ಉದ್ದೇಶ, ೧೦ ವರ್ಷ ಆದಮೇಲೆ ಯಾವನೋ ಒಂದು ಕಥೆ ಹೇಳಬಹುದು. ಯಾವ ಕಾರಣದಿಂದ ಈ ನಿರ್ಣಯಕ್ಕೆ ಬರಬೇಕಾಯಿತು ಎಂದು ಹೇಳುತ್ತೇನೆ. It must be a speaking order. That is my desire. I told the Chief Ministe ,

ನಾಳೆ ಬೆಳಿಗ್ಗೆ ಸಂಶಯ ಬರಕೂಡದು ಅಂತ ಬರೆದಿದ್ದೇನೆ ಅಂತ ಹೇಳಿದೆ. ಕಬ್ಬೂರ್ ಟನಲ್, ಬೆಣ್ಣೆತೊರೆ ಅಕ್ವಿಡಕ್ಟ್ ಆಗಬೇಕಾದ ಕೆಲಸ. ತೀರ್ಮಾನ ತೆಗೆದುಕೊಳ್ಳುವುದಕ್ಕೆ ನಿಮಗೆ ಶಕ್ತಿ ಇರಲಿಲ್ಲವೆಂದು ನಾನು ವಾದ ಮಾಡುವುದಕ್ಕಾಗುವುದಿಲ್ಲ ಆದರೆ ನಿರ್ಣಯವನ್ನೇ ತೆಗೆದುಕೊಂಡಿರಲಿಲ್ಲ. ಅದೇ ರೀತಿ ಬಾಗೂರು ನವಿಲೆ ಟನಲ್ ವಿಚಾರವಾಗಿ ಹೇಳುವುದಾದರೆ, ಶ್ರೀಮಾನ್ ವೈ. ಕೆ. ರಾಮಯ್ಯನವರು ಇಲ್ಲೇ ಇರಬಹುದು. ಆ ಕೆಲಸವನ್ನು ಮುಗಿಸಿದ್ದೇ ಆದರೆ ತುಮಕೂರು ಜಿಲ್ಲೆಗೆ ನೀರು ಬಂದೇ ಬಿಡುತ್ತದೆಂದು ಹೇಳಿದರು. ಅದರ ಬಗ್ಗೆ ನ್ಯಾಯಾಂಗ ತನಿಖೆಯನ್ನು ಮಾಡುವುದಕ್ಕೆ ಆಜ್ಞೆ ಮಾಡಿ

ದಾಗ ಈ ಸಭೆಯಲ್ಲಿ ಯಾರೂ ಎದ್ದು ಹೇಳಲೇ ಇಲ್ಲ. I have got firm footing, moral ground I am not bothered. ಎರಡು ವರ್ಷ ಆದರಲ್ಲಿ ಕೆಲಸವನ್ನೇ ತೆಗೆದುಕೊಳ್ಳಲಿಲ್ಲ. ಇನ್ನು ಫಾರಂ ಫಾಲ್ಟ್ ಜೋನ್. ಸಿಕ್ಕಿದೆ ಎಂಬುದಾಗಿ ಹೇಳಿದರು. ಅದರ ಮೇಲೆ ಆಜಿಟೇಷನ್. ಈ ರೀತಿ ಮಾಡಿ ದರೆ ಹೇಗೆ ಆಗುತ್ತದೆ? ಇಡೀ ಸೌತ್ ಏಷ್ಯಾದಲ್ಲೇ ಭಾರಿ ಉದ್ದವಾದ ಸುರಂಗ ಮಾರ್ಗದಲ್ಲಿ ಈ ರೀತಿಯ ತಾಂತ್ರಿಕ ದೋಷ ಸಾಧ್ಯ ಇರಲಿಲ್ಲ. ಈ ರೀತಿ ಸಿಕ್ಕಿರುವುದು ಪ್ರಥಮ ಅಂತ ಶ್ರೀಮಾನ್ ಬಾಳೆಕುಂದ್ರಿ ಯವರು ಹೇಳುತ್ತಾರೆ. His integrity cannot be questioned, even by his enemy. ಆದಕ್ಕಾಗಿ ಒಂದೊಂದು ವಿಷಯದ ಬಗ್ಗೆಯೂ ಹೇಳುವುದಾದರೆ I may require another 2 hours for this. ಎಲ್ಲರಿಗೂ ಸಹಾಯವಾಗಬೇಕೆಂಬುದೇ ನಮ್ಮ ಉದ್ದೇಶ. ಹೇಮಾವತಿ ಒಂದಕ್ಕೇ ಬಹಳ ದುಡ್ಡು ಕೊಟ್ಟುಬಿಟ್ಟಿದ್ದೀರಿ. ಬಾಕಿ ಯೋಜನೆಗಳ ಬಗ್ಗೆ ನನಗೆ ಚಿಂತೆ ಇಲ್ಲ ಅಂತ ಹೇಳಿದರು. ಹೇಮಾವತಿ ಒಂದಕ್ಕೇ ದುಡ್ಡು ಕೊಟ್ಟಿದ್ದೇನೆಯೆ ? ಅಕಸ್ಮಾತ್ತಾಗಿ ನಾನು ಹೊಳೆನರಸೀಪುರದಲ್ಲಿ ಹುಟ್ಟಿದ್ದೇನೆ. ಅಲ್ಲೆ ಹುಟ್ಟಬೇಕೆಂದು ದೇವರಲ್ಲಿ ಪ್ರಾರ್ಥನೆ ಮಾಡಿಕೊಂಡು ಬರಲಿಲ್ಲ. ನಾನು ನೀರಾವರಿ ಮಂತ್ರಿಯಾಗಿ ಅಧಿಕಾರವನ್ನು ವಹಿಸಿಕೊಂಡ ಮೇಲೆ ಇಗ್ಲೂರ್ ಅಣೆ ಕಟ್ಟು, ಅದು ಮಂಡ್ಯ ಜಿಲ್ಲೆಯಲ್ಲಿ ಬರುತ್ತದೆ. ಕೆಲಸ ಪೂರ್ತಿಯಾಗಿ ನಿಂತೇ ಹೋಗಿತ್ತು. ಯಾರೂ ನನಗೆ ಹೇಳಲಿಲ್ಲ. ನಾನೇ ಹೋದೆ ಏನು ಮಾಡುತ್ತಿದ್ದಾರೆ ನೋಡೋಣ ಅಂತ. We want that project. ಅದೇ ರೀತಿ ರಂಗಯ್ಯನ ದುರ್ಗ ಪ್ರಾಜೆಕ್ಟ್, ಅದಕ್ಕೆ ಎಸ್ಟಿಮೇಟೇ ಇಲ್ಲ. ಅದೇನು ಏ ಜಿ.ಯೋ ಯಾವ ರೀತಿ ಅಕೌಂಟ್ಸನ್ನು ಸ್ಕ್ರೂಟಿನಿ ಮಾಡುತ್ತಾರೋ ನನಗಂತೂ ಗೊತ್ತಿಲ್ಲ. ಅದು ಚಿತ್ರದುರ್ಗ ಜಿಲ್ಲೆಯಲ್ಲಿ ಬರುತ್ತದೆ. I did a surprise inspection. ನಂತರ ಕನಕಪುರ ತಾಲ್ಲೂಕಿನಲ್ಲಿ ಬರುವಂತಹ ಹಾರೋಹಳ್ಳಿ ಹತ್ತಿರ ಇರುವಂತಹ ಪ್ರಾಜೆಕ್ಟನ್ನು ನೋಡಲೂ ಕೂಡ ಹೋಗಿದ್ದೆ. ಶ್ರೀಮಾನ್ ಸಿದ್ಧಾರ್ಥರವರು ಇಲ್ಲೇ ಇರಬೇಕು, ಅದಕ್ಕೆ ೧೭ ಲಕ್ಷ ರೂಪಾಯಿಗಳನ್ನು ಮಾತ್ರ ಖರ್ಚು ಮಾಡಿದ್ದರು. ೧೯೭೭ರಲ್ಲಿ ಪ್ರಾರಂಭ ಮಾಡಿದಂತಹ ಯೋಜನೆ ಅದು. ಕೆಲಸ ಪೂರ್ತಿ ನಿಂತೇ ಹೋಗಿತ್ತು. ಅದಕ್ಕೆ ೩೨ ಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಪ್ರತಿ ವರ್ಷ ೩ ಕೋಟಿ ಪ್ರಕಾರ ಖರ್ಚು ಮಾಡುತ್ತಿದ್ದೇವೆ. ಬರೀ ಹೇಮಾವತಿ ಒಂದೇನಾ ಸ್ವಾಮಿ? ಶ್ರೀಮಾನ್ ರಾಜುಗೌಡರು ಯಾವ ಪಾರ್ಟಿಯೋ ನನಗೆ ಗೊತ್ತಿಲ್ಲ. ಮುಂದುಕುತೊರೆ ಯೋಜನೆಗೆ ಜೀವ ಕೊಟ್ಟಿ ದ್ದೇನೆ. The eyes of my old friend and former opposition leader is only on Hemavathi. ಅದೇ ರೀತಿ ಕೆ.ಆರ್. ಸಾಗರದ ಕಾಲುವೆಗಳ ಮಾಡ್ರನೈಜೇಷನ್ ಬಗ್ಗೆ ಹೇಳುವುದಾದರೆ ಮಂಡ್ಯ ಜಿಲ್ಲೆಯವರು ಚಡ್ಡಿ ಮೆರವಣಿಗೆ ಮಾಡಿದ್ದೇ ಮಾಡಿದ್ದು. ತಾವು (ವಿರೋಧ ಪಕ್ಷದ ನಾಯಕಿಯವರನ್ನು ಕುರಿತು) ಮೈಸೂರಿಗೆ ಕಾರಿನಲ್ಲಿ ಹೋಗುವಾಗ ನೋಡಿರಬಹುದು. The expenditure on modernisatian in 4 years is 2.8 lakhs. The Janata government has spent 8½ crores and we propose to spend five crores next year. ಹೇಳಿ ಸ್ವಾಮಿ. ಹೊಳೆನರಸೀಪುರದ ಜನ ಬದುಕಬೇಡವೆ? I will go to the extent of saying further. ೨೫ ವರ್ಷಗಳು ವಿರೋಧಪಕ್ಷದಲ್ಲಿ ಕುಳಿತು ಕೆಲಸ ಮಾಡಿ ದ್ದೇನೆ. ಅಕಸ್ಮಾತ್ತಾಗಿ ನನಗೆ ಈ ಒಂದು ಅಧಿಕಾರ ಸಿಕ್ಕಿದೆ, ಈ ಸಂದರ್ಭದಲ್ಲಿ ಬೇರೆ ಜನರಿಗೆ ದ್ರೋಹ ಬಗೆದು ಆ ಕೆಲಸವನ್ನು ಮಾಡುವುದಾದರೆ I will have to be penalised, censured. He has got every right to censure. ಸೆನ್ಸಾರ್ ಮಾಡಿ ನನ್ನದೇನೂ ಅಡ್ಡಿಯಿಲ್ಲ. ವರುಣಾ ಕೆನಾಲ್ ವಿಷಯವಾಗಿ ಹೇಳುವುದಾದರೆ, ಇವತ್ತು ಅದಕ್ಕೆ ಶ್ರೀಮಾನ್ ದೇವರಾಜ ಅರಸು ರವರ ಹೆಸರನ್ನಿಟ್ಟಿದ್ದೇವೆ. ಈ ವರ್ಷ ೫ ಕೋಟಿ ಹಣವನ್ನು ಇಟ್ಟಿದ್ದೇವೆ, ನಂತರ ಕಬಿನಿ ಬಗ್ಗೆ ಹೇಳು ವುದಾದರೆ ಇನ್ನು ೧೧ ಕೋಟಿ ಹಣವನ್ನು ಖರ್ಚು ಮಾಡಿದರೆ, ಕಬಿನಿ ಪೂರ್ತಿ ಮುಗಿದೇ ಹೋಗುತ್ತದೆ ಈ ವರ್ಷ ಅದಕ್ಕೆ ಕೊಟ್ಟಿರುವಂತಹ ಹಣವನ್ನು ಪೂರ್ತಿಯಾಗಿ ಖರ್ಚು ಮಾಡುವುದಕ್ಕಾಗುವುದಿಲ್ಲ. ಏಕೆಂದರೆ ಸಣ್ಣ ಸಣ್ಣ ಡಿಸ್ಟ್ರಿಬ್ಯೂಟರಿಗಳನ್ನು ಮಾಡಬೇಕಾಗುತ್ತದೆ. It is a little bit sophisticated work. ಈ ವರ್ಷವೇ ಆ ಕೆಲಸವನ್ನು ಮುಗಿಸುತ್ತೇವೆ. ಇನ್ನು ಮುಂದೆ ಇದರ ಬಗ್ಗೆ ಹಂತ ಎನ್ನುವ ಪ್ರಶ್ನೆಯೇ ಬರುವುದಿಲ್ಲ. I am not going to call it a stage. The further work is lift irrigation. ಅದನ್ನು ನಾವು ಮಾಡುವುದು ಫಾರೆಸ್ಟ್ ಡಿಪಾರ್ಟ್ ಮೆಂಟ್‌ನವರು ಜಗಳ ಆಡುವುದು, ಮತ್ತೆ ಅದು ವಾಪಸ್ ಬರುವುದು ಇದೇ ಆಗಿದೆ. ಇವತ್ತು ಅವರು ಸರ್ವೇ ಮಾಡುವುದಕ್ಕೇ ಬಿಡುವುದಿಲ್ಲ, ರಾಚಯ್ಯನವರು ಇಲ್ಲೇ ಕೂತಿದ್ದಾರೆ, ನಮ್ಮ ಕಡೆ ಯಾವಾ

ಗಲೂ ಬರಗಾಲ ಎಂದು ಹೇಳುತ್ತಿದ್ದಾರೆ, ಇನ್ನೊಂದು ಸೆಕೆಂಡ್ ಲಿಫ್ಟ್ ಮಾಡಬೇಕೆಂದು ನಾನು ಸೂಚನೆ ಕೊಟ್ಟಿದ್ದೇನೆ, ಆದುದರಿಂದ ಇವತ್ತು ನನಗೆ ಹಾರಂಗಿ ಬೇರೆ, ಕಬಿನಿ ಬೇರೆ, ಅಪ್ಪರ್ ಕೃಷ್ಣ ಬೇರೆ ಎನ್ನುವ ಪ್ರಶ್ನೆ ಇಲ್ಲ.

ಶ್ರೀ ಎಂ. ರಾಮಪ್ಪ.—ಹಗರಿ ಅಕ್ವಿಡೆಟ್ ಬಗ್ಗೆ ಏನು ಹೇಳುತ್ತೀರಿ ?

ಶ್ರೀ ಹೆಚ್. ಡಿ. ದೇವೇಗೌಡ.—ಟೆಂಡರ್ ಅಪ್ರೂವ್ ಮಾಡಿದ್ದೇವೆ. ನಿಮ್ಮನ್ನೇ ಕರೆದುಕೊಂಡು ಹೋಗಿ ಗುದ್ದಲಿ ಪೂಜೆ ಮಾಡಿಸುತ್ತೇನೆ,

ಶ್ರೀ ಎಂ. ರಾಮಪ್ಪ.—ಅಲ್ಲಿ ಅರ್ಧ ಕೆಲಸ ಆಗಿದೆ. ಇನ್ನೂ ಉಳಿದ ಅರ್ಧ ಕೆಲಸ ಆಗುತ್ತಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಅದಕ್ಕೆ ಏನೇನೋ ಕಾರಣಗಳು ಇವೆ, ಮೊದಲು ಅಲ್ಲಿ ಟೆಂಡರ್ ಕರೆದಿದ್ದಾರೆ. ಮತ್ತೆ ಟೆಂಡರ್ ಕ್ಯಾನ್ಸಲ್ ಮಾಡಿ ಮತ್ತೆ ಕರೆದಿದ್ದಾರೆ. ಅಲ್ಲಿಗೆ ಉತ್ತಮವಾದ ಕಾಂಟ್ರಾಕ್ಟರ್ ಸಿಕ್ಕಿದ್ದಾರೆ. ಅತಿ ಶೀಘ್ರವಾಗಿ ಕೆಲಸ ರಿಸ್ಯೂಮ್ ಮಾಡಿ ಮುಗಿಸಿಕೊಡುತ್ತೇವೆ,

ಶ್ರೀ ಎಂ. ರಾಮಪ್ಪ.—ಹಣ ಸ್ವಲ್ಪ ಜಾಸ್ತಿ ಕೊಡಿ ಸ್ವಾಮಿ.

ಶ್ರೀ ಹೆಚ್. ಡಿ. ದೇವೇಗೌಡ.—ಕೊಟ್ಟಿದ್ದೇವೆ ಸ್ವಾಮಿ. ಆ ಬಗ್ಗೆ ವಿವರಕ್ಕೆ ನಾನು ಆಮೇಲೆ ಬರುತ್ತೇನೆ, ಇವತ್ತು ಒಂದೊಂದು ಪ್ರಾಜೆಕ್ಟ್ ವಿಷಯದಲ್ಲೂ ಚರ್ಚೆ ಮಾಡಬಹುದು. ಇವತ್ತು ತುಂಗಭದ್ರಾ ಬಗ್ಗೆ ಹೇಳಿದ್ದೀರಿ. ಅಪ್ಪರ್ ಮುಲ್ಲಾಮಾರಿ, ಲೋಯರ್ ಮುಲ್ಲಾಮಾರಿ ಬಗ್ಗೆ ಹೇಳುತ್ತೀರಿ. ಲೋಯರ್ ಮುಲ್ಲಾಮಾರಿ ಮೊದಲಗೇ ಹೋಗಿದೆ. ೧೯೭೨ರಲ್ಲಿ ಬರಗಾಲ ಬಂದ ಸಮಯದಲ್ಲಿನ ಯೋಜನೆ ಅದು. ಅವಕ್ಕೆಲ್ಲಾ ಜೀವದಾನ ಕೊಟ್ಟಿದ್ದೇವೆ. ಇವತ್ತು ಫುಲ್ ಸ್ವಿಂಗ್‌ನಲ್ಲಿ ಕೆಲಸಗಳು ನಡೆಯುತ್ತಿವೆ. ಒಂದು ಒಳ್ಳೆಯ ಮಾತು, ನನಗೆ ಹೆಚ್ಚು ಏನೂ ಬೇಡ. ಆನ್ ದಿ ಸ್ಪಾಟ್ ಡಿಸಿಷನ್ ತೆಗೆದುಕೊಂಡಿದ್ದೇವೆ, ಇವತ್ತು ಇದನ್ನೆಲ್ಲಾ ಏಕೆ ಹೇಳುತ್ತಿದ್ದೇನೆಂದರೆ, ಹೊಗಳಲಿ ಅಥವಾ ತೆಗಳಲಿ ನಾನು ಮಾಡಿದ್ದನ್ನು ಹೇಳುತ್ತಿದ್ದೇನೆ. ಲೋಯರ್ ಮುಲ್ಲಾಮಾರಿಗೆ ಒಂದೂವರೆ ಕೋಟಿ ರೂಪಾಯಿ ಏನೋ ಕೊಟ್ಟಿದ್ದೇವೆ. Now we have given two crores. I wanted to create one special zone for chief engineer, in gulbarga only to tackle these medium projects. ಕಾರಂಜ ಬಗ್ಗೆ ಹೇಳಬೇಕೆಂದರೆ ಲೈಫ್ ಹಿಸ್ಟರೀಲೇ ಯಾರೂ ಅಷ್ಟು ಕೊಟ್ಟಿಲ್ಲ, ೯ ಕೋಟಿ ರೂಪಾಯಿ ಯೋಜನೆಗೆ ೯೦ ಕೋಟಿ ರೂಪಾಯಿಗಳನ್ನು ಯಾರೂ ಕೊಟ್ಟಿಲ್ಲ, ೯ ಕೋಟಿಯಿಂದ ಪ್ರಾರಂಭವಾದ ಈ ಯೋಜನೆಗೆ ೯೦ ಕೋಟಿ ರೂಪಾಯಿ ಆಗಿದೆ, With all the constraits on our resources, we tried to clear 9 crores last year. ಈ ಬಗ್ಗೆ ಭೀಮಣ್ಣ ಖಂಡ್ರೆಯವರು ಇದೇ ಸದನದಲ್ಲಿ ಬಹಳ ಹೋರಾಟ ಮಾಡಿದರು. ದೇವರಾಜ ಅರಸ್ ಅವರ ಕಾಲದಲ್ಲೂ ಈ ಬಗ್ಗೆ ಹೋರಾಟ ನಡೆಯಿತು, ಎಲ್ಲಾ ಕಾಲದಲ್ಲೂ ನಡೆದಿದೆ. ಆದುದರಿಂದ ಇಷ್ಟು ಹೇಳುವುದಕ್ಕೆ ಬಯಸುತ್ತೇನೆ. ಇನ್ನು ಮೈನರ್ ಇರಿಗೇಷನ್ ಬಗ್ಗೆ ಹೇಳುವುದಾದರೆ ಮಾನ್ಯ ಶಿವನಂಜಪ್ಪನವರು ಹೇಳಿದಹಾಗೆ ನಾನೇನೂ ಭೇದಭಾವದಿಂದ ನೋಡಿಕೊಳ್ಳುವ ಮನುಷ್ಯ ಅಲ್ಲ. ನಾನು ಅವರನ್ನೂ ಕರೆಸಿದ್ದೇನೆ.

ಶ್ರೀ ಜಿ. ಎಸ್. ಶಿವನಂಜಪ್ಪ.—ನೀವು ಮಾಡಿದ್ದೀರೆಂದಲ್ಲ

ಶ್ರೀ ಹೆಚ್. ಡಿ. ದೇವೇಗೌಡ.—ಯಾವುಯಾವುದಕ್ಕೆ ಎಷ್ಟೆಷ್ಟು ಖರ್ಚು ಮಾಡಿದ್ದೇವೆಂಬ ಬಗ್ಗೆ ವಿವರ ತರಿಸಿದ್ದೇನೆ. ವೀರಪ್ಪ ಮೊಯ್ಲಿಯವರು ಬಹಳ ಸೂಕ್ಷ್ಮಮತಿ ಇರುವಂತಹವರು ಅದರಲ್ಲೂ ವಿರೋಧ ಪಕ್ಷದಲ್ಲಿ ಕೂತು ಕೆಲಸ ಮಾಡಿ ತುಂಬಾ ಶಾಣರಿದ್ದಾರೆ. ೧೯೮೦–೮೧ರಲ್ಲಿ ವಿಶ್ವಬ್ಯಾಂಕ್ ಯೋಜನೆಗೆ ೭ ಕೋಟಿ ರೂಪಾಯಿ ಇಡಲಾಗಿತ್ತು ಎಂದಿದ್ದಾರೆ. ಸ್ವಾಮಿ ಖರ್ಚು ಆಗಿರುವುದು ೧೫ ಲಕ್ಷ ರೂಪಾಯಿಗಳು ಸ್ವಾಮಿ ವಿಶ್ವಬ್ಯಾಂಕಿನ ಕಾಮೆಂಟ್ಸ್ ಓದುತ್ತೇನೆ. Let it go to the records.

" That too earlier tender from un-balanced construction of late been reversed and the project henceforth. after a long gestation period is gained to give satisfactory implementation and progress."

ವರ್ಲ್ಡ್‌ಬ್ಯಾಂಕ್ ಅಥಾರಿಟಿಯವರು ಏನೇನು ಹೇಳಿದ್ದಾರೆಂದರೆ, This is one of the comments made by the World Bank authorities. ಸ್ವಾಮಿ ವರ್ಕ್ಸ್‌ನ ಬಗ್ಗೆ ಕೂಡ ಹೇಳಿರತಕ್ಕದ್ದು ಇದೆ. 'The progress thus achieve in the current semester is satisfactory being 91% of the target.' ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನಲ್ಲಿ ಕೂಡ ಇವತ್ತು ಅತ್ಯಂತ ಉತ್ತಮವಾದ ಕೆಲಸವನ್ನು ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ತಾವೇನು ಹೇಳುತ್ತಿದ್ದೀರಿ ತಮಿಳುನಾಡು ಮತ್ತು ಆಂಧ್ರಪ್ರದೇಶಗಳಲ್ಲಿ ೧೦ ಪರ್ಸೆಂಟ್‌ಗೆ ಇಳಿದಿದೆಯೆಂದು ಹೇಳುತ್ತೀರಿ, ತಾವೇನಾದರೂ ಅಲ್ಲಿ ಕಂಟ್ರಾಕ್ಟ್ ಮಾಡುತ್ತಿದ್ದೀರಾ ? ಅಥವಾ ನಿಮ್ಮ ಸ್ನೇಹಿತರು ಯಾರಾದರೂ ಕಂಟ್ರಾಕ್ಟ್ ಮಾಡುತ್ತಿದ್ದಾರೆಯೆ ? 'The Commission is pleased to know that the project is maintaining a satisfactory progress in all areas including hitherto flown main distribution system.' ಡಿಸ್ಟ್ರಿಬ್ಯೂಷನ್ ಸಿಸ್ಟಮ್‌ನಲ್ಲಿ ಕೂಡ ಚೆನ್ನಾಗಿ ಕೆಲಸ ಮಾಡಿದ್ದೇವೆಂದು ಹೇಳಿದ್ದಾರೆ. Plus the construction stands adopted on the bank and canals are generally good. This is the comment of the World Bank authorities. ಕೆಲಸ ಮಾಡಿರುವುದರಲ್ಲಿಯೂ ಸಹ, standerd of civil construction is generally satisfactory. This is the comment made by the World Bank authorities. ಲ್ಯಾಂಡ್ ಅಕ್ವಿಜಿಶನ್‌ನಲ್ಲಿ ಚಿಕ್ಕಮಗಳೂರನ್ನು ಕೋಟ್ ಮಾಡಿದ್ದಾರೆ. ೨೫-೩೦ ಸಾವಿರ ಕೇಸ್‌ಗಳನ್ನು ಕ್ಲಿಯರ್ ಮಾಡಲಾಗಿದೆ ಅದಕ್ಕೋಸ್ಕರ ಬಡ್ಜೆಟ್‌ನಲ್ಲಿ ತೋರಿಸಿದ್ದೇವೆ. ಬೇಸಿಸ್‌ವೈಸ್ ಎಕ್ಸ್‌ಪೆಂಡೀಚರ್ ಮಾಡುತ್ತಿದ್ದೇವೆ ಅದನ್ನು ಬೇಕಾದರೆ ಕೊಡುತ್ತೇವೆ.

ಶ್ರೀ ಆರ್. ವೆಂಕಟರಾಮಯ್ಯ.—ನನ್ನ ಅಬ್ಜೆಕ್ಷನ್ ಏನೆಂದರೆ ಸಬ್ ಸ್ಟ್ಯಾಂಡರ್ಡ್ ಆಗಿ ಕೆಲಸ ಹಾಳಾಗಿ ಹೋಗಂತ್ತದೆ. ಆ ಮೇಲೆ ಸಂಜಯಗಾಂಧಿ ಆಸ್ಪತ್ರೆ ಆದ ಹಾಗೆ ಆಗುತ್ತದೆ.

ಶ್ರೀ ಎಚ್. ಡಿ. ದೇವೇಗೌಡ.— Irrespective of the political parties ಈ ಸದನದಲ್ಲಿ ಯಾರೇ ಸದಸ್ಯರು ಇರಲಿ ಮತ್ತೊಮ್ಮೆ ಆಶ್ವಾಸನೆಯನ್ನು ಕೊಡುತ್ತಿದ್ದೇನೆ ಯಾವುದೇ ಕೆಲಸ ಅವರ ಕ್ಷೇತ್ರಗಳಲ್ಲಿ ಸರಿಯಾಗಿ ನಡೆದಿಲ್ಲವೆಂದರೆ ೨೪ ಗಂಟೆಗಳಲ್ಲಿ ರಿಪೋರ್ಟ್‌ನ್ನು ತರಿಸುತ್ತೇನೆ. The squad has gone, investigated and the report has come to me ಏತಕ್ಕೆ ಈ ಮಾತನ್ನು ಹೇಳುತ್ತಿದ್ದೇನೆಂದರೆ ಆರ್‌ಸಿಸಿ ರೂಫನ್ನು ಎರಡು ಸಾರಿ ಕಿತ್ತುಹಾಕಿದರು. ಕೆಲವು ಸತ್ಯಾಂಶಗಳು ಇರುತ್ತವೆ, ಇಲ್ಲವೆಂದು ಹೇಳುವುದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ಒಳ್ಳೆಯವರು ಇದ್ದಾರೆ ಆದರೆ ಅವರು ಕಡಿಮೆಯಾಗುತ್ತಿದ್ದಾರೆ ಅಷ್ಟೆ ನಮ್ಮ ಸಂಕಟ.

ಶ್ರೀ ಎಚ್. ಡಿ. ದೇವೇಗೌಡ.—ಅದಕ್ಕೆ ನಾವೂ ನೀವೂ ಕಾರಣ. ಇದನ್ನು ಓದಿದ್ದೀರಾ ? (ಆಂಗ್ಲ ವಾರ್ತಾಪತ್ರಿಕೆಯನ್ನು ತೋರಿಸಿದರು) The political system in this country in four decades. ಸುಮ್ಮನೆ ಯಾವನದೋ ಒಬ್ಬನ ಕತೆಯನ್ನು ಹೇಳಿದರೆ...

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಪ್ರಪಂಚನೇ ಹಾಗೆ.

ಶ್ರೀ ಎಚ್. ಡಿ. ದೇವೇಗೌಡ.—ಅದನ್ನು ಹೇಳಿ. ಅದನ್ನು ಸಾಮಾನ್ಯವಾಗಿ ಹೇಳುವುದುಬೇಡ. ಬೇಸಿಸ್‌ವೈಸ್ ಎಕ್ಸ್‌ಪೆಂಡೀಚರ್ ಕೊಡುತ್ತೇನೆ. This is how the political system has denigrated and we, the politicians who have destroyed the political system are responsible for all this.

ಇನ್ನು ಅಪ್ಪರ್ ತುಂಗ, ಅಪ್ಪರ್ ಭದ್ರ ಬಗ್ಗೆ ಶ್ರೀಮತಿ ಸಾವಿತ್ರಿಗುಂಡಿಯವರು ಕೇಳುತ್ತಿದ್ದಾರೆ. ನೀವು ನಮ್ಮನ್ನು ಮರೆತುಬಿಟ್ಟಿದ್ದೀರಿ ಧಾರವಾಡದ ಜನಗಳಿಗೆ ಅನುಕೂಲ ಮಾಡುವುದು ಬೇಡವೆ ಎಂದು ಕೇಳುತ್ತಿದ್ದಾರೆ. I have issued instructions to the officers. Within three months the investigation of both Upper Bhadra Upper Tunga

must be completed and with full facts. ರಿಪೋರ್ಟ್‌ನ್ನು ಸಬ್‌ಮಿಟ್ ಮಾಡಬೇಕೆಂದು ಹೇಳಿದ್ದೇನೆ. Total water resources utilisation ಅದರ ಬಗ್ಗೆ ಒಂದು ಕಮಿಟಿಯನ್ನು ಮಾಡಿದ್ದೇವೆ. ವಾಟರ್ ರಿಸೋರ್ಸಸ್ ಕಂಡುಹಿಡಿಯಲಿಕ್ಕೆ ಕಮಿಟಿಯನ್ನು ಮಾಡಿದ್ದೇವೆ. ಮಾನ್ಯ ಬಾಬುರೆಡ್ಡಿ ತುಂಗಳ್‌ರವರು ಸ್ಯಾಂಕ್ಷನ್ ಅಚ್ಚುಕಟ್ಟು ಎಷ್ಟೋ ಇದೆ ಆದರೆ ೩೦ ಎಕರೆ ಇರಿಗೇಷನ್ ಆಗುತ್ತಿದೆಯೆಂದು ಹೇಳಿದರು; ಅದು ನಿಜ. ಅವರು ಹೇಳುವುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಅದನ್ನು ಯಾವಾಗ ಮಾಡಿದ್ದಾರೆ? ನಿರ್ಮಲ ಇಂಜಿನಿಯರಿಂಗ್‌ನವರಿಗೆ ಕೊಟ್ಟಿದ್ದೇವೆ ಎನ್ನುವುದನ್ನು ಒಪ್ಪಿಕೊಳ್ಳುವುದಾರೆ ಏನು ಮಾಡಲಿ ಅಲ್ಲಿ ೨೬ ಸಾವಿರ ಇದ್ದರೆ ೨೫ ಸಾವಿರ ಎಂದು ಹೇಳುವುದಕ್ಕಾಗುತ್ತದೆಯೇ? What can I do? How can I penalise the officers who have already gone to heaven? ಅವರು ಹಾಗೆ ಆಗಿದ್ದಾರೆ. ಅದಕ್ಕೆ ನಾನೇನು ಮಾಡಲಿ? ತಮಗೆ ಗೊತ್ತಿರತಕ್ಕ ವಿಷಯ. ಅದನ್ನು ಸರಿಪಡಿಸಲಿಕ್ಕೆ ಪ್ರಯತ್ನ ಮಾಡೋಣ. ಅದಕ್ಕಿಂತ ಮುಂದೆ ಹೋಗಬೇಕಾದ ಅಗತ್ಯವಿಲ್ಲ. ಅದಕ್ಕೋಸ್ಕರ ವಾಟರ್ ರಿಸೋರ್ಸಸ್ ಏನಿದೆ ಅದನ್ನು ಕಂಡುಹಿಡಿಯಲಿಕ್ಕೆ ಅಂಗಡಿಯವರ ನೇತೃತ್ವದಲ್ಲಿ ಒಂದು ಸಮಿತಿಯನ್ನು ನೇಮಕ ಮಾಡಿದ್ದೇವೆ. ಅವರು ನಾವು ಕುಳಿತು ತೀರ್ಮಾನ ಮಾಡುತ್ತೇವೆ. ಅಪ್ಪರ್ ತುಂಗ ಅಪ್ಪರ್ ಭದ್ರದ ಬಗ್ಗೆ ಏನು ಚಾಲನೆ ಕೊಡಬೇಕೆಂದು ಮಾನ್ಯ ನಿಜಲಿಂಗಪ್ಪನವರು ಹಲವಾರು ಸಾರಿ ಹೇಳಿದ್ದಾರೆ. ಅವರ ಫೀಲಿಂಗ್ಸ್‌ನ್ನು ಅರ್ಥಮಾಡಿಕೊಳ್ಳಬೇಕು, ಡಬ್ಲ್ಯೂಆರ್‌ಡಿಒ ಇಲಾಖೆ ಅತ್ಯಂತ ಚುರುಕಾಗಿ ಕೆಲಸ ಮಾಡುತ್ತಿದೆಯಲ್ಲದೆ ಅವರು ಪ್ರಾಮಾಣಿಕ ಪ್ರಯತ್ನವನ್ನು ಮಾಡುತ್ತಿದ್ದಾರೆಂದು ಹೇಳುತ್ತೇನೆ. ನಮ್ಮ ಬೊಮ್ಮಾಯಿಯವರು ಯಾವಾಗಲೂ ಮಲಪ್ರಭದ ಬಗ್ಗೆ ಹೇಳುತ್ತಿರುತ್ತಾರೆ. ಅಲ್ಲಿಯ ನೀರನ್ನು ಕಡ್ಡಾಯವಾಗಿ ಬನಹಟ್ಟಿಯ ಬದ್ರಿಕತ್ರಾಳ್ ಲಿಫ್ಟ್ ಇರಿಗೇಷನ್ ಕೊಡಬೇಕೆಂದು ಕೇಳುತ್ತಿದ್ದಾರೆ. ಇವತ್ತು ನೀರು ಬೇಕೆಂದು ಎಲ್ಲರೂ ಕೇಳುತ್ತಿದ್ದಾರೆ. ಒಂದು ಕಾಲದಲ್ಲಿ ನೀರು ಬೇಡವೆಂದು ಹೇಳುತ್ತಿದ್ದರು. ಇವತ್ತು ಎಲ್ಲರೂ ಕೂಡ ನೀರು ಬೇಕೆಂದು ಕೇಳುತ್ತಿದ್ದಾರೆ. ಕರಿಮಣ್ಣು ನಮಗೆ ನೀರು ಬೇಡವೆಂದು ಹಠ ಮಾಡುತ್ತಿದ್ದವರು ಇವತ್ತು ನಮಗೆ ನೀರುಬೇಕೆಂದು ಕೇಳುತ್ತಿದ್ದಾರೆ. ಮಹದಾಯಿ ನೀರನ್ನು ಡೈವರ್ಟ್ ಮಾಡಿ ಪವರ್‌ಗೆ ಕೊಡಬೇಕೆಂದು ಇದ್ದು, ಈಗ ಅದರ ನೀರನ್ನು ಒಟ್ಟು ೧೦ ಟಿಎಂಸಿಯಷ್ಟನ್ನು ಮಲಪ್ರಭಾಕ್ಕೆ ತೆಗೆದುಕೊಂಡು ಜನರಿಗೆ ಅನುಕೂಲ ಮಾಡಬೇಕೆಂದು ಹೇಳಿ ಇವತ್ತು ಅದಕ್ಕೆ ೨೫ ಲಕ್ಷ ರೂಪಾಯಿ ಖರ್ಚು ಮಾಡುವುದಕ್ಕೆ ಬಡ್ಜೆಟ್‌ನಲ್ಲಿ ಪ್ರಾವಿಜನ್ ಮಾಡಿಕೊಂಡಿದ್ದೇವೆ. I am trying my best within my limits and I must compliment the Chief Minister and the entire cabinet for this decision. ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ಅದು ನನ್ನೊಬ್ಬನ ತೀರ್ಮಾನ ಅಲ್ಲ, ಅವರೆಲ್ಲರೂ ಸಹಕಾರ ಕೊಟ್ಟರೆ ಆಗಬಹುದು. ಸ್ವಾಮಿ, ನೀರಾವರಿಯ ಬಗ್ಗೆ ಇನ್ನೊಂದು ಮಾತನ್ನು ಹೇಳಿ ಮುಗಿಸುತ್ತೇನೆ. ಭದ್ರಾ ವಿಷಯದ ಬಗ್ಗೆ ಮಾನ್ಯ ಮಲ್ಲಪ್ಪನವರು ಹೇಳುತ್ತಿದ್ದರು...

ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್.—ಹಿಪ್ಪರಗಿ ಬಗ್ಗೆ ಹೇಳಬೇಕು?

ಶ್ರೀ ಎಚ್. ಡಿ ದೇವೇಗೌಡ.—ಹಿಪ್ಪರಗಿಗೆ ಎಷ್ಟು ಹಣವನ್ನು ಕೊಟ್ಟಿದ್ದೇವೆ ಎನ್ನುವುದನ್ನು ಹೇಳಿದ್ದೇನೆ. ಸದಸ್ಯಣಿಯವರನ್ನು ಕರೆದುಕೊಂಡು ಹೋಗಿ ಗುದ್ದಲಿ ಪೂಜೆ ಮಾಡಿಸುತ್ತೇನೆ ಅಪ್ಪರ್ ಭೀಮಾ ಮತ್ತು ಹಿಪ್ಪರಗಿ ಎರಡಕ್ಕೂ ಪ್ರಾವಿಜನ್ ಮಾಡಿದ್ದೇವೆ. ಮಂಜ್ರಾದ ಬಗ್ಗೆ ಏನೂ ಹೇಳಲಿಲ್ಲ. ಇವತ್ತು ನೀರಾವರಿಯಲ್ಲಿ ಮುಂದೆ ಹೋಗುತ್ತಿದ್ದೇವೆ. ನಾನು ನನ್ನ ಕೈಲಾದಮಟ್ಟಿಗೆ ಪ್ರಯತ್ನ ಮಾಡಿದ್ದೇನೆ. ವಾಣಿವಿಲಾಸ ಸಾಗರ, ಭದ್ರಾ, ತುಂಗಭದ್ರಾ ಅವುಗಳ ಪೈಕಿ ೧೭ ಕೋಟಿ ರೂಪಾಯಿಗಳನ್ನು ಭದ್ರಾ ಯೋಜನೆಗೆ ಪಡೆದುಕೊಳ್ಳುತ್ತಿದ್ದೇವೆ. ೩೨.೮೯ ಕೋಟಿ ರೂಪಾಯಿಗಳನ್ನು ಈ ಮೂರು ಯೋಜನೆಗಳಿಗಾಗಿ ಒದಗಿಸಿ ಮಾಡ್ರನೈಸೇಷನ್ ಮಾಡಲಿಕ್ಕೆ ವ್ಯವಸ್ಥೆ ಮಾಡಲು ನಮ್ಮ ಇರಿಗೇಷನ್ ಸೆಕ್ರೆಟರಿಯವರು ಕೇಂದ್ರಕ್ಕೆ ಹೋಗಿ ಬಂದಿದ್ದಾರೆ. ೭ನೇ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ನಾವು ಆ ವರ್ಕ್‌ನ್ನು ಪ್ರಾರಂಭ ಮಾಡುತ್ತಿದ್ದೇವೆ. ವಾಣಿವಿಲಾಸ ಸಾಗರ, ಭದ್ರಾ, ತುಂಗಭದ್ರಾ ಎಲ್‌ಬಿಸಿ ಬಗ್ಗೆ ಪತ್ರಿಕೆಯಲ್ಲಿ ಬರೆದರು. ತುಂಗಭದ್ರಾ ಅಣೆಕಟ್ಟನ್ನು ಯಾವುದೋ ಕಾಲದಲ್ಲಿ ಕಟ್ಟಿದ್ದಾರೆ. ಅದಕ್ಕೆ ಕಾಲುವೆ ಹೊಡೆದು ಇನ್ನೂರು ಲೈನಿಂಗ್ ಹಾಕಲಿಕ್ಕೆ 16 ಕೋಟಿ ರೂಪಾಯಿ ಖರ್ಚು ಮಾಡಬೇಕೆಂದು ನಿರ್ಣಯ ಮಾಡಿದರೂ ಅದರ ಬಗ್ಗೆ ಈ ಸಭೆಯಲ್ಲಿ ಯಾರಾದರೊಬ್ಬರು ಮಾತನಾಡಬಾರದೆ?

೬-೦೦ ಪಿ.ಎಂ.

ಭದ್ರಾ ಆಗಲೀ, ತುಂಗಭದ್ರಾ ಆಗಲೀ ಮಾಡ್ರನೈಸೇಷನ್ ಬಗ್ಗೆ ಕ್ರಮ ತೆಗೆದುಕೊಂಡಿದ್ದೇವೆ. ನಿಮ್ಮ ಮನಸ್ಸಿನ ಕಳಕಳಿ ಏನಿದೆ ಅದನ್ನು ಅರ್ಥ ಮಾಡಿಕೊಂಡಿದ್ದೇನೆ. ಇಷ್ಟು ಹೇಳಿ, ಇನ್ನು ವಾರಾಹಿ ಪ್ರಾಜೆಕ್ಟ್. ಇದು ಸೌತ್ ಕೆನರಾದಲ್ಲಿದ್ದಂಥ ಪ್ರಾಜೆಕ್ಟ್. ಇದಕ್ಕೆ ಫೌಂಡೇಷನ್ ಹಾಕಿದೆ. ಇದರ ಬಗ್ಗೆ ಕಾಂಪ್ಲಿಕೇಷನ್ ಇದೆ. ಆದರೂ ಇದರ ಕೆಲಸ ತೆಗೆದುಕೊಳ್ಳಬೇಕೆಂಬ ಪ್ರಾಮಾಣಿಕ ಇಚ್ಛೆ ಇದೆ. ಇದರಿಂದ ಅಲ್ಲಿ ಸಕ್ಕರೆ ಕಾರ್ಖಾನೆಗೆ ಅಪಾಯ ಇದೆ. ಇದನ್ನು ಕೈಗೆತ್ತಿಕೊಳ್ಳಬೇಕೆಂದು ಇದೆ. ಇದಕ್ಕೆ ಯಾವುದೇ ರೀತಿಯ ರಾಜಕಾರಣ ಬರಕೂಡದು. ಇದರ ಕೆಲಸ ಪ್ರಾರಂಭ ಮಾಡುವುದಕ್ಕೆ ನಿರ್ಣಯ ಮಾಡುತ್ತೇನೆಂದು ಹೇಳುತ್ತೇನೆ.

ಸ್ವಾಮಿ, ನೀರಾವರಿ ಬಗ್ಗೆ ಕೊನೆಗೆ ಇಷ್ಟು ಹೇಳುವುದಕ್ಕೆ ಇಚ್ಛೆಪಡುತ್ತೇನೆ. ೨ ಕೋಟಿ ರೂಪಾಯಿ ಸೀಡ್ ಮನಿಯನ್ನು ಕೃಷ್ಣ ಬೇಸಿನ್‌ನಲ್ಲಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಇಟ್ಟಿದ್ದೇವೆ ಕಾವೇರಿ ಬೇಸಿನ್‌ನಲ್ಲಿ ಒಂದು ಕೋಟಿ ರೂಪಾಯಿ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ಗೆ ಇಟ್ಟಿದ್ದೇವೆ. The very idea is to raise resources from various financing institutions like NABARD, LIC, etc. ಕೆಲವು ಲಿಫ್ಟ್ ಇರಿಗೇಷನ್, ಈ ಬಜೆಟ್‌ನಲ್ಲಿ ಬರದೇ ಹೋದರೂ ಇಂತಹ ಸ್ಕೀಮ್‌ಗಳನ್ನು ಲಿಫ್ಟ್ ಕಾರ್ಪೊರೇಷನ್ ವ್ಯಾಪ್ತಿಯಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಇದರಬಗ್ಗೆ ಮೆರಿಟ್, ಡೀ-ಮೆರಿಟ್ ಹೇಳುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಸಾಕಷ್ಟು ಪ್ರಾವಿಷನ್ ಮಾಡಿದ್ದೇವೆ. ಇಲ್ಲಿ ಕೊನೆಯದಾಗಿ ಎಲ್ಲರಿಗೂ ಕೈಜೋಡಿಸಿಕೇಳಿಕೊಂಡು ಇದನ್ನು ವಿಶೇಷ ಕಳಕಳಿಯಿಂದ ಹೇಳುತ್ತೇನೆ. ಸಂಪನ್ಮೂಲವನ್ನು ರೂಪಿಸಿಕೊಳ್ಳುವ ದಿಕ್ಕಿನಲ್ಲಿ ತಮ್ಮೆಲ್ಲರ ಪೂರ್ಣ ಸಹಕಾರ ಬೇಕೆಂದು ಕೇಳಿಕೊಂಡು, ಇನ್ನು ಲೋಕೋಪಯೋಗಿ ಇಲಾಖೆ ಮತ್ತು ಕಟ್ಟಡ ವಿಭಾಗಕ್ಕೆ ಸಂಬಂಧಿಸಿದಂತೆ ಉತ್ತರ ಕೊಡುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.—ಬೆಂಗಳೂರು, ಚಿತ್ರದುರ್ಗ, ಕೋಲಾರಕ್ಕೆ ಏನು ಮಾಡುತ್ತೀರಿ. ಈ ಬಯಲು ಸೀಮೆಗಳಿಗೆ ಏನು ಮಾಡುತ್ತೀರಿ ಹೇಳಿ.

ಶ್ರೀ ಆರ್. ಎನ್. ನಾಯಕ್.— ಉತ್ತರ ಕನ್ನಡ ಜಿಲ್ಲೆಯಲ್ಲಿ ಲಿಫ್ಟ್ ಇರಿಗೇಷನ್ ಬಗ್ಗೆ ಏನಾದರೂ ಹೇಳಿ......

ಶ್ರೀ ಹೆಚ್. ಡಿ. ದೇವೇಗೌಡ.—ನೀವು ಹೇಳಿದಿರಿ, ರಸ್ತೆಗಳನ್ನು ಕೊಡಿ ಎಂದು, ಆದರಂತೆ ನಿಮ್ಮ ಭಾಗಕ್ಕೆ ರಸ್ತೆಗಳನ್ನು ಕೊಟ್ಟಿದ್ದೇನೆ. ಈ ಲಿಫ್ಟ್ ಇರಿಗೇಷನ್ ಬಗ್ಗೆ ಯಾವು ಯಾವುವು ಬಜೆಟ್‌ನಲ್ಲಿ ಇವೆಯೋ ಅವುಗಳಿಗೆ ತೊಂದರೆ ಇಲ್ಲ, ಯಾವುದು ಬಜೆಟ್‌ನಲ್ಲಿ ಒಂದಿಲ್ಲವೋ ಅಂತಹವುಗಳಿಗೆ ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್‌ನಿಂದ ಎರಡು ಕೋಟಿ, ಒಂದು ಕೋಟಿ ಇಟ್ಟಿದ್ದೇವೆ. ಈಗ ಎರಡು ಕೋಟಿ ಇಟ್ಟರೆ ಮುಂದೆ ಅದು ೧೦ ಕೋಟಿ ಆಗುತ್ತದೆ. ಈ ನಿಗಮವನ್ನು ರಿಜಿಸ್ಟ್ರೇಷನ್ ಮಾಡಿಸುವಾಗ ಸ್ವಲ್ಪ ತೊಂದರೆ ಇತ್ತು. ಈಗ ಆ ತೊಂದರೆಯನ್ನೂ ನಿಭಾಯಿಸಿಕೊಂಡಿದ್ದೇವೆ. ಆದ್ದರಿಂದ ಈ ವಿಚಾರದಲ್ಲಿ ಎಲ್ಲಾ ಪ್ರಯತ್ನವನ್ನೂ ಮಾಡುತ್ತೇನೆಂದು ಹೇಳುತ್ತೇನೆ. ತೇಗಂಪಲು ಕಟ್ಟೆಯ ಬಗ್ಗೆ ಶಾಣಪ್ಪನವರಿಗೆ ಹೇಳಬೇಕಾದರೆ, ನನಗೆ ಸ್ವಲ್ಪ ಜ್ಞಾಪಕಶಕ್ತಿ ಇದೆ, ನಾನು ಮರೆಯುವುದಿಲ್ಲ, ಲ್ಯಾಂಡ್ ಆರ್ಮಿಯವರು ಕಟ್ಟಿ ಒಡೆದುಹೋಯಿತು. Then without even looking into the financial code/rules, I took the decision on the spot to start work. ಹೊದಸಾರಿ ಬಜೆಟ್‌ನಲ್ಲಿ ಆದ ವಿಷಯವನ್ನು ನಾನು ಜನರಲ್ ಆಗಿ ಹೇಳುತ್ತೇನೆ. ಈಗ ಕಮ್ಯುನಿಕೇಷನ್ ಅಂಡ್ ಬಿಲ್ಡಿಂಗ್ಸ್, ರಸ್ತೆಗಳು ಈ ವಿಚಾರಕ್ಕೆ ಹೋಗುವುದಕ್ಕೆ ಮುಂಚೆ ಒಂದು ಮಾತನ್ನು ಹೇಳಬೇಕಾಗುತ್ತದೆ. ಒಂದು ಕಾಲದಲ್ಲಿ ಈ ಇಲಾಖೆ ಕೆಲವೇ ಕೆಲವು ಹಿತಾಸಕ್ತಿಗಳಿಗೆ ಅವಕಾಶ ಕೊಟ್ಟಿದೆ ಎನ್ನುವುದು ಇದೆ. ಇನ್ನೊಂದು ಏನು ಇದರಲ್ಲಿ ಎಂದರೆ This department is there only to safeguard the vested interests. ಹೆಸರು ತೆಗೆದು ಮಾತನಾಡುವುದಕ್ಕೆ ಹೋಗುವುದಿಲ್ಲ. ಅದೆಲ್ಲಾ ಈ ಸದನದಲ್ಲಿ ಚರ್ಚೆಯಾಗಿದೆ. ನೀರಾವರಿ ಬಗ್ಗೆ ಮಾತನಾಡಿದರೆ, ಯಾರ ಜಮೀನು ಒಂದು ಯೋಜನೆಯ ಕೆಳಗೆ ಮುಳುಗಡೆಯಾಗುತ್ತದೆ, ಅದನ್ನು ನೋಡಿ, ಇದು ಬೇಡ ಬಿಟ್ಟು ಬಿಡಿ ಎಂದು ಹೇಳತಕ್ಕದ್ದು ಆಗಿದೆ. ಅದು ಈ ಸದನದ ಪ್ರೊಸೀಡಿಂಗ್ಸ್‌ನಲ್ಲಿ ಇದೆ. ಅದನ್ನು ನಾನು ಹೀಯಾಳಿಸುವುದಕ್ಕೆ ಹೋಗುವುದಿಲ್ಲ. ನಾನು ಬಂದ ತಕ್ಷಣ, ಒಂದೊಂದು ಸಲ ಏನಾಗುತ್ತದೆ

ಎಂದರೆ, ಯಾವುದೇ ಒಂದು ನಿರ್ಣಯ ನಾನು ಮಾಡಿದರೂ ಅದನ್ನು ನಾವು ನೋಡುವುದೆಲ್ಲಾ ಜಾತೀಯ ಆ್ಯಂಗಲ್‌ನಿಂದ. It is a bane in Karnataka politics. ಇದು ದುರ್ದೈವ. ಮೊದಲು ನಾನು ರೆಕ್ರೂಟ್‌ಮೆಂಟ್ ಕಮಿಟಿ ಕಾನ್‌ಸ್ಟಿಟ್ಯೂಟ್ ಮಾಡಿದಾಗ, ಅದರಲ್ಲಿ ಒಬ್ಬ ಮುಸ್ಲಿಂ ಒಬ್ಬ ಕುರುಬ, ಒಬ್ಬ ಟ್ಯಾಪರ್, ಒಬ್ಬ ಎಸ್.ಸಿ. ಹಾಕಿದ್ದೇನೆ. ೨ನೇ ಸಾರಿ ಮಾಡಿದಾಗ ಒಂದು ಟ್ಯಾಪರ್, ಒಂದು ಮುಸ್ಲಿಂ, ಒಂದು ಎಸ್.ಸಿ. ಹಾಕಿದ್ದೇನೆ. ಅವರು ಈಗ ಪಾರ್ಲಿಮೆಂಟ್ ಮೆಂಬರ್ ಆಗಿ ಹೋದರು. ಅವರು ಒಬ್ಬರು ಅಗಸರು. ಅಗಸರು ಬ್ಯಾಕ್‌ವರ್ಡ್ ತಾನೇ. ಒಕ್ಕಲಿಗರು ಅಲ್ಲ, ಅದು ಬೇರೆ. ಥರ್ಡ್ ಟೈಮ್ ಮಾಡಿದಾಗ ಒಂದು ಕುರುಬ, ಒಂದು ಗೊಲ್ಲ, ಒಂದು ಎಸ್.ಸಿ. ಒಂದು ಲಿಂಗಾಯತ್ ಮತ್ತು ಒಂದು ಮುಸ್ಲಿಂ ಹಾಕಿದೆ. ನನ್ನ ಕಮ್ಯೂನಿಟಿಯವರನ್ನು ಯಾರನ್ನೂ ಹಾಕಲಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.—ಅಲ್ಲೂ ಕರಪ್ಷನ್ ಇದೆ,

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ನಿಮಿಷ, ನೀವು ಕರಪ್ಷನ್ ಬಗ್ಗೆ ಹೇಳಿದರಲ್ಲ, ಅದರ ಬಗ್ಗೆ ನಾನು ವಿವರ ತಂದಿದ್ದೇನೆ. ನೀವು ಕರಪ್ಷನ್ ಎಂದು ಹೇಳಿದಿರಿ. ನಾನು ಬರುವಾಗ ವಿವರಗಳನ್ನು ತಂದಿದ್ದೇನೆ. ಒಬ್ಬರು ಒಂದು ಅರ್ಜಿ ಬರೆದರು. ನಮ್ಮ ಮುಖ್ಯಮಂತ್ರಿಗಳು ಬಹಳ ಸೆನ್ಸಿಟೀವ್. ವಾಚಕರ ವಾಣಿಯಲ್ಲಿ ಒಂದು ಪತ್ರ ಬಂದರೂ ಅದರ ಬಗ್ಗೆ ನೋಟ್ ಹಾಕಿ ಕಳುಹಿಸಿಬಿಡುತ್ತಾರೆ. ಶಾಂತರಾಜ್ ಎಂಬುವವರು ಒಬ್ಬರು ಅರ್ಜಿ ಬರೆದರು. ಮುಖ್ಯಮಂತ್ರಿಗಳು ಅದರ ಮೇಲೆ ಆರ್ಡರ್ ಮಾಡಿದರು. ಅವರು ಆರ್ಡರ್ ಅಂದರೆ ಆರ್ಡರ್ ಮಾಡಲಿಲ್ಲ, ನೋಟ್ ಹಾಕಿ, ಇದರ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಮಾಡಿ ಎಂದು ನೋಟ್ ಹಾಕಿ ಕಳುಹಿಸಿದರು. ಸಿ.ಒ.ಡಿ. ಎನ್‌ಕ್ವೈರಿ ಮಾಡಿ ಎಂದು ನೋಟ್ ಹಾಕಿ ಇನಿಷಿಯಲ್ಸ್ ಹಾಕಿದ್ದಾರೆ. ಅದನ್ನು ಓದುತ್ತೇನೆ. ಅವರು ಬಹಳ ಗೀಚಿ ಬರೆದು ಬಿಟ್ಟಿದ್ದಾರೆ. ನಾನು ಒದ್ದಾಟ ಮಾಡಿ ಅದನ್ನು ತರ್ಜುಮೆ ಮಾಡಿಸಿದೆ. ಅವರ ಕಾಗದ ಓದುವುದು ಕಷ್ಟವಾಗುತ್ತದೆ, ಇದನ್ನು ಟೈಪ್ ಮಾಡಿ ತೋರಿಸಿ ಎಂದು ಹೇಳಿದೆ. ಅದನ್ನು ಓದುತ್ತೇನೆ.

> "The Recruitment Committee which has been constituted recently with seven members for the selection of Assistant Engineers is most useless and worthless. First of all the non-official members are quite ignorant of technical knowledge and unfit to be members of such recruitment committee besides corruptive bandicoats, pucca rogues..."

ಸ್ವಾಮಿ, ನಾವು ಅವರಿಗೆ ಒಂದು ಪತ್ರ ಬರೆದೆವು. ನಿಮ್ಮ ಹತ್ತಿರ ಯಾವುದಾದರೊಂದು ದೂರು ಯಾರ ಮೇಲಾದರೂ ಇದ್ದರೆ ಕೊಡಿ ಎಂದು. ನಾನು ಇಲ್ಲಿ ಯಾರ ಪರವಾಗಿಯೂ ವಕೀಲಿ ಮಾಡಬೇಕಾಗಿಲ್ಲ. ಇಂತಹ ದೂರುಗಳು ಬಂದಾಗ ಅವು ನಿಜವಿರಬಹುದು. ನಿಜವಿಲ್ಲದೆ ಇರಬಹುದು, ಆದರೆ ಆ ವ್ಯಕ್ತಿ ಆ ವಿಳಾಸದಲ್ಲಿ ಇಲ್ಲ ಇನ್ನು ನಾವು ಯಾರಿಗೆ ಕಳುಹಿಸಿಕೊಡಬೇಕು ಸ್ವಾಮಿ? ಈ ಬಗ್ಗೆ ಸಿ.ಒ.ಡಿ. ಎನ್‌ಕ್ವೈರಿ ಮಾಡಿ ಎಂದು ಹೇಳಿದೆವು. ನಮ್ಮ ಅಧಿಕಾರಿಗಳು ಒಂದೊಂದು ಸಾರಿ ತುಂಬಾ ಹೋಗುತ್ತಾರೆ. ಇಲ್ಲಿ ನಾನು ಒಂದು ಮಾತನ್ನು ಹೇಳುತ್ತೇನೆ. ನನ್ನ ಹತ್ತಿರವೇ ಒಂದು ನೋಟೀಸ್ ಬಂತು. ಆ ಬಗ್ಗೆ ನಾನು ಇಲ್ಲಿ ವಕೀಲಿ ಮಾಡಬೇಕಾಗಿಲ್ಲ. ಯಾರನ್ನೂ ರಕ್ಷಣೆ ಮಾಡಬೇಕಾಗಿಲ್ಲ ಯಾವುದನ್ನೂ ಮುಚ್ಚಿಡತಕ್ಕಂಥ ಪ್ರಶ್ನೆಯೇ ಇಲ್ಲ. ಯಾವುದಾದರೊಂದು ವಿಷಯಕ್ಕೆ ಸಂಬಂಧಪಟ್ಟ ಹಾಗೆ ಆಯಾ ಕ್ಷೇತ್ರದ ಎಂ.ಎಲ್.ಎ. ಆಗಿ ಒಂದು ಪತ್ರ ಕೊಡಬಾರದೇನು? ಇಲ್ಲ, ದೂರವಾಣಿ ಮುಖಾಂತರ ಹೇಳಬಾರದೇನು? ಸ್ವಾಮಿ ನಾನು ಈ ಸದನಕ್ಕೆ ಕಾಲಿಟ್ಟು ಸುಮಾರು ೨೬ ವರ್ಷಗಳಾದವು. ಯಾರೂ ಸಹ ಆ ರೀತಿ ಮಾಡದೆ ಇರುವುದಕ್ಕೆ ಸಾಧ್ಯವಾಗುವುದಿಲ್ಲ. ನಾವು ಅಷ್ಟು ಮಾಡದಿದ್ದರೆ ಜನ ನಮ್ಮನ್ನು ಹೊಡೆಯುತ್ತಾರೆ ಮಂತ್ರಿಗಳಾಗಿರುವವರು ಸಹ ಕೆ.ಪಿ.ಎಸ್.ಸಿ. ಮೆಂಬರ್ಸ್‌ಗೆ ಹೇಳುತ್ತಾರೆ. ಆಗುವುದು ಹೋಗುವುದು ಅದು ಬೇರೆ ವಿಷಯ. I am not prepared to safeguard anybody's interest. I don't want to become a hypocrite. Why they should suspect the bonafides of the elected representatives? If they have got any specific charges let them give. Let

them make specific charges against the Chairman or members. I am prepared to refer them even to the CBI. I am not bothered. But you cannot generalise that. Even now, if there are any specific charges against the members or against the chairman or against MLAs or anybody, let them make. ಮೊನ್ನೆ ನಾನು ತುಮಕೂರಿಗೆ ಹೋಗಿದ್ದೆ, ಆಗ ಒಬ್ಬ ಮಹಾರಾಷ್ಟ್ರದ ಹುಡುಗ ಒಂದು ಮೂರು ಕಾಸಿನ ಇನ್‌ಲ್ಯಾಂಡಿನ ಲೆಟರ್‌ನಲ್ಲಿ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆ ಮಹಾರಾಷ್ಟ್ರದವರಿಗೆ ಒಂದು ಪತ್ರ ಬರೆದಿದ್ದರು ಅದನ್ನು ನಮ್ಮ ಕಾರ್ಯದರ್ಶಿ ಲೋಕೋಪಯೋಗಿ ಇಲಾಖೆಗೆ ಕಳುಹಿಸಿದ್ದಾರೆ. ಅದರಲ್ಲಿ ಏನು ಇದೆ ಎಂದರೆ ದಿನಗೂಲಿ ನೌಕರರನ್ನಾಗಿ ಕೆಲಸಕ್ಕೆ ತೆಗೆದುಕೊಳ್ಳಬೇಕಾದರೆ ನೀವು ಒಂದು ಸಾವಿರ ರೂಪಾಯಿಗಳನ್ನು ತೆಗೆದುಕೊಂಡು ಕೆಲಸ ಕೊಡುತ್ತೀರಂತೆ ಹೌದಾ ಎಂದು. The Secretary PWD' Maharashtra has handed ever that letter to my Secretary when I went to the Irrigation Ministers' Conference. I need not spare anybody. If anybody wants to make a specific allegation let him make. ಎಂ.ಎಲ್‌.ಎ.ಗಳು ಮತ್ತು ಮಂತ್ರಿಗಳು ಯಾರಿಗಾದರೂ ಶಿಫಾರಸ್ ಮಾಡಿ ಒಂದು ಪತ್ರ ಕೊಟ್ಟರೆಂದು ಅದನ್ನು ಸಹ ಎನ್‌ಕ್ವೈರಿ ಮಾಡಿ ಎಂದು ಹೇಳುವುದಾದರೆ......

I can became an IAS officer if I mind. but an IAS or IPS officer cannot become an MLA or Minister unless he has got some Godfathers. ಯಾರ್ಯಾರನ್ನೋ ಡೆಲ್ಲಿಯಲ್ಲಿ ಕುಳಿತುಕೊಂಡು ನಾಮಿನೇಟ್ ಮಾಡುವುದಕ್ಕಾಗುವುದಿಲ್ಲ. ಸ್ವಾಮಿ ನಾನು ೧೯೬೨ನೇ ಇಸವಿಯಿಂದ ಎಂ.ಎಲ್‌.ಎ. ಆಗಿ ಬರುತ್ತಿದ್ದೇನೆ ಹಿಂದಿನ ಕಾಂಗ್ರೆಸ್ ನಾಯಕರು ಏನೊಂದು ತತ್ವವನ್ನು ಇಟ್ಟುಕೊಂಡಿದ್ದರೋ ಅದನ್ನು ನಾವೆಲ್ಲಾ ಒಪ್ಪಿಕೊಂಡು ಬಂದಿದ್ದೇವೆ. ನಾನು ಎಂ.ಎಲ್‌ ಎ. ಆಗಿ ಬಂದಾಗ ಒಬ್ಬ ಬಸ್ ಕಂಡೆಕ್ಟರ್ ಸಸ್‌ಪೆಂಡ್ ಆಗಿ ನನ್ನ ಹತ್ತಿರ ಬಂದ ನಾನು ಆಗ ಅವನನ್ನು ಗೆಟ್ ಔಟ್ ಎಂದು ಹೇಳಿ ಕಳುಹಿಸಿದ್ದೇನೆ.

ಶ್ರೀ ಎಂ ರಾಮಪ್ಪ.— ಐ.ಎಸ್‌.ಎಸ್‌. ಆಫೀಸರ್‌ಗಳು ಹೇಳುತ್ತಾರೆ, ಮಿನಿಸ್ಟರ್‌ಗಳು ಹಾಕೋದು ಮಿನಿಟ್ ಆಗುತ್ತದೆಯೋ ಹೊರತು it is not an order. ನಾವು ಮಾಡಿದ್ದೆ ಆರ್ಡರ್ ಎಂದು ಹೇಳಿದ್ದಾರೆ.

ಶ್ರೀ ಹೆಚ್‌. ಡಿ. ದೇವೇಗೌಡ.— ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಜನತಂತ್ರ ವ್ಯವಸ್ಥೆಯಲ್ಲಿ ಮಿನಿಸ್ಟರ್‌ಗಳು ಎಕ್ಸಿಕ್ಯೂಟಿವ್ ಹೆಡ್‌. He is answerable · to this House and he is answerable to the people, but not to that officer. That is my philosophy. ಅದನ್ನು ನಾನು ಒಪ್ಪಿಕೊಳ್ಳುತ್ತೇನೆ. ಕೆಲವು ಅಧಿಕಾರಿಗಳಿಗೆ ಆ ಮನೋಭಾವನೆ ಇದೆ. ಅದನ್ನೇ ಸರಿಪಡಿಸಬೇಕೆಂದು ಜನತಾ ಸರ್ಕಾರ ಸಾಕಷ್ಟು ಕ್ರಮಗಳನ್ನು ತೆಗೆದುಕೊಂಡಿದೆ. ಸಾಕಷ್ಟು ಜನೋಪಯೋಗಿ ಕೆಲಸಗಳನ್ನು ಮಾಡಿದ್ದೇವೆ. ಬಡವರಿಗೆ ಅನುಕೂಲಗಳನ್ನು ಮಾಡಿಕೊಟ್ಟಿದ್ದೇವೆ. The Janata Government alone can bring these Officer on the proper track.

ಶ್ರೀ ಎಂ. ರಾಮಪ್ಪ.— ಪ್ರಾಸ್ಕ ಎಂ.ಪಿ ಪ್ರಕಾಶ್‌ರವರು ಮಂತ್ರಿಗಳಿದ್ದಾಗ ಅವರ ಅನುಭವಕ್ಕೆ ಅಧಿಕಾರಿಗಳ ವರ್ತನೆಯು ಬಗ್ಗೆ ಬಂದಿದೆ. ಅದಕ್ಕೆ ಹೇಳಿದೆ.

ಶ್ರೀ ಆರ್‌.ಎನ್‌.ನಾಯಕ್‌.— ಇಲ್ಲಿ ಏನಾದರೂ ಹೇಳಿದರೆ ಚಪ್ಪಾಳೆ ಹೊಡೆತೀರಿ, ಅಲ್ಲಿ ಆಫೀಸರ್‌ಗಳ ಮುಂದೆ ಕೈಕಟ್ಟಿ ಕುಳಿತುಕೊಳ್ಳುತ್ತೀರಿ.

(ಗೊಂದಲ)

ಶ್ರೀ ವೈಕೆ. ರಾಮಯ್ಯ.— ಅವರಿಗೆ ಸರಿಯಾಗಿ ಮಾತನಾಡುವುದಕ್ಕೆ ಹೇಳಿ. ಯಾರು ನಿಮಗೆ ಮಾತನಾಡುವುದನ್ನು ಕಲಿಸಿದ್ದು?

(ಗೊಂದಲ)

ಶ್ರೀ ಸಿ. ಬೈರೇಗೌಡ.— ** ಇರಬೇಕಾದವರು ಇಲ್ಲಿ ಬಂದು ಕುಳಿತಿದ್ದಾರೆ,

(ಗೊಂದಲ)

SRI H.D. DEVEGOWDA.— It is not a issue. ಸುಮ್ಮನೆ ಕುಳಿತುಕೊಳ್ಳಿ.

(ಗೊಂದಲ)

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.— ನಿಮ್ಮ ಬಾಯಲ್ಲಿ ಏನೋ ಹೇಳಿದರಲ್ಲಾ ಅದನ್ನು ಮತ್ತೆ ಹೇಳಿ ನೋಡೋಣ. (ಬೈರೇಗೌಡರನ್ನು ಉದ್ದೇಶಿಸಿ).

ಶ್ರೀ ಸಿ. ಬೈರೇಗೌಡ.— **ಇರಬೇಕಾದವರು ಇಲ್ಲಿ ಬಂದು ಕುಳಿತಿದ್ದಾರೆ ಎಂದು ಹೇಳಿದೆ.

(ಗೊಂದಲ)

ಶ್ರೀ ಆರ್. ವೆಂಕಟರಾಮಯ್ಯ.— ಆ ಮಾತನ್ನು ವಾಪಸ್ ತೆಗೆದುಕೊಳ್ಳಬೇಕು.

(ಗೊಂದಲ)

ಅಧ್ಯಕ್ಷರು.— It will not go on record, ಎಲ್ಲರೂ ಕೂಡ್ರಿ. ರಾಮಯ್ಯನವರೇ ತಾವೂ ಕೂಡ್ರಿ.

ಶ್ರೀ ಆರ್ ವೆಂಕಟರಾಮಯ್ಯ.— **ಯಾರು ಇರಬೇಕಾದವರು ?

(ಗೊಂದಲ)

ಶ್ರೀಮತಿ ನಾಗರತ್ನಮ್ಮ.— ಹಿಂದೆ ಮಿನಿಸ್ಟರ್ ಆಗಿದ್ದವರು ಈ ಮಾತನ್ನು ಆಡುವುದಾ ? ಅವರನ್ನೇ ಇಡಬೇಕು.

ಶ್ರೀ ಸಿ. ಬೈರೇಗೌಡ.— ಆಫೀಸರ್ ಮುಂದೆ ಕೈಕಟ್ಟಿ ನಿಲ್ಲುವುದಕ್ಕೆ ನಾವು ಇಲ್ಲಿ ಬಂದಿಲ್ಲ.

ಶ್ರೀ ಆರ್. ವೆಂಕಟರಾಮಯ್ಯ.— ಮಾನ್ಯ ದೇವೇಗೌಡರು ಅಧಿಕಾರಿಗಳ ಬಗ್ಗೆ ಹೇಳಿದ್ದರು. ಅದನ್ನು ರಾಮಯ್ಯನವರು ಸಪೋರ್ಟ್ ಮಾಡಿದರು ಅಷ್ಟೆ. ಅದನ್ನು ಅರ್ಥ ಮಾಡಿಕೊಂಡು ಮಾತ ನಾಡಬೇಕು.

(ಗೊಂದಲ)

ಅಧ್ಯಕ್ಷರು.— ತಾವು ಎಲ್ಲರೂ ಕೂಡ್ರಿ.

ಶ್ರೀ ಹೆಚ್. ಡಿ. ದೇವೇಗೌಡ.— ಸ್ವಾಮಿ, ನಮ್ಮ ದೇಶದಲ್ಲಿ ಜನತಂತ್ರ ವ್ಯವಸ್ಥೆಯಿಂದ ನಾವು ಅಧಃಪತನಕ್ಕೆ ಹೋಗುತ್ತಿದ್ದೇವೆ. ಅದರ ಬಗ್ಗೆ ಉದಾಹರಣೆ ಕೊಟ್ಟು ಮುಂದಕ್ಕೆ ಹೋಗುತ್ತೇನೆ. ೧೯೬೭ನೇ ಇಸವಿಯಲ್ಲಿ ಒಬ್ಬ ಬಸ್ ಕಂಡಕ್ಟರ್ ನನ್ನ ಹತ್ತಿರ ಬಂದು ಸಹಾಯ ಮಾಡಬೇಕೆಂದು ಕೇಳಿ ಕೊಂಡಿದ್ದ. ನಾನು Iam sorry ನಾನು ಅದರಲ್ಲಿ ಇಂಟರ್‌ಫಿಯರ್ ಆಗುವುದಿಲ್ಲವೆಂದು ಹೇಳಿದ್ದೆ. ಅದಾದ ನಾಲ್ಕೈದು ತಿಂಗಳ ಮೇಲೆ, ನಾನು ಬೆಂಗಳೂರಿಗೆ ಬರಬೇಕಾಗಿತ್ತು, ಹೊಳೇನರಸೀಪುರದಿಂದ ಬೆಂಗಳೂರಿಗೆ ಬರಬೇಕಾದರೆ ಚೆನ್ನರಾಯಪಟ್ಟಣಕ್ಕೆ ಬಂದು ಬಸ್ ಹತ್ತಬೇಕಾಗುತ್ತಿತ್ತು. ಚೆನ್ನರಾಯ ಪಟ್ಟಣದಲ್ಲಿ ಬಸ್ ಹತ್ತುವುದಕ್ಕೆ ನಾನು ಹೋದಾಗ, ಅದೇ ಕಂಡಕ್ಟರ್ ನನ್ನ ಎದೆಗೆ ಕೈಹಾಕಿ ಆಚೆ ನೂಕಿ ನಿಮಗೆ ಸೀಟ್ ಇಲ್ಲವೆಂದು ಹೇಳಿದ. ಇಂಥದ್ದನ್ನು ನಮ್ಮ ಲೈಫ್‌ನಲ್ಲಿ ಅನುಭವಿಸಿಕೊಂಡು ಬಂದಿದ್ದೇವೆ. ಇವತ್ತು ಯಾವುದೇ ವಿಷಯ ಬಂದರೂ ನಾವು ಜನರ ಒಪ್ಪಿಗೆಗೋಸ್ಕರವಾಗಿ ಹಲವಾರು ವಿಷಯಗಳಲ್ಲಿ ಮನಸ್ಸಿಗೆ ಸಮಾಧಾನ ಇಲ್ಲದೆ ಇರತಕ್ಕಂಥ ಕೆಲಸ ಮಾಡುತ್ತೇವೆ. ಇದು ಕೇವಲ ಒಬ್ಬರಿಗೆ ಅನ್ವಯ ವಾಗುವ ಪ್ರಶ್ನೆಯಲ್ಲ. ನಾವು ಹಲವಾರು ಬಾರಿ ನಮ್ಮ ಮನಸ್ಸಿಗೆ ಸಮಾಧಾನ ಇಲ್ಲದಿರತಕ್ಕಂಥ ಕೆಲಸ ವನ್ನು ಮಾಡುತ್ತೇವೆ. ಇದು ಕೇವಲ ಒಬ್ಬರಿಗೆ ಅನ್ವಯವಾಗುವಂತಹ ಪ್ರಶ್ನೆಯಲ್ಲ. ಅಧಿಕಾರ ಮಾಡುವುದು ಬಹಳ ಕಷ್ಟ ಇದೆ. ಇಂಥ ಕಾಲದಲ್ಲಿ ತಾತ್ಕಾಲಿಕವಾಗಿ ಮನಸ್ಸಿಗೆ ಸಮಾಧಾನ ಆಗಬೇಕು, ಇಲ್ಲದಿದ್ದರೆ ಹಾಳಾಗಿ ಹೋಗಲಿ ಎಂದು ಸುಮ್ಮನೆ ಇರಬೇಕು. We are not prepared to educate them. This is what is going on today. ಅದಕ್ಕೋಸ್ಕರವಾಗಿ ಇವೊತ್ತು,

** Expunged as ordered by the Chair.

ಯಾವ ಯಾವ, ಎಂ.ಎಲ್.ಎ.ಗಳು ಕಾಗದ ಬರೆದಿದ್ದಾರೆ, ಯಾವ ಯಾವ ಮಂತ್ರಿಗಳು ಫೋನ್ ಮಾಡಿದ್ದಾರೆ ಅದನ್ನೆಲ್ಲಾ ಕೇಳಿದಾಗ, I said 'I am sorry'. I only say on this issue, anybody can give camplaint, let them give real complaints ನಾವು ಈ ಸದನದಲ್ಲಿ ಯಾರಾದರೂ ಹೇಳಿದರೆ, ಸಿ.ಬಿ.ಐ.ಗೆ ರೆಫರ್ ಮಾಡಿ, but there must be some sanctits for it. ಇಷ್ಟನ್ನು ಈ ಸಂದರ್ಭದಲ್ಲಿ ಹೇಳುತ್ತೇನೆ.

ಇನ್ನು ಮೈನರ್ ಇರಿಗೇಶನ್ ವಿಚಾರದಲ್ಲಿ ೫೦೦ ಎಕರೆಗಿಂತ ಮೇಲಿನದನ್ನೆಲ್ಲಾ ನಾವು ಇಟ್ಟುಕೊಳ್ಳುತ್ತೇವೆ, ಉಳಿದವುಗಳನ್ನು ಜಿಲ್ಲಾಪರಿಷತ್ತಿನವರಿಗೆ ಕೊಟ್ಟಿದ್ದೇವೆ.

ಶ್ರೀ ಸಿ ಬೈರೇಗೌಡ.—ಅಧ್ಯಕ್ಷರೇ, ನಮ್ಮ ಕಡೆ ಇರತಕ್ಕಂಥ ಬಾವಿಗಳು, ನಮ್ಮ ಕಡೆ ಇರತಕ್ಕಂಥ ಪಂಪ್‌ಸೆಟ್‌ಗಳು, ಭೂಮಿ ಎಲ್ಲವನ್ನೂ ನಾವು ಸರಕಾರಕ್ಕೆ ಕೊಟ್ಟುಬಿಡುತ್ತೇವೆ. ನೀವು ಇರಿಗೇಶನ್ ಇರುವ ಕಡೆಗಳಲ್ಲಿ ವಾಟರ್ ರೇಟ್ ತೆಗೆದುಕೊಳ್ಳುತ್ತಿದ್ದೀರಲ್ಲ, ಅದನ್ನು ಕೂಡ ನಾವು ಕೊಡುವುದಕ್ಕೆ ತಯಾರಾಗಿದ್ದೇವೆ. ನಮಗೂ ಕೂಡ ನಮ್ಮ ಪ್ರದೇಶದಲ್ಲಿ ಅದೇ ರೀತಿಯಲ್ಲಿ ನೀರು ಸರಬರಾಜು ವ್ಯವಸ್ಥೆ ಮಾಡಿ.

ಶ್ರೀ ಹೆಚ್. ಡಿ. ದೇವೇಗೌಡ.—— ನಮ್ಮ ಕೈಯಲ್ಲಿ ಏನು ಶಕ್ತಿ ಇದೆಯೋ ಅದನ್ನು ಪ್ರಯತ್ನ ಪೂರ್ವಕವಾಗಿ ಉಪಯೋಗಿಸಿ, ಅಪ್ಪರ್ ಭದ್ರಾದಿಂದ ಕೋಲಾರಕ್ಕೆ ನೀರು ತರಬೇಕೆಂಬ ಬಗ್ಗೆ ಯೋಜನೆಯನ್ನು ಕೊಡುವುದಕ್ಕೆ ಸರ್ವ ಪ್ರಯತ್ನಗಳನ್ನು ಮಾಡುತ್ತೇನೆ. Today water is not a problem the problem is of resources. ಇವೊತ್ತು ಮಹಾನದಿ ಡೈವರ್ಶನ್ ಮಾಡಿದರೆ ನಮಗೆ ೧೫ ಟಿ. ಎಂ. ಸಿ. ನೀರು ಬರುತ್ತದೆ. ಹಾಗೆಯೇ, ಕೃಷ್ಣಬೇಸಿನ್, ಕಾವೇರಿ ಬೇಸಿನ್, ಇವುಗಳನ್ನು ಕೂಡ ಮಾಡಬಹುದು. ಇಲ್ಲಿರುವುದು ಪ್ರಶ್ನೆ ಅದಲ್ಲ. ಪ್ರಶ್ನೆ ಇರುವುದು ಹಣದ ಬಗ್ಗೆ. ಇದೆಲ್ಲದಕ್ಕೆ ಎಲ್ಲರೂ ನನ್ನ ಕುತ್ತಿಗೆ ಹಿಡಿಯುವುದರಿಂದ ಏನು ಪ್ರಯೋಜನ ? ತಪ್ಪುಗಳನ್ನು ಯಾರ್ಯಾರು ಮಾಡಿದ್ದಾರೆ ಎಂದು ಹೇಳಿದರೆ ಮನಸ್ಸಿಗೆ ನೋವು ಉಂಟಾಗುತ್ತದೆ. This is the past legacy Now resources is the fundamental issue here. ಇಷ್ಟನ್ನೇ ಕುರಿತು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಆರ್. ವೆಂಕಟರಾಮಯ್ಯ.— ಇರುವ ರಿವರ್ ಬೆಡ್ಸ್‌ನ್ನು ರಿಪೇರಿ ಮಾಡಿಸಿ, ದೂಳು ತೆಗೆಸಬೇಕಾದಲ್ಲಿ ಅದನ್ನು ಮಾಡಿಸಿ,...

ಅಧ್ಯಕ್ಷರು.— ನಿಮಗೆ ಕ್ಲಾರಿಫಿಕೇಶನ್ ಕೇಳುವುದಕ್ಕೆ ಅವಕಾಶ ಕೊಡುತ್ತೇನೆ. ಆಗ ಮಾತನಾಡಿ. ಹೀಗೆ ಸ್ವಲ್ಪ ಅವಕಾಶ ಸಿಕ್ಕಾಗ ಅದನ್ನು ದುರುಪಯೋಗ ಮಾಡಿಕೊಳ್ಳಬೇಡಿ.

ಶ್ರೀ ಎಚ್. ಡಿ. ದೇವೇಗೌಡ.—— ನಾನು ಈಗ ಕಮ್ಯೂನಿಕೇಶನ್ ಬಗ್ಗೆ ಸ್ವಲ್ಪ ಮಾತನಾಡಿ ೧೫ ನಿಮಿಷಗಳಲ್ಲಿ ಮುಗಿಸುತ್ತೇನೆ. ನ್ಯಾಷನಲ್ ಹೈವೇ ಬಗ್ಗೆ ಮಾನ್ಯ ಹುಬ್ಬಳ್ಳಿ ಸ್ನೇಹಿತರು ಮಾತನಾಡಿದರು. ಬೈಪಾಸ್ ರಸ್ತೆಗೆ ನ್ಯಾಶನಲ್ ಹೈವೇನಲ್ಲಿ ೧೭೫ ಕೋಟಿ ರೂಪಾಯಿಗಳು ಸ್ಯಾಂಕ್ಷನ್ ಆಗಿ ಬಂದಿದೆ. ಕೆಲಸ ತೆಗೆದುಕೊಳ್ಳುತ್ತೇವೆ. ಮೊನ್ನೆ ಅಲ್ಲಿಗೆ ಹೋಗಿ ಕುಳಿತುಕೊಂಡು ಪ್ರಯತ್ನ ಮಾಡಿ I am happy to inform the House that we have got sanctiored 177 lakhs of rupees ಕೆಲಸವನ್ನು ತೀವ್ರವಾಗಿ ಪ್ರಾರಂಭಿಸುತ್ತೇವೆ.

ಶ್ರೀ ಎಂ ರಾಮಪ್ಪ.—— ಅಧ್ಯಕ್ಷರೇ...

ಅಧ್ಯಕ್ಷರು.— ಇಲ್ಲ ತಾವು ಕುಳಿತುಕೊಳ್ಳಿ. ಮಂತ್ರಿಯವರು ಉತ್ತರವನ್ನು ಮುಗಿಸಲಿ......

ಶ್ರೀ ಎಂ. ರಾಮಪ್ಪ.—— ನಾವು ಏನಾದರೂ ಮಾತನಾಡಲಿಕ್ಕೆ ಹೊರಟರೆ, ನಿಮಗೆ ಅದು ತಮಾಶೆಯಾಗಿ ಅನ್ನಿಸುತ್ತದೋ ?...

ಅಧ್ಯಕ್ಷರು.—— ಹೀಗೆ ಉತ್ತರಿಸುವ ಕಾಲದಲ್ಲಿ ಮಧ್ಯೆ ಪ್ರವೇಶ ಮಾಡಬಾರದು. ನಿಮಗೆ ಒಂದಲ್ಲ ಹತ್ತಾರು ಸಾರಿ ಅವಕಾಶವನ್ನು ಕೊಟ್ಟಿದ್ದೇನೆ. ಮಂತ್ರಿಯವರು ಉತ್ತರ ಕೊಡುವ ಸಂದರ್ಭದಲ್ಲಿ ಮಾತನಾಡತಕ್ಕದ್ದಲ್ಲ. ಕ್ಲಾರಿಫಿಕೇಶನ್ ಕಾಲದಲ್ಲಿ ನಿಮ್ಮ ಸಮಸ್ಯೆಗಳನ್ನು ಕೇಳಿಕೊಳ್ಳಿ.

SRI H. D. DEVEGOWDA.—These are certain works taken up and I will read for the information of members.

Construction of a bridge across Krishna River near Manjra–176 lakhs of rupees ;

Construction of a tank near Thorly–Rs. 58 lakhs ;

Construction of a bridge near Hagari bommanahalli near Bellary–Rs. 224 lakhs,

Construction of bridge near Bhima river near Agarkhed–Rs. 120 lakhs. etc., etc.

There are so many works, if I read all these things, it takes time. If any hon. Members require it I will pass on it. ಈಗ ಏನು ಕ್ಲಿಯರೆನ್ಸ್ ಆಗಿವೆ ಅವನ್ನು ಮಾತ್ರ ಹೇಳುತ್ತಿದ್ದೇನೆ. ಆಮೇಲೆ ನಾಲ್ಕು ಲೈನ್ ನೆಲಮಂಗಲದವರೆಗೆ ಇದ್ದ ಪ್ರಪೋಸಲ್ ಕ್ಲಿಯರೆನ್ಸ್ ಆಗಿದ್ದು ಅದನ್ನು ಜೂನ್‌ನಲ್ಲಿ ಮಾಡಿ ಮುಗಿಸುತ್ತೇವೆ. ಇನ್ನೊಂದು ವಿಷಯ. The road between Chitradurga and Bijapur has been cleared by the Centre with the assistance of the world Bank. ಈ ರಸ್ತೆಯನ್ನು ತೆಗೆದುಕೊಳ್ಳಬೇಕೆಂದು ಈಗಾಗಲೇ ಕೇಂದ್ರ ಸಮ್ಮತಿ ಕೊಟ್ಟಿದೆ. This year the performance of the National Highway is good and I want to complement the officers for their good work.

ಶ್ರೀ ಎನ್. ಗುರುಪಾದಪ್ಪ.—ನಮ್ಮ ಕಡೆಯಿಂದು ಒಂದಿತ್ತು ಸ್ವಾಮಿ.

ಶ್ರೀ ಎಚ್. ಡಿ. ದೇವೇಗೌಡ.—ಅದರ ಬಗ್ಗೆ ಕೂಡ ಸಾಕಷ್ಟು ಸರ್ಕಾರ ಪ್ರಯತ್ನ ನಡೆಸಿದೆ. ಕ್ಲಿಯರೆನ್ಸ್ ಸಿಕ್ಕಬಹುದೆಂದು ಆಸೆ ಇಟ್ಟುಕೊಂಡಿದ್ದೇವೆ. ಮತ್ತೊಂದು ವಿಷಯ ಹೇಳಬೇಕಾಗುತ್ತದೆ. ಪಿಎಸಿ. ರಿಪೋರ್ಟ್‌ನಲ್ಲಿ ಸೆಟ್ರಲ್ ಮೆಕಾನಿಕಲ್ ಆರ್ಗನೈಜೇಷನ್‌ದು ವರದಿಯಾಗಿತ್ತು. ಈ ಸಲ ಅತ್ಯಂತ ಉತ್ತಮವಾದ ಕೆಲಸವನ್ನು ಆ ಸಂಸ್ಥೆ ಮಾಡಿದೆ. ನಮ್ಮ ರಾಜ್ಯದ ನೀರಾವರಿ ಲೋಕೋಪಯೋಗಿ ಇಲಾಖೆಗಳ ಎಲ್ಲಾ ವಿಧವಾದ ಮೆಷಿನರಿಗಳ ಪ್ರತಿ ವೆಹಿಕಲ್‌ಗಳ ಮಾಹಿತಿ ಇಟ್ಟು ಅದನ್ನು ಇನ್ವೆಂಟರಿ ಮಾಡಿ ಸರ್ಕಾರದಿಂದ ಸೋರುತ್ತಿದ್ದ ರೆವಿನ್ಯೂ ಉಳಿಸುವ ಅತ್ಯುತ್ತಮ ಕೆಲಸವನ್ನು ಆ ಸಂಸ್ಥೆ ಮಾಡಿದೆ. ಅಲ್ಲಿನ ಸ್ಥಿತಿ ಹೇಗಿತ್ತು ಎಂದರೆ ಯಾರೂ ಅಲ್ಲಿಗೆ ಹೋಗುತ್ತಿರಲಿಲ್ಲ. ಈಗ ಚೆನ್ನಾಗಿ ಕೆಲಸವಾಗಿದೆ.

ಇನ್ನು ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಬಗ್ಗೆ ಶ್ರೀ ಖರ್ಗೆಯವರು ಮಾತನಾಡಿದರು. ಈ ಬಗ್ಗೆ ಒಂದು ಮಾತನ್ನು ಹೇಳುತ್ತೇನೆ. ಈ ಕಾರ್ಪೊರೇಷನ್ನನ್ನು ಮಾಡಬೇಕೆಂದು ಹೇಳಿದ್ದು ನಾನೇ ಇವತ್ತು ಅದರ ಪರವಾಗಿ ಮಾತನಾಡಲು ನಿಂತಿರುವವನೂ ನಾನೇ. ೧೯೭೨ರಲ್ಲಿ ನಾನು ಬಂದಾಗ ಒಂದು ದೂರು ಇತ್ತು. ಈ ದೇಶದಲ್ಲಿ 'it is contractos' raj' ಎಂಬುದು ದೊಡ್ಡ ಸ್ಲೋಗನ್ ಆಗಿತ್ತು. To break the monopoly of contractors we have decided to have the construction Corporation. Let there be a Government agency, to break the monopoly of contractors and not with the intention of profit making. With that intention they have formed the Construction Corporation. ಇದನ್ನು ಒಂದು ಏಜೆನ್ಸಿಯಾಗಿ ಮಾಡಬೇಕೆಂದು ಹೇಳಿದೆ. ಆಗ ವೀರೇಂದ್ರ ಪಾಟೀಲರು ಪಿಡಬ್ಲ್ಯುಡಿ, ಮಿನಿಸ್ಟ್ರಾಗಿದ್ದರು. ಅಂತೂ ಸ್ಥಾಪಿತವಾಯಿತು. ಯಾವ ಉದ್ದೇಶದಿಂದ ಅದನ್ನು ಸ್ಥಾಪಿಸಿದರೋ ಆ ಉದ್ದೇಶವಂತೂ ಅಲ್ಲಿ ಈಡೇರುತ್ತಿರಲಿಲ್ಲ. ಐಎಎಸ್. ಆಫೀಸರ್ಸ್ ಹಾಕಿದರೆ ಸರಿಹೋಗುತ್ತದೆಂದರು ಸರಿ, ಐಎಎಸ್‌ಗಳನ್ನೇ ಹಾಕಿದರು, ಆದರೂ ಸರಿ ಆಗಲಿಲ್ಲ. ನಾನ್ ಅಫಿಶಿಯಲ್ ಛೇರ್ಮನ್ ಹಾಕಿ ಎಂದರು, ಅವರನ್ನೂ ಹಾಕಿದರು. ದುರದೃಷ್ಟವಶಾತ್ ಆಗಲೂ ಸಂಸ್ಥೆ ಮೇಲೇಳಲಿಲ್ಲ. ಅದಕ್ಕೆ ನಾನಾ ಕಾರಣಗಳಿದ್ದುವು.

ಸರಿಯಾಗಿ ಕೆಲಸ ನಡೆಯಲಿಲ್ಲ. ನಾನು ಬಂದ ಮೇಲೆ ಒಬ್ಬ ಚೀಫ್ ಇಂಜಿನಿಯರನ್ನೇ ಹಾಕಿದ್ದಕ್ಕೆ ಅವರು ನಮಗೆ ಬೇಕೆಂದೇ ಅನ್‌ವಾಂಟೆಡ್ ಪ್ಲೇಸ್‌ಗೆ ಹಾಕಿದರು ಎಂದು ಹೇಳಿದರು. ಯಾರನ್ನು ಕೇಳಿದರೂ ನಮಗೆ ಬೇಡ ನಮಗೆ ಬೇಡ ಎನ್ನುತ್ತಿದ್ದರು. ಪಾಟೀಲ್‌ರನ್ನು ಶಿವಲಿಂಗಯ್ಯನವರನ್ನು ಹಾಕಿದಾಗ ಅವರೂ ಬೇಡ ಬೇಡ ಎಂದು ಹಿಂದಕ್ಕೆ ಬಂದರು. ಕೊನೆಗೆ I called one officer, he is Superintending Engineer, I told him, 'you take the responsiblity'. Then after his coming over, he performed well and the Corporation has made profits. ಪ್ರಾರಂಭದಿಂದ ಲಾಸಾಗಿತ್ತು ಎಂದು ಹೇಳುತ್ತಿದ್ದೀರಿ ನೀವು. ಹಾಗೆಯೇ ಈ ವರ್ಷ ೩೦-೪೦ ಲಕ್ಷ ಪ್ರಾಫಿಟ್ ಮಾಡಿದೆ ಎಂಬುದನ್ನು ನಾನೂ ಹೇಳ ಬೇಕಲ್ಲವೇ ?

೬-೩೦ ಪಿ. ಯಂ.

೧೯೮೩—೮೪ ರಲ್ಲಿ ಚೀಫ್ ಇಂಜಿನಿಯರ್ ಯಾರೂ ಅಲ್ಲಿ ಕೆಲಸ ಮಾಡುವುದಕ್ಕೆ ಹೋಗಲಿಲ್ಲ. ನಮಗೆ ಬೇರೆ ಕಡೆ ಕೊಡಿ ಎಂದು ಹೇಳುವುದಕ್ಕೆ ಪ್ರಾರಂಭ ಮಾಡಿದರು ಅವರ ಹೆಸರನ್ನೆಲ್ಲಾ ಇಲ್ಲಿ ಹೇಳುತ್ತಾ ಹೋಗುವುದಿಲ್ಲ. ಅವರು ಒಳ್ಳೆಯ ಕೆಲಸವನ್ನು ಮಾಡಿದ್ದಾರೆ ಮೈಸೂರು ರಂಗ ಮಂದಿರ ವನ್ನು ಕಟ್ಟಿದ್ದಾರೆ. My sincere endeavour is to see that organisation should grow. ಅದನ್ನು ಡೆಸ್ಟ್ರಾಯ್ ಮಾಡಬೇಕೆಂದು ಇಷ್ಟವಿಲ್ಲ. ಮಧ್ಯ ಪ್ರದೇಶದಲ್ಲಿ ಕನ್‌ಸ್ಟ್ರಕ್ಷನ್ ಕಾರ್ಪೊರೇಷನ್ ಮಾಡಿದ್ದಾರೆ, ಗ್ಲೋಬಲ್ ಕಂಟ್ರಾಕ್ಟ್ಸ್ ಸಹ ತೆಗೆದುಕೊಂಡಿದ್ದಾರೆ. ಶಿಶುವಿನಲ್ಲೇ ಕುತ್ತಿಗೆ ಹಿಸುಕುವುದಕ್ಕೆ ಪ್ರಯತ್ನ ಮಾಡಿದರು. ಅಷ್ಟೇ ಏಕೆ ನಮ್ಮ ಹೊಸಕೋಟೆಯ ಹತ್ತಿರ ಹೋಗಬೇಕಾದರೆ ಬ್ರಿಕ್ ಪ್ಲಾಂಟ್ ಇದೆ. ಅದು ಮಾನ್ಯ ವೆಂಕಟರಾಮಯ್ಯನವರಿಗೂ ಗೊತ್ತಿರಬಹುದು. ಅದು ಹುಟ್ಟಿದಾಗಲಾಯಿತ್ತು ಲಾಸ್‌ನಲ್ಲಿ ಇದೆ, ಇವತ್ತು ಅದರಲ್ಲಿ ಲಾಭ ಮಾಡಿ ಕೊಟ್ಟಿದ್ದಾರೆ. ಆ ಚೀಫ್ ಇಂಜಿನಿಯರ್‌ಗೆ ಒಂದು ಒಳ್ಳೆಯ ಮಾತನ್ನು ಹೇಳಬೇಕಾಗುತ್ತದೆ. ಇವತ್ತು ಲಾಭ ಮಾಡಿ ತೋರಿಸಿಕೊಟ್ಟಿದ್ದಾರೆ, ಇದರಲ್ಲಿ ಅವರು ಪ್ರಾಮಾಣಿಕ ಪ್ರಯತ್ನವನ್ನು ಕೂಡ ಮಾಡಿದಾರೆ.

ಶ್ರೀ ಎಸ್. ಕೆ ಕಾಂತ. — ಗುಲ್ಬರ್ಗ ಕಾಂಪ್ಲೆಕ್ಸ್ ಅನ್ನು ಕನ್‌ಸ್ಟ್ರಕ್ಷನ್ ಮಾಡಿಸುವುದಕ್ಕೆ .....

ಶ್ರೀ ಹೆಚ್. ಡಿ. ದೇವೇಗೌಡ. — ೮೦ ಪರ್ಸೆಂಟ್ ನಮ್ಮ ಹಳ್ಳಿಯ ಅಣ್ಣ ತಮ್ಮಂದಿರಿಗೆ ಸಂಬಂಧಪಟ್ಟ ವಿಷಯ. ಜನತಾ ಸರಕಾರದ ಪ್ರೋಗ್ರೆಸ್ ಇಲ್ಲ. ಫಿಸಿಕಲ್ ಪೊಟೆನ್‌ಷಿಯಲ್ ಇಲ್ಲ ವೆಂದು ಹೇಳಿದರು. But, the report says that an outlay of Rs. 50 crores likely to be spent on this programme' ಸೇತುವೆಗಳನ್ನು ಕಟ್ಟಿರುವುದನ್ನು ಹೇಳುತ್ತಾ ಹೋದರೆ ಬಹಳ ಸಮಯ ಹಿಡಿಯುತ್ತದೆ. ೧೯೮೦—೮೧ ರಲ್ಲಿ ೧೩೨೩ ಸಿ. ಡಿ. ವರ್ಕ್ಸ್ ಕಂಪ್ಲೀಟ್ ಆಗಿದೆ. ೧೯೮೧—೮೨ ರಲ್ಲಿ ೯೯೨, ೧೯೮೨—೮೩ ರಲ್ಲಿ ೧೯೨, ೧೯೮೩—೮೪ ರಲ್ಲಿ ೨೧೨೦, ೧೯೮೪—೮೫ ರಲ್ಲಿ ೩೭೧೨, ಸೇತುವೆಗಳು, ಸೇತು ಬಂಧನ ಎಲ್ಲಾ ಸೇರಿ ಒಟ್ಟು ೧೯೮೫—೮೬ ರಲ್ಲಿ ಕಂಪ್ಲೀಟ್ ಆಗಿರುವುದು ೪೧೪೬. ನಿಮ್ಮ ಜಿಲ್ಲೆಯಲ್ಲೂ ಕೂಡ ಸೇತು ಬಂಧನ ಕಾರ್ಯಕ್ರಮ ತೆಗೆದುಕೊಂಡಿದೆ. ಎಲ್ಲಾ ಜಿಲ್ಲೆಗೂ ಒಂದೇ ತರಹ ಕೆಲಸ ಮಾಡಿಕೊಟ್ಟಿದ್ದೇನೆ. Length of road formation ೧೯೮೩—೮೪ ರಲ್ಲಿ ೨೮೩೩, ೧೯೮೪—೮೫ ರಲ್ಲಿ ೪೪೮೩, ೧೯೮೫—೮೬ ರಲ್ಲಿ ೪೪೮೬ ಕಿಲೋಮೀಟರ್ ಜನತಾ ಸರ್ಕಾರ ಬಂದ ಮೇಲೆ ೧೬.೦೮೮ ಕಿಲೋ ಮೀಟರ್ ರಸ್ತೆಗೆ ಡಾಂಬರ್ ಹಾಕಿದ್ದೇವೆ. ೧೯೮೩—೮೪ ರಲ್ಲಿ ೧೪೮೯, ೧೯೮೪—೮೫ ರಲ್ಲಿ ೧೪೭೭. ೧೯೮೫—೮೬ ರಲ್ಲಿ ೧೪೪೬, ೧೯೮೬—೮೭ ರಲ್ಲಿ ೧೨೫೮ ಕಿಲೋ ಮೀಟರ್ ರಸ್ತೆಗೆ ಟಾರ್ ಹಾಕಿಸಿದ್ದೇವೆ ಯಾವುದನ್ನೂ ಮಿಕ್ಸ್ ಮಾಡಬೇಕಾಗಿಲ್ಲ, ಹಳ್ಳಿಗಳಿಗೆ ರಸ್ತೆಗಳನ್ನು ಮಾಡುವ ಯೋಜನೆ ಬಂದಿದ್ದು ಈಚೆಗೆ ೧೯೮೩—೮೪ ರಲ್ಲಿ ೧೨೬ ಕಿಲೋ ಮೀಟರ್ ಮಾಡಿದ್ದೇವೆ. ೧೯೮೪—೮೫ ರಲ್ಲಿ ೧೫೫, ೧೯೮೫—೮೬ ರಲ್ಲಿ ೧೧೧. ೧೯೮೬—೮೭ ರಲ್ಲಿ ೮೦ ಕಿಲೋ ಮೀಟರ್. ಹೆಚ್ಚಿನ ವಿಲೇಜ್‌ಗಳನ್ನು ಕವರ್ ಮಾಡಿದ್ದೇವೆಂದು ಮೊದಲೇ ಹೇಳಿದ್ದೇನೆ. ೧೯೮೫—೮೬ ರಲ್ಲಿ ೧೧೧ ಹಳ್ಳಿಗಳಲ್ಲಿ ೨೪೯ ಕಿ.ಮೀ.

ಮೀಟರ್ ರಸ್ತೆಗಳನ್ನು ಮಾಡಿದ್ದೇವೆ. ೧೯೮೬–೮೭ ರಲ್ಲಿ ೨೦೨ ಕಿಲೋ ಮೀಟರ್ ರಸ್ತೆ ಮಾಡಿದ್ದೇವೆ ಮಿನಿಮಮ್ ನೀಡ್ಸ್ ಬಗ್ಗೆ ಕೇಳಿದ್ದೀರಿ. ಆ ಸ್ಕೀಮ್ ಪ್ರಾರಂಭವಾದದ್ದು ೧೯೭೪–೭೫ ರಲ್ಲಿ. ಅಲ್ಲಿಂದ ನಾವು ಬರುವವರೆಗೆ ೩೭೮ ಹಳ್ಳಿಗಳಲ್ಲಿ ಮಾಡಿದ್ದೇವೆ. ನಾವು ಮೂರು ವರ್ಷಗಳಲ್ಲಿ ಅಂದರೆ ೮೩–೮೪, ೮೪–೮೫, ೮೫–೮೬ ರಲ್ಲಿ ೩೨೪ ಹಳ್ಳಿಗಳಲ್ಲಿ ಮಾಡಿದ್ದೇವೆ. Under Minimum needs programme we have covered 324 villages so far. ಆಮೇಲೆ ಮತ್ತೊಂದು ಸ್ಕೀಮನ್ನು ಅನೌನ್ಸ್ ಮಾಡಿದ್ದೇವೆ. ಆಸ್‌ಫಾಲ್ಟ್ ಹಾಕುವ ಬಗ್ಗೆ ಒಂದು ಸಾವಿರ ಕಿಲೋಮೀಟರ್ ಹಳ್ಳಿಗಳಿಗೆ ಮಾಡಬೇಕು ಎಂದು ಮಾಡಿದ್ದೇವೆ. ಶಾಲೆಗೆ ಹೋಗುವ ಮಕ್ಕಳು ದಾರಿಯಲ್ಲಿ ಹೋಗುವಾಗ ಧೂಳು ಕುಡಿಯಬೇಕಾಗುತ್ತದೆ ಮತ್ತು ಬಸ್ಸಿನಲ್ಲಿ ಹೋಗುವಾಗ ಧೂಳು ಒಳಗೆ ಹೋಗಿ ಆ ಧೂಳನ್ನು ಕುಡಿಯಬೇಕಾಗುತ್ತದೆ. ಆ ದೃಷ್ಟಿಯಿಂದ ಒಂದು ಸಾವಿರ ಕಿಲೋ ಮೀಟರ್‌ಗೆ ಮಾಡಿದ್ದೇವೆ. ಒಟ್ಟು ೮೭೫ ಹಳ್ಳಿಗಳಲ್ಲಿ ಈ ಕೆಲಸ ಮಾಡಬೇಕೆಂದು ಮಾಡಿದ್ದೇವೆ. ಎಲ್ಲಾ ಜಿಲ್ಲೆಗಳಲ್ಲೂ ಕೂಡಾ ಮಾಡಬೇಕೆಂದು ಮಾಡಿದ್ದೇವೆ. I will furnish villagewise and talukawise figures. ನಾಳೆಯೇ ಅದರ ಬಗ್ಗೆ ಲಿಸ್ಟನ್ನು ತರಿಸಿಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ತಮಗೆ ಕೇಳಿದ್ದು ಏನೆಂದರೆ......

ಅಧ್ಯಕ್ಷರು.— ಕ್ಲಾರಿಫಿಕೇಷನ್‌ಗೆ ಅವಕಾಶ ಕೊಡುತ್ತೇನೆ, ಎಲ್ಲರಿಗೂ ಕೊಡುತ್ತೇನೆ, ನಿಮಗೂ ಕೊಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅವರಿಗೆ ಕೇಳಿದ್ದು ಏನೆಂದರೆ......

ಅಧ್ಯಕ್ಷರು.— ಯಾರಾದರೂ ಒಬ್ಬರು ಇಂಟರ್‌ಫಿಯರ್ ಮಾಡಿದರೆ ಅಡ್ಡಿ ಇಲ್ಲ. ಈ ರೀತಿ ಎಲ್ಲರೂ ಕೇಳಿದರೆ ಅವರು ಉತ್ತರ ಹೇಳಬೇಕೋ ಬೇಡವೋ ?

SRI H. D. DEVEGOWDA.— A New scheme has been introduced this year and the approval has been accorded to take asphalting 875 villages at a totalcost of Rs. 5 crores.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಾನು ಕೇಳಿದ್ದು ಏನು ಎಂದರೆ ಇದು ಸ್ವಲ್ಪ ಡಿಸ್‌ಪ್ಯಾರಿಟಿ ಆಗಿದೆ, ಇದರಲ್ಲಿ ಮೂರು ನಾಲ್ಕು ಹಳ್ಳಿ ಹೆದ್ದಾರಿ, ಸೇತುಬಂಧನ, ಪೀಪಲ್ಸ್ ಕಾಂಟ್ರಿಬ್ಯೂಷನ್, ರೋಡ್ ಆಸ್‌ಫಾಲ್ಟಿಂಗ್, ಸಾವಿರ ಹಳ್ಳಿಗಳು ಇವುಗಳ ಬಗ್ಗೆ ತಾವು ಹೇಳಿಲ್ಲ. ಇದರ ಬಗ್ಗೆ ಹೇಳಬೇಕು. ಇದರ ಬಗ್ಗೆ ತಾವು ಬೇಕಾದರೆ ಡಿಸ್ಟ್ರಿಕ್ ವೈಸ್, ಕಾನ್‌ಸ್ಟಿಟ್ಯೂಯೆನ್ಸಿವೈಸ್ ಹೇಳಿ, ನಾನು ಒಪ್ಪಿಕೊಳ್ಳುತ್ತೇನೆ.

SRI. H D. DEVEGOWDA.— I do not want to suppress that information. I will furnish that information. ಪೀಪಲ್ ಪಾರ್ಟಿಸಿಪೇಷನ್ ಪ್ರೋಗ್ರಾಮ್ ಇದೆಯಲ್ಲ, ಇದರ ಜನಕರು ಶ್ರೀಮಾನ್ ಜೀವಿಜಯ ಅವರು. ಅವರ ಕ್ಷೇತ್ರಕ್ಕೆ ಕರೆದುಕೊಂಡು ಹೋದರು. ಕೊಡಗಿನ ಜನರು ಪ್ಯಾಂಟ್ ಹಾಕಿಕೊಂಡು, ತಲೆಗೆ ಟೋಪಿ ತರಹ ಹಾಕಿಕೊಂಡು, ತುಪಾಕಿಯನ್ನು ಹೊತ್ತುಕೊಂಡು ಗುಂಡು ಹಾರಿಸಿದರು. ಅಲ್ಲಿ ಹೋಗಿ ನಾನು ನೋಡಿದಾಗ ಇಡೀ ಎಂಟು ಜನ ಆ ಹಳ್ಳಿಯ ಜನ ಹತ್ತು ಕಿಲೋ ಮೀಟರ್ ರೋಡನ್ನು ಫಾರ್ಮೇಷನ್ ಮಾಡುತ್ತಿದ್ದರು. ನಾನು ಹೇಳಿದೆ. ಮಣ್ಣು ಕೆಲಸ ನೀವು ಮಾಡಿದರೆ ೭೫ ಪರ್‌ಸೆಂಟ್ ನಾವು ಕೊಡುತ್ತೇವೆ ಎಂದು ಹೇಳಿದೆ. ನನ್ನ ತಲೆಗೆ ಬಂದಿದ್ದು ಆಗ ಈ ಸ್ಕೀಮ್ ಆಸ್‌ಫಾಲ್ಟಿಂಗ್ ಸ್ಕೀಮ್. ಅದಕ್ಕಾಗಿಯೇ ಈ ಸ್ಕೀಮನ್ನು ಇಂಟ್ರಡ್ಯೂಸ್ ಮಾಡಬೇಕು ಎಂದು ಮಾಡಿದೆವು. We have done it to give priority to such programmes.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ೧೧೨ ಲಕ್ಷ ರೂಪಾಯಿ ಖರ್ಚು ಮಾಡಿದಿರಲ್ಲಾ...

ಶ್ರೀ ಹೆಚ್. ಡಿ. ದೇವೇಗೌಡ.— ನೀವೂ ಮಾಡುತ್ತೇವೆ ಎಂದು ಹೇಳಿದರೆ ನಿಮಗೂ ಕೊಡುತ್ತೇವೆ.

ಶ್ರೀ ಎಂ. ರಾಮಪ್ಪ.— ಅಧ್ಯಕ್ಷರೇ......

ಅಧ್ಯಕ್ಷರು.— ಉತ್ತರ ಹೇಳಿದ ಮೇಲೆ ಕ್ಲಾರಿಫಿಕೇಷನ್ ಕೇಳಬೇಕು, ಇದು ಇರುವ ಪದ್ಧತಿ.

ಶ್ರೀ ಹೆಚ್. ಡಿ. ದೇವೇಗೌಡ. — ಸೋಮವಾರಪೇಟೆ ತಾಲ್ಲೂಕಿನಿಂದ ಪ್ರಾರಂಭವಾಗಿ ಕುಂದಾಪುರ, ಬೇಲೂರು, ಚಿಕ್ಕಮಗಳೂರು, ಬೆಳಗಾಂ, ಜಮಖಂಡಿ, ಯಲ್ಲಾಪುರ, ಕುಂದಗೋಳ, ಸಿರಸಿ, ಯಾದಗೀರ್, ಹೊಸದುರ್ಗ, ಸಕಲೇಶಪುರ, ಸಿದ್ಧಾಪುರ, ಬಿಳಿಕಲ್ಲು, ಕಡಗಿ, ಮುಂತಾದ ಒಟ್ಟು ೨೭ ರಸ್ತೆಗಳನ್ನು ಅಪ್ರೂವ್ ಮಾಡಿದ್ದೇವೆ. ಬೇಕಾದರೆ ನಿಮಗೆ ಆ ಲಿಸ್ಟನ್ನು ಕಳುಹಿಸಿಕೊಡುತ್ತೇನೆ. ೨೫ ಪರ್ಸೆಂಟ್ ಅವರೇ ಕೆಲಸ ಮಾಡಬೇಕು ಹಾಗೇ ಇದ್ದರೆ ನೀವು ಬರೆದು ಕಳುಹಿಸಿಕೊಡಿ ನಾನು ಆ ಸ್ಕೀಂನಲ್ಲಿ ಹಾಕಿಕೊಳ್ಳುತ್ತೇನೆ. ಸೌತ್‌ಕೆನರಾ, ಚಿಕ್ಕಮಗಳೂರು, ಕೂರ್ಗ್, ಬಿಜಾಪುರದಲ್ಲೂ ಇದೆ. ಮಾನ್ಯ ಖರ್ಗೆಯವರ ಮನಸ್ಸಿನಲ್ಲಿ ಹೈದ್ರಾಬಾದ್ ಕರ್ನಾಟಕವನ್ನು ನೆಗ್ಲೆಕ್ಟ್ ಮಾಡಿದ್ದಾರೆ ಎನ್ನುವ ಭಾವನೆ ಅವರಿಗೆ ಒಂದೊಂದು ಸಾರಿ ಬರುತ್ತದೆ. ನಾನು ೧೯೮೦ ರಿಂದ ೮೩ರ ವರೆಗೆ ಮೂರು ವರ್ಷದಲ್ಲಿ ಎಷ್ಟು ಖರ್ಚು ಮಾಡಿದ್ದೇವೆ ಅನ್ನುವುದನ್ನು ತಮ್ಮ ಮುಂದೆ ಇಡುತ್ತೇನೆ. ನಾನು ಈ ೪ನೇ ವರ್ಷದ್ದು ತೆಗೆದುಕೊಂಡಿಲ್ಲ. ನಾವು ಅಧಿಕಾರಕ್ಕೆ ಬಂದಮೇಲೆ ೩ ವರ್ಷದಲ್ಲಿ ೩೮೧೮ ಲಕ್ಷ ರೂಪಾಯಿಂಗಳನ್ನು ಖರ್ಚ ಮಾಡಿದ್ದೇವೆ. ಬಾಂಬೆ ಕರ್ನಾಟಕ ಏರಿಯಾಕ್ಕೆ ೨೬೦೪ ಲಕ್ಷ ರೂಪಾಯಿ ಯೋಜನೆಗೆ ೩೫೧೮ ಲಕ್ಷ ರೂಪಾಯಿ ಖರ್ಚ ಮಾಡಿದ್ದೇವೆ. ಹಾಗೆಯೇ ಹೈದ್ರಾಬಾದ್ ಕರ್ನಾಟಕಕ್ಕೆ ೨೦೯೫ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ನಾವು ೧೯೮೩ರಿಂದ ೮೭ರ ಮಾರ್ಚ್ ಆಖೈರ್‌ವರೆಗೆ ೩೦೯೯ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ ಇನ್ನು ಓಲ್ಡ್ ಮೈಸೂರು ಜಿಲ್ಲೆಯಲ್ಲಿ ೮ ಜಿಲ್ಲೆಗೆ ೫೦೨೩ ಲಕ್ಷ ರೂಪಾಯಿಗೆ ೭೫೩೩ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಹಾಗೆಯೇ ದಕ್ಷಿಣ ಕನ್ನಡ ಜಿಲ್ಲೆಗೆ ೮೩೩ ಲಕ್ಷ ರೂಪಾಯಿಗೆ ೧೦೪೭ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಕೊಡಗಿಗೆ ೩೩೮ ಲಕ್ಷಕ್ಕೆ ೪೭೧ ಲಕ್ಷ ರೂಪಾಯಿ ಖರ್ಚು ಮಾಡಿದ್ದೇವೆ. ಇದರಲ್ಲಿ ರೀಜನಲ್ ಇಂಬ್ಯಾಲೆನ್ಸ್ ಇದೆಯೋ ಇಲ್ಲವೋ ಅನ್ನುವುದನ್ನು ತಾವೇ ಯೋಚನೆ ಮಾಡಬೇಕು. ಇನ್ನು ಉತ್ತರ ಕರ್ನಾಟಕದಲ್ಲಿ ಅವರು ಒಂದು ರಸ್ತೆಗೆ ಒಂದು ಕೋಟಿ ರೂಪಾಯಿ ಖರ್ಚ ಮಾಡಿದ್ದೇವೆ. ನಮ್ಮ ಮಲ್ಲಿಕಾರ್ಜುನ ಸಾಹೇಬರು ಹೇಳಿದರು. This is a letter addressed by Mallikarjuna Kharge, Deputy Leader of the Opposition. ಅವರ ಲೆಟರ್ ಮೇಲೇನೇ ನಾನು ಬರೆದುಕಳುಹಿಸಿದ್ದೇನೆ. ಆಫೀಸರ್‌ಗೆ ಬರೆದಿದ್ದೇನೆ. ಅದನ್ನು ನಾನು ಓದುತ್ತೇನೆ. Please herein find enclosed letter by Sri Mallikarjuna Kharge regarding construction of bridge in Bachanala village and Chamnal village of yadigir Taluk etc, I never discriminate like that. ಈ ರೀತಿಯಾಗಿ ನಾನು ಒಂದು ನೋಟ್ ಹಾಕಿದ್ದೇನೆ. ಯಾವ ಎಂ.ಎಲ್.ಎ. ನನಗೆ ಕಾಗದ ಬರೆದರೂ ಕೂಡ ಅದಕ್ಕೆ ಮಾನ್ಯತೆ ಕೊಡಬೇಕೆಂದು ಮಾಡಿದ್ದೇನೆ. ನಾನು ಈ ಮಾತನ್ನು ಏತಕ್ಕೆ ಹೇಳುತಿದ್ದೇನೆಂದರೆ ಆವೊತ್ತು ನಾನು ಏನಾದರೂ ಸೃಷ್ಟಿ ಮಾಡಿಕೊಳ್ಳುತ್ತಿದ್ದೇನೆ ಎಂದು ಯಾರಾದರೂ ಹೇಳುವುದಾದರೆ ಅದು ಸರಿಯಲ್ಲ. ನಿನ್ನೆ ನಾನು ಆಫೀಸಿಗೆ ಹೋಗಿದ್ದೆ ಅದನ್ನು ನೋಡಿದೆ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಮುಂಚೆಗಡೆ ಆಗಿರತಕ್ಕಂಥ ಒಂದು ವಿಲೇಜ್ ಬಗ್ಗೆ ಏನು ಹೇಳಿದ್ದಾರೆ ಅದು ಲಿಸ್ಟ್‌ನಲ್ಲಿದೆ.

ಇನ್ನು ಕೊನೆಯದಾಗಿ ನಾನು ಒಂದು ಮಾತು ಹೇಳುತ್ತೇನೆ. ತಮ್ಮ ಮನಸ್ಸಿನಲ್ಲಿ ಒಂದು ಭಾವನೆ ಇದೆ. ಅವರು ಎಕ್ಸಿಕ್ಯೂಟೀವ್ ಇಂಜಿನಿಯರ್ ಪ್ರಮೋಷನ್ ಬಗ್ಗೆ ಹೇಳಿದರು. ಅದರ ಬಗ್ಗೆ ಅವರು ಫಿಗರ್ಸ್ ಕೂಡ ಕೊಟ್ಟಿದ್ದಾರೆ. ತಮ್ಮ ಗಮನಕ್ಕೆ ತರುತ್ತೇನೆ, ೧೯೯೦ರಲ್ಲಿ ಎಲ್ಲಾ ಚೀಫ್ ಇಂಜನಿಯರ್ಸ್ ಕೂಡ ಬರೀ ಷೆಡ್ಯೂಲ್ಡ್ ಕ್ಯಾಸ್ಟ್‌ನವರೇ ಆಗುತ್ತಾರೆ. ಇನ್ನು ತಾವು ಸ್ಕೇಲ್ ಬಗ್ಗೆ ಹೇಳಿದ್ದೀರಿ. ಅದು ಈ ಒಂದು ಇಲಾಖೆಗೆ ಸಂಬಂಧಪಟ್ಟದ್ದಲ್ಲ. ರಾಜ್ಯದ ಎಲ್ಲ ಇಲಾಖೆಗಳಿಗೂ ಸಂಬಂಧಪಟ್ಟಂತೆ ಇದೆ. ಇನ್ನು ಇದರ ಬಗ್ಗೆ ರೋಸ್ಟರ್ ಸಿಸ್ಟಂ ಏನು ಇದೆ ಅದನ್ನು ಅಡಾಪ್ಟ್ ಮಾಡಬೇಕೇ ಬೇಡವೇ ಅನ್ನುವ ಪ್ರಶ್ನೆಯೂ ಸಹ ನಮ್ಮ ಮುಂದೆ ಇದೆ.

ಇದು ಕೇವಲ ಒಂದು ಇಲಾಖೆಯ ಪ್ರಶ್ನೆಯಲ್ಲ. ಇದು ಕೇವಲ ಲೋಕೋಪಯೋಗಿ ಇಲಾಖೆಗೆ ಮಾತ್ರ ಸೀಮಿತವಾಗಿಲ್ಲ ಆದ್ದರಿಂದ ಈ ವಿಷಯದಲ್ಲಿ ಒಂದು ಅಂತಿಮ ನಿರ್ಣಯ ಮಾಡುವುದಕ್ಕೆ ಮೊದಲು ನಿಮ್ಮ ಜೊತೆ ಚರ್ಚೆ ಮಾಡುತ್ತೇನೆ. ಇದರ ಬಗ್ಗೆ ನಾನು ತೆರೆದ ಮನಸ್ಸಿನಿಂದ ಇದ್ದೇನೆ. ಇದು ಸೆನ್‌ಸಿಟೀವ್ ಇಷ್ಯೂ ಆಗಿದೆ. ಆದ್ದರಿಂದ ನಿಮ್ಮ ಜೊತೆ ಚರ್ಚೆ ಮಾಡಲು ಸಿದ್ಧನಿದ್ದೇನೆ. ಏಕೆಂದರೆ ಇದಕ್ಕೆ ಸಂಬಂಧಪಟ್ಟಂತೆ ಇನ್ನೊಂದು ಗುಂಪಿನವರು ಶೇಕಡಾ ನೂರರಷ್ಟು ಹುದ್ದೆಗಳು ಅಂದರೆ ಎಲ್ಲ ಸೂಪರಿಂಟೆಂಡಿಂಗ್ ಇಂಜಿನಿಯರ್ ಹುದ್ದೆಗಳು ಮತ್ತು ಚೀಫ್ ಇಂಜಿನಿಯರ್ ಹುದ್ದೆಗಳು

ಇವರಿಗೇ ಹೋಗಿಬಿಡುತ್ತವೆಂದು ಈಗಾಗಲೇ ತಮ್ಮ ಪ್ರತಿಭಟನೆಯನ್ನು ವ್ಯಕ್ತಪಡಿಸಿದ್ದಾರೆ. ಆದ್ದರಿಂದ ಇದರ ಬಗ್ಗೆ ನಿಮ್ಮ ಜೊತೆಗೆ ಚರ್ಚೆ ಮಾಡುವುದಕ್ಕೆ ನಾನು ತಯಾರಿದ್ದೇನೆ. ನಮ್ಮ ರಾಜ್ಯದಲ್ಲಿ ಶೇಕಡಾ ೨೫ರವರೆಗೆ ರಿಜರ್ವೇಷನ್ ಕೊಟ್ಟಿದ್ದೇವೆ. ಬೇರೆ ಯಾವ ರಾಜ್ಯದಲ್ಲಿಯೂ ಸಹ ಈ ರೀತಿ ಮಾಡಿಲ್ಲ. ಬೇರೆಯವರಿಗೆ ನಾವು ಈ ವಿಚಾರದಲ್ಲಿ ಮಾರ್ಗದರ್ಶಕರಾಗಿದ್ದೇವೆ. ಬಡ್ತಿ ಕೊಡುವ ವಿಚಾರದಲ್ಲಿ ರೋಸ್ಟರ್ ಪದ್ಧತಿಯ ಪ್ರಕಾರ ಇಬ್ಬರು ಮೂವರು ಎಕ್ಸಿಕ್ಯುಟಿವ್ ಇಂಜಿನಿಯರ್‌ಗಳಿಗೆ ಅನ್ಯಾಯ ವಾಗಿರಬಹುದು. ಆದರೆ ಅವರಿಗೆ ಬಡ್ತಿ ಸಿಕ್ಕಿಲ್ಲ ಎಂಬುದನ್ನೇ ದೊಡ್ಡದಾಗಿ ಹೇಳುವುದು ಸರಿಯಲ್ಲ. ಈ ಷೆಡ್ಯೂಲ್ಡ್ ಕ್ಯಾಸ್ಟ್ ಜನಾಂಗದವರಿಗೆ ನಾನು ಬೇರೆ ಯಾವ ರೀತಿಯಿಂದ ಸಹಾಯ ಮಾಡಿದ್ದೇನೆಂಬುದನ್ನು ನನ್ನ ಅಂತರಾತ್ಮದಿಂದ ಹೇಳಬೇಕೆಂದರೆ, ಈ ಜನಾಂಗದಲ್ಲಿ ನಿರುದ್ಯೋಗಿ ಸಿವಿಲ್ ಇಂಜಿನಿಯರ್‌ಗಳು ಮತ್ತು ಡಿಪ್ಲೋಮಾ ಹೋಲ್ಡರ್ಸ್ ಏನಿದ್ದಾರೆ, ಅವರಿಗೆ ನಮ್ಮ ಇಲಾಖೆಯಲ್ಲಿ ಕಂಟ್ರಾಕ್ಟ್ ಕೆಲಸ ಕೊಡಬೇಕೆಂದು ಹೇಳಿದ್ದೇನೆ. ಇದಕ್ಕಾಗಿ ಅವರಿಗೆ ಸೀಡ್ ಮನಿಯನ್ನು ಸಾಲದ ರೂಪದಲ್ಲಿ ಕೊಡಬೇಕು ಮತ್ತು ಕನ್‌ಸ್ಟ್ರಕ್ಷನ್ ಮೆಟೀರಿಯಲ್ಸನ್ನು ಒದಗಿಸಬೇಕೆಂದು ಹೇಳಿದ್ದೇನೆ. ಇದಕ್ಕೆ ಮೊದಲು ಆರ್ಥಿಕ ಇಲಾಖೆಯವರು ಒಪ್ಪಲಿಲ್ಲ. ನಾನಾ ರೀತಿಯ ಅಡ್ಡಿಗಳು ಎದುರಾದವು. ಕೊನೆಯಲ್ಲಿ ನಾವೇ ಜಯಶೀಲರಾದೆವು. ಈಗ ಇದಕ್ಕೆ ಸಂಬಂಧಪಟ್ಟ ಸರ್ಕಾರದ ಆಜ್ಞೆಯನ್ನು ಹೊರಡಿಸಿದ್ದೇವೆ. ಇಂತಹ ಪ್ರೋತ್ಸಾಹವನ್ನು ಬೇರೆ ಯಾವ ರಾಜ್ಯಗಳಲ್ಲಿ ಈ ಜನಾಂಗದವರಿಗೆ ಕೊಟ್ಟಿದ್ದಾರೆಂದು ನಾನು ತಮ್ಮನ್ನು ಕೇಳಬಯಸುತ್ತೇನೆ. ನಾವು ಇಷ್ಟೆಲ್ಲಾ ಮಾಡಿದ ಮೇಲೂ ಸಹ ಎಷ್ಟು ಜನ ಅಧಿಕಾರಿಗಳಿಗೆ ಈ ಜನಾಂಗದ ಹುಡುಗರನ್ನು ಮುಂದೆ ತರಬೇಕೆಂಬ ಬಗ್ಗೆ ಅಭಿಲಾಷೆ ಇರುತ್ತದೆ ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.— ಅಧಿಕಾರಿಗಳಲ್ಲಿ ಒಳ್ಳೆಯವರೂ ಇರುತ್ತಾರೆ ಮತ್ತು ಕೆಟ್ಟವರೂ ಸಹ ಇರುತ್ತಾರೆ. It is a question of principle. ಇಲ್ಲಿ ಅಧಿಕಾರಿಗಳು ಯಾವ ಜಾತಿಯವರೇ ಆಗಿದ್ದರೂ ಸಹ ಅವರದೇ ಒಂದು ಜಾತಿ ಇರುತ್ತದೆ. ಇದನ್ನು ತಾವು ಗಮನಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಇವೊತ್ತು ಕಂಟ್ರಾಕ್ಟ್ ಕೆಲಸ ಮಾಡುವವರು ಸಾಕಷ್ಟು ಬಲವುಳ್ಳವರಾಗಿರುತ್ತಾರೆ. ಜೊತೆಗೆ ಅವರು ಮೇಲ್ಜಾತಿಯವರಾಗಿರುತ್ತಾರೆ. ಆದ್ದರಿಂದ ಈ ನಮ್ಮ ಸಮಾಜದಲ್ಲಿ ಆರ್ಥಿಕವಾಗಿ ಬಲಹೀನರಾಗಿರುವಂತಹ ಈ ವರ್ಗದ ಜನರು ಬಲವುಳ್ಳ ಜನರ ಜೊತೆಗೆ ಸರಿಯಾಗಿ ನಿಲ್ಲಬೇಕಾದರೆ ನಾವು ಸಾಕಷ್ಟು ಸಹಾಯ ಮಾಡಬೇಕಾಗುತ್ತದೆ. ಆದ್ದರಿಂದ ಕಂಟ್ರಾಕ್ಟ್ ಕೆಲಸ ಮಾಡುವವರಿಗೆ ಪ್ರತಿ ಬಿಲ್‌ನಲ್ಲಿಯೂ ಸಹ ೫ ಸಾವಿರ ರೂಪಾಯಿ ಅಡ್ವಾನ್ಸ್ ಕೊಡಬೇಕೆಂದು ಹೇಳಿದ್ದೇವೆ, ಇದರ ಜೊತೆಗೆ ಸ್ಟೀಲ್ ಮತ್ತು ಸಿಮೆಂಟನ್ನು ಸಾಲವಾಗಿ ಕೊಡಬೇಕೆಂದು ಹೇಳಿದ್ದೇವೆ. ಈ ಒಂದು ಯೋಜನೆಯನ್ನು ಬಿ ಎ. ಮತ್ತು ಬಿ.ಎಸ್.ಸಿ. ಪದವಿ ಪಡೆದು ಕೆಲಸದಲ್ಲಿ ಇಲ್ಲದಿರುವವರಿಗೂ ವಿಸ್ತರಣೆ ಮಾಡಬೇಕೆಂದಿದ್ದೇನೆ. I am prepared to extend this benefit even to general graduates, Why should they not get it ? ಇದರ ಜೊತೆಗೆ For the first time in Karnataka, at a stretch, 145 Diploma holders have been appointed. ಮಾನ್ಯ ಕುಮಾರಸ್ವಾಮಿ ಅವರು ಇದನ್ನು ಸ್ವಲ್ಪ ಗಮನಿಸಬೇಕು. ಎಲ್ಲೋ ಇಬ್ಬರು ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳಿಗೆ ರೋಸ್ಟರ್ ಪ್ರಕಾರ ಬಡ್ತಿ ಸಿಗದಿದ್ದರೆ ಇಲ್ಲಿ ಕೂಗುತ್ತಾರೆ. ಆದರೆ ನಾನು ಈ ಜನಾಂಗದವರ ಅಭಿವೃದ್ಧಿಗಾಗಿ ಕೈಕೊಂಡ ಕ್ರಮಗಳ ಬಗ್ಗೆ ಮತ್ತು ಅಭಿವೃದ್ಧಿ ಕೆಲಸಗಳ ಬಗ್ಗೆ ಅಂಕಿ ಅಂಶಗಳನ್ನು ಕೊಟ್ಟರೆ ಇವರಿಗೆ ಸಮಾಧಾನ ವಾಗುವುದಿಲ್ಲ. ನಾನು ಏನೇ ಕೆಲಸಗಳನ್ನು ಮಾಡಿದರೂ ಸಹ ನಾನು ಹುಟ್ಟಿರುವ ಜಾತಿಯು ಇಲ್ಲಿ ಅಡ್ಡ ಬರುತ್ತದೆ. ಈ ಜನಾಂಗದವರಿಗೆ ೨೫ ಪರ್ಸೆಂಟ್‌ವರೆಗೆ ರಿಜರ್ವೇಷನನ್ನು ಹೆಚ್ಚು ಮಾಡಿದ್ದರ ಪರಿಣಾಮ ಮುಂದೆ ಏನಾಗುತ್ತದೆ ಎಂಬುದನ್ನು ಯಾರೂ ಹೇಳುವುದಿಲ್ಲ. ಶ್ರೀ ಬಾಳೇಕುಂದ್ರಿ ಅವರು ಸಿ. ಅಂಡ್ ಬಿ. ಡಿಪಾರ್ಟ್‌ಮೆಂಟ್ ಬಗ್ಗೆ Cheese and Butter Department ಎಂದು ಹೇಳುತ್ತಿದ್ದರು. ಇಂತಹ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವ ಮುಖ್ಯ ಇಂಜಿನಿಯರ್‌ಗಳ ಪೈಕಿ ಒಕ್ಕಲಿಗರು ಒಬ್ಬರು, ಲಿಂಗಾಯಿತರು ಒಬ್ಬರು ಮಾತ್ರ ಇದ್ದಾರೆ. ಇಲ್ಲಿ ಷೆಡ್ಯೂಲ್ಡ್ ಕ್ಯಾಸ್ಟ್‌ನವರೇ ಜಾಸ್ತಿ ಇದ್ದಾರೆ. ಆದರೂ ಸಹ ಬೆಳಿಗ್ಗೆಯಿಂದ ಸಂಜೆಯವರೆಗೆ ಕೆಲವರು ಏನು ಈ ಬಗ್ಗೆ ರಾಜಕೀಯ ನಡೆಸುತ್ತಾರೆ ಅವರು ತಮ್ಮ ಹೃದಯವನ್ನು ಪರೀಕ್ಷೆ ಮಾಡಿಕೊಳ್ಳಬೇಕು. ಇಂತಹ ಪ್ರಶ್ನೆಗಳನ್ನು

ಅವರು ನನಗೆ ಹಾಕುವುದಕ್ಕೆ ಬದಲು ಅವರ ಹೃದಯಕ್ಕೆ ಹಾಕಿಕೊಳ್ಳಬೇಕು. ಇಂತಹವರಿಗೆ ಇದಕ್ಕಿಂತ ಇನ್ನು ಏನು ಹೇಳಬೇಕು ?

ಶ್ರೀ ಆರ್. ವೆಂಕಟರಾಮಯ್ಯ.—ನಮ್ಮ ಕಡೆ ಯಾರು ಪ್ರಸ್ತಾಪ ಮಾಡಲಿಲ್ಲ.

ಶ್ರೀ ಹೆಚ್. ಡಿ. ದೇವೇಗೌಡ.—ಒಂದು ಫೋರಂ ಮಾಡಿಕೊಂಡಿದ್ದಾರೆ, ಅವರು ಕೊಟ್ಟಿರುವ ಮೆಮೊರ್‍ಯಾಂಡಂ ಅನ್ನು ಬೇಕಾದರೆ ಓದುತ್ತೇನೆ. ಇವತ್ತು ದೇಶದಲ್ಲಿ ಪ್ರಚಾರ ಹೇಗೆ ನಡೆಯುತ್ತದೆ ಎನ್ನುವುದನ್ನು let the country knows it.

ಶ್ರೀ ಆರ್. ವೆಂಕಟರಾಮಯ್ಯ—ಪೇಪರ್ ಸ್ಟೇಟ್‌ಮೆಂಟ್ ಕೊಟ್ಟಿರಬಹುದು.

ಶ್ರೀ ಹೆಚ್. ಡಿ. ದೇವೇಗೌಡ.—ಒಂದೊಂದು ಸಾರಿ ನನ್ನ ಸ್ಟೇಟ್‌ಮೆಂಟ್ ಸರಿಯಾಗಿ ಬರುವುದಿಲ್ಲ, ತಿರುಚುವಂತಾಗುತ್ತದೆ. ಔಟ್ ಆಫ್ ೪೪೧ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್‌ನಲ್ಲಿ ೮೯ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಎಸ್.ಸಿ ಎಸ್‌ಟಿಯವರಿಗೆ ನಾನು ಪ್ರಮೋಷನ್ ಕೊಟ್ಟಿದ್ದೇನೆ. ಜೂನಿಯರ್ ಇಂಜಿನಿಯರ್ಸ್‌ನಲ್ಲಿ ಪ್ರಮೋಷನ್ಸ್ ೧೨೮ರಲ್ಲಿ ೨೭ ಮಂದಿಗೆ ಕೊಟ್ಟಿದ್ದೇನೆ. ಆಮೇಲೆ ಇಂಪಾರ್ಟೆಂಟ್ ಪ್ಲೇಸಸ್ ಎಂದು ಹೇಳುತ್ತಾರಲ್ಲ, ಸಿ. ಅಂಡ್ ಬಿ.ಸಲ್ಲಿ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಎಷ್ಟು ಜನ ಇದ್ದಾರೆ ಅಂದರೆ...

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇದನ್ನು ನಾನು ಕಳುಹಿಸುತ್ತೇನೆ, ಪರಿಶೀಲನೆ ಮಾಡಿ, ಮೆಮೊರ್‍ಯಾಂಡ್ ಇದೆ. ೧೯೯೦ಯಲ್ಲಿ, ೨೦ನೇ ಸೆಂಚುರಿಯಲ್ಲಿ ಏನಾಗುತ್ತದೆ ಎಂದು ಕೊಟ್ಟಿದ್ದಾರೆ. ನೀವು ರೂಲ್ಸ್ ಪ್ರಕಾರ ಕೊಡಲೇಬೇಕಾಗುತ್ತದೆ.

ಶ್ರೀ ಹೆಚ್. ಡಿ. ದೇವೇಗೌಡ.—ಹಿಂದೆ ರೂಲ್ಸ್ ಎಲ್ಲಿ ಹೋಗಿತ್ತು ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ರೋಸ್ಟರ್ ಸಿಸ್ಟಮನ್ನು ಜಾರಿಗೆ ತಂದಾಗ ಮಾಡಬೇಕಾಗಿತ್ತು. ಇವತ್ತು ಪೇ ಸ್ಕೇಲ್ ಜಾಸ್ತಿಯಾಗಿದೆ.

ಶ್ರೀ ಎಚ್. ಡಿ. ದೇವೇಗೌಡ.—ನಾನು ಯಾವ ಯಾವ ಜಾಗದಲ್ಲಿ ಪೋಸ್ಟಿಂಗ್ಸ್ ಕೊಟ್ಟಿದ್ದೇನೆ ಎಂದು ಹೇಳಿದೆ. ೧೯೫೬ರಲ್ಲಿ ಸ್ಟೇಟ್ ರೀ ಆರ್ಗನೈಸೇಷನ್ ಆದಾಗಿನಿಂದ ಹೇಳುತ್ತೇನೆ. ೫ ಜನ ಷೆಡ್ಯೂಲ್ಡ್ ಕ್ಯಾಸ್ಟ್‌ಗೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಾಡಿರತಕ್ಕಂಥದ್ದು. ಸಿ. ಅಂಡ್ ಬಿ.ಯಲ್ಲಿ ಶಿವಲಿಂಗಯ್ಯನವರನ್ನು ಒಬ್ಬರನ್ನು ಬಿಟ್ಟರೆ ಯಾರನ್ನೂ ಮಾಡಲಿಲ್ಲ. ಇವತ್ತಿನ ದಿವಸ ಅಸಿಸ್ಟೆಂಟ್ ಎಕ್ಸಿಕ್ಯೂಟೀವ್ ಇಂಜಿನಿಯರ್ಸ್ ಪೋಸ್ಟ್ಸ್‌ನಲ್ಲಿ ಒಕ್ಕಲಿಗಾಸ್ ೫೭ ಮಂದಿ ಇದ್ದಾರೆ. ಎಸ್.ಸಿ.-೪೫ ಮಂದಿ ಇದ್ದಾರೆ, ಲಿಂಗಾಯತ್ಸ್ ೭೮ ಜನ ಇದ್ದಾರೆ, ಬ್ರಾಹ್ಮಿನ್ಸ್ ೧೦ ಮಂದಿ ಇದ್ದಾರೆ. ಸಿ. ಅಂಡ್ ಬಿ. ಯಲ್ಲಿ ಬ್ಯಾಕ್ ವರ್ಡ್ ಕ್ಲಾಸ್ ೭೯ ಜನ ಇದ್ದಾರೆ. ನಾನು ಏಕೆ ಈ ವಿಷಯ ಹೇಳಿದೆ ಅಂದರೆ ಇವತ್ತು ನಾವು ರೆಕ್ರೂಟ್‌ಮೆಂಟ್‌ನಿಂದ ಹಿಡಿದು, ಪೋಸ್ಟಿಂಗ್ಸ್‌ನಿಂದ ಹಿಡಿದು ಪ್ರಮೋಷನ್‌ವರೆಗೆ ಕೊಟ್ಟಿದ್ದೇವೆ. ಪ್ರಮೋಷನ್ಸ್ ಕೊಡುವಾಗ ಫಸ್ಟ್ ೮ ಚೀಫ್ ಇಂಜಿನಿಯರ್ಸ್ ಆಗಿ ಪ್ರಮೋಷನ್ಸ್ ಕೊಟ್ಟಿದೆ, ಅದರಲ್ಲಿ ಮುಸ್ಲಿಮರಿಗೆ ಕೊಟ್ಟಿದೆ, ಎಸ್.ಸಿ.ಯವರಿಗೆ ಕೊಟ್ಟಿದೆ. ಒಂದೇ ಕಮ್ಯುನಿಟಿ ಡಾಮಿನೇಟ್ ಆಗುವುದು ಬೇಡ ಎಂದು ಮಾಡಿದ್ದೇವೆ. ಒಬ್ಬ ಕುರುಬರನ್ನು ತೆಗೆದುಕೊಂಡು ಬಂದು ೩೮ ವರ್ಷಗಳಲ್ಲಿ ಸೆಕ್ರಟರಿ ಮಾಡಲಿಲ್ಲ. ೫ ಜನರನ್ನು ಸೂಪರ್‌ಸೀಡ್ ಮಾಡಿದೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—೫-೬ ಮಾತ್ರ ಸೂಪರ್‌ಸೀಡ್ ಮಾಡಿರುವುದು. ಹಿಂದೆ ಸೆಕ್ರೆಟರಿ ಆದವರೂ ಇದ್ದಾರೆ. ನರಸಿಂಗರಾಯರ ಕಾಲದಲ್ಲಿ ಇದ್ದರು. ಬೇಕಾದರೆ ನಾವೂ ತರುತ್ತೇವೆ, ನೀವೂ ತರುತ್ತೀರಿ, ಇನ್ನೊಬ್ಬರೂ ತರುತ್ತಾರೆ.

ಶ್ರೀ ಎಚ್. ಡಿ. ದೇವೇಗೌಡ.—ನಾವೆಲ್ಲಾ ವೆಸ್ಟೆಡ್ ಇಂಟರೆಸ್ಟ್ ರೆಪ್ರೆಸೆಂಟೆಟೀವ್ಸ್. ನೀವು ಈಗ ಅಲ್ಲಿಗೆ ಬಂದಿದ್ದೀರಿ. ನಾನು ಅಲ್ಲಿ ಬೈಸಿಕೊಂಡೆ. ಶ್ರೀಮಾನ್ ವೀರೇಂದ್ರ ಪಾಟೀಲರು, ಶ್ರೀಮಾನ್ ನಿಜಲಿಂಗಪ್ಪನವರು ಇದ್ದರು. ಮಾನ್ಯ ಬೈರೇಗೌಡರು ಆಗ ಸಿ.ಪಿ.ಎಂ. ನಲ್ಲಿದ್ದರು. ಕಾಗೋಡು ತಿಮ್ಮಪ್ಪನವರು ಇದ್ದರು. ಏನೇನೋ ಬೈಯ್ದಿದ್ದೇ ಬೈಯ್ದಿದ್ದು. ಎಲ್ಲಾ ಕೆಲಸವೂ ನನ್ನ ಮೇಲೆ....

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ನಿಮ್ಮನ್ನು ಬೈಯ್ದಿದ್ದಲ್ಲ, ಆಗ ಇದ್ದಂಥ ವ್ಯವಸ್ಥೆಯನ್ನು.

ಶ್ರೀ ಹೆಚ್. ಡಿ. ದೇವೇಗೌಡ.—ಅದನ್ನೇ ನಾನು ಹೇಳಿದ್ದು. ಇವತ್ತು ನನ್ನ ಕೈಗೆ ಈ ಸ್ಥಾನವನ್ನು ಅಂದರೆ ಈ ರಾಜ್ಯದ ಜನತೆ ಮಾನ್ಯ ಮುಖ್ಯ ಮಂತ್ರಿಗಳ ನಾಯಕತ್ವದಲ್ಲಿ ಏನು ಸ್ಥಾನ ಕೊಟ್ಟಿದ್ದಾರೋ ಅದನ್ನು ಹೇಗೆ ಉಪಯೋಗ ಮಾಡಿದ್ದೇವೆ ಸೋಷಿಯಲ್ ಜಸ್ಟೀಸ್ ಕೊಡಲಿಕ್ಕೆ ಅಂದರೆ ಹಿಂದುಳಿದ ವರ್ಗದವರಿಗೂ ಹರಿಜನ ಕೋಮಿನವರಿಗೂ ಪ್ರಾಮಾಣಿಕವಾಗಿ ಅನುಕೂಲ ಮಾಡಿಕೊಡಲಾಗಿದೆಯೆಂಬುದನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛಿಪಡುತ್ತೇನೆ. ಕಳೆದ ಎರಡು ದಿವಸಗಳಿಂದ ಅಮೂಲ್ಯವಾದಂಥ ನನ್ನ ಇಲಾಖಾ ಬೇಡಿಕೆಗಳ ಬಗ್ಗೆ, ಇಲಾಖೆಯ ಪ್ರತಿಯೊಂದು ವಿಷಯದ ಬಗ್ಗೆಯೂ ಮಾನ್ಯ ಸದಸ್ಯರುಗಳು ಸಾಕಷ್ಟು ಜನ ಮಾತನಾಡಿದ್ದಾರೆ. ಮಾನ್ಯ ಸದಸ್ಯರುಗಳು ತಮ್ಮ ತಮ್ಮ ಕ್ಷೇತ್ರಕ್ಕೆ ಸಂಬಂಧಪಟ್ಟ ವಿಚಾರಗಳನ್ನು ಕೂಡ ಪ್ರಸ್ತಾಪ ಮಾಡಿದ್ದಾರೆ. ನಾನು ಒಂದೊಂದು ವಿಚಾರಕ್ಕೂ ಉತ್ತರ ಕೊಡುತ್ತಾ ಹೋದರೆ ಸಾಕಷ್ಟು ವೇಳೆಯಾಗುತ್ತದೆ. ಮಾನ್ಯ ಸದಸ್ಯರುಗಳು ಪ್ರಸ್ತಾಪ ಮಾಡಿದಂಥ ಎಲ್ಲ ವಿಷಯಗಳಿಗೂ ಪ್ರಾಮಾಣಿಕವಾಗಿ ನನ್ನ ಕೈಲಾದ ಮಟ್ಟಿಗೂ ಗಮನಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ ಎನ್ನುವ ಮಾತನ್ನು ಹೇಳುತ್ತೇನೆ. ಸ್ವಾಮಿ ಭ್ರಷ್ಟಾಚಾರದ ಬಗ್ಗೆ ಒಂದು ಮಾತು ಹೇಳಬೇಕಾಗಿದೆ. ಇವತ್ತು ಯಾವ ಪಕ್ಷದ ಸರ್ಕಾರ ಬಂದರೂ ಒಂದೇ ದಿವಸದಲ್ಲಿ ತಪ್ಪಿಸಲಿಕ್ಕೆ ಆಗುವುದಿಲ್ಲ. ರೆಡ್ಯೂಸ್ ಮಾಡುವುದಕ್ಕೆ ಸಾಕಷ್ಟು ಪ್ರಯತ್ನ ಮಾಡಿದ್ದೇನೆ. ಇಂದಿನ ಸಮಾಜದಲ್ಲಿ ಒಂದೇ ದಿವಸಕ್ಕೆ ತೆಗೆಯುವುದಕ್ಕೆ ಆಗುವುದಿಲ್ಲ. ಅಧಿಕಾರಿಗಳಲ್ಲಿ ಒಳ್ಳೆಯವರು ಇದ್ದಾರೆ, ಕೆಟ್ಟವರು ಇದ್ದಾರೆ. ಯಾವ ಅಧಿಕಾರಿ ತಪ್ಪು ಮಾಡುತ್ತಾನೆ, ದುರುಪಯೋಗ ಮಾಡಿಕೊಂಡಿರುತ್ತಾನೆ, ಅಂಥ ವಿಷಯಗಳನ್ನು ನನ್ನ ಗಮನಕ್ಕೆ ತಂದರೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ. ನಾನು ಸಾಕಷ್ಟು ಪ್ರಮಾಣದಲ್ಲಿ ಇಂಪ್ರೂವ್ ಮಾಡಿದ್ದೇನೆ. ತಾವು ನೋಡಿರಬಹುದು, ಗ್ರಲಕಿಕ್ಕೆ ಮುಂಚೆ ಪ್ರತಿದಿನ ಪತ್ರಿಕೆಗಳನ್ನು ತೆಗೆದರೆ. ಸಿಮೆಂಟ್ ಲಾರಿ ಸೀಸ್ ಮಾಡಿದರು ಎನ್ನುವ ಸುದ್ದಿ ಇರುತ್ತಿತ್ತು. ಇವತ್ತು ಪತ್ರಿಕೆಯವರು ದೇವೇಗೌಡರ ಇಲಾಖೆಗೆ ಸಂಬಂಧಪಟ್ಟದ್ದು ಯಾವುದಾದರೂ ಸಿಗುತ್ತದೆಯೆ ಎಂದು ನೋಡುತ್ತಿರುತ್ತಾರೆ. ಈ ವಿಚಾರದಲ್ಲಿಯೂ ಸಾಕಷ್ಟು ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ನನ್ನ ಜಿಲ್ಲೆಯಲ್ಲಿ ಹರಿಜನರೊಬ್ಬರನ್ನು ಅಧ್ಯಕ್ಷರನ್ನಾಗಿ ಮಾಡಿದ್ದಕ್ಕೆ ತೋರಗಣಿಕೆಗೆ ಮಾಡಿದ್ದಾರೆಂದು ಪತ್ರಿಕೆಯಲ್ಲಿ ಬರೆದರು. ನಾನು ಈ ಮಾತನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ದುರ್ಬಲ ವರ್ಗದವರನ್ನು ಮೇಲಕ್ಕೆತ್ತತಕ್ಕಂಥ ಕಾಲದಲ್ಲಿ, ನನ್ನ ಸ್ವಂತಕ್ಕೆ ದುರುಪಯೋಗ ಮಾಡಿಕೊಳ್ಳತಕ್ಕಂಥ ಪ್ರಯತ್ನ ನಾನು ಯಾವತ್ತೂ ಮಾಡುವುದಿಲ್ಲ, ನನ್ನ ಆತ್ಮ ಸಾಕ್ಷಿಗೆ ಸಮಾಧಾನವಾಗುವಂತ ಕೆಲಸ ಮಾಡಿದ್ದೇನೆಂದು ಈ ಸಂದರ್ಭದಲ್ಲಿ ಹೇಳುತ್ತೇನೆ. ಅದಕ್ಕಿಂತ ಹೆಚ್ಚಿಗೆ ಹೇಳುವುದಕ್ಕೆ ಹೋಗುವುದಿಲ್ಲ. ಈವೊತ್ತು ಈ ಇಲಾಖೆಯ ಗುರಿ ಬೇರೆ ಕಡೆ ಹೋಗುತ್ತಿದೆ. ನೀರಾವರಿ ಸೌಲಭ್ಯಗಳನ್ನು ಹೆಚ್ಚು ಮಾಡುವುದಕ್ಕೆ ಸಂಬಂಧಪಟ್ಟಂತೆ ಹೊಸ ಆಂದೋಳನ ಪ್ರಾರಂಭವಾಗಬೇಕಾಗಿದೆ. ಈ ಸಂದರ್ಭದಲ್ಲಿ ನಾನು ಅಧಿಕಾರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಇಷ್ಟೇ. ನೀವು ಜವಾಬ್ದಾರಿಯನ್ನು ಅರ್ಥ ಮಾಡಿಕೊಂಡು ಕೆಲಸ ಮಾಡಬೇಕಾಗಿದೆ. ನಾವುಗಳೆಲ್ಲಾ ಜನತೆಯ ಸೇವಕರು. ಅವರು ಕೊಡತಕ್ಕ ಸಂಬಳ ಸಾರಿಗೆಗೆ ತಕ್ಕಂತೆ ದುಡಿಯಬೇಕಾದುದು ನಮ್ಮಗಳೆಲ್ಲರ ಕರ್ತವ್ಯ. ಕೇಂದ್ರದವರು ಕೊಟ್ಟಂತ ಪೇ-ಕಮೀಷನ್ ಬಗ್ಗೆ ಕೇಳುವಂಥ ಅಧಿಕಾರ ಮುಖ್ಯ ಮಂತ್ರಿಗಳಿಗಿಲ್ಲವೆ ? What is that Constitution ? Constitution is our own sacred document. We are all responsible for it. ಪೇ ಕಮಿಷನ್ ರಿಪೋರ್ಟ್ ಪಾರ್ಲಿಮೆಂಟಿನಲ್ಲಿ ಇಡುವುದು ಬೇಡ ಎಂದು ಹೇಳಿದ್ದು ದೊಡ್ಡದಾಯಿತು. ಇವತ್ತು ಕೇಂದ್ರದವರು ಕೊಟ್ಟಂತೆ ಪೇ ಕಮೀಷನ್ ಪ್ರಕಾರ ಸಂಬಳ ಕೊಡುವುದಕ್ಕೆ ರಾಜ್ಯ ಸರ್ಕಾರಗಳಿಗೆ ಆಗುತ್ತದೆಯೋ ? ಅದನ್ನು ಒಪ್ಪಿಕೊಳ್ಳುವುದಕ್ಕಾಗುತ್ತದೆಯೋ ? ಇವತ್ತು ನಮ್ಮಲ್ಲಿ ಬೀಡಿ ಕಾರ್ಮಿಕರಿಗೆ ೮ ರೂಪಾಯಿ ಕೂಲಿ ಇದೆ. ಇದು ನ್ಯಾಷನಲ್ ಇಷ್ಯೂ ಈ ವಿಚಾರದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಹೇಳಿದಾಗ ಮಾನ್ಯ ವೀರಪ್ಪ ಮೊಯ್ಲಿಯವರು ಹಾರಿಬಿಟ್ಟರು. ನಾನು ವಿರೋಧ ಪಕ್ಷದಲ್ಲಿದ್ದಾಗ ಅವರಿಗೋಸ್ಕರ ವಾದ ಮಾಡಿ, ಅವರಿಗೋಸ್ಕರ ಬೈಸಿಕೊಂಡಿದ್ದೇನೆ. ಮಾನ್ಯ ದೇವರಾಜ ಅರಸುಅವರು ಮುಖ್ಯ ಮಂತ್ರಿಗಳಾಗಿದ್ದಾಗ, ಸರ್ಕಾರಿ ನೌಕರರಿಗೆ ಡಿ.ಎ. ಕೊಡತಕ್ಕ ಪರಿಸ್ಥಿತಿ ಬಂದಾಗ, ರಾಜ್ಯ ಸರ್ಕಾರದಲ್ಲಿ ಹಣ ಇರಲಿಲ್ಲ. ನನ್ನನ್ನು ಕರೆಸಿದರು, ಮಾನ್ಯ ಘೋರ್ಪಡೆಯವರು ಹಣಕಾಸಿನ ಮಂತ್ರಿಗಳಾಗಿದ್ದರು, ಕೆ. ಹೆಚ್. ಪಾಟೀಲರು ಪಾರ್ಟಿ ಪ್ರೆಸಿಡೆಂಟರಾಗಿದ್ದರು. ಆಗ ನಾನು ಸಲಹೆ ಮಾಡಿದೆ, ೫೦೦ ರೂಪಾಯಿ ಬೇಸಿಕ್ ಸ್ಯಾಲರಿ ಮೇಲಿರುವವರಿಗೆ ಬಿಟ್ಟು ಉಳಿದವರೆಲ್ಲರಿಗೂ ಕೊಡಿ ಎಂದು ಹೇಳಿದೆ. ಮಾರನೆ ದಿವಸ, ವಾಚಾಮಗೋಚರವಾಗಿ ಬೈದರು. ವಾಚಕರವಾಣಿ

ಬರೆಸಿದರು. I did not mix party politics. I told that I am going to inicitiate in the discussion. My first important priority is to the villagers. That should be our attitute.

೭–೦೦ ಪಿ.ಎಂ.

ಮಾನ್ಯ ಮುಖ್ಯ ಮಂತ್ರಿಗಳು ಪೇ ಕಮಿಷನ್ ಬಗ್ಗೆ ಪ್ರಸ್ತಾಪ ಮಾಡಿದಾಗ ಅದು ತಮಗೆ ದೊಡ್ಡ ವಿಷಯ ಆಯಿತು. ನಮ್ಮ ಥಿಂಕಿಂಗ್ ಮತ್ತು ನಮ್ಮ ಅಪ್ರೋಚ್ ಬದಲಾವಣೆಯಾಗಬೇಕು, ಅದು ಇಲ್ಲದೇ ಇದ್ದರೆ ಎಷ್ಟೋ ಭಾರಿ ನಿಮ್ಮನ್ನು ನಾವು, ನಮ್ಮನ್ನು ನೀವು ಟೀಕೆ ಮಾಡುವುದು ಆಗುತ್ತದೆ. ಗುರಿಯನ್ನು ಮುಟ್ಟಲಿಕ್ಕೆ ಆಗುವುದಿಲ್ಲ. ಇವತ್ತು ಉತ್ತಮವಾಗಿ ಕೆಲಸ ಮಾಡತಕ್ಕಂಥ, ಕೆಲಸ ಮಾಡಲು ಸಹಕಾರ ಕೊಟ್ಟಿರತಕ್ಕಂಥ ಅಧಿಕಾರಿಗಳನ್ನು ಮೆಚ್ಚಬೇಕಾಗುತ್ತದೆ. ಅದೇ ರೀತಿಯಲ್ಲಿಯೇ ತಪ್ಪು ಮಾಡಿರತಕ್ಕಂಥ ೪೫ ಜನ ಅಧಿಕಾರಿಗಳನ್ನು ಸಸ್ಪೆಂಡ್ ಮಾಡಿದ್ದೇನೆ. ಎಲ್ಲಿ ಡಿಸಿಪ್ಲಿನರಿ ಆ್ಯಕ್ಷನ್ ತೆಗೆದುಕೊಳ್ಳಬೇಕೋ ಅಲ್ಲಿ ತೆಗೆದುಕೊಳ್ಳುತ್ತೇನೆ. ಒಟ್ಟಾರೆ ನಾನು ಇವೊತ್ತು ಇಷ್ಟು ಮಾತ್ರ ಹೇಳಲಿಕ್ಕೆ ಇಷ್ಟಪಡುತ್ತೇನೆ. ಜನತೆಯ ವಿಶ್ವಾಸಕ್ಕೆ ಸರ್ಕಾರ ಎಂದೂ ದ್ರೋಹ ಬಗೆಯುವುದಿಲ್ಲ ಎಂದು ಹೇಳಿ, ನೀರಾವರಿ ಹೆಚ್ಚು ಮಾಡಲಿಕ್ಕೆ ಎಲ್ಲರೂ ಸಹಕಾರ ಕೊಡಬೇಕು, ಜನತೆಯೂ ಸಹ ಸಹಕಾರ ಕೊಡಬೇಕೆಂದು ಕೈಮುಗಿದು ಕೇಳಿಕೊಳ್ಳುತ್ತೇನೆ. ಪ್ರಚೋದನೆ ಮಾಡತಕ್ಕ ಜನರಿಗೆ ತಲೆಬಾಗಬಾರದು. ಸಂಪನ್ಮೂಲಗಳನ್ನು ರೂಢಿಸಿಕೊಳ್ಳಲಿಕ್ಕೆ ಎಲ್ಲರೂ ಸಹಕಾರ ಕೊಡಬೇಕೆಂದು ಹೇಳಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಅಧ್ಯಕ್ಷರೆ, ಸುಮಾರು ಮೂರು ಗಂಟೆ ಕಾಲ ಬಹಳ ಚೆನ್ನಾಗಿ ಮಾನ್ಯ ದೇವೇಗೌಡರು ಉತ್ತರವನ್ನು ಹೇಳಿದರು. ಒಟ್ಟಾರೆ ಅವರ ಕಷ್ಟ ಏನು ಅಂದರೆ, ರಿಸೋರ್‌ಸಸ್, ರಿಸೋರ್‌ಸಸ್, ರಿಸೋರ್‌ಸಸ್ ಅಷ್ಟೇ ನಮಗೆ ಕಂಡುಬಂದದ್ದು, ಅವರು ಉತ್ತರ ಹೇಳುವಾಗ ಹೇಳಿದರು, ಕರಂಜ ಪ್ರಾಜೆಕ್ಟ್‌ಗೆ ೯ ಕೋಟಿ ರೂಪಾಯಿ ಇದ್ದದ್ದು, ೯೦ ಕೋಟಿ ರೂಪಾಯಿ ಆಗಿದೆ ಎಂದು ಹೇಳಿದರು. ಮೊದಲು ೯ ಕೋಟಿ ಇದ್ದದ್ದಕ್ಕೆ ೧ ಕೋಟಿ ಇಡುತ್ತಿದ್ದರು. ಈಗ ೯೦ ಕೋಟಿ ರೂಪಾಯಿಗೆ ೯ ಕೋಟಿ ಆಗಿದೆ, ಅದನ್ನು ಅವರು ಹೇಳಬೇಕು. ಇನ್ನು ನ್ಯಾಷನಲ್ ಹೈವೇ ಬಗ್ಗೆ ಚೆನ್ನಾಗಿದೆ ಎಂದು ಬಹಳ ಪ್ರಶಂಸೆ ಮಾಡಿದರು ಬಹಳ ಸಂತೋಷ. ನಾನು ನ್ಯಾಷನಲ್ ಹೈವೇ ಮತ್ತು ಸ್ಟೇಟ್ ಹೈವೇನಲ್ಲಿ ಓಡಾಡಿದ್ದೇನೆ. ರಸ್ತೆಗಳ ತುಂಬಾ ಗುಂಡಿಗಳು ಬಿದ್ದಿರುವುದು ಬೇಕಾದಷ್ಟು ಕಡೆ ಇದೆ. ಆ ತರಹ ರಸ್ತೆಗಳು ಇದ್ದರೆ ಕಾರುಗಳು ಓಡಾಡಲಿಕ್ಕೆ ಆಗುತ್ತದೆಯೇ? ಚಾಸಿಗಳು ಉಳಿಯುತ್ತವೆಯೇ, ಕಾರಿನ ಟೈರುಗಳು ಉಳಿಯುತ್ತವೆಯೇ, ತಾವೇ ಹೇಳಬೇಕು. ಹಳ್ಳಿಗಳ ಬಗ್ಗೆ ಮಹತ್ತರವಾದ ಕಳಕಳಿಯನ್ನು ತೋಡಿಕೊಂಡಿರಿ, ಹಳ್ಳಿ ಜನರು ತಮ್ಮ ಗಾಡಿಗಳನ್ನು ಹೊಡೆದುಕೊಂಡು ಹೋಗುವುದು ಬೇಡವೆ? ಆ ಗಾಡಿಯ ಚಕ್ರಗಳು ಉರುಳುವಂತೆ ರಸ್ತೆಗಳು ಇರುವುದು ಬೇಡವೆ? ಗಾಡಿಗೆ ಕಟ್ಟಿರತಕ್ಕ ಎತ್ತುಗಳು ಆ ರಸ್ತೆಯಲ್ಲಿ ಇರತಕ್ಕ ಗುಂಡಿಗಳಿಗೆ ಕಾಲು ಇಟ್ಟು ಕುಂಟಾಗಿರುತ್ತವೆ. ಇಷ್ಟೆಲ್ಲಾ ತೊಂದರೆ ಇದ್ದರೂ ಹಳ್ಳಿಗಳ ಬಗ್ಗೆ ಬಹಳ ಕಳಕಳಿ ಇದೆ ಎಂದು ಹೇಳುತ್ತಿದ್ದೀರಿ. ಇನ್ನು ಬಹಳಷ್ಟು ರೋಡ್ ಫಾರ್‌ಮೇಷನ್ ಮಾಡಿದ್ದೀರಿ, ಕ್ವಾಲಿಟಿ ಆಫ್ ವರ್ಕ್ ಅನ್ನು ಯಾರಾದರೂ ಚೆಕ್ ಮಾಡುವವರು ಇದ್ದಾರೆಯೇ? ರಸ್ತೆಗಳನ್ನು ಎನ್‌ಕ್ರೋಚ್ ಮಾಡುತ್ತಿದ್ದಾರೆ. ನೀವು ಅದನ್ನು ನೋಡಲಿಕ್ಕೆ ಎಲ್ಲೂ ದೂರ ಹೋಗಬೇಡಿ, ಇಲ್ಲಿಯೇ ಬನಶಂಕರಿಯಿಂದ ಕೆಂಗೇರಿಗೆ ಹೋಗಿ, ನಿಮಗೂ ಇದರ ಬಗ್ಗೆ ಹೇಳಿದೆ, ಕಾಗದವನ್ನು ಕೊಟ್ಟೆ, ಅದನ್ನು ಯಾರೂ ಕೇಳುವವರೇ ಇಲ್ಲ. ಆ ಕಡೆ, ಈ ಕಡೆ ರೋಡ್ ಎನ್‌ಕ್ರೋಚ್ ಮಾಡಿಕೊಂಡು ರೋಡ್ ಒಳಗಡೆ ಚಾನಲ್ ತೆಗೆದುಕೊಂಡು ಬಂದುಬಿಟ್ಟಿದ್ದಾರೆ. ಅಲ್ಲಿ ಲಾರಿ, ಬಸ್ಸುಗಳು ಏನಾದರೂ ಬಂದರೆ ಅವರು ಹಿಂದಕ್ಕೆ ತೆಗೆದುಕೊಳ್ಳಬೇಕು. ಅಲ್ಲಿ ಹೇಳುವವರು, ಕೇಳುವವರು ಯಾರೂ ಇಲ್ಲ. ಅದು ಲೋಕೋಪಯೋಗಿ ಇಲಾಖೆಗೆ ಸೇರಿದ ರಸ್ತೆ. ಅದು ಏನು ಮಾಡುತ್ತಾರೋ ಗೊತ್ತಿಲ್ಲ. ಇನ್ನು ಸಿಮೆಂಟ್ ಸ್ಕೇರ್‌ಸಿಟಿ ಬಗ್ಗೆ ಲಾರಿಗಳನ್ನು ಹಿಡಿಯುವ ಬಗ್ಗೆ ಹೇಳಿದರು. ಈಗ ಸಿಮೆಂಟ್ ಸ್ಕೇರ್‌ಸಿಟಿ ಇದೆಯೇ, ಯಾರು ಹಿಡಿಯಲಿಕ್ಕೆ ಹೋಗುತ್ತಾರೆ ಅದೂ ಇರಲಿ, ಇವರು ಕೆಲಸ ಮಾಡಿರತಕ್ಕವರಿಗೆ ದುಡ್ಡು ಕೊಟ್ಟಿದ್ದಾರೆಯೇ. ಎಲ್.ಒ.ಸಿ. ಕೊಟ್ಟಿದ್ದಾರಾ, ಒಂದೊಂದು ವರ್ಷ, ಎರಡೆರಡು ವರ್ಷ ಆದರೂ ಕಾಂಟ್ರಾಕ್ಟ್‌ದಾರರಿಗೆ ದುಡ್ಡು ಕೊಡುವುದಿಲ್ಲ. ಎಲ್.ಒ.ಸಿ. ಕೊಡುವುದಿಲ್ಲ. ಈಗ

ಏನಾಗುತ್ತಿದೆ, ಅಧಿಕಾರಿಗಳು ಇಂತಹ ಕಂಟ್ರಾಕ್ಟುದಾರರಿಗೆ ಕೊಡಿ ಎಂದು ಮಾರ್ಕ್ ಮಾಡಿ ಬರೆದು ಕಳುಹಿಸುತ್ತಿದ್ದಾರೆ. ಇದು ಇವರಿಗೆ ಗೊತ್ತಿದೆಯೋ ಇಲ್ಲವೋ ಗೊತ್ತಿಲ್ಲ. ಇನ್ನು ಸಣ್ಣಪುಟ್ಟ ಹಳ್ಳಿಗಳಲ್ಲಿ ಇವೊತ್ತು ಕಂಟ್ರಾಕ್ಟ್ ಕೆಲಸ ಮಾಡುವವರು ಫಾಲಿಡಾಲ್ ಕುಡಿಯುವುದು ಒಂದು ಬಾಕಿ ಇದೆ. ಏಕೆಂದರೆ ಅವರು ಬ್ಯಾಂಕಿನಲ್ಲಿ ದುಡ್ಡು ತೆಗೆದುಕೊಂಡು ಅದಕ್ಕೆಲ್ಲಾ ಬಡ್ಡಿಯನ್ನು ಕಟ್ಟಬೇಕಾಗಿರುತ್ತದೆ. ಮೂರು ಕಾಸು, ಆರು ಕಾಸು ಬರುತ್ತದೆ ಎಂದು ಈ ಕಂಟ್ರಾಕ್ಟರ್ ಕೆಲಸ ಮಾಡಿ ಇವೊತ್ತು ಅವರು ಕಷ್ಟ ಅನುಭವಿಸಬೇಕಾಗಿದೆ. ಬಾಕಿ ಎಲ್ಲಾ ಚೆನ್ನಾಗಿ ಉತ್ತರ ಹೇಳಿದಿರಿ, ಎಲ್.ಒ.ಸಿ. ಬಗ್ಗೆ ಮತ್ತು ರೋಡ್ ಬಗ್ಗೆ ಹೇಳಲಿಲ್ಲ, ದಯಮಾಡಿ ಅದರ ಬಗ್ಗೆ ಮಾನ್ಯ ಮಂತ್ರಿಗಳು ಉತ್ತರ ಹೇಳಬೇಕು.

ಶ್ರೀ ಎಚ್. ಡಿ. ದೇವೇಗೌಡ — ಮಾನ್ಯ ಅಧ್ಯಕ್ಷರೆ, ಕೊನೆಯಲ್ಲಿ ತುಂಬಾ ಸೊಗಸಾಗಿ ಹೇಳಿದ್ದಾರೆ. ಈ ಸ್ಟೇಟ್ ಹೈವೇ ಬಗ್ಗೆ ಹೇಳಬೇಕೆಂದರೆ, ಇಡೀ ರಾಜ್ಯದಲ್ಲಿ ಎರಡು ಡಿವಿಜನ್‌ಗಳ ಬಗ್ಗೆ ನನಗೆ ಸಂಶಯ ಇದೆ. ಒಂದು ಚಾಮರಾಜನಗರ ಡಿವಿಜನ್, ಇನ್ನೊಂದು ಕೆ.ಆರ್. ನಗರ ಡಿವಿಜನ್. I have asked for special enquiry to be conducted about the way in which the money has been spent for maintenance grants ೧೪ ಜಿಲ್ಲೆಗಳಲ್ಲಿ ನಾನು ಸ್ವತಃ ಪ್ರವಾಸ ಮಾಡಿದ್ದೇನೆ. ಇಡೀ ರಾಜ್ಯದ ಪ್ರತಿಯೊಂದು ತಾಲ್ಲೂಕಿಗೂ ಹೋಗಿದ್ದೇನೆ. ಎರಡು ಡಿವಿಜನ್‌ನಲ್ಲಿ ನನ್ನ ಮನಸ್ಸಿಗೆ ಸಮಾಧಾನ ಇಲ್ಲ. I have instructed the Chief Engineer to ascertain threadbare every issue and check itemwise. I am expecting a report within a short period. After getting the same, I will place it before this House. ಯಾವ ಅಧಿಕಾರಿ ಇರಲಿ, ಯಾವ ಇನ್‌ಫ್ಲೂಯೆನ್ಸ್ ಬರಲಿ ನಾನು ಈ ಎರಡು ಡಿವಿಜನ್ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ. ಅದೇ ಸೌತ್ ಕೆನರಾದಲ್ಲಿರುವ ಸ್ಟೇಟ್ ಹೈವೇ ಬಗ್ಗೆ ಹೇಳಿ ನೋಡೋಣ. ಅದು ನನಗೆ ಗೊತ್ತಿದೆ. ನಾನು ನೋಡಿದ್ದೇನೆ. ಇಡೀ ರಾಜ್ಯದಲ್ಲಿ ಹದಿನಾಲ್ಕು ದಿನ ಎಲ್ಲಾ ಸ್ಟೇಟ್ ಹೈವೇನಲ್ಲಿ ಸ್ವತಃ ತಿರುಗಾಡಿದ್ದೇನೆ.

ಇನ್ನು ಹಳ್ಳಿ ರಸ್ತೆಗಳ ಬಗ್ಗೆ ಹೇಳಿದರು. ಹಳ್ಳಿಗಳ ರಸ್ತೆಗೆ ಪ್ರಾಮುಖ್ಯತೆ ಕೊಡಬೇಕೆಂದೇ ಹಳ್ಳಿ ಹೆದ್ದಾರಿ ಕಾರ್ಯಕ್ರಮವನ್ನು ನಾನು ಘೋಷಣೆ ಮಾಡಿದ್ದು. ಇವತ್ತು ನಾಲಕ್ಕು ಸಾವಿರ ಚಿಲ್ಲರೆ ಹಳ್ಳಿಗಳಿಗೆ ರಸ್ತೆ ಮಾಡಿದ್ದೇವೆ. ಇನ್ನೂ ಮಾಡಬೇಕಾದದ್ದು ಇದೆ. ಪ್ರೈಯಾರಿಟಿ ಮೇಲೆ ಮಾಡಬೇಕಾಗುತ್ತದೆ. ಒಂದು ಕಡೆ ರೋಡ್, ಇನ್ನೊಂದು ಕಡೆ ನೀರು. ಎರಡನ್ನೂ ನೋಡಬೇಕು, ಎರಡನ್ನೂ ಮಾಡಲೇಬೇಕು. ಹೇಗೆ ಮಾಡುವುದು ? ತಾವೂ ಅರ್ಥ ಮಾಡಿಕೊಳ್ಳಬೇಕು. ಅದನ್ನು ಗಮನದಲ್ಲಿ ಇಟ್ಟುಕೊಳ್ಳುತ್ತೇನೆ. ಸಿಮೆಂಟ್ ಬಗ್ಗೆ ಹೇಳಿದರು. ೧೯೭೭ನೇ ಡಿಸೆಂಬರ್‌ವರೆಗೆ ಸಿಮೆಂಟ್ ಸೀಜ್ ಆಗುತ್ತದೆ, ೧೯೭೮ರ ಜನವರಿ, ಫೆಬ್ರುವರಿ ತಿಂಗಳಲ್ಲಿ ಸೀಜ್ ಆಗುವುದಿಲ್ಲ ಎಂದರೆ ಏನಾಗುತ್ತದೆ ? ಎರಡು ತಿಂಗಳಲ್ಲಿ ಸಿಮೆಂಟ್ ಸ್ಕೇರ್ಸಿಟಿ ಹೊರಟು ಹೋಯಿತೆ ? ಜನತಾ ಸರ್ಕಾರ ಬಂದ ತಕ್ಷಣ ಸಿಮೆಂಟ್ ಸ್ಕೇರ್ಸಿಟಿ ಹೊರಟು ಹೋಯಿತೆ ?

ಶ್ರೀಮತಿ ಕೆ. ಎಸ್. ನಾಗರತ್ನಮ್ಮ.—ಹೆಚ್ಚು ಕಡಿಮೆ ಹೋದ ಹಾಗೆಯೆ.

ಶ್ರೀ ಹೆಚ್. ಡಿ. ದೇವೇಗೌಡ.—ಹೋದರೆ ಸಂತೋಷ, ಜನತಾ ಸರ್ಕಾರ ಬಂದಮೇಲೆ ಸಿಮೆಂಟ್ ಸ್ಕೇರ್ಸಿಟಿ ಹೋದರೆ ಸಂತೋಷ. ಸ್ವಾಮಿ, ನಾವು ಸ್ಟೋರ್ಸ್ ಅಕೌಂಟಿಂಗ್ ಸಿಸ್ಟಮ್ ಬದಲಾವಣೆ ಮಾಡಿದ್ದೇವೆ. ೧೦ ಕೋಟಿ ರೂಪಾಯಿನ ಸ್ಪೇರ್ ಪಾರ್ಟ್ಸ್‌ಗೆ ಆರ್ಡರ್ಸ್ ಪ್ಲೇಸ್ ಮಾಡಿದ್ದರ ಬಗ್ಗೆ ಪಬ್ಲಿಕ್ ಅಕೌಂಟ್ಸ್ ಕಮಿಟಿಯವರು ರಿಪೋರ್ಟ್ ಬರೆದರು. ಕಮಿಷನ್‌ಗೋಸ್ಕರ ಪರ್ಚೇಸ್ ಮಾಡಿದ್ದಾನೆ ಎಂದು ಹೇಳಿದರು. ಒಬ್ಬ ಸೂಪರಿಂಟೆಂಡಿಂಗ್ ಎಂಜಿನಿಯರ್, ಅವಶ್ಯಕತೆ ಇಲ್ಲದಿರತಕ್ಕಂಥ ಪದಾರ್ಥಕ್ಕೆ ಆರ್ಡರ್ ಕೊಟ್ಟು ಎಂದು ಪರ್ಚೇಸ್ ಮಾಡಲಿಲ್ಲ, ನಾನು ಅವನನ್ನು ಸಸ್ಪೆಂಡ್ ಮಾಡಿರುತ್ತೇನೆ. ನಾನು ಒಂದು ಮಾತನ್ನು ಹೇಳುತ್ತೇನೆ. I tried to gear up the administration to the best of my ability because I have got some background knowledge. ಇನ್ನು ಎಲ್.ಒ ಸಿ. ಬಗ್ಗೆ ಹೇಳಿದರು. ಒಂದು ಸಂತೋಷ. ಪೊಜಿಷನ್ ಇಂಪ್ರೂವ್ ಆಗಿದೆ. ಎಲ್ಲಾ ಎಲ್.ಒ.ಸಿ. ರಿಲೀಸ್ ಮಾಡುತ್ತೇನೆ. ಕಂಟ್ರಾಕ್ಟರ್‌ಗಳು ಯಾರು ತಮಗೆ ಬಾಧೆ ಕೊಡದಹಾಗೆ ನೋಡಿಕೊಳ್ಳುತ್ತೇವೆ. ಇಷ್ಟೇ ಈ ಸಂದರ್ಭದಲ್ಲಿ ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು, ಮೂರು ತಾಸು ಸುದೀರ್ಘವಾಗಿ ಉತ್ತರ ಕೊಟ್ಟರು. ಸ್ಟೇಟ್ ಬಜೆಟ್, ಸೆಂಟ್ರಲ್ ಬಜೆಟ್‌ನಿಂದ ಹಿಡಿದು, ಇಂಡಿಯಾ ಟುಡೇನಲ್ಲಿ ಬಂದ ಆರ್ಟಿಕಲ್‌ಗಳವರೆಗೆ ಎಲ್ಲವನ್ನೂ ಹೇಳಿ ಹೇಳಿ ಅವರು ತಮ್ಮ ಕೇಸ್‌ನ್ನು ಸಮರ್ಥಿಸಿಕೊಂಡರು, ಡಿಫೆಂಡ್ ಮಾಡಿಕೊಂಡರು. ಇಲ್ಲಿ ನಮ್ಮದೇನು ಎಂದರೆ ಎರಡು ಪ್ರಶ್ನೆ. ಅಪ್ಪರ್ ಕೃಷ್ಣಾ ಪ್ರಾಜೆಕ್ಟ್ ಬಗ್ಗೆ ತಾವು ಈಗಾಗಲೇ ಹೇಳಿದ್ದೀರಿ. ಮತ್ತು ಬಜೆಟ್ ಭಾಷಣದಲ್ಲಿ ಮುಖ್ಯಮಂತ್ರಿಗಳು ಇದೇ ರೀತಿ ಹೇಳಿದ್ದಾರೆ. ತಾವು ನಮಗೆ ಸ್ಪಷ್ಟವಾಗಿ ಹೇಳಿಬಿಡಿ, ೩೦೦ ಕೋಟಿ ರೂಪಾಯಿ ಪ್ರಾವಿಜನ್ ಮಾಡುತ್ತೀರಾ ? ಇದಕ್ಕೆ ೩೦೦ ಕೋಟಿ ರೂಪಾಯಿ ಪ್ರಾವಿಜನ್ ಮಾಡಲೇಬೇಕೆಂದು ಈ ಸದನದಲ್ಲಿ ಒಂದು ರೆಸಲ್ಯೂಷನ್ ತರಬೇಕೆಂದಾಗ, ಅದು ತರುವುದು ಬೇಡ. ನಾನು ಮುಂದಿನ ಸಲ ಪ್ರಾವಿಜನ್ ಮಾಡುತ್ತೇನೆ, ನೀವೆಲ್ಲರೂ ಕೂಡಿ ಇದನ್ನು ಈ ಸಂದರ್ಭದಲ್ಲಿ ವಿಥ್‌ಡ್ರಾ ಮಾಡಿಕೊಳ್ಳಿ, ಕೋ-ಅಪರೇಷನ್ ಕೊಡಿ ಎಂದು ತಾವು ಹೇಳಿದ್ದಿರಿ, ಆದರೂ ಕೂಡಾ ಈಗ ಬಜೆಟ್‌ನಲ್ಲಿ ೩೦೦ ಕೋಟಿ ರೂಪಾಯಿ ಕೃಷ್ಣಾ ಬೇಸಿನ್‌ಗೆ ಇಲ್ಲ ಇದರಲ್ಲಿ ಲಿಫ್ಟ್ ಇರಿಗೇಷನ್ ಕೂಡಾ ಸೇರಿಸುತ್ತಿದ್ದೀರಿ. ಏನು ಲಿಫ್ಟ್ ಇರಿಗೇಷನ್ ಕಾರ್ಪೊರೇಷನ್ ಮಾಡಿ, ಅದರಿಂದಲೇ ಇದಕ್ಕೆ ಹಣ ಒದಗಿಸುತ್ತೀರೋ ಅಥವಾ ಇದಕ್ಕೆ ಬೇರೆ ಒದಗಿಸುತ್ತೀರೋ ಎಂಬುದನ್ನು ಕೂಡಾ ಸ್ಪಷ್ಟವಾಗಿ ಹೇಳಬೇಕು. ಇದಕ್ಕೆ ೩೦೦ ಕೋಟಿ ಯಾವರೀತಿ ಮೊಬಿಲೈಸ್ ಮಾಡುತ್ತೀರಿ, ಯಾವರೀತಿ ತಾವು ತೆಗೆದುಕೊಳ್ಳುತ್ತೀರಿ ಎಂದು ಇಲ್ಲಿಯವರೆಗೆ ತಾವು ಹೇಳಲಿಲ್ಲ. ಮುಖ್ಯಮಂತ್ರಿಗಳು ಇದಕ್ಕೆ ಮೂರುನೂರು ಕೋಟಿ ಕೊಡದೇಹೋದರೆ ನಾನು ಇಲಾಖೆಯನ್ನು ಬಿಡುತ್ತೇನೆ, ನಾನು ರಾಜೀನಾಮೆ ಕೊಡುತ್ತೇನೆ ಮನೆಗೆ ಹೋಗುತ್ತೇನೆ ಎಂಬ ಮಾತನ್ನು ತಾವು ಹೇಳಿದ್ದೀರಿ. ಯಾವರೀತಿ ಮೂರುನೂರು ಕೋಟಿ ತೆಗೆದು ಕೊಂಡು ಬಂದು ಕೆಲಸ ಮಾಡುತ್ತೀರಿ. ರೈತರ ಮಕ್ಕಳ ಬಗ್ಗೆ ತಮಗೆ ಅನುಕಂಪ ಇದೆ. ಅನುಕಂಪ ಇಲ್ಲ ಎಂದು ನಾನು ಹೇಳುತ್ತಿಲ್ಲ. ಆದರೆ ಆ ಅನುಕಂಪವನ್ನು ತಾವು ಕೆಲವುಕಡೆ ಮಾತ್ರ ತೋರಿಸುತ್ತೀರಿ. ನಮ್ಮ ಕಳಕಳಿ ಏನು ಎಂದರೆ, ಒಂದು ಕೋಟಿ ಕೊಟ್ಟಿದ್ದೇವೆ, ಎರಡು ಕೋಟಿ ಕೊಟ್ಟಿದ್ದೇವೆ ಎಂಬ ಫಿಗರ್ಸ್ ನಮಗೆ ಬೇಡ. ತಾವು ಜಿಯಾಗ್ರಾಫಿಕಲ್ ಆಗಿ, ತಮ್ಮ ಜಿಲ್ಲೆಯ ಉದ್ದ ಅಗಲ ಏನಿದೆ ಅದನ್ನು ಲೆಕ್ಕ ಹಾಕಿಕೊಂಡು ಬೇರೆ ಜಿಲ್ಲೆಗಳ ಉದ್ದ, ಅಗಲ ಎಷ್ಟಿದೆ, ಎಷ್ಟು ಹಣ ಖರ್ಚು ಮಾಡಿದ್ದೇವೆ ಎಂಬುದನ್ನು ಹೇಳಿ. ಈಗ ನೀವು ಒಂದು ಸ್ಮಾಲ್ ಜಿಲ್ಲೆಗೂ, ಒಂದು ದೊಡ್ಡ ಜಿಲ್ಲೆಗೂ ಕಂಪೇರ್ ಮಾಡಿನೋಡಿ. ವಿಜಾಪುರ, ಗುಲಬರ್ಗಾ ಇಡೀ ನಮ್ಮ ಕರ್ನಾಟಕ ರಾಜ್ಯದಲ್ಲೇ ದೊಡ್ಡದಾಗಿರತಕ್ಕಂಥ ಜಿಲ್ಲೆಗಳು. ಅದೇ ರೀತಿ ಬೆಳಗಾಂ, ಧಾರವಾಡದ ಬಗ್ಗೆ ಹೇಳಿ ನಾನು ಒಪ್ಪಿಕೊಳ್ಳುತ್ತೇನೆ. ಅನುಕಂಪ ಇಲ್ಲ ಎಂದು ನಾನು ಹೇಳುವುದಿಲ್ಲ, ಆದರೆ ನಿಮ್ಮ ಅನುಕಂಪವನ್ನು ಒಂದೇ ಕಡೆ ತೋರಿಸಬೇಡಿ. ಎಲ್ಲಾ ಕಡೆಗೂ ತೋರಿಸಿ ಎಂಬ ಮಾತನ್ನು ಕೇಳುತ್ತಿದ್ದೇನೆ. ಇವತ್ತು ಯು.ಕೆ.ಪಿ. ಬಗ್ಗೆ ತಾವು ಸ್ಪಷ್ಟವಾಗಿ ಹೇಳಬೇಕು.

ಶ್ರೀ ಹೆಚ್. ಡಿ. ದೇವೇಗೌಡ —ಅದರ ಬಗ್ಗೆ ಒಂದು ರೆಸಲ್ಯೂಷನ್ ತರೋಣವೆಂದು ಹೇಳಿದ್ದಕ್ಕೆ ಬೇಡವೆಂದು ಹೇಳಿದರು. ನಮಗೆ ಲೀಡರ್ ಮೇಲೆ ಕಾನ್‌ಫಿಡೆನ್ಸ್ ಇದೆ, ರೆಸಲ್ಯೂಷನ್ ಇಲ್ಲದೆ ಒಪ್ಪಿಕೊಳ್ಳುತ್ತಾರೆಂದು ನಮಗೆ ತಿಳಿದಿತ್ತು. ಈಗ ಒಪ್ಪಿದ್ದಾರೆ, ಆದ್ದರಿಂದ ರೆಸಲ್ಯೂಷನ್ ಬೇಡವೆಂದು ನಿರ್ಣಯ ಮಾಡಿದ್ದೇವೆ

ಎರಡನೆಯದಾಗಿ ಅವರು ಏರಿಯಾ ಎಂದು ಹೇಳಿದರು. ಪಾಪ್ಯುಲೇಷನ್ ಫಿಗರ್ ಎಲ್ಲ ತರಿಸಿ ಕೊಡುತ್ತೇನೆ. ಆರ್ಗ್ಯುಮೆಂಟ್ ಮಾಡುತ್ತೇನೆ. ಹೊಸ ವರ್ಷಕ್ಕೆ ಎಕ್ಸ್‌ಟೆಂಡ್ ಮಾಡಬೇಕೆಂದು ಹೇಳಿದೆ. ೧೫ ಪರ್ಸೆಂಟ್ ವರ್ಕ್ಸ್ ಏನು ತೆಗೆದುಕೊಂಡಿರುತ್ತೇವೆ. ಆ ೧೫ ಪರ್ಸೆಂಟ್ ವರ್ಕ್ಸ್‌ಗೂ ಟೆಕ್ನಿಕಲ್ ಅಡ್ಮಿನಿಸ್ಟ್ರೇಷನ್ ಸ್ಯಾಂಕ್ಷನ್ ಕೊಟ್ಟಿದ್ದೇವೆ. ೧೩೫೦ಕ್ಕೆ ಆಡಳಿತ ಅನುದಾನ ಕೊಟ್ಟಿರ ತಕ್ಕಂಥದ್ದು ೧೨೧೮.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ —ಮಾನ್ಯ ಮುಖ್ಯಮಂತ್ರಿಗಳೇ ಹೇಳಿದ್ದರು.

ಶ್ರೀ ಎಚ್. ಡಿ. ದೇವೇಗೌಡ —ನಾನು ಅಥಾರಿಟೇಟೀವ್ ಆಗಿ ಹೇಳುತ್ತಿದ್ದೇನೆ. ಸಿ. ಎಂ. ಅವರು ಒಪ್ಪಿಗೆ ಕೊಟ್ಟಿದ್ದಾರೆ. ಫೈನಾನ್ಸ್ ಡಿಪಾರ್ಟ್‌ಮೆಂಟ್ ೧೩೫೦ ವರ್ಕ್ಸ್‌ನಲ್ಲಿ ೧೨೧೮ ಕೆಲಸಕ್ಕೆ ಅಡ್ಮಿನಿಸ್ಟ್ರೇಟೀವ್ ಸ್ಯಾಂಕ್ಷನ್ ಕೊಟ್ಟಿದೆ. ಫೈನಾನ್ಸ್ ಡಿಪಾರ್ಟ್‌ಮೆಂಟಿನ ಕ್ಲಿಯರೆನ್ಸ್ ಸಿಕ್ಕ ೩೦

ಪರ್ಸೆಂಟ್ ಅನುದಾನ ಕೊಟ್ಟರತಕ್ಕಂಥ ೫೭೦ ಕೆಲಸಗಳಲ್ಲಿ ೫೧೮ ಕೆಲಸಗಳಿಗೆ ಸ್ಯಾಂಕ್ಷನ್ ಕೊಟ್ಟಿದ್ದೇವೆ. ಉಳಿದವಕ್ಕೂ ಕೊಡುತ್ತೇವೆ. ಯು.ಕೆ.ಪಿ. ಕೃಷ್ಣಾ ಬೇಸಿನ್, ಕಾವೇರಿ ಬೇಸಿನ್ ಈ ಮೂರನ್ನೂ ತೆಗೆದುಕೊಳ್ಳುತ್ತೇವೆ.

ಶ್ರೀ ಆರ್, ವೆಂಕಟರಾಮಯ್ಯ.—ಮಾನ್ಯ ಸಭಾಪತಿಯವರೇ, ಮಾನ್ಯ ದೇವೇಗೌಡರ ಪರ್ಸನಲ್ ಬೋನಾಫೈಡಿಯನ್ನು ಕ್ವೆಶ್ಚನ್ ಮಾಡುವುದಿಲ್ಲ. ತಾವು ಹೇಳಿರುವುದೇನೆಂದರೆ ಹಳೇ ಮೈಸೂರಿಗೆ ಎಲ್ಲ ಜಿಲ್ಲೆಗಳನ್ನು ಸೇರಿಸಿಕೊಂಡು ೫,೩೦೦ ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆಂದು ಹೇಳಿದಿರಿ, ಇದರಲ್ಲಿ ನಾಲ್ಕು ಜಿಲ್ಲೆಗಳು ಸತತವಾಗಿ ಬರಗಾಲದಿಂದ ನರಳುತ್ತಿದೆ, ಕೋಲಾರ, ಬೆಂಗಳೂರು, ಚಿತ್ರದುರ್ಗ, ಮತ್ತು ತುಮಕೂರು ಇವೆಲ್ಲಕ್ಕೂ ಟೋಟಲ್ ಪರ್ಸೆಂಟೇಜ್ ಎಷ್ಟು ಕೊಟ್ಟಿದ್ದೀರಿ ? ಎರಡನೆಯದಾಗಿ ಎಲ್.ಓ.ಸಿ ಈ ಕಂಪನಿಯನ್ನು ದಯವಿಟ್ಟು ಅಬಾಲಿಷ್ ಮಾಡುತ್ತೀರಾ ? ನಮ್ಮ ಕೋಲಾರ ಜಿಲ್ಲೆಯಲ್ಲಿ ಆಂಧ್ರದಲ್ಲಿ ಒಂದು ಸ್ಪೆಷಲ್ ಪರಿಹಾರವನ್ನು ಕೊಡುತ್ತಿರುತ್ತಾರೆ, ಬೋರ್ ವೆಲ್‌ಗಳನ್ನು ಕಾರ್ಪೊರೇಷನ್‌ನವರು ತೆಗೆಯಲು ರೈತರು ಒಂದು ಸಾವಿರ ರೂಪಾಯಿಗಳನ್ನು ಡಿಪಾಸಿಟ್ ಕೊಟ್ಟರೆ ಸರ್ಕಾರದವರು ಬೋರ್‌ವೆಲ್‌ಗಳನ್ನು ಹಾಕಿಸಿಕೊಡುತ್ತಾರೆ. ಅದು ಸಕ್ಸಸ್ ಆದರೆ ರೈತರು ಹಣವನ್ನು ಕೊಡಬೇಕಾಗುತ್ತದೆ. ಫೆಲ್ಯೂರ್ ಆದರೆ ಸರ್ಕಾರದವರು ಕಟ್ಟಿಕೊಡುತ್ತಾರೆ. ಇದರಿಂದ ಸಾವಿರಾರು ಜನರು ಉಪಯೋಗ ಪಡೆದುಕೊಳ್ಳುತ್ತಿದ್ದಾರೆ. ಅದನ್ನು ಮಾಡುತ್ತೀರಾ ಎಂದು ಕೇಳುತ್ತೇನೆ.

ಇನ್ನು ಡ್ರಿಫ್ ಇರಿಗೇಷನ್ ಗಂಗಾಕಲ್ಯಾಣ ಮುಂತಾದ ಸ್ಕೀಮ್‌ಗಳಿಗೆ ಜಾಸ್ತಿ ಹಣವನ್ನು ಕೊಡಬೇಕು. ನಾಲ್ಕು ಕೆಲಸಗಳನ್ನು ಮಾಡಿಕೊಡುತ್ತೇವೆಂದು ಮಾನ್ಯ ಮುಖ್ಯಮಂತ್ರಿಗಳು ಪ್ರಾಮಿಸ್ ಮಾಡಿದ್ದಾರೆ. ಇದುವರೆಗೆ ಒಂದು ಕೆಲಸವನ್ನೂ ಶುರು ಮಾಡಿಲ್ಲ ಅದರ ಬಗ್ಗೆ ಹೇಳಬೇಕು ಕೊನೆಯದಾಗಿ ತಮ್ಮ ಡಿಪಾರ್ಟ್‌ಮೆಂಟ್‌ನಲ್ಲಿ ಮ್ಯಾಗನೇಟ್ ವುಡ್ ಮತ್ತು ರಫ್‌ವುಡ್ ಎಂದು ಇರುತ್ತದೆ. ಈ ಎರಡನ್ನು ತಾವು ಕಂಟ್ರೋಲ್ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ಎಂದು ಕೇಳುತ್ತೇನೆ.

ಶ್ರೀ ಎಚ್. ಡಿ. ದೇವೇಗೌಡ.—ಕಂಟ್ರೋಲ್ ಮಾಡುವ ಕೆಲಸ ಅವರು ನಾವು ಸೇರಿಕೊಂಡು ಮಾಡೋಣ. ಮಾನ್ಯ ಮುಖ್ಯಮಂತ್ರಿಗಳು ಹೇಳಿರತಕ್ಕಂಥ ನಾಲ್ಕು ಕೆಲಸಗಳಿಗೂ ಮಂಜೂರಾತಿಯನ್ನು ಕೊಟ್ಟಿದ್ದೇವೆ. ಮತ್ತೆ ಜಿಲ್ಲಾವಾರು ಬ್ರೇಕ್ ಅಪ್ ಬಗ್ಗೆ ಹೇಳಿದ್ದಾರೆ. ಅದನ್ನು ಮಾಡುತ್ತೇವೆ. ಗಂಗಾಕಲ್ಯಾಣ ಯೋಜನೆಯನ್ನು ನಾವು ಮಾಡುತ್ತೇವೆ. ಡ್ರಿಪ್ ಇರಿಗೇಷನ್ ಯೋಜನೆಗೆ ಡಿಪಿಎಪಿ.ಯಿಂದ, ಫಂಡ್ಸ್ ಅಡ್ಜಸ್ಟ್ ಮಾಡಿಕೊಳ್ಳಬೇಕಾಗುತ್ತದೆ.

ಶ್ರೀ ಕೆ ಬಿ ಶಾಣಪ್ಪ.—ಮಾನ್ಯ ದೇವೇಗೌಡರು ಚೆನ್ನಾಗಿ ಉತ್ತರಿಸಿದ್ದಾರೆ ಶಹಬಾದ್‌ನಲ್ಲಿ ಓವರ್ ಹೆಡ್ ಬ್ರಿಡ್ಜ್ ಮಾಡುವ ಕೆಲಸ ೧೯೭೮ರಿಂದ ಪೆಂಡಿಂಗ್ ಇದೆ. ಅದಕ್ಕೆ ಕ್ಲಿಯರೆನ್ಸ್ ಬೇಕೆಂದು ಕೇಳಿದ್ದೆವು.

ಶ್ರೀ ಹೆಚ್. ಡಿ. ದೇವೇಗೌಡ.—ಕ್ಲಿಯರೆನ್ಸ್ ಮಾಡಿಸುವ ಮಟ್ಟದಲ್ಲಿ ಕ್ರಮ ತೆಗೆದುಕೊಂಡಿದ್ದೇವೆ.

ಶ್ರೀ ಹೆಚ್. ಏಕಾಂತಯ್ಯ.—ಚಿತ್ರದುರ್ಗ ಜಿಲ್ಲೆಯ ಅಪ್ಪರ್ ಭದ್ರ ಯೋಜನೆ ಬಗ್ಗೆ ಕೇಂದ್ರ ನೀರಾವರಿ ಮಂತ್ರಿಗಳನ್ನು ಕೇಳಿದಾಗ ಡೀಟೈಲ್ಡ್ ಪ್ರಾಜೆಕ್ಟ್ ರಿಪೋರ್ಟನ್ನು ಕಳುಹಿಸಿದ್ದರೆ ಪರಿಶೀಲನೆ ಮಾಡುತ್ತಿದ್ದೆವು, ಆದರೆ ಕಳುಹಿಸಿಲ್ಲವೆಂದು ಹೇಳಿದ್ದಾರೆ. ಅದನ್ನು ನಮ್ಮ ಸರ್ಕಾರದಲ್ಲಿ ಎರಡು ವರ್ಷಗಳಿಂದ ಪರಿಶೀಲಿಸುತ್ತಿದ್ದೇವೆಂದು ಹೇಳುತ್ತಿದ್ದಾರೆ. ಇನ್ನು ಎಷ್ಟು ದಿನಗಳಲ್ಲಿ ಕೇಂದ್ರದ ಒಪ್ಪಿಗೆಗೆ ಕಳುಹಿಸಿಕೊಡುತ್ತೀರಿ?

ಶ್ರೀ ಹೆಚ್. ಡಿ ದೇವೇಗೌಡ.—ಶಂಕರಾನಂದರು ನಮ್ಮವರೇ ಇದ್ದಾರೆ ಅವರ ಉಪಯೋಗವನ್ನು ಪಡೆದುಕೊಳ್ಳುತ್ತೇವೆ. ನಾವು ಒಂದು ಪ್ರಿಲಿಮಿನರಿ ರಿಪೋರ್ಟನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೇವೆ ಪ್ರಧಾನ ಮಂತ್ರಿಗಳು ಬಂದಾಗ ನೀವು ಈ ಪ್ರಾಜೆಕ್ಟನ್ನು ಸ್ಯಾಂಕ್ಷನ್ ಮಾಡಬಾರದೆಂದು ಹೇಳಿದ್ದನ್ನು ಪತ್ರಿಕೆಗಳಲ್ಲಿ ಓದಿರಬಹುದು. ನಂತರ ಪ್ಲಾನಿಂಗ್ ಕಮಿಟಿಯವರು ರೆಫ್ಯೂಸ್ ಮಾಡಿದರು ಈಗ ರೆವಿಡಿ ಕಮಿಟಿಯವರು ರಿಪೋರ್ಟ ತರಿಸಿಕೊಂಡಿದ್ದಾರೆ. ಅದರ ಬಗ್ಗೆ ಸ್ಥೂಲವಾಗಿ ಹೇಳುವುದಕ್ಕೆ ಸಾಧ್ಯವಾಗಿಲ್ಲ. ಸಭೆ ಮುಗಿಯುವುದರೊಳಗೆ ವರ್ಕ್‌ಅಪ್ ಮಾಡಿ ಹೇಳುತ್ತೇನೆ. ಕೋಲಾರ, ತುಮಕೂರು

ಚಿತ್ರದುರ್ಗ ಇವು ೩ ಜಿಲ್ಲೆಗಳಲ್ಲಿ ಹೆಚ್ಚಿನ ಸೌಲಭ್ಯ ಕೊಡಲಿಕ್ಕೆ ಸಾಧ್ಯವೇ ಎಂಬುದರ ಬಗ್ಗೆ ತುಂಗದಿಂದ ಲಿಫ್ಟ್ ಮಾಡತಕ್ಕದ್ದರ ಬಗ್ಗೆ ಯೋಚಿಸುತ್ತಿದ್ದೇವೆ. ಸಾಧ್ಯವಾದರೆ ಅಧಿವೇಶನ ಮುಕ್ತಾಯ ವಾಗುವುದರೊಳಗೆ ಒಂದು ಹೇಳಿಕೆಯನ್ನು ಮಾಡುತ್ತೇನೆ.

ಶ್ರೀ ಪಿ. ಎಸ್. ರಾಣೆ.—ಮಾನ್ಯ ಸಚಿವರು ಚಿಕ್ಕ ನೀರಾವರಿ ಬಗ್ಗೆ ಹೇಳಿದ್ದಾರೆ. ಆದರೆ ಉತ್ತರ ಕನ್ನಡ ಜಿಲ್ಲೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಇದರ ಉಪಯೋಗ ಆಗುತ್ತಿಲ್ಲ. ನಮ್ಮಲ್ಲಿ ಗಜ್ನಿ ಭೂಮಿ ಎಂದು ಇದೆ. ಇದರ ಸಾಗುವಳಿ ಬಗ್ಗೆ ರಕ್ಷಣೆ ಬಗ್ಗೆ ಮಹಾರಾಷ್ಟ್ರದಲ್ಲಿ ಯಾವ ರೀತಿ ಖಾರ್‌ಲ್ಯಾಂಡ್ ಬೋರ್ಡ್ ಎಂದು ಮಾಡಿದ್ದಾರೆ ಆ ರೀತಿ ಮಾಡಬೇಕು. ಅದರ ಬಗ್ಗೆ ವಿಚಾರ ಮಾಡುತ್ತೇವೆಂದು ಮಂತ್ರಿಗಳು ಹೇಳಿದ್ದರು. ಆ ವಿಚಾರ ಎಲ್ಲಿಗೆ ಹೋಯಿತು. ಅದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದೀರಿ? ಸ್ಟೇಟ್ ಹೈವೇ ಬಗ್ಗೆ ನಮ್ಮ ಲೀಡರ್ ಹೇಳಿದಾಗ ಎರಡು ಡಿವಿಜನ್‌ನಲ್ಲಿ ಮಾತ್ರ ಕೆಲಸ ನಡೆಯುತ್ತಿಲ್ಲವೆಂದು ಹೇಳಿದರು. ಹುಬ್ಬಳ್ಳಿ–ಕಾರವಾರ ರಸ್ತೆ ಏನಿದೆ ಅದು ಅರೆಬೈಲು ಹತ್ತಿರ ಬಹಳಷ್ಟು ಕೆಟ್ಟಿದೆ. ಕಳೆದ ಎರಡು ವರ್ಷಗಳಿಂದ ಒಂದೇ ಜಾಗದಲ್ಲಿ ಹಾಳಾಗಿದೆ. ಅದರ ಸಂಧಾರಣೆ ಬಗ್ಗೆ ಕ್ರಮ ಕೈಗೊಳ್ಳುತ್ತೀರಾ?

ಅಧ್ಯಕ್ಷರು.—ಎರಡು ಪ್ರಶ್ನೆ ಆಯಿತು. ಎಷ್ಟು ಕೇಳುವುದು. ಇದು ಭಾಷಣ ಅಲ್ಲ.

ಶ್ರೀ ಪಿ. ಎಸ್. ರಾಣೆ.—ನಮಗೆ ಮಾತನಾಡುವುದಕ್ಕೂ ಕೊಡುವುದಿಲ್ಲ. ಕೇಳುವುದಕ್ಕೂ ಕೊಡುವುದಿಲ್ಲವೆಂದರೆ ಹೇಗೆ? ನಾನು ಪ್ರಶ್ನೆ ಕೇಳುತ್ತಿದ್ದೇನೆ. ರಿಸೋರ್ಸಸ್ ಬಗ್ಗೆ ಮಂತ್ರಿಗಳು ಬಹಳಷ್ಟು ಆಸಕ್ತಿ ವಹಿಸಿ ಎಲ್ಲರಿಗೂ ಅಪೀಲು ಮಾಡಿದ್ದಾರೆ. ನಾನು ಹೇಳುವುದು, ರಿಸೋರ್ಸಸ್ ಮಾಡಬೇಕಾದರೆ ಯಾವುದೇ ಪಕ್ಷದ ಬಗ್ಗೆ ತಾರತಮ್ಯ ತೋರದೆ ಕಠಿಣ ಕ್ರಮ ತೆಗೆದುಕೊಂಡರೆ ಮಾತ್ರ ರಿಸೋರ್ಸಸ್ ಡೆವಲಪ್‌ಮೆಂಟ್ ಮಾಡುವುದಕ್ಕಾಗುತ್ತದೆ. ಉದಾಹರಣೆಗೆ ಹೇಳುತ್ತೇನೆ, ಅಂಕೋಲ ತಾಲ್ಲೂಕಿನ ಗಂಗಾವಳಿಯಲ್ಲಿ ಪ್ರತಿ ವರ್ಷ ಗುತ್ತಿಗೆ ಕೊಡುವ ಕಾರ್ಯಕ್ರಮ ನಡೆಯುತ್ತದೆ. ಈ ವರ್ಷ ಗುತ್ತಿಗೆಗೆ ಕೊಡಬೇಕೆಂದು ಹೇಳಿ ತಾರೀಖು ನಿಗದಿಯಾಗಿ, ಅಲ್ಲಿ ಗುತ್ತಿಗೆ ತೆಗೆದುಕೊಳ್ಳಲು ಬಹಳಷ್ಟು ಜನ ಮುಂದೆ ಬಂದಾಗಲೂ ಅಕಸ್ಮಾತ್ ಯಾವುದೋ ಕಾರಣಕ್ಕಾಗಿ ಗುತ್ತಿಗೆ ಕೊಡುವುದನ್ನು ಸರ್ಕಾರ ನಿಲ್ಲಿಸಿದೆ.

ಶ್ರೀ ಎನ್. ಪ್ರಭಾಕರ ರಾಣೆ.—ಇವತ್ತು ಸುಮಾರು ೨ ಸಾವಿರ ರೂಪಾಯಿ ಗುತ್ತಿಗೆ ಬರುವಂಥ ಕೆಲಸವನ್ನು ಅಲ್ಲಿಯ ಸಾರ್ವಜನಿಕರು ೧೮ ಸಾವಿರ ರೂಪಾಯಿ ಗುತ್ತಿಗೆಗೆ ತೆಗೆದುಕೊಳ್ಳಲು ಸಿದ್ಧವಾಗಿರುವಾಗ ಹಾಲಿ ಇರುವ ಆಜ್ಞೆಯನ್ನು ಹಿಂತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ,

ಶ್ರೀ ಹೆಚ್. ಡಿ. ದೇವೇಗೌಡ.—ಖಾರ್‌ಲ್ಯಾಂಡ್ ಬೋರ್ಡ್ ಮಾಡಬೇಕೆಂದು ಅವರ ಜೊತೆಗೆ ದೇಶಪಾಂಡೆಯವರೂ ಒತ್ತಡ ತಂದಿದ್ದಾರೆ. ಇದರ ಬಗ್ಗೆ ಬಹಳ ಚರ್ಚೆ ನಡೆದಿದೆ. ಮಹಾರಾಷ್ಟ್ರದಲ್ಲಿರುವ ರೀತಿ ಮಾಡುವುದಕ್ಕೆ ವರ್ಕ್‌ಲೋಡ್ ಸಿಗುವುದಿಲ್ಲವೆಂದೂ ಹೇಳಿದ್ದಾರೆ. ಈ ಬಗ್ಗೆ ಒಂದು ಮೀಟಿಂಗ್ ಮಾಡುತ್ತೇನೆ, ಅದಕ್ಕೆ ಅವರನ್ನೂ ನಿಮ್ಮನ್ನೂ ಕರೆಸುತ್ತೇನೆ,

(ಗೊಂದಲ)

ಅಧ್ಯಕ್ಷರು.—ಇಲ್ಲಿಗೆ ಚರ್ಚೆಯು ಮೇಲಿನ ಉತ್ತರ ಮುಗಿಯಿತು. ಈಗ ಬೇಡಿಕೆಗಳನ್ನು ಮತಕ್ಕೆ ಹಾಕುತ್ತೇನೆ. ಪ್ರಸ್ತಾವ ಏನೆಂದರೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಬೇಡಿಕೆ ಸಂಖ್ಯೆ ೩೪, ೩೫, ೪೪, ೪೫, ೪೬, ಮತ್ತು ೪೭ಕ್ಕೆ ಸಂಬಂಧಿಸಿದಂತೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ಲೇಖಾನುದಾನದಲ್ಲಿ ಮಂಜೂರಾದ ಮೊತ್ತವೂ ಸೇರಿದಂತೆ ಬೇಡಿಕೆಗಳ ಪಟ್ಟಿಯಲ್ಲಿರುವ ಮೊತ್ತಕ್ಕೆ ಮೀರದ ಮೊಬಲಗನ್ನು ಮಂಜೂರು ಮಾಡುವುದು.

ಪ್ರಸ್ತಾವವನ್ನು ಅಂಗೀಕರಿಸಲಾಯಿತು ಮತ್ತು ಬೇಡಿಕೆಗಳನ್ನು ಮಂಜೂರು ಮಾಡಲಾಯಿತು

(ಮಾನ್ಯ ಅಧ್ಯಕ್ಷರ ಆದೇಶದ ಮೇರೆಗೆ ಮಂಜೂರಾದ ಬೇಡಿಕೆಗಳನ್ನು ಈ ಕೆಳಗೆ ನಮೂದಿಸಲಾಗಿದೆ.)

ಅಭಿಯಾಚನೆ ಕ್ರಮಾಂಕ–೩೪–ಸಣ್ಣ ನೀರಾವರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಸಣ್ಣ ನೀರಾವರಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೩೨,೬೧,೯೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫ ೬೫,೦೦,೦೦೦ ರೂಪಾಯಿಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೩೫–ನೀರಾವರಿ ಜಲ ಸಂಚಾರ ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು

ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ನೀರಾವರಿ, ಜಲಸಂಚಾರ, ಒಳಚರಂಡಿ ವ್ಯವಸ್ಥೆ ಮತ್ತು ಪ್ರವಾಹ ನಿಯಂತ್ರಣ ಯೋಜನೆಗಳು ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೬೨,೧೩,೦೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೩೨,೨೮,೩೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೪–ಲೋಕೋಪಯೋಗಿ ಕಾಮಗಾರಿ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಲೋಕೋಪಯೋಗಿ ಕಾಮಗಾರಿ (ನಿರ್ಮಾಣ ರಹಿತ) ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೦,೧೭,೨೬,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧,೨೫,೦೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಭಿಯಾಚನೆ ಕ್ರಮಾಂಕ ೪೫–ಕಟ್ಟಡಗಳು

ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧–೩–೧೯೮೭ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ಕಟ್ಟಡಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೬,೯೮ ೫೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೨೫,೧೯,೯೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು;

ಅಭಿಯಾಚನೆ ಕ್ರಮಾಂಕ ೪೭–ರಸ್ತೆಗಳು ಮತ್ತು ಸೇತುವೆಗಳು

ರಾಜ್ಯಪಾಲರ ಶಿಫಾರಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರಸ್ತೆಗಳು ಮತ್ತು ಸೇತುವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ವಹಿಸಲು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೭೪,೫೪,೦೧,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೧೦.೮೩,೯೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು

ಅಭಿಯಾಚನೆ ಕ್ರಮಾಂಕ ೪೭–ರೇವು ಮತ್ತು ಜಲ ಸಾರಿಗೆ ಸೇವೆ

ರಾಜ್ಯಪಾಲರ ಶಿಫಾರಸ್ಸಿನ ಮೇರೆಗೆ ೩೧–೩–೧೯೮೭ ರಂದು ಕೊನೆಗೊಳ್ಳುವ ಆರ್ಥಿಕ ವರ್ಷದಲ್ಲಿ ರೇವು ಮತ್ತು ಜಲಸಾರಿಗೆ ಸೇವೆಗಳಿಗೆ ಸಂದಾಯ ಮಾಡುವಲ್ಲಿ ಬರತಕ್ಕಂಥ ವೆಚ್ಚವನ್ನು ಸರ್ಕಾರಕ್ಕೆ ರಾಜಸ್ವ ಖಾತೆಯಲ್ಲಿ ೧,೭೪,೨೭,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮತ್ತು ಬಂಡವಾಳ ಖಾತೆಯಲ್ಲಿ ೩,೭೧,೫೦,೦೦೦ ರೂ.ಗಳಿಗಿಂತ ಮೀರದ ಮೊತ್ತವನ್ನು ಮಂಜೂರು ಮಾಡುವುದು.

ಅಧ್ಯಕ್ಷರು.—ಇಂದಿನ ಸಭೆಯು ಇಲ್ಲಿಗೆ ಮುಗಿದು ಮತ್ತೆ ನಾಳೆ ಬೆಳಿಗ್ಗೆ ೧೧ಕ್ಕೆ ಆರಂಭವಾಗುವುದು.

ಸದನವು ರಾತ್ರಿ ಏಳು ಗಂಟೆ ಇಪ್ಪತ್ತೆರಡು ನಿಮಿಷಕ್ಕೆ ಮುಕ್ತಾಯವಾಗಿ ಪುನಃ ೧೨ನೇ ಮಾರ್ಚ್ ೧೯೮೭ರ ಗುರುವಾರ ಬೆಳಗ್ಗೆ ಹನ್ನೊಂದು ಗಂಟೆಗೆ ಸಮಾವೇಶಗೊಳ್ಳುವುದಾಗಿ ನಿಶ್ಚಯಿಸಲಾಯಿತು.